ಸಂಕಲನ

ವರ್ಷ ೨

ನವಂಬರ್ + ಡಿಸೆಂಬರ್

೨೦೦೭

೩೬

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ - ೩೬ ರೊಂದಿಗೆ

ತಮ್ಮ ಚಂದಾ ಹಣ ಮುಗಿದಿದೆ.

೨೦೦೮ ರ ಚಂದಾ ರೂ. ೨೦೦/-

ದಯವಿಟ್ಟು ಕಳಿಸಿರಿ.

SANKALANA-36 is Published with Financial Assistance from the Central Institute of Indian Languages, (Ministry of Human Resource Development, Dept. of Secondary and Higher Education, Govt of India) Manasagangotri, Mysore - 570 006 vide letter No. 53-4 (5)/2006-07/ KAN/LM/GRNT dated October 24, 2007 under the scheme Grant-in-Aid LM.

ಸಂಕಲನ

ನವಂಬರ್ + ಡಿಸೆಂಬರ್ ೨೦೦೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ
ಧಾರವಾಡ – ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine
Volume 6, Issue 6 : November + December 2007
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
E mail : siddhaling.pattanshetti@rediffmail.com
Printed by Saraswati Offset Printers, Shivaji Road, Dharwad -580 001

•

•

•

ಸಂಕಲನ – ೩೬
ಸಂಪುಟ ೬, ಸಂಚಿಕೆ ೬ : ನವಂಬರ್ + ಡಿಸೆಂಬರ್ ೨೦೦೭
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪
✆ : ೦೮೩೬–೨೪೬ ೨೭೧೮
ಸಿ.ಪ. : ೯೪೪೮೬ ೩೦೬೩೭, ಹೇಮಾ : ೯೪೪೮೮ ೬೧೬೦೪
ಲೇಖನ ಕಳಿಸಲು : **E mail : siddhaling.pattanshetti@rediffmail.com**

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಇತ್ಯಾದಿ ಎಲ್ಲ ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/– (ಚೆಕ್ ೨೨೦/–)
೨೦೦೮, ೨೦೦೯, ೨೦೧೦ ಈ ಮೂರು ವರ್ಷಗಳ ಚಂದಾ ರೂ. ೫೦೦/– (ಚೆಕ್ ೫೫೦/–)

•

ಡಿಟಿಪಿ + ಮುದ್ರಣ :
ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಶಿವಾಜಿ ಬೀದಿ, ಧಾರವಾಡ – ೫೮೦ ೦೦೧
✆ : ೦೮೩೬–೨೪೪ ೧೦೬೫

ಸಂಕಲನ – ೩೬ : ಪರಿವಿಡಿ

೧. ಒನ್ನೇಮಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫–೬

೨. ಮೀನು ಹುಳಿಯ ಕಡಿ –ಯು. ವೆಂಕಟ್ರಾಜ ರಾವ್ ೭–೧೪

೩. ನಾಲ್ಕು ಕವಿತೆಗಳು –ಸುಮತೀಂದ್ರ ನಾಡಿಗ ೧೫–೧೬

೪. ನಾಟಕ, ಆಟ ಮತ್ತು ವಚನ ಸಾಹಿತ್ಯ –ಪ್ರಸಾದ್ ರಕ್ಷಿದಿ ೧೭–೨೦

೫. ಧೃತರಾಷ್ಟ್ರ ಶೋಕ –ಎಂ. ಎಂ. ಪುರದನಗೌಡರ ೨೦

೬. ಅವ್ವ –ವೀಣಾ ಕುಲಕರ್ಣಿ ೨೧

೭. ಶೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್' –ಶ್ರೀಧರ ಪಿಸ್ಸೆ ೨೨–೨೯

೮. 'ನನ್ನ ಅವ್ವ ನನ್ನ ಅಪ್ಪ' : ಕೃತಜ್ಞತೆ – ೩೩ –ಸುಮಿತ್ರಾ ಕುಂಬಾರ ೩೦–೩೩

೯. ಕುಂ. ವೀ. ಅವರ 'ಭಳಾರೆ ವಿಚಿತ್ರಂ!' –ಅನಂತ ಹುದೆಂಗಜೆ ೩೩–೩೭

೧೦. ಎರಡು ಕವಿತೆಗಳು –ಆರ್. ತಾರಿಣಿ ಶುಭದಾಯಿನಿ ೩೮

೧೧. ಎಮಿಲಿ ಡಿಕಿನ್‌ಸನ್‌ಳ ೧೫ ಕವನಗಳು –ಎಲ್. ವಿ. ಶಾಂತಕುಮಾರಿ ೩೯–೪೫

೧೨. ರಜನಿ ಬಕ್ಷಿ ಅವರ 'ಬಾಪು ಕುಟಿ' –ಕೆ. ಸತ್ಯನಾರಾಯಣ ೪೬–೪೭

೧೩. ಬರಡು ಮರದ ರೆಂಬೆ –ಗುಂಡಣ್ಣ ಕಲಬುರ್ಗಿ ೪೭

೧೪. ಕಾರಂತರ ಜೀವಂತ ಪಾತ್ರಗಳು – ೨ –ಸಿ. ಸೋಮಶೇಖರಯ್ಯ ೪೮–೫೨

೧೫. ಕವಿರಾಜಮಾರ್ಗಮಂಥನ : ಲೇಖನ ಮಾಲೆ–೧೪ –ಷ. ಶೆಟ್ಟರ್ ೫೩–೬೫

೧೬. ಪುಸ್ತಕ ಪರಿಶೀಲನೆ : ೬೬–೭೨

೧. ಪಿಂಜರ್ : ಅಮೃತಾ ಪ್ರೀತಮ್, ಅನು : ಎಲ್.ಸಿ. ಸುಮಿತ್ರಾ –ನಾ. ದಾಮೋದರ ಶೆಟ್ಟಿ

೨. ಮರೆಯಲಿ ಹ್ಯಾಂಗ : ಮಹಿಪಾಲರೆಡ್ಡಿ ಮುನ್ನೂರ್ –ಪ್ರಕಾಶ ಕಡಮೆ

೩. ಹೆಜ್ಜೆ ಮೂಡದ ಹಾದಿ : ಎಂ. ಎಂ. ಪುರದನಗೌಡರ;

೪. ಮನದ ಮುಂದಣ ಮಾಯೆ : ಪ್ರಹ್ಲಾದ ಅಗಸನಕಟ್ಟೆ ;

೫. ದಂಗೆ : ಓಂದಾಸ್ ಕಣ್ಣಂಗಾರ್ –ಬಸು ಬೇವಿನಗಿಡದ

೬. ರೈತರೇ ಬದುಕಲು ಕಲಿಯಿರಿ : ಚಾಮರಾಜ ಸವಡಿ –ಹ. ವೆಂ. ಕಾಖಂಡಿಕಿ

೭. ವರ್ತಮಾನ : ಅಲ್ಲಮಪ್ರಭು ಬೆಟ್ಟದೂರು – ಶ್ಯಾಮಸುಂದರ ಬಿದರಕುಂದಿ

೧೭. ಸಂಕಲನ : ಅನಿಸಿಕೆ ೭೩–೭೪

೧೮. ಸಂಕಲನ ೩೧ ರಿಂದ ೩೬ ರ ಸಮಗ್ರ ಸಾಮಗ್ರಿ ದರ್ಶನ ೭೫–೮೦

೧೯. ಕಡೀಮಟ : ಸಿದ್ಧಲಿಂಗ ಪಟ್ಟಣಶೆಟ್ಟಿ ಆವರಣ ಪುಟ ೩

ಸಂಪಾದಕರ ಮಾತು

ಸಂಕಲನವು ಈ ೩೬ ನೆಯ ಸಂಚಿಕೆಯೊಂದಿಗೆ ಆರು ವರ್ಷಗಳನ್ನು ಪೂರ್ಣ ಗೊಳಿಸುತ್ತಿದೆ. ಇಷ್ಟು ವರ್ಷ ನಿಯಮಿತವಾಗಿ ಈ ದ್ವೈಮಾಸಿಕ ಸಾಹಿತ್ಯ ಪತ್ರಿಕೆ ಪ್ರಕಟವಾಗಲು ಎಲ್ಲ ರೀತಿಯಿಂದ ಸಹಕರಿಸಿದ ಮಿತ್ರರಿಗೆ ನಮ್ಮ ಕೃತಜ್ಞತೆಗಳು.

ಸಾಧ್ಯವಿದ್ದಷ್ಟು ಮಟ್ಟಿಗೆ ಚಂದಾದಾರರ ಸಹಕಾರ ಮತ್ತು ಬೆಂಬಲದಿಂದಲೇ ನಡೆಯುತ್ತಿರುವ ಸಂಕಲನದ ಚಂದಾದಾರರ ಸಂಖ್ಯೆ ಆರನೆಯ ವರ್ಷದಲ್ಲಿಯೂ ೫೦೦ ರ ಗೆರೆಯನ್ನು ದಾಟಿರಲಿಲ್ಲ. ಈಚೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯವರು ತಮ್ಮ ೧೫೦ ರಷ್ಟು ಶಾಖೆಗಳಿಗೆ ಆದೇಶ ನೀಡಿದ್ದರಿಂದ ಈ ವರ್ಷದ ಕೊನೆಯ ಎರಡು ಸಂಚಿಕೆಗಳನ್ನು ೭೦೦ ಪ್ರತಿಗಳಂತೆ ಮುದ್ರಿಸಲಾಗುತ್ತಿದೆ.

ಇಂಥ ನಿರುತ್ಸಾಹಕ ಪ್ರತಿಕ್ರಿಯೆ ಮತ್ತು ಈ ನಿಧಾನಗತಿ ಇದೇ ರೀತಿಯಲ್ಲಿ ಉಳಿದರೆ ಮುಂಬರುವ ದಿನಗಳಲ್ಲಿ ಮನಸ್ಸಿರದಿದ್ದರೂ ಕೆಲವು ಕಠಿನ, ಅಪ್ರಿಯ, ನಿರ್ಧಾರಗಳನ್ನು ಕೈಕೊಳ್ಳುವುದು ಅನಿವಾರ್ಯವಾಗಬಹುದು.

ಮುಂದಿನ ವರ್ಷ ೨೦೦೮ ರ ಸಂಚಿಕೆ ೩೭ ರಿಂದ 'ನನ್ನ ಗೆಳೆಯರು/ಗೆಳತಿಯರು' ಮಾಲಿಕೆಯಲ್ಲಿಯೂ ಲೇಖನಗಳು ಪ್ರಕಟವಾಗುತ್ತವೆ. ಈ ವಿಷಯವನ್ನು ಕುರಿತು ಬರುವ ಒಳ್ಳೆಯ ಲೇಖನಗಳಿಗೆ ಸ್ವಾಗತವಿದೆ.

ಸಂಕಲನ-೩೫ ರ ಎಲ್ಲ ಲೇಖನಗಳನ್ನು ಮೆಚ್ಚಿ, ಅಪಾರ ಸಂಖ್ಯೆಯಲ್ಲಿ ಮಿತ್ರರು ಪತ್ರ ಬರೆದು, ಫೋನಿಸಿ ಅಭಿನಂದಿಸಿದ್ದಾರೆ. ಪುಟದ ಮಿತಿಯಿಂದಾಗಿ ಕೆಲವು ಅನಿಸಿಕೆಗಳನ್ನು ಮಾತ್ರ ಪ್ರಕಟಿಸಲಾಗಿದೆ.

ಬಸವರಾಜ ವಕ್ಕುಂದ ಅವರ 'ಜಾಗ', 'ಕಣ್ಣಾಲಿ', 'ಕನಕನ ಕಿಂಡಿ', 'ಯಾರು'– ಈ ನಾಲ್ಕು ಕವಿತೆ ೨೦೦೫ ರ ಸಂಕಲನ–೨೪ ರಲ್ಲಿ ಪ್ರಕಟವಾಗಿದ್ದುವು. ನಮ್ಮ ಕಣ್ತಪ್ಪಿನಿಂದ ಅವು ಸಂಕಲನ–೩೫ ರಲ್ಲಿ ಮತ್ತೆ ಪ್ರಕಟವಾಗಿವೆ. ಇದಕ್ಕಾಗಿ ವಿಷಾದವಿದೆ.

ಸಂಕಲನಕ್ಕೆ ಇನ್ನು ಮುಂದೆ 'ನುಡಿ' ಲಿಪಿಯಲ್ಲಿ ಇ–ಮೇಲ್ ಮೂಲಕ ಲೇಖನ, ಕವಿತೆ, ಅಭಿಪ್ರಾಯ ಇತ್ಯಾದಿ ಕಳಿಸಬಹುದು :

E-mail : siddhaling.pattanshetti@rediffmail.com

೨೦೦೫, ೦೬, ೦೭ ರ ಮೂರು ವರ್ಷಗಳ ಒಟ್ಟು ಚಂದಾ ರೂ. ೫೦೦/- ಹಾಗೂ ೨೦೦೭ ರ ರೂ. ೨೦೦/- ಕೊಟ್ಟವರ ಚಂದಾಅವಧಿ ಸಂಕಲನ–೩೬ ರೊಂದಿಗೆ ಮುಗಿಯುತ್ತದೆ.

ದಯವಿಟ್ಟು ಮುಂದಿನ ಚಂದಾ ಹಣವನ್ನು ಬೇಗನೆ ಕಳಿಸಿ ನವೀಕರಿಸಲು ವಿನಂತಿ.

೧ ನವೆಂಬರ್ ೨೦೦೭
ಹೂಮನೆ, ಧಾರವಾಡ–೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಒನ್ನೇಪುಟ

– ಸಿದ್ಧಲಿಂಗ ಪಟ್ಟಣಶೆಟ್ಟಿ

ಕರ್ನಾಟಕದ ತುಂಬ ಊರು ಕೇರಿಗಳಲ್ಲಿ ಹರವಿ ಬಿದ್ದಿದ್ದ ಸರ್ವಜ್ಞನ ವಚನಗಳನ್ನ ನಮ್ಮ ಹಿರ್‍ಯಾರು, ಆಸಕ್ತರು, ಪಂಡಿತರು, ಏಕತಾರಿ ಹಾಡುಗಾರರು ಆಗಾಗ ತಮತಮಗ ಸಿಕ್ಕಷ್ಟು ಸಂಗ್ರಹ ಮಾಡಿಕೊಂತನ್‌ಅ ಬಂದಿದ್ದರು. ಆದರ ಎಲ್ಲಾದಕೂ ಕಾಲ ಕೂಡಿ ಬರಬೇಕು ಅಂತಾರಲ್ಲ, ಹಂಗ ಉತ್ತಂಗಿ ಚನ್ನಪ್ಪನವರ ರೂಪದೊಳಗ ಸರ್ವಜ್ಞನ ಪುಣ್ಯ ಒಂದು ಆಕಾರಕ್ಕ ಬಂತೇನೊ ಅನ್ನಬಹುದು. ಅವರು ೯-೧೦ ವರುಷ ನಿರಂತರ ಸರ್ವಜ್ಞನನ್ನ ತಮ್ಮ ತಲ್ಯಾಗ, ಉಸಿರಿನ್ಯಾಗ ತುಂಬಿಕೊಂಡು ದುಡಿದಿದ್ದರ ಫಲವಾಗಿ ೨೧೦೦ ತ್ರಿಪದಿಗಳು ಸಂಗ್ರಹ ಆದವು. ಅವುನ್ನ ೧೯೨೪ ರಿಂದ ಪ್ರಕಟ ಮಾಡಾಕ ಸುರು ಮಾಡಿದರು. ಈಗ ನನ್ನ ಕಡೆ ಇರೂದು ನಾನು ೧೯೫೭ ರೊಳಗ ಕೊಂಡಿದ್ದ, ಅದೇ ವರ್ಷದ ಆವೃತ್ತಿ. ೪೦೦ ಪುಟದ ಆ ಪುಸ್ತಕಕ್ಕ ೨ ರೂ. ೧೨ ಅಣೆ ಕೊಟ್ಟಿದ್ದೆ. ಅದು ಇವತ್ತಿಗೂ ನನ್ನ ಹಂತಲೇ ಅಯ್ತಿ.

ಚನ್ನಪ್ಪನವರ ಈ ಪ್ರಕಟಣಾ ಸಾಹಸ ಕಾರ್ಯದಿಂದಾಗಿ ಹಿರೇಕೆರೂರು ತಾಲೂಕಿನ ಅಬಲೂರಿ ನೊಳಗ ಅಬಲನ್ಹಂಗ ಇದ್ದ ಸರ್ವಜ್ಞ ಸಮಗ್ರ ಕನ್ನಡದ, ಸಮಸ್ತ ಕನ್ನಡ ಜೀವನದ, ಸಾರಸ್ವತ ಭಾರತದ ಸಮಾಜ ಸುಧಾರಕ, ನೀತಿಬೋಧಕ, ದಾರ್ಶನಿಕ, ಮಹಾಮಾನವ, ಶಿಕ್ಷಕ, ಕವಿ, ಹಾಡುಗಾರನಾಗಿ ವಿಜೃಂಭಿಸಿದ, ಅಮರನಾದ.

ಚನ್ನಪ್ಪನವರು ೧೯೮೧ ರ ಡಿಸೆಂಬರ್ ೯ ರಂದು ಧಾರವಾಡದಾಗ ಹುಟ್ಟಿದರು. ಅವರಪ್ಪ ದಾನಿಯೇಲಪ್ಪ ಇಲ್ಲಿ ಕನ್ನಡ ಸಾಲೀ ಮಾಸ್ತರರಾಗಿದ್ದರು. ಆದರೂ ಅವರ ಮಗ ಚನ್ನಪ್ಪ ಎಷ್ಟು ಪ್ರಯತ್ನಪಟ್ಟರೂ ಮ್ಯಾಟ್ರಿಕ್ ಪಾಸಾಗಾಕ ಆಗಲಿಲ್ಲಂತ. ಮುಂದ ಚನ್ನಪ್ಪ ಸ್ವಾಧ್ಯಾಯದಿಂದ ಕಲಿತರು. ದರ್ಶನಶಾಸ್ತ್ರ, ನೀತಿಶಾಸ್ತ್ರ, ತೌಲನಿಕ ಧರ್ಮಶಾಸ್ತ್ರ, ಛಂದಸ್ಸು, ಕಾವ್ಯಶಾಸ್ತ್ರ ಅಭ್ಯಾಸ ಮಾಡಿದರು. ಬಡತನದಿಂದಾಗಿ ಮಂಗಳೂರಿಗೆ ಹೋಗಿ ಬಾಸೆಲ್ ಮಿಶನ್‌ದಲ್ಲಿ ಕಲಿತು ಪಾದ್ರಿಯಾದರು. ರೆವರೆಂಡ್ ಉತ್ತಂಗಿ ಆದರು.

೧೯೨೪ರಿಂದ ನಿರಂತರವಾಗಿ ಸರ್ವಜ್ಞನ ಸಂಗ್ರಹ, ಅಭ್ಯಾಸ, ಪ್ರಕಾಶನ ಮಾಡತಾನ ಬಂದ ಚನ್ನಪ್ಪನವರು ಲಿಂಗಾಯತ ಸಾಹಿತ್ಯ ಮತ್ತು ಶರಣರ ಬಗ್ಗೆನೂ ಬರೆದರು. 'ತಿರುಳುಗನ್ನಡ ತಿರುಕ' ಅಂತ ಕಾವ್ಯನಾಮ ಇಟಗೊಂಡು ಕನ್ನಡದಾಗ ಬರೆದರು. ಇಂಗ್ಲೀಶಿನ್ಯಾಗೂ ಮಹತ್ವದ ಕೃತಿಗಳನ್ನ ರಚಿಸಿದರು. ೧೯೪೯ ರೊಳಗ ಕಲಬುರ್ಗಿಯೊಳಗ ನಡೆದ ೩೨ ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಉತ್ತಂಗಿಯವರಿಗೆ ೭೫ ತುಂಬಿದಾಗ ಧಾರವಾಡದ ಆರ್.ಎಲ್.ಎಸ್. ಸಭಾಂಗಣದಾಗ ಒಂದು ಸನ್ಮಾನ ಸಭಾ ನಡೀತು. ಒಂದು ಸಾದಾ ಬಿಳೇ ಲುಂಗಿ, ಬಿಳೇ ಉದ್ದಂಗಿ ಹಾಕ್ಕೊಂಡ ಬಂದಿದ್ದ ಚನ್ನಪ್ಪನವರನ್ನ ಧಾರವಾಡದ ಪ್ರತಿಷ್ಠಿತರು ಮುಂದ ಕುಂಡರಿಸಿಕೊಂಡು ಅವರ ಸರಳ ಜೀವನ, ಸಜ್ಜನಿಕೆ, ಬಡತನ, ಮಹತ್ ಸಾಧನೆಯನ್ನು ಮನಸ್ಸು ತುಂಬಿ ಹೊಗಳಿದರು. ಕಡೀಕ ಚನ್ನಪ್ಪನವರು ಬಹಳ ಸಂಕ್ಷಿಪ್ತವಾಗಿ ಮಾತನಾಡಿದರು : "ನಾನೇನೂ ಮಹಾ ಸಾಧನ ಮಾಡಿಲ್ಲ, ನೀವು ದಾರ್‍ಯಾಗ ನಡಕೊಂತ ಹೊಂಟಿದ್ರಿ. ನಡುದಾರ್‍ಯಾಗ ನಿಮ್ಮ ಚಪ್ಪಲ್ಲಿನ ಉಂಗುಷ್ಠ ಹರೀತು. ನಾ ಅಲ್ಲೇ ದಾರಿ ಬದೀಗೆ ಕುಂತಿದ್ದೆ. ನನ್ನ ಕಡೆ ಬಂದು ಇದನ್ನ ಹೊಲಿದು ಕೊಡು ಅಂದ್ರಿ, ನಾನು ಹರದ ಉಂಗುಷ್ಠಕ್ಕ ಒಂದು ಟಾಕಿ ಹಾಕಿದೆ. ನಾ ಮಾಡಿದ್ದು ಇಷ್ಟ್‌ಅ. ಅದರಿಂದ ನಿಮಗ ಮುಂದಿನ ದಾರಿ ಸರಳಾತು. ಅವತ್ತು ಸರ್ವಜ್ಞ ನನ್ನ ಕೈ ಹಿಡಿದಿದ್ದ. ಇವತ್ತು ನೀವೆಲ್ಲ ಕೈ ಹಿಡಿದು ನಡಿಸೀರಿ..." ಅಂತ ಮಾತು ಮುಗಿಸಿದರು.

ಎಂತಹ ವಿನಯ, ಸಜ್ಜನಿಕೆ, ದೊಡ್ಡಸ್ತಿಕೆ, ನಿರಹಂಕಾರ.... ಮೊದಲ್‌ಅ ಎತ್ತರ ಇದ್ದ ಚನ್ನಪ್ಪ ಅವತ್ತು ಇನ್ನಷ್ಟು ಎತ್ತರದವರಾಗಿ ಕಂಡರು. ಅವರ ಆ ಮಾತು ಕೇಳಿ ಇಡೀ ಸಭಾ ದಂಗ ಆಗಿತ್ತು. ಆಗ ಮ್ಯಾಟ್ರಿಕ್‌ದಾಗ ಇದ್ದ ನಾನೂ, ಕಡೀಕ ಎದ್ದು ಹೋಗಿ, ಅವರ ಪಾದ ಮುಟ್ಟಿ ನಮಸ್ಕರಿಸಿದ್ದೆ.

ಧಾರವಾಡದ ಬಾಸೆಲ್ ಮಿಶನ್‌ದ ಅವರ ಅವತ್ತಿನ ಮನಿ, ಈಗಲೂ ಕಣ್ಮುಂದ ಅಯ್ತಿ. ಆ ದಿನಗಳನ್ನ ನನ್ನ ಹಿಂದೀ ಶಿಕ್ಷಕರಾಗಿದ್ದ ಕಾ. ಚ. ಸಾರಂಗಮಠರು ಮತ್ತು ಶಿ. ರಾ. ಗುಂಜಾಳರು ಮುಂತಾದವರ ಜೊತೆಗೆ ಆಗಾಗ ಅಲ್ಲಿಗೆ ಹೋಗತಿದ್ದೆ. ಆ ದಿನಗಳನ್ನ ನೆನಸೂದ್‌ಅ ಒಂದು ಪೂಜಿ. ೨೮-೮-೧೯೬೨ ರಂದು ಚ. ದಾ. ಉತ್ತಂಗಿಯವರು ತೀರಿದರು. ಆಮ್ಯಾಲ ಅವರ ಆ ಮನೀನೂ ಒಂದು ತರದ ವಿಚಿತ್ರ ಪೂಜಿ ಆಗಿದ್ದು ಬ್ಯಾಸರದ ಸಂಗತಿ.

ಸರ್ವಜ್ಞನ ೨೧೦೦ ವಚನಗಳನ್ನ ಪಾರಮಾರ್ಥಿಕ ಪದ್ಯಗಳು, ನೈತಿಕ ಪದ್ಯಗಳು ಮತ್ತು ಲೌಕಿಕ ಪದ್ಯಗಳು ಅಂತ ಮೂರು ಭಾಗದಾಗ ಹಂಚ್ಯಾರ. ಎಲ್ಲೆಲ್ಲಿನೂ ತಟಕ ಜಗಾ ಬಿಡದ್ಹಂಗ, ಛೆಂದಛೆಂದನ್ನ ತಲೆಕಟ್ಟು ಕೊಟ್ಟು, ಕಡೀಕ ಕಠಿನ ಪದಾರ್ಥನೂ ಕೊಟ್ಟು ಪ್ರಕಟಿಸ್ಯಾರ. ಆರಂಭದೊಳಗ ಬೆಟಗೇರಿ ಕೃಷ್ಣಶರ್ಮ, ಶಿ. ಶಿ. ಬಸವನಾಳ, ದ. ರಾ. ಬೇಂದ್ರೆ, ಹುಲಿಕುಂಟೆಮಠ ಶಿವಮೂರ್ತಿಶಾಸ್ತ್ರಿ ಮುಂತಾದವರ ವಿಮರ್ಶಾತ್ಮಕ ಆಪ್ತ ಬರೆಹಗಳ ಜೊತೆಗೆ, ಸ್ವತಃ ಚನ್ನಪ್ಪನವರು ಸರ್ವಜ್ಞನನ್ನ ಹೆಂಗ ಓದಬೇಕು, ಹೆಂಗ ತಿಳ್ಕೊಬೇಕು ಅಂತ ವಿವರಿಸಿದ ವಿಚಾರಪೂರ್ಣ ಲೇಖನ ಅದಾವು.

ಕೋಟಿ ವಿದ್ಯಗಳಲ್ಲಿ । ಮೇಟಿ ವಿದ್ಯವೆ ಮೇಲು ।
ಮೇಟಿಯಿಂ ರಾಟಿ ನಡೆದುದಲ್ಲದೇ ದೇಶ ।
ದಾಟವೇ ಕೆಡಗು ಸರ್ವಜ್ಞ ॥

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು ? ಸರ್ವಜ್ಞ ॥

ಜಾತಿಹೀನರ ಮನೆಯ । ಜ್ಯೋತಿ ತಾ ಹೀನವೇ ? ।
ಜಾತಿ ವಿಜಾತಿಯೆನಬೇಡ ದೇವನೊಲಿ ।
ದಾತನೇ ಜಾತ । ಸರ್ವಜ್ಞ ॥

ಸರ್ವಜ್ಞನೆಂಬವನು । ಗರ್ವದಿಂದಾದವನೆ ? ।
ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯಾ ।
ಪರ್ವತವೆ ಆದ ಸರ್ವಜ್ಞ ॥

ಇಂಥ ಅದ್ಭುತ ತ್ರಿಪದಿಗಳನ್ನು ಹಾಡಿದ ನಿರ್ಭಯ ಪುರುಷ ಸರ್ವಜ್ಞ ಮೂರ್ತಿಗೆ ಯಾರ್‍ಯಾರದೂ ಎದೆದರದೂ ಹಂಗು ಇರಲಿಲ್ಲ.

ಸರ್ವಜ್ಞನನ್ನ ಭಾಳ ಭಾಳ ಮೆಚ್ಚಿದ್ದ ಬೇಂದ್ರೆ ಮಾಸ್ತರರು, 'ಅವನ ಜಾತಿ ಮಾನವ ಜಾತಿ, ಅವನ ಮತ ದೇವಮತ, ಅವನ ಕಾಲ ಸರ್ವಕಾಲ' ಅಂತ ಹೇಳಿದ್ದು ವೇಮನ, ಕಬೀರ, ಸರ್ವಜ್ಞ ಎಲ್ಲರಿಗೂ ಸಲ್ಲುವ ಸತ್ಯ. ಬೇಂದ್ರಯವರು ಸ್ವತಃ ಸರ್ವಜ್ಞನ್ನ ಎದ್ಯಾಗ ತುಂಬಿಕೊಂಡು

ಸರಸ ಮಾತುಗಳಲ್ಲಿ । ಬೆರಸಿ ಸಿಡಿಲಿನ ನೀರ ।
ಸುರಿಸಿದನು ವಚನ ಘುಡಘುಡಿಸಿ ಕಿರಿಗನ್ನ ।
ಡರಸನಿವನೊಬ್ಬ ! ಸರ್ವಜ್ಞ ॥ ಅಂತ ಹಾಡಿದ ತ್ರಿಪದಿನೂ ಸರ್ವಜ್ಞ ತ್ರಿಪದಿ.

ಈ ತ್ರಿಪದಿ ವಚನಗಳನ್ನ ಮತ್ತ ಮತ್ತ ಓದಬೇಕು. ಎಲ್ಲಾ ಶಾಲಾ ಅಧ್ಯಾಪಕರು, ಸಾಹಿತಿಗಳು, ವಿಚಾರವಂತರು, ರಾಜಕಾರಣಿಗಳು ತಪ್ಪದ್‌ಅ ಓದಬೇಕು. ದಿನಾ ಒಂದೊಂದ್‌ಅ, ಓದಿದರೂ ಸಾಕು, ಹಿಂಗ ೭-೮ ವರ್ಷ ಓದಿದರೂ ಮುಗೀಲಾರದ, ಆದರ ೭-೮ ಜನ್ಮಕ್ಕ ಸಾಕಾಗುವಷ್ಟು ಜ್ಞಾನ, ಅನುಭವ ಸಾರದ ಬುತ್ತಿಯನ್ನ ಈ ವಚನಗಳಿಂದ ಉಣ್ಣಬಹುದು.

ಮೀನು ಹುಳಿಯ ಕಡಿ

ಯು. ವೆಂಕಟ್ರಾಜ ರಾವ್

ಶೇಖರ ಯಾನೆ ಸೇಕು ಇನ್ನೂ ಚಾಪೆಯಲ್ಲಿ ಮಲಗಿಯೇ ಇದ್ದ. ಅಜ್ಜಿ ಹೊರಗೆ ಅಂಗಳದಿಂದ ಹಲವಾರು ಬಾರಿ ಅವನನ್ನು ಕರೆದಿದ್ದಾಳೆ. ಅವಳು ಎಷ್ಟು ಕೂಗಿದ್ದಾಳೋ ಅಷ್ಟೇ ಸೇಕುವಿನ ದೃಢತೆ ಚಾಪೆಗೆ ಅಂಟುವುದರಲ್ಲಿ ಹೆಚ್ಚಾಗಿದೆ. ಅಜ್ಜಿಗಾದರೂ ಹನ್ನೊಂದು ವರ್ಷ ದಾಟದ ಕಡೆಯ ಮೊಮ್ಮಗನನ್ನುಎದ್ದೇಳಿಸುವಕಾರ್ಯಕ್ರಮದಲ್ಲಿ ಎಷ್ಟು ತತ್ಪರತೆ ಇತ್ತು ಎಂದು ಹೇಳಲಾಗದು.

ಕೈಕಾಲು ಚಾಚಿದರೆ ನಾಲ್ಕು ಗೋಡೆಗಳನ್ನು ಮುಟ್ಟಬಹುದೆನ್ನುವಷ್ಟು ಚಿಕ್ಕದಾಗಿದ್ದ ಆ ಕೋಣೆಯ ಸಕಲ ಸಾಮಾನುಗಳು ಅಂಗಾತ ಮಲಗಿದ ಸೇಕುವಿನ ದೃಷ್ಟಿಗೆ ಸ್ಪಷ್ಟವಾಗಿ ಬೀಳುವ ಹಾಗಿದ್ದವು–ಗೋಡೆಗಂಟಿ ನಿಶ್ಚಲವಾಗಿ ನಿಂತ ಹಲ್ಲಿ, ಇದೇ ಹಲ್ಲಿಗೆ ತುತ್ತಾಗಲಿದ್ದು ಅಲ್ಪ ವಿರಾಮಕ್ಕಾಗಿ ಗೋಡೆಯ ಮೇಲೆ ಕೂತ ಗ್ರಹಚಾರದ ಕೆಟ್ಟ ನೊಣ, ಜಲಧಿಯನ್ನು ಜಿಗಿಯುತ್ತಿರುವ ಹನುಮನ ಚಿತ್ರವಿರುವ ಮಾಸಿ ಹೋದ ಕೇಲಂಡರು, ಹಾಗೂ, ಸೇಕು ಅತೀವವಾಗಿ ಮೆಚ್ಚಿದ ಅವನ ಅಣ್ಣ ಜಗನ್ನನ ಫ್ರೇಮ್ ಹಾಕಿದ ಫೋಟೊ. ಈ ಚಮತ್ಕಾರದ ಫೋಟೋದಲ್ಲಿ, ಜಗನ್ನ ಮತ್ತು ಅವನ ದೋಸ್ತಿ, ಅಡ್ಡ ಬರೆಗಳ ಬಿಗಿ ಅಂಗಿಯನ್ನು·ಧರಿಸಿ, ಕೊರಳಿಗೆ ಕರವಸ್ತ್ರಗಳನ್ನು ಬಿಗಿದು, ಚಿಕ್ಕ ವಿಮಾನದಲ್ಲಿ ಒಬ್ಬರ ಹಿಂದೆ ಒಬ್ಬ ಕೂತು, ಅದರ ಕಿಟಕಿಗಳಿಂದ ಹೊರಗೆ ಕಿಡಿಗೇಡಿ ದೃಷ್ಟಿ ಹಾಯಿಸುತ್ತಿದ್ದಾರೆ.

ಸೇಕು ಇನ್ನೂ ಮಲಗಿಯೇ ಇದ್ದರೂ, ಹೊರಗೆ ಅಂಗಳದಲ್ಲಿ ಸಾಕಷ್ಟು ಲವಲವಿಕೆಯ ವಾತಾವರಣವಿತ್ತು. ಅಂಗಳದ ಮೇಲೆ ಹರಡಿದ ಮರಗಳ ಗೆಲ್ಲುಗಳ ಮಧ್ಯದಿಂದ ಇಂಗಿ ಬಂದ ಎಳೆ ಬಿಸಿಲಿನ ಬೆಳಕಿನಲ್ಲಿ, ಸೇಕುವಿನ ಅಜ್ಜಿ ಸೀತು ಶೆಡ್ತಿ ಮೆಟ್ಟುಕತ್ತಿಯ ಮೇಲೆ ಮೀನು ಕೊಯ್ಯುತ್ತ ಕುಳಿತಿದ್ದಳು. ಮೀನಿನ ಸುಲಿದ ಸಿಪ್ಪೆಗಳು ಮೆಟ್ಟುಗತ್ತಿಯ ಸುತ್ತುಮುತ್ತು, ಬೆಳ್ಳಿಯ ತಗಡಿನ ಚೂರುಗಳಂತೆ ಬಿಸಿಲಿಗೆ ಹೊಳೆಯುತ್ತ ಹರವಿ ಬಿದ್ದಿದ್ದವು. ಹತ್ತಿರದಲ್ಲೆ ಕೋಳಿಗಳ ಪರಿವಾರ ಪುರುಸೊತ್ತಿಲ್ಲದಂತೆ ಅತ್ತಿತ್ತ ಅಡ್ಡಾಡಿಕೊಂಡು ನೆಲವನ್ನು ಕುಕ್ಕಿ, ಹರವಿ, ಹುಳು ಹುಪ್ಪಟೆಗಳನ್ನು ತಿನ್ನುವ ಕಾರ್ಯಕ್ರಮದಲ್ಲಿದ್ದವು. ಒಂದಿಷ್ಟು ಕಾಗೆಗಳು ಸೀತುವನ್ನು ಸುತ್ತುವರಿದು, ವಕ್ರ ದೃಷ್ಟಿ ಬೀರಿಕೊಂಡು ಅಡ್ಡಡ್ಡವಾಗಿ ಹೆಜ್ಜೆ ಹಾಕಿಕೊಂಡು, ಮೀನಿನ ತುಂಡುಗಳನ್ನು ಲಪಟಾಯಿಸುವ ಹಂಚಿನಲ್ಲಿದ್ದವು. ಆಗೊಮ್ಮೆ ಈಗೊಮ್ಮೆ ಸೀತು 'ಹುಫ್' ಎಂದು ಕೈ ಬೀರಿದಾಗ, ಸ್ವಲ್ಪ ಅತ್ತ ಜಿಗಿದು, ಓಡಿ ಹೋಗುವ ನಟನೆ ಮಾಡಿದ ಕಾಗೆಗಳು ಪುನಃ ಅವಳನ್ನು ಮೆಲ್ಲಮೆಲ್ಲನೆ ಸುತ್ತುವರಿಯುವುದು ನಡೆದೇ ಇತ್ತು.

ಮೀನು ಕೊಯ್ಯುವುದರಲ್ಲಿ ನಿರತಳಾಗಿದ್ದ ಸೀತು ಸೆಡ್ತಿಯ ಮುಖಭಾವ ಎಂದಿನಂತೆ ಗಂಭೀರ. ನಸು ಕೆಂಪು ಬಣ್ಣದ, ಸುಕ್ಕು ಕಟ್ಟಿದ, ಕೋಲು ಮುಖ, ಕುತ್ತಿಗೆಯ ತನಕ ಕೆಳಗಿಳಿದು ಜೋತುಬಿದ್ದ ಮುಖದ ನೆರಿಗೆಗಳು, ಕೆಂಪೇರಿದ ಸದಾ ಅರ್ಧ ನಿಮೀಲಿತ ಕಣ್ಣುಗಳು, ಬಾಗಿರದ ಬೆನ್ನು, ಅರೆನೆರೆದ ತುಂಬು ಕೂದಲು,– ಅವಳ ವ್ಯಕ್ತಿತ್ವ ಅವಳ ಬದುಕಿನ ಸಾರಾಂಶದಂತಿತ್ತು. ಯೌವನದಲ್ಲೇ ಕಳೆದುಕೊಂಡ ಗಂಡ, ಮನೆಯ ಗಂಡಸರ ಮೋಸತನದಿಂದ ಕಳೆದುಕೊಂಡ ಮನೆತನ, ಮಧ್ಯವಯಸ್ಸಿನ ಮೊದಲೇ ತೀರಿಕೊಂಡ ಒಬ್ಬಳೇ ಮಗಳು, ಮತ್ತವಳ ಗಂಡ, ಅವರು ಬಿಟ್ಟು ಹೋದ ಐದು ಮೊಮ್ಮಕ್ಕಳ ಜವಾಬ್ದಾರಿ, ಮೊದಲಿನ ಮೂರು ಮೊಮ್ಮಕ್ಕಳು ವಯಸ್ಕರಾಗುತ್ತಲೇ ಒಬ್ಬೊಬ್ಬರಾಗಿ ಬೊಂಬಾಯಿಗೆ ಓಡಿಹೋಗಿ ಸರಿಯಾದ ವಿಳಾಸವೂ ಇಲ್ಲದಂತಿರುವ ಪರಿ, ಈಗಿರುವ ಮೊಮ್ಮಕ್ಕಳನ್ನು ಬೆಳೆಸಲಿಕ್ಕೆ ಬೇಕಾದ ಹಣವಿಲ್ಲದ ಪರದಾಟ, ಇದೆಲ್ಲದರ ಮಧ್ಯೆ ಮನೆತನದ ಅಭಿಮಾನವನ್ನು ಕಾಪಾಡಲು ಮಾಡುವ ಅಂತ್ಯವಿಲ್ಲದ ಪ್ರಯತ್ನ. ಸೀತು ಶೆಡ್ತಿಯ ಮನೋಭಾವದಲ್ಲಿ, ದೃಢತೆ, ದುಗುಡ, ಜಿಗುಪ್ಸೆ, ಮುನಿಸು,– ಎಲ್ಲದಕ್ಕೂ ಸಮಪಾಲು.

ಇಷ್ಟರಲ್ಲಿ, ಊರಿನ ಸ್ವಾತಂತ್ರ್ಯಯೋಧ ಕಾಮತರು ಹೊರಡಿಸಿದ, ಮಕ್ಕಳ ಪ್ರಭಾತಫೇರಿಯ ಜೈಕಾರಗಳು ಅಸ್ಪಷ್ಟವಾಗಿ, ದೂರದಿಂದ ಬಂದು, ಇನ್ನೂ ಮಲಗಿದ್ದ ಸೇಕುವಿನ ಕಿವಿಗೆ ಬೀಳತೊಡಗಿದವು. ಥಟ್ಟನೆ, ತಾನೂ ತನ್ನ ದೋಸ್ತಿ ಅನಂತನೂ ಇದೇ ಫೇರಿಗೆ ಹೋದ ವಾರ ಸೇರಿಕೊಂಡದ್ದು ಸೇಕುವಿಗೆ ನೆನಪಾಯಿತು. ಈ ಸಂದರ್ಭದಲ್ಲಿ ಅನಂತುವಿನ ಕಿರು ಪರಿಚಯ ಉಚಿತವಾಗಿರುತ್ತದೆ. ಅನಂತು ಹತ್ತಿರದ 'ಬಿರೆಣರ' (ಬ್ರಾಹ್ಮಣರ) ಮನೆಯ ಹುಡುಗ. ಶಿರ್ವ-ಮಂಚಕಲ್ಲಿನ ಒಂದು ರಸ್ತೆಯ ಸಣ್ಣಪೇಟೆಯನ್ನು ಸುತ್ತಾಡಿ, ಅದರ ಎಲ್ಲಾ ಸಾಧ್ಯತೆಗಳನ್ನು ಹಿಪ್ಪಿ ಹೀರುವಲ್ಲಿ ಸೇಕು ಮತ್ತು ಅನಂತು ಗಾಡಿ ಎಳೆಯುವ ಜೋಡೆತ್ತುಗಳಂತೆ. ಉದಾಹರಣೆಗೆ, ಊರಿಗೆ ಬಂದ 'ಫಿಲಿಪ್ಪನ ಸರ್ಕಸ್ಸಿ'ನ ಟಿಕೇಟಿಗೆ ಬೇಕಾದ ಒಂದಾಣೆ ಕೂಡಿಸಲಿಕ್ಕೂ ಆಗದಂತಹ ತೀವ್ರ ಆರ್ಥಿಕ ಮುಗ್ಗಟ್ಟನ್ನು ಸೇಕು ಎದುರಿಸಿದಾಗ ಅನಂತು ತನ್ನ ದುಡ್ಡು ಕೊಡುವ ಡಬ್ಬಿಯನ್ನು ಮೇಲೆ ಕೆಳಗೆ ಮಾಡಿ, ಬೇಕಾದ ಪಾವಾಣೆಗಳನ್ನುಅದರತೂತಿನಿಂದ ಸೇಕುವಿಗಾಗಿ ಉದುರಿಸಿದ್ದಾನೆ. ಒಮ್ಮೆ ಟಿಕೇಟು ಕೊಂಡು ಅಧಿಕೃತವಾಗಿ ಸರ್ಕಸ್ಸು ನೋಡಿಯಾದ ಮೇಲೆ ಈ ಇಬ್ಬರ ಜೋಡಿ ಅನಧಿಕೃತವಾಗಿ ಡೇರೆಯ ಹೊರಗಿನಂಚಿನಲ್ಲಿ ಕೂತು, ಅಂಚನ್ನು ಮೇಲೆತ್ತಿ, ಸರ್ಕಸ್ಸಿನ ಹಲವಾರು ರೋಮಾಂಚಕ ಗಳಿಗೆಗಳನ್ನು ಪುನಃ ಅನುಭವಿಸಿ ಪುಲಕಿತವಾಗಿದೆ. ಹಾಗೆಯೇ, ಸಂತೆಯ ದಿನ ಬರುವ ಡೊಂಬರಾಟ ನೋಡುವುದರಲ್ಲಾಗಲೀ, ಗಾಳಿಪಟಗಳನ್ನು ತಯಾರಿಸಿ ಹಾರಿಸುವುದರಲ್ಲಾಗಲೀ, ಅರಳೀ ಮರದ ಕೆಳಗೆಎತ್ತುಗಳಿಗೆ ಲಾಳ ಹಾಕುವ ರೋಚಕ ದೃಶ್ಯವನ್ನು ತದೇಕವಾಗಿ ಒಬ್ಬನ ಹೆಗಲ ಮೇಲೆ ಮತ್ತೊಬ್ಬ ಕೈಹಾಕಿಕೊಂಡು ವೀಕ್ಷಿಸುವುದರಲ್ಲಾಗಲೀ,- ಈ ಜೋಡಿಯ ಸ್ನೇಹ ಸಂಬಂಧ ಅಚಲಿತ.

ಅನಂತನಿಂದ ಮೊದಲಾಗಿ, ಒಂದರ ಹಿಂದೆ ಮತ್ತೊಂದರಂತೆ ಬಂದ ಯೋಚನೆಗಳು ಸೇಕುವನ್ನು ಎದ್ದೇಳುವಂತೆ ಮಾಡಿದವು. ಎದ್ದ ಸೇಕು ಜಗಲಿಯ ಮೆಟ್ಟಿಲಿಂದ ಕೆಳಗಿಳಿದು, ಅಜ್ಜಿಯ ಬಳಿ ಬಂದಾಗ ಅವಳು ಮೀನು ಕೊಯ್ಯುತ್ತಿರುವುದು ಗಮನಕ್ಕೆ ಬಂದು ಅವನಿಗೆ ಹರ್ಷೋನ್ಮಾದವಾಯ್ತು. ಮೀನು ಹುಳಿ ಎಂದರೆ ಅವನಿಗೆ ಪ್ರಾಣ. ಅಜ್ಜಿಯ ಎದುರು ಕುಕ್ಕರಿಸಿ ಕೂತು, 'ಅಜ್ಜಿ, ಮೀನ್‌ದ ಕೊದ್ದೆಲ್ ಮಲ್ಪುವನ?' (ಮೀನಿನ ಹುಳಿ ಮಾಡ್ತಿಯಾ) ಎಂದು ಉಮೇದಿನಿಂದ ಕೇಳಿದಾಗ, ಸೀತು ತನಗೇನೂ ಕೇಳಿಸಲಿಲ್ಲವೆಂಬಂತೆ ವರ್ತಿಸಿದಳು.

ಅಜ್ಜಿಗೆ ಉತ್ತರಿಸಲಿಕ್ಕೆ ಎಷ್ಟು ತಡವಾಗುತ್ತದೋ ಅಷ್ಟು ಅವಳ ಸಿಟ್ಟಿನ ಅಳತೆಯೆನ್ನುವುದು ಸೇಕುವಿಗೆ ಗೊತ್ತು. ಸಾಕಷ್ಟು ಹೊತ್ತಿನ ಮೇಲೆ ಸೀತುವಿನ ಸಿಟ್ಟಿಗೆ ಶಬ್ದರೂಪ ಸಿಕ್ಕಿ, 'ದಾನಿಂಬೆ! ಮೋನೆ ದೆಕ್ಕರೆ ಇಜ್ಜಿಯಾ? ಅಟ್ಟಿಲ್‌ದ ವಿಲೆವಾರಿ ನಿಕ್ಕ್ ದಾಯಗೆಯಾ?' (ಯಾಕೋ? ಮುಖ ತೊಳೆಯುವುದಿಲ್ಲವೇನೋ? ಅಡುಗೆಯ ವಿಲೇವಾರಿ ನಿನಗ್ಯಾಕೆ?) ಎಂದು ಗದರಿಸಿ, ಸೇಕುವನ್ನು ತನ್ನೆದುರಿನಿಂದ ತೊಲಗಿಸಿಬಿಟ್ಟಳು.

ಇಷ್ಟರಲ್ಲಿ, ಮುಂಚಿನ ದಿವಸ, 'ಪುಲ್ಲರೆ ಕಾಂಡೆ ಗುತ್ತ್‌ದ ಇಲ್ಲಗ್ ಪೋವರೆ ಉಂಡು', (ನಾಳೆ ಬೆಳಿಗ್ಗೆ ಬೇಗ ಗುತ್ತಿನ ಮನೆಗೆ ಹೋಗಲಿಕ್ಕುಂಟು) ಎಂದು ಅಜ್ಜಿ ಹೇಳಿದ ಮಾತುಗಳು ಸೇಕುವಿನ ನೆನಪಿಗೆ ಬಂದು, ಅಜ್ಜಿಗೆ ತಾನು ತಡವಾಗಿ ಎದ್ದದ್ದಕ್ಕೆ ಯಾಕಷ್ಟು ಸಿಟ್ಟು ಬಂದದ್ದೆಂದು ಅವನಿಗೆ ಅರಿವಾಯಿತು. ಗುತ್ತಿನ ಮನೆಗೆ ಹೋಗುವುದೆಂದರೆ ಏನು ಕುಶಾಲಿನ ಸಂಗತಿಯಲ್ಲ. ಗದ್ದೆ, ಹಾಡಿ, ಕಾಡು ಎಂದೆಲ್ಲಾ ದಾಟಿಕೊಂಡು, ನಡೆದು ನಡೆದು ಸಾಕಾಗಿ ಗುತ್ತಿನ ಮನೆ ಮುಟ್ಟುವಾಗ ಬಿಸಿಲಿಗೆ ಬೆಂದು ಅರ್ಧ ಜೀವವಾಗಬೇಕು. ಮೀನು ಹುಳಿಯ ನಿರೀಕ್ಷೆಯಿಂದ ಉಂಟಾದ ಉಮೇದೆಲ್ಲಾ ಗುತ್ತಿನ ಮನೆಗೆ ಹೋಗಬೇಕಾಗುವ ಪ್ರಮೇಯದಿಂದಾಗಿ ಸಂಪೂರ್ಣ ಕರಟಿಹೋಯ್ತು. ಆದರೆ, ಅದು ಪುನಃ ಚಿಗುರುವಂತೆ, ಸೇಕು ಹೊರಡುತ್ತಿದ್ದಾಗ ಜಗನ್ನನ ಕಾಗದ ಬಂದ ಉತ್ತೇಜಕ ಸುದ್ದಿಯನ್ನು ಅಜ್ಜಿ ಕೊಟ್ಟಿದ್ದಾಳೆ.

ಜಗನ್ನ ಊರಿಗೆ ಬರುವುದು ನಾಲ್ಕೈದು ವರ್ಷಗಳಿಗೊಮ್ಮೆ ಮಾತ್ರವಾದರೂ, ಅವನ

ಕಾಗದ ಬಂತೆಂದರೆ, ಇನ್ನೇನು, ಅದರ ಹಿಂದೆಯೇ ಜಗನ್ನನೂ ಬರುತ್ತಾನೆಂಬ ಹುಚ್ಚು ಆಶೆ ಸೇಕುವಿನಲ್ಲಿ ಹುಟ್ಟದಿರುವುದಿಲ್ಲ. ಅಷ್ಟಕ್ಕೆಯೇ, ಜಗನ್ನನ ಆಗಮನದ ಸಂಭ್ರಮ, ಸಡಗರದ ನಿರೀಕ್ಷೆಯಲ್ಲಿ ಸೇಕುವಿನ ಮನಸ್ಸು ಉತ್ತೇಜನಗೊಂಡು, ಜಿಗಿದು ಬಿರಿಯುವಂತಾಗುತ್ತದೆ. ಸ್ಟೀಮರಿನಿಂದ ಮಲ್ಪೆಯಲ್ಲಿ ಇಳಿದ ಜಗನ್ನ, ಸಂಜೆಗತ್ತಲಿನಲ್ಲಿ ಮಂಚಕಲ್ಲಿಗೆ ಬರುವ ಬಸ್ಸಿನಿಂದ ಇಳಿಯುವುದು, ಅವನ ತಗಡಿನ ಪೆಟ್ಟಿಗೆಗಳನ್ನು ಕೆಳಗಿಳಿಸುವುದು, ಬಲಾಢ್ಯ ಕೈಗಳಲ್ಲಿ ಪೆಟ್ಟಿಗೆಗಳನ್ನು ಎತ್ತಿಕೊಂಡು ಅವನು ಮನೆಯತ್ತ ನಡೆದಾಗ, ಮಧ್ಯಾಹ್ನದಿಂದಲೇ ಬಸ್ಸಿನ ಬರವನ್ನು ಎದುರು ಕಾಯುತ್ತ ಕೂತಿದ್ದ ತಾನು ಅವನ ಕುಶಾಲು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಕನಸಿನಲ್ಲೆಂಬಂತೆ ಹಿಂಬಾಲಿಸುವುದು. ಇದೆಲ್ಲವೂ ನೂರಾರು ಬಾರಿ ಸೇಕುವಿನ ಮನಃಪಟಲದಲ್ಲಿ ಹಾಯ್ದು ಹೋಗುವ ಚಿತ್ರಣಗಳು.

ಬಂದ ದಿನ ರಾತ್ರಿ, ಚಿಮಣಿ ದೀಪ ಆರಿಸಿದ ಮೇಲೆಯೂ ಅಜ್ಜಿಯೊಡನೆ ಜಗನ್ನ ಬೊಂಬಾಯಿಯ ವೃತ್ತಾಂತ, ಅಣ್ಣಂದಿರ ಸುಖದುಃಖದ ಕಥೆಗಳನ್ನೆಲ್ಲಾ ಹೇಳುತ್ತ ಕೂತಿರುತ್ತಾನೆ. ಅಜ್ಜಿ ಮಾತ್ರ ಎಂದಿನಂತೆ ಗೆಲುವಿನ ಸುಳಿವಿಲ್ಲದೆ, ಗಂಭೀರವಾಗಿಯೇ ಇದ್ದರೂ, ಮರುದಿನ ಅವಳು ಮಾಡಿದ ಕೋಳಿ ರೊಟ್ಟಿಯ ಅಡುಗೆ ಅವಳು ಹತ್ತಿಕ್ಕಿಟ್ಟ ಸಂತೋಷದ ಕುರುಹು.

ಜಗನ್ನನ ಕಟ್ಟುಮಸ್ತಾದ ಮೈ, ಹೊಳೆಯುವ ಕಣ್ಣುಗಳು, ಸುಲಭದಲ್ಲಿ ನಗುವ ಸಪಾಯಿ ಮುಖ, ನಕ್ಕಾಗ ಬಾಯಿಯ ಎರಡೂ ತುದಿಯಲ್ಲಿ ಮೂಡುವ ಆಕರ್ಷಕ ನೆರಿಗೆ, ಮಿರುಗಿನ ಕೂದಲು, ಕುಶಾಲಿನ ಸ್ವಭಾವ, ಇವೆಲ್ಲಾ– ಅವನಿಗೆ ಚಿಕ್ಕ ಅಭಿಮಾನಿಗಳ ದೊಡ್ಡ ತಂಡವನ್ನು ಊರಿನಲ್ಲಿ ನಿರ್ಮಿಸಿದ್ದವು. ಜಗನ್ನ ಊರಿನಲ್ಲಿರುವಷ್ಟು ದಿನಗಳಲ್ಲಿ, ಈ ತಂಡದೆದುರು ಅವನ ತಮ್ಮನಾಗಿ ಸೇಕು ಮೆರೆಯುತ್ತಿರುತ್ತಿದ್ದರೆ, ತನಗೂ ಈ ಸಂಬಂಧದಲ್ಲಿ ಏನೋ ಹಕ್ಕಿದೆಯೆಂಬಂತೆ ಅನಂತನೂ ಎದೆಯುಬ್ಬಿಸಿಕೊಳ್ಳುತ್ತಾನೆ. ಅಜ್ಜಿಗೆ ಹೇಳುವ ಬೊಂಬಾಯಿಯ ವೃತ್ತಾಂತ ಒಂದು ಬಗೆಯದ್ದಾದರೆ, ಸೇಕು, ಅನಂತು ಮತ್ತು ಸೇರಿದ ಕೇರಿಯ ಮಕ್ಕಳಿಗೆ ಜಗನ್ನ ಕೊಡುವ ವೃತ್ತಾಂತ ಬೇರೆಯೇ ಇರುತ್ತದೆ.

ಬೊಂಬಾಯಿಯ ಸೇಂಡೋ ಮಾಸ್ತರುಗಳು, ಅವರ ಶಕ್ತಿ ಸಾಮರ್ಥ್ಯಗಳು, ಅವರ ಶಿಷ್ಯರ ಗುಂಪುಗಳು, 'ಮಾರಾಮಾರಿ'ಗಳು, 'ಟಾರ್ಜನ್', 'ಹಂಟರ್‌ವಾಲಿ'ಗಳಂತಹ ಸಿನೆಮಾ ಕಥೆಗಳು, ಕೋಟೆಯಲ್ಲಿ ರಾತ್ರಿ ಕೂಟಗಳು, ಈ ವಹಿವಾಟುಗಳಲ್ಲಿ ಜಗನ್ನನ ಪ್ರಮುಖ ಪಾತ್ರ– ಇವನ್ನೆಲ್ಲಾ ಕೇಳುತ್ತಾ, ಅವುಗಳಲ್ಲಿ ತೇಲುತ್ತಾ, ಸೇಕು, ಮತ್ತಿತರ ಅಭಿಮಾನಿಗಳು ಜಗನ್ನನ ಸುತ್ತು ಬೆಪ್ಪರಂತೆ ಕೂತುಬಿಡುತ್ತಾರೆ.'ಲಾಡ್ ಮಾಸ್ತರ್' ಎದುರಾಳಿಗಳ ಓಣಿಯಲ್ಲಿ ಚೂರಿ ಇರಿತಕ್ಕೆ ತುತ್ತಾದರೂ, ದುರುಳರನ್ನು ಉರುಳಿಸಿ, ಮರಳಿ ತನ್ನ ಗುಂಪಿಗೆ ಸೇರಿದಾಗ ಚೂರಿ ಇನ್ನೂ ಬೆನ್ನಲ್ಲಿ ಕಂತಿಕೊಂಡಿದ್ದ– ಮೈನವಿರೇಳಿಸುವಂತಹ ಕಥೆಗಳು ದಂಗು ಬಡಿಸಿ, ಮತ್ತೆ ಕನಸಿನಲ್ಲಿ ಪುನರಾವರ್ತಿತವಾಗುತ್ತಿದ್ದುವು. ಇಂತಹ 'ಮಾರಾಮಾರಿ'ಗಳಲ್ಲಿ ಜನನ್ನನ ಪಾತ್ರವೇನು ಕ್ಷುಲ್ಲಕ ವಾಗಿರುತ್ತಿರಲಿಲ್ಲವೆಂಬುದನ್ನು ಜಗನ್ನನ ತೋಳಿನ ಮಾಂಸಖಂಡಗಳನ್ನು ನೋಡಿ, ಅವನ್ನು ಒತ್ತಿ, ಕಾಠಿನ್ಯವನ್ನು ಖಾತ್ರಿ ಮಾಡಿಕೊಂಡ ಈ ಶ್ರೋತೃವರ್ಗಕ್ಕೆ ಬೇರೆ ಹೇಳಬೇಕಾಗಿಲ್ಲ.

ಸೇಕು ಹೊರಟಾಗಲೇ ಉದ್ಭವಿಸಿದ ಸೆಕೆ, ಅವನು ಗುತ್ತಿನ ಮನೆಗೆ ಮುಟ್ಟುವ ಹೊತ್ತಿಗೆ ಅಸಹ್ಯ ಪ್ರಮಾಣಕ್ಕೆ ಏರಿ, ಬೆವರಿ, ಬಿಸಿಲಲ್ಲಿ ಬೆಂದು, ಅವನ ಬಾಯಿ ಒಣಗಿಹೋಗಿತ್ತು. ಅವನ ಹೊಟ್ಟೆಯಲ್ಲಿ ಬೆಳಿಗ್ಗೆ ಉಂಡ ಗಂಜಿ ಕರಗಿಹೋಗಿ, ಈಗ ಅಲ್ಲಿ ಸಿಟ್ಟೆಗೆದ್ದ ಹಸಿವು ಕುಳಿತಿತ್ತು. ಮನೆ ಮುಟ್ಟಿದ ಕೂಡಲೆ ಬಟ್ಟಲಿಟ್ಟುಕೊಂಡು, ಅನ್ನದ ರಾಶಿ ಹೇರಿಸಿ, ಅದರಲ್ಲಿ ಮೀನು ಹುಳಿ ಸುರಿದುಕೊಳ್ಳುವ ಆಪ್ಯಾಯಮಾನವಾದ ಚಿತ್ರಣವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು, ಸೇಕು ಆಗಾಗ್ಗೆ ಸಾಂತ್ವನ ದೊರಕಿಸಿಕೊಳ್ಳುತ್ತಿದ್ದ. ಈ ಚಿತ್ರಣ ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ ಅಜ್ಜಿ ಮಾಡುವ ಮೀನು ಹುಳಿಯ ಪರಿಮಳ ಫಕ್ಕನೆ ಅವನ ಮೂಗಿಗೆ ಬಡಿದಂತಹ

ಭ್ರಮೆಯೂ ಹಲವಾರು ಬಾರಿ ಆಯ್ತು. ಪರಿಸ್ಥಿತಿ ಹೀಗಿದ್ದಾಗ, ಕೆಲಸ ಮುಗಿಸಿ ಮನೆಗೆ ವಾಪಾಸು ಬಂದು, ಅವಸರದಲ್ಲಿ ಕೈಕಾಲು ತೊಳೆದುಕೊಂಡು, ಅಡುಗೆಯ ಮನೆಗೆ ನುಗ್ಗಿ, ಬಟ್ಟಲಿಟ್ಟುಕೊಂಡು ಅದರಲ್ಲಿ ಅನ್ನದ ರಾಶಿಯನ್ನೇರಿಸಿ, ಅದಕ್ಕೆ ಮೀನು ಹುಳಿ ಸುರಿದುಕೊಳ್ಳುವ ಕಾರ್ಯದಲ್ಲಿ ಸೇಕು ತೊಡಗಿದಾಗ, ಆ ಹುಳಿಯಲ್ಲಿ ಒಂದಾದರೂ ಮೀನು ಕಡಿ ಕಾಣದಿರಬೇಕೇ? ಸೇಕು ಉದ್ವಿಗ್ನನಾದ. ಮೀನಿಲ್ಲದ ಹುಳಿ, ಮೀನು-ಹುಳಿ ಹೇಗಾದೀತು, -ಈ ವಿಪರ್ಯಾಸ ಸೇಕುವಿನ ಹಸಿವನ್ನು ಹಂಗಿಸಿತು. ಅಡುಗೆಮನೆಯನ್ನು ಎಷ್ಟು ವೇಗದಲ್ಲಿ ನುಗ್ಗಿದ್ದನೋ, ಅಷ್ಟೇ ವೇಗದಲ್ಲಿ ಸೇಕು ಅದರಿಂದ ಹೊರಗೆ ಬಂದುಬಿಟ್ಟ.

ಹೊರಬರುತ್ತಲೆ, ಇಕ್ಕಲದಲ್ಲಿ ಜಗಲಿಯ ಮೇಲೆ ಇಬ್ಬರು ವ್ಯಕ್ತಿಗಳು ಮುಖದ ಮೇಲೆ ಕೆಂಪು ಚೌಕದ ಅಂಗವಸ್ತ್ರವನ್ನು ಎಳೆದುಕೊಂಡು, ಉದ್ದನೆ ಅಂಗಾತ ಮಲಗಿ, ಭರ್ಜರಿ ಊಟ ಮಾಡಿದ ಸರ್ವ ಲಕ್ಷಣಗಳನ್ನೂ ಪ್ರದರ್ಶಿಸುತ್ತ, ಮಧ್ಯಾಹ್ನದ ಸುಖನಿದ್ರೆಯಲ್ಲಿ ಜಿದ್ದಿದ್ದರು. ತಾನು ಮನೆಗೆ ಹೊಕ್ಕಾಗ, ಜಗಲಿಯ ಮೇಲೆ ನಿದ್ರಿಸುವ ಈ ಎರಡು ಶರೀರಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಇದ್ದುದು ಆಶ್ಚರ್ಯಕರವೆಂದು ಆ ಉದ್ವಿಗ್ನ ಸ್ಥಿತಿಯಲ್ಲೂ ಸೇಕುವಿಗೆ ಕಾಣದಿರಲಿಲ್ಲ.

ಚಿಕ್ಕ ಅಂಗಳದ ಮೂಲೆಯಲ್ಲಿದ್ದ ಹಲಸಿನ ಮರದ ಕಟ್ಟೆಯ ಮೇಲೆ, ಮೂಕಿಯಂತೆ ಕೂತು ಶೂನ್ಯವನ್ನು ನೋಡುತ್ತಿದ್ದ ಅಜ್ಜಿಯೆಡೆಗೆ ಸೇಕು ಧಾವಿಸಿದ. ಚಿಕ್ಕಿ ಬರುವ ಅಳು ಮತ್ತು ನೆತ್ತಿಗೇರಿದ ಸಿಟ್ಟು, ಇವೆರಡನ್ನೂ ಒಂದೇ ಸಮಯಕ್ಕೆ ಪ್ರಕಟಿಸಲಾಗದೆ, ಅವಳೆದುರು ನಿಂತು ಅಂಗಳಕ್ಕೆ ಕಾಲು ಬಡೆಯುತ್ತ, ಬರೇ, 'ಮೀನು ಕಡಿ, ಮೀನು ಕಡಿ' ಎಂದು ಒದರ ತೊಡಗಿದ. ತನ್ನದೇ ಲೋಕದಲ್ಲಿದ್ದ ಸೀತು ಸೆಡ್ತಿಗೆ ತನ್ನೆದುರು ಯಕ್ಷಗಾನದ ಅಭಿಮನ್ಯುವಿನಂತೆ ಕಾಲು ಕುಣಿಸುವ ಸೇಕುವನ್ನು ನೋಡಿ, ಯಾಕೆ, ಏನು ಎಂಬುದು ಫಕ್ಕನೆ ಅರ್ಥವಾಗಲಿಲ್ಲ.

'ದಾನಿ ಬಾಲೆ, ದಾನಿ ಆಂಡ್?' (ಏನು ಮಗು? ಏನಾಯ್ತು?) ಎಂದು ಕನಿಕರದಲ್ಲಿ ಕೇಳಿದಳು.

ಬೆಳಿಗ್ಗೆ ಎದ್ದವನನ್ನೆ ಅಷ್ಟು ದೂರ ಓಡಿಸಿದ್ದಿ. ಸಾಕಾಗಿ, ಹಸಿವಿನಲ್ಲಿ ನಾನೀಗ ಸಾಯುತ್ತಿದ್ದೇನೆ! ಅದರ ಮೇಲೆ 'ದಾನಿ ಬಾಲೆ, ದಾನಿ ಬಾಲೆ'ಯ ಬೋಗಾರು (ತೋರಿಕೆಯ) ದುಃಖ?- ಮಾತುಗಳನ್ನು ಕಂಡುಕೊಂಡ ಸೇಕು ಕಿರುಚಿದ.

ಸೀತುವಿಗೆ ಇದು ನಾಜೂಕು ಪರಿಸ್ಥಿತಿಯಾಗಿತ್ತು. ಗುಟ್ಟಿನ ಧ್ವನಿಯಲ್ಲಿ- ನೋಡು, ಶಂಭುಮಾಮ ಮತ್ತು ಅವನ ಸಂಗಾತಿ ಊಟದ ಹೊತ್ತಿಗೆ ಬಂದಿದ್ದಾರೆ, ಊಟ ಹಾಕಬೇಕೇ ಬೇಡವೇ? ಪಾಪ, ಗೊತ್ತಿಲ್ಲದೆ ಸುರಿದುಕೊಂಡು ಬಿಟ್ಟಿದ್ದಾರೆ, ಬೇಜಾರು ಮಾಡಬೇಡ. ನಾಳೆ ಪುನಃ ಹುಳಿ ಮಾಡ್ತೇನೆ. ಈಗ ಇದ್ದದ್ದನ್ನು ಉಂಡುಬಿಡು.- ಎಂದು ಸೇಕುವನ್ನು ಸಮಾಧಾನ ಪಡಿಸಲಿಕ್ಕೆ ಪ್ರಯತ್ನ ಮಾಡಿದಳು.

ಹಸಿದ ಹೊಟ್ಟೆಯಿಂದ ಬೆಳೆದು ಬಂದ ಸಿಟ್ಟು ಅಜ್ಜಿಯ ಮಾತುಗಳಿಂದ ಇನ್ನಷ್ಟು ಕೆರಳಿ, ಸೇಕು ಸಿಕ್ಕಾಬಟ್ಟೆ ಬಡಬಡಿಸಿದ. ಮೊದಲೇ ಸೀತುವಿನ ಮನಸ್ಸನ್ನು ಎಡೆಬಿಡದೆ ಕಾಡುವ ವಿಷಯಗಳು ಸಾಕಷ್ಟು. ಹಾಗಿರುವಾಗ ಶಂಭುಸೆಟ್ಟಿ ಮಧ್ಯಾಹ್ನದ ಹೊತ್ತಿಗೆಬಂದವನು ಜಗನ್ನನ ಪತ್ರ ಓದಿದ ಮೇಲೆ ಕೊಟ್ಟ ವರ್ತಮಾನದಿಂದ ಅವಳ ಮನಃಸ್ಥಿತಿ ತೀರಾ ಕೆಟ್ಟಿತ್ತು. ಒಂದನ್ನೊಂದು ಹಿಂಬಾಲಿಸುತ್ತಿದ್ದ ಮನಸ್ಸಿನ ದೆವ್ವಗಳನ್ನು ಹತ್ತಿಟ್ಟುಕೊಂಡು ಸೀತು ಮಧ್ಯಾಹ್ನವಿಡೀ ಸ್ತಬ್ಧಳಾಗಿ ಕೂತುಬಿಟ್ಟಿದ್ದಳು.

ಈಗ ಸೇಕುವಿನ ಹುಚ್ಚು ಕೋಪದಿಂದ ಈ ದೆವ್ವಗಳಿಗೆಲ್ಲ ಬಾಗಿಲು ತೆಗೆದಂತಾಗಿ, ಅವುಗಳೆಲ್ಲಾ ಒಟ್ಟಾಗಿ, ಸೀತು ಸೆಡ್ತಿಯ ಸಿಟ್ಟಿನ ರೂಪವನ್ನು ತಾಳಿ, ಹೊರಬಂದುಬಿಟ್ಟವು. ಸೀತು ಕಟ್ಟೆಯಿಂದ ಕಾಲು ಕೆಳಗಿಟ್ಟು, ಒಂದು ಹೆಜ್ಜೆ ಮುಂದೆ ಹೋಗಿ, ಬಿಸಿಲಲ್ಲಿ ಬೆಂದು, ಹಸಿವಿನಲ್ಲಿ ಸೀದುಹೋದ ಸೇಕುವಿನ ಕೆನ್ನೆಗೆ ಬಲವಾಗಿ ಹೊಡೆದುಬಿಟ್ಟಳು. ಸೇಕುವಿಗೆ ಅನಿರೀಕ್ಷಿತ ಆಘಾತ. ಅಜ್ಜಿಯಿಂದ

ಇನ್ನಷ್ಟು ಸಾಂತ್ವನ ಬಯಸಿದವನಿಗೆ ಜಿದ್ದ ಏಟು ಅನ್ಯಾಯದ ಪರಮಾವಧಿ ಎಂದು ಕಂಡಿತು. ಇಲ್ಲಿ ಇನ್ನು ಇರುವುದಿಲ್ಲ ಎಂದುಕೊಂಡ ಸೇಕು. 'ಯಾನನ್ನಗ ಈತೇನ ನಿಕ್ಕ್? ಈ ಇಲ್ಲಡ್ ನನ ಇಪ್ಪುಜ್ಜಿ (ನಾನೆಂದರೆ ಇಷ್ಟೇ ನಿನಗೆ. ಈ ಮನೆಯಲ್ಲಿ ಇನ್ನು ಇರುವುದಿಲ್ಲ). ಎಂದು ಘೋಷಣೆ ಮಾಡಿ. ಅಲ್ಲಿಂದ ಓಡಿಬಿಟ್ಟ.

ಹಸಿದು ಬಂದ ಮೊಮ್ಮಗನಿಗೆ ತಾನು ಹೇಗಾದರೂ ಹೊಡೆದೆನೆಂದು ಸೀತುವಿಗೆ ಅರ್ಥವಾಗಲಿಲ್ಲ. ಇನ್ನು ಈ ಮೊಮ್ಮಗನೂ ತನ್ನ ಕೈತಪ್ಪಿ ಹೋಗುತ್ತಿದ್ದಾನೆ. ಎಂಬ ಹೆದರಿಕೆ ಅವಳನ್ನು ಆವರಿಸಿಬಿಟ್ಟಿತು. ಕೈಕಾಲು ಬಜ್ಜಿದಂತಾಗಿ ಕಟ್ಟೆಗೆ ಒರಗಿ ಅಂಗಳದಲ್ಲಿ ಕೂತುಬಿಟ್ಟಳು.

ನಡೆದ ವಿದ್ಯಮಾನಗಳನ್ನು ಗಮನಿಸಿದ ಶಂಭು ಸೆಟ್ಟಿ ಜಗಲಿಯಿಂದ ಇಳಿದು ಸೀತುವಿನ ಬಳಿಗೆ ಬಂದು ಅವಳಿಗೆ ಸಮಾಧಾನ ಹೇಳಿದ– 'ಸೀತಕ್ಕೆರೆ. ಒಡೆ ಪೋಪೆ? ಒಡೆಲಾ ಪೂವಯೆ. –ರಾತ್ರಿದುಲೈ ಇಲ್ಲಡ್ ಇಪ್ಪುವೆ ತೂಲೆ!' (ಸೀತಕ್ಕ. ಎಲ್ಲಿಗೆ ಹೋಗುತ್ತಾನೆ? ಎಲ್ಲಿಗೂ ಹೋಗುವುದಿಲ್ಲ. ರಾತ್ರಿಯೊಳಗೆ ಮನೆಗೆ ಬರ್ತಾನೆ. ನೋಡಿ.)

ಶಂಭು ಸೆಟ್ಟಿ ಸೀತು ಸೆಡ್ತಿಯ ಮನೆತನದ ಗ್ರಾಮ ಅಟ್ಟಂಜದವನು. ದಿನಾ ಅಟ್ಟಂಜದಿಂದ ಶಿರ್ವ ಮಂಚಕಲ್ಲಿನ ಪೇಟೆಗೆ ಬಂದು ಹೋಗುತ್ತಾನೆ. ಇವನ ಕೆಲಸ ಇಂಥಾದ್ದೆ ಎಂದು ನಿಷ್ಕೃಷ್ಟವಾಗಿ ಹೇಳುವ ಹಾಗಿಲ್ಲ. ಕೋಳಿಯಂಕ. ಇಸ್ಪೀಟು ಕಳ. ಶಿರ್ವದ ಸಂತೆ. ಅಟ್ಟಂಜದ ಮಾಲಿಂಗೇಶ್ವರ ದೇವಸ್ಥಾನದ ಕಛೇರಿ. ದನ ಎಮ್ಮೆಗಳ ಸಾಟೆ. – ಹೀಗೆ ವಿವಿಧ ಕ್ಷೇತ್ರಗಳಲ್ಲಿ ವಿಧಿ ನಿರ್ಧರಿಸಿದಂತೆ ಇವನು ಕಾಣಿಸಿಕೊಳ್ಳುತ್ತಾನೆ. ಹಾಗೆಯೇ. ಅಟ್ಟಂಜ–ಶಿರ್ವಗಳ ಮಧ್ಯದ ವಾಣಿಜ್ಯ ಸಂಪರ್ಕದಲ್ಲೂ ಶಂಭು ಸೆಟ್ಟಿಯ ಕೈ ಇದೆ.

ಇನ್ನು. ಸೇಕುವಿಗೆ ದಕ್ಕದ ಮೀನು ಕಡಿಗಳನ್ನು ಕಲಾಸು ಮಾಡುವುದರಲ್ಲಿ ಮಹತ್ವದ ಪಾತ್ರ ವಹಿಸಿದ ಮತ್ತು ಶಂಭು ಸೆಟ್ಟಿಯ ಇವತ್ತಿನ ಸಂಗಾತಿ ಐತುವಿನ ಕೆಲಸ ಕಲಾಪಗಳ ವಿಷಯ ಪ್ರಸ್ತಾಪ ಮಾಡುವುದಿದ್ದರೆ. ಅವು ಶಂಭು ಸೆಟ್ಟಿಯ ವಹಿವಾಟುಗಳಿಗಿಂತಲೂ ಹತ್ತು ಪಟ್ಟು ಅನಿರ್ದಿಷ್ಟ ಎಂದರೆ ಎಲ್ಲವನ್ನೂ ಹೇಳಿದ ಹಾಗೆ. ಶಂಭು ಸೆಟ್ಟಿಯಂತಹ ಕುಳಗಳೊಟ್ಟಿಗೆ ಮೈತ್ರಿ ಸ್ಥಾಪಿಸಿ. ಅವರ ಅನುಯಾಯಿಯಾಗಿ. ಅವರಿಂದ ಆಗಾಗ್ಗೆ ಪುಡಿಕಾಸು ಕಡ ಪಡೆದುಕೊಳ್ಳುತ್ತಾ. ಅವರಿಗೆ ದಕ್ಕಿದ ಊಟ ತಿಂಡಿಗಳ ಆತಿಥ್ಯಗಳಲ್ಲಿ ಸಮಪಾಲು ಪಡೆದುಕೊಳ್ಳುತ್ತಾ. ಅವರ ಹೋಟೇಲಿನ ಬಿಲ್ಲಿನಲ್ಲಿ ತನ್ನ ಊಟತಿಂಡಿಯ ಖರ್ಚನ್ನು ವಿಲೀನಗೊಳಿಸುತ್ತಾ ತನ್ನ ಜೀವನದ ಅರ್ಥವನ್ನು ಐತು ಕಂಡಿದ್ದಾನೆ.

ಮೀನು ಕಡಿಗಳನ್ನು ಯಶಸ್ವಿಯಾಗಿ ಸಮಾಪ್ತಿಗೊಳಿಸಿದ ಈ ದ್ವಯರು ಸೇರಿ ಸೀತು ಸೆಡ್ತಿಯನ್ನು ಸಾಂತ್ವನಗೊಳಿಸುತ್ತಿರುವಾಗ– ಹೊಗೆಯಾಡುತ್ತಿದ್ದ ಸಿಟ್ಟು. ಮೇರೆ ಮೀರಿದ ದುಃಖ. ತಡೆಯಲಾರದ ಹಸಿವು. ಇವೆಲ್ಲವನ್ನೂ ಮರೆಯಲಿಕ್ಕಾಗಿ. ಡಾಕ್ಟ್ರು ಕುಪ್ಪಣ್ಣಯ್ಯನವರ 'ಶಾಪು' ಮತ್ತು ಶಿರ್ವ ಪೋಸ್ಟ್ ಆಫೀಸು ಇವುಗಳೆರಡರ ಮಧ್ಯದಲ್ಲಿರುವ. ಹಸರಿರದ ಓಣಿಯಲ್ಲಿ ಸೇಕು ಕಾಲಹರಣ ಮಾಡುತ್ತಿದ್ದ. ಇದೇನು ಮೊದಲ ಬಾರಿಗೆ ಸೇಕು ಈ ಓಣಿಗೆ ಬಂದದ್ದೇನಲ್ಲ. ಜನಸಂಚಾರವಿಲ್ಲದ ಈ ಓಣಿಯಲ್ಲಿ ಏಕಾಂತವಾಗಿ ವಿಚಾರಮಂಥನ ಮಾಡಬಹುದು. ಬೇಕಾದಾಗ ಕಾಲ ತುದಿಯಲ್ಲಿ ನಿಂತು ಆಚೀಚಿನ ಗೋಡೆಗಳ ಮೇಲಿಂದ ಇಣುಕಿದರೆ. ಇತ್ತ ಡಾಕ್ಟ್ರ ಶಾಪಿನಲ್ಲೂ. ಅತ್ತ ಪೋಸ್ಟ್ ಆಫೀಸಿನ ಆವರಣದಲ್ಲೂ ನಡೆಯುವ ವಿದ್ಯಮಾನಗಳನ್ನು ವೀಕ್ಷಿಸಬಹುದು. ಅಷ್ಟಲ್ಲದೆ ಈ ಓಣಿಗೆ ಎರಡೂ ಬದಿಗಳಿಂದ ಕಸ ಎಸೆಯುವುದರಿಂದಾಗಿ ನಾನಾ ತರದ ವಸ್ತು ಪದಾರ್ಥಗಳು ಇಲ್ಲಿ ದೊರೆಯುತ್ತವೆ.– ಮುಖ್ಯವಾಗಿ ಡಾಕ್ಟ್ರ ಶಾಪಿನಿಂದ ಎಸೆಯುವ ಬಣ್ಣಬಣ್ಣದ ರಟ್ಟಿನ ಪೆಟ್ಟಿಗೆಗಳು. ಇಂಜೆಕ್ಷನ್ ಕೊಡುವ ಗಾಜಿನ ಬುರುಡೆಗಳು. ವಿವಿಧ ರೀತಿಯ ಚಿತ್ರಗಳಿದ್ದ ಕಾಗದಗಳು ಇತ್ಯಾದಿ. ಹಾಗೆಯೆ ಪೋಸ್ಟಾಫೀಸಿನ ವತಿಯಿಂದ ಬಂದು ಬೀಳುವ ತರತರದ ಕಾಗದದ ಪೊಟ್ಟಣಗಳು. ಅರಗಿನ ಮೊಹರು ಹಚ್ಚಿದ ವಸ್ತ್ರದ ಚೀಲಗಳು ಇತ್ಯಾದಿ. ಎಂದಿನಂತೆ ಇವತ್ತೂ ಸೇಕು ಅಂತಹ ರಾಶಿಗಳನ್ನು ಪರಿಶೋಧಿಸುತ್ತಲೂ. ತನ್ನ ಶೋಚನೀಯ ಪರಿಸ್ಥಿತಿಯ

ಬಗ್ಗೆ ಯೋಚಿಸುತ್ತಲೂ, ಅಜ್ಜಿಗೆ ಭಯಂಕರ ಪರಿತಾಪ ಉಂಟಾಗ ಬೇಕಾದರೆ ತಾನು ಏನೆಲ್ಲಾ ಮಾಡಬಹುದೆಂಬ ಹಂಚಿಕೆಗಳನ್ನು ಮನಸ್ಸಿನಲ್ಲೆ ಮಾಡುತ್ತಲೂ ಇದ್ದ. ತಾನೂ ಅಣ್ಣಂದಿರಂತೆ ಬೊಂಬಾಯಿಗೆ ಓಡಿಹೋಗಿ ಅಜ್ಜಿಗೆ ಪತ್ರ ಸಹ ಹಾಕದಿದ್ದಾಗ, ಅಜ್ಜಿಯ ಬಳಿಗೆ ಬೊಂಬಾಯಿಯಿಂದ ಬಂದ ಪರಿಚಯದವರು,- ಸೇಕು ಒಬ್ಬನೇ ಅವನ ಖೋಲಿಯಲ್ಲಿ ಕಾಯಿಲೆಯಿಂದ ಬಿದ್ದುಕೊಂಡಿದ್ದಾನೆ, ಯಾರೂ ನೋಡಿಕೊಳ್ಳುವವರಿಲ್ಲ, ಅವನ ಕಾಯಿಲೆಗೆ ಮದ್ದಿಲ್ಲವಂತೆ, ಏನೂ ಆಗಬಹುದು,- ಹೀಗೆಲ್ಲಾ ಕೆಟ್ಟ ಸುದ್ದಿ ಕೊಟ್ಟರೆ, ಅಜ್ಜಿಯ ಪರಿತಾಪ ಯಾವ ಮಟ್ಟಕ್ಕೆ ಏರಬಹುದು ಎಂದು ಊಹಿಸಿ, ಅತ್ಯಂತ ತೃಪ್ತಿಪಟ್ಟುಕೊಂಡ.

ಕಾಕತಾಳೀಯ ನ್ಯಾಯವೆಂಬಂತೆ, ಸೇಕು ಹೇಗೆ ತಾನು ಕಲ್ಪಿಸಿಕೊಂಡ ಜೀವನದ ಅತ್ಯಂತ ದಾರುಣ ಸ್ಥಿತಿಯ ಸುದ್ದಿಯನ್ನು ಅಜ್ಜಿಯನ್ನು ಮುಟ್ಟುತ್ತದೆಂದು ಊಹಿಸಿದ್ದನೋ, ಹಾಗೆಯೇ, ಜಗನ್ನ ಮುಂಬಯಿಯಲ್ಲಿ ಕಂಗೆಟ್ಟ ಪರಿಸ್ಥಿತಿಯಲ್ಲಿದ್ದನೆಂಬ ಸುದ್ದಿ ಸೀತುವಿಗೆ ಶಂಭು ಸೆಟ್ಟಿ ಮಧ್ಯಾಹ್ನದ ಹೊತ್ತಿಗೆ ಬಂದವನು ಮುಟ್ಟಿಸಿದ್ದ. ಜಗನ್ನನಿಂದ ಬಂದ ಕಾಗದವನ್ನು ಓದಿಸಲು ಅವನಿಗೆ ಕೊಟ್ಟಿದ್ದಾಗ, ಮೌನವಾಗಿ ಓದಿದ ಶಂಭು ಸೆಟ್ಟಿ, ಖೇದ ವ್ಯಕ್ತಪಡಿಸುವಂತೆ ತಲೆಯಲ್ಲಾಡಿಸಿ, 'ಸೀತಕ್ಕ, ದಾನೆ ಪನ್ಪುನುಂದು ಗೊತ್ತಾಪುಜ್ಜಿ.' (ಸೀತಕ್ಕ, ಏನು ಹೇಳುವುದೆಂದು ಗೊತ್ತಾಗುವುದಿಲ್ಲ) ಎಂದು ಶುರು ಮಾಡಿದವನು, ಮುಂಬಯಿಯ ಕಷ್ಟ ಹಾಗೂ ಅಪಾಯಕಾರಿ ಜೀವನದ ಸಂಕ್ಷಿಪ್ತ ಚಿತ್ರಣವನ್ನು ಅವಳ ಮುಂದಿಟ್ಟು, ಅದರ ಹಿನ್ನೆಲೆಯಲ್ಲಿ, ಜಗನ್ನ ಅವನ ಖೋಲಿಯಲ್ಲಿ ಒಬ್ಬಂಟಿಗನಾಗಿ, ಖಾಯಿಲೆ ಬಿದ್ದು ಅಥವಾ ಘಾಯಗೊಂಡು (ಪತ್ರದಲ್ಲಿ ಇದು ಸ್ಪಷ್ಟವಿಲ್ಲ ಎಂದಿದ್ದ) ಕೈಯಲ್ಲಿ ಹಣವೂ ಇಲ್ಲದೆ ಬಿದ್ದುಕೊಂಡಿದ್ದನೆಂದೂ ಅವನಿಗೆ ಇಪ್ಪತ್ತೈದು ರೂಪಾಯಿಗಳ ಅಗತ್ಯವಿದೆಯೆಂದೂ ಅವನ ಪತ್ರ ಓದಿ ಅಭಿಪ್ರಾಯವಾದದ್ದನ್ನು ಹೇಳಿದ್ದ. ಮೊಮ್ಮಗನಿಂದ ಸುಖಸಮಾಚಾರಕ್ಕಾಗಿ ಕಾತರಿಸುತ್ತಿದ್ದ ಸೀತು ಸೆಡ್ತಿ ಕಂಗಾಲಾದಳು.

ಅಷ್ಟರಲ್ಲಿ ಪೋಸ್ಟ್ ಆಫೀಸಿನ ಬಳಿಯ ಓಣಿಯಲ್ಲಿ ಕಾಲಹರಣ ಮಾಡುತ್ತಿದ್ದ ಸೇಕುವಿಗೆ ತನ್ನ ಕೈಗೆ ಬಂದ ಒಂದು ಕಾಗದದ ಪೊಟ್ಟಣ ಉಳಿದವುಗಳಂತೆ ಖಾಲಿ ಇರದೆ ಅದರಲ್ಲಿ ಏನೋ ಇದ್ದಂತೆ ಅನಿಸಿತು. ಅದರ ಒಳಗೆ ಕೈಗಳನ್ನು ತುರುಕಿಸಿ ಒಳಗಿದ್ದ ಕಾಗದವನ್ನು ಹೊರಗೆಳೆದಾಗ ಅವನು ದಂಗಾಗಿ ಹೋದ. ಅವನ ಎರಡೂ ಅಂಗೈಗಳನ್ನು ಆವರಿಸಿ ಮೀರಿ ನಿಂತ ಒಂದು ನೋಟು! ತೀವ್ರ ಆಸಕ್ತಿಯಲ್ಲಿ ಪರೀಕ್ಷಿಸುವಾಗ ೧೦೦ ಬರೆದದ್ದು ಸ್ಪಷ್ಟವಾಗಿ ಕಂಡಿತು. ನೂರು ರೂಪಾಯಿ ನೋಟು! ಆಗಿನ್ನೂ ಸ್ವಾತಂತ್ರ್ಯ ಸಿಕ್ಕದ ಕಾಲ; ನೂರರ ನೋಟಿಗೆ ರಾಜಮರ್ಯಾದೆ. ಸೇಕುವನ್ನು ಚಕಿತಗೊಳಿಸಿದ್ದು ನೋಟಿನ ಮೇಲಿದ್ದ ಬಣ್ಣದ ಗೆರೆಗಳಿಂದ ಮಾಡಿದ ಕಿರೀಟ ತೊಟ್ಟುಕೊಂಡ ಇಂಗ್ಲೆಂಡಿನ ರಾಜನ ಭವ್ಯ ಚಿತ್ರ. ಸೇಕು ಇದುವರೆಗೆ ಕಾಗದದ ನೋಟು ದೂರದಲ್ಲಿ ಬೇರೆಯವರ ಕೈಯಲ್ಲಿ ನೋಡಿದ್ದಾನಷ್ಟೆಯೇ ಹೊರತು ಅದೇನು ಹತ್ತಿರ ಸುಳಿದಿರಲಿಲ್ಲ. ಪಾವಾಣೆಗಳನ್ನು ಚಲಾಯಿಸಿದ್ದಾನೆ, ಆಣೆಗಳೂ ಅವನ ಪಾಲಿಗೆ ಬಂದಿರಲಿಲ್ಲ. ಹೀಗಿರುವಾಗ ಈ ನೂರು ರೂಪಾಯಿ ನೋಟು! ರೂಪಾಯಿ ನೋಟುಗಳ ಒಳಗೆ ರಾಜನ ಭೂತ ಅಡಗಿರುತ್ತದೆ, ಬೆಳಕಿಗೆ ಹಿಡಿದರೆ ಕಣ್ಣಿಗೆ ಕಾಣಿಸುತ್ತದೆ ಎಂಬ ಮಾತು ಅಷ್ಟರಲ್ಲಿ ನೆನಪಿಗೆ ಬಂದು, ಹಾಗೆ ಮಾಡಿದಾಗ, ಬಿಳಿದಾದ ರಾಜನ ಭೂತ ನಿಜವಾಗಲೂ ಕಾಣಬೇಕೇ?

ನೂರು ರೂಪಾಯಿ ನೋಟಿನ ಭೌತಿಕ ಗುಣಗಳನ್ನು ಪರಿಶೀಲಿಸಿಯಾದ ಮೇಲೆ, ಅದರ ಮೌಲ್ಯಮಾಪನದ ಕಡೆಗೂ ಸೇಕು ತಲೆಹಾಯಿಸಿದ. ಅಜ್ಜಿಗೆ ಇದನ್ನು ತೋರಿಸಿ, ಅವಳಿಗೆ ಕೊಡದೆ ಹಂಗಿಸಿಯಾದ ಮೇಲೆ ಈ ನೋಟಿನಿಂದ ಏನೆಲ್ಲಾ ಪಡಕೊಳ್ಳಬಹುದು? ಏನು ಬೇಕಿದ್ದರೆ ಅದು! ಆದರೆ ಸದ್ಯಕ್ಕೆ, ಅಜ್ಜಿಗೆ ತಾನು ಈ ನೋಟನ್ನು ಯಾವಾಗ ತೋರಿಸಿಯೇನು ಎಂಬ ಉಮೇದು ಎಲ್ಲಕ್ಕೂ ಮಿಗಿಲಾಗಿತ್ತು. ಸೇಕು ಓಡಿಕೊಂಡೇ ಮನೆಯಂಗಳಕ್ಕೆ ಬಂದು ಮುಟ್ಟಿದ. ಹಸಿದು ಬಂದ ಮೊಮ್ಮಗನಿಗೆ ಕೊಟ್ಟ ಏಟಿನಿಂದ ಒಳಗೊಳಗೆ ಪರಿತಪಿಸುತ್ತಿದ್ದ ಸೀತು, ಮೊಮ್ಮಗ ಅಂಗಳದ ಅಂಚಿನಲ್ಲಿ ಕಾಣಿಸಿಕೊಂಡ ಕೂಡಲೇ ಅನಿರ್ದಿಷ್ಟ ಹೆಜ್ಜೆಗಳಲ್ಲಿ

ಅವನ ಬಳಿ ಅವಸರದಲ್ಲಿ ಓಡಿ ಹೋಗಿ, ಕೈಚಾಚಿ ಅವನ ಬೆನ್ನು ಸವರಿ, ಆಮೇಲೆ ಅವನನ್ನು ಎಳೆದುಕೊಂಡು ಹೋಗಿ ಊಟಕ್ಕೆ ಕೂಡಿಸಿಬಿಟ್ಟಳು. ಅಜ್ಜಿ ಇನ್ನೂ ಸಿಟ್ಟಿನಲ್ಲಿದ್ದಾಳೆಂದು ಊಹಿಸಿ ಅವಳ ಸಿಟ್ಟನ್ನು ತನ್ನ ಸಿಟ್ಟಿನಿಂದ ಎದುರಿಸುವ ಹಂಚಿನಲ್ಲಿದ್ದ ಸೇಕುವಿಗೆ ಯಾವಾಗಲೂ ಗಂಭೀರವಾಗಿಯೇ ಇರುವ ಈ ಅಜ್ಜಿಯ ಅನಿರೀಕ್ಷಿತ ನಡವಳಿಕೆಗೆ ಉತ್ತರವಿರಲಿಲ್ಲ.

ಸದ್ದಿಲ್ಲದೆ ಅವಳು ಬಡಿಸಿದ್ದನ್ನೆಲ್ಲಾ ತಿಂದು ಮುಗಿಸುವ ಹೊತ್ತಿಗೆ ಅಜ್ಜಿಯ ಸಾಂತ್ವನದ ತೆರೆಗಳ ಮೇಲೆ ತೇಲಿಕೊಂಡು ಎಲ್ಲವನ್ನೂ ಮರೆತಿದ್ದ ಸೇಕುವಿಗೆ ತನ್ನ ಚಡ್ಡಿಯ ಕಿಸೆಯಲ್ಲಿದ್ದ ನೋಟಿನ ನೆನಪಾಯಿತು. ಚಟ್ಟೆಮುಟ್ಟೆಯ ಕಾಲುಗಳನ್ನು ಬಿಡಿಸಿ, ಮೊಣಕಾಲು ಊರಿ, ಕಿಸೆಗೆ ಎಡಗೈ ತುರುಕಿಸಿ ನೋಟನ್ನು ಹೊರಗೆಳೆದು ಅಜ್ಜಿಯ ಎದುರು ನೇತಾಡಿದ ಸೇಕು ತನಗರಿವಿಲ್ಲ ವೆಂಬಂತೆ, 'ಉಂದು ನಿಕ್ಕ್' (ಇದು ನಿನಗೆ) ಎಂದವನು ಅವಳ ಕೈಗೆ ಕೊಟ್ಟುಬಿಟ್ಟ.

ಸೀತು ಸೆಡ್ತಿಯೂ ಇದುವರೆಗೆ ನೋಡದಂಥಾ ದೊಡ್ಡ ನೋಟು. 'ತೂಲ, ಎಂಚಿನ ಬರೆತಿನಿ.' (ನೋಡು ಏನು ಬರೆದಿದೆ?) ಎಂದು ಬೆರಳಿನಿಂದ ತೋರಿಸಿದ ಸೇಕು, 'ನೂದು!' (ನೂರು) ಎಂದು ತಾನೇ ಉತ್ತರ ಕೊಟ್ಟ.

ಈ ಪೋರನ ಕೈಗೆ ಇಷ್ಟು ಹಣ ಹೇಗೆ ಬಂತು ಎಂದು ಮೊದಲಿಗೆ ಹೆದರಿದ ಸೀತುವಿಗೆ, ಸೇಕು ವಿವರಿಸಿದ ಮೇಲೆ, ಈ ನೋಟು ತನ್ನ ಸದ್ಯದ ಸಂಕಟವನ್ನು ಪರಿಹರಿಸಲಿಕ್ಕೆ 'ಮಾಲಿಂಗೇಶ್ವರ'ನೇ ಕೊಡಿಸಿದ್ದಾನೆ ಎಂದು ಅನಿಸಿತು. ಹಾಗಾಗಿ ಸೀತುವಿನ ಮುಖದಲ್ಲಿ ಬಹಳ ಅಪರೂಪದ ನಗೆಯೊಂದು ಮೂಡಿ, ಅವಳ ಮುಖದ ನೆರಿಗೆಗಳಿಗೆಲ್ಲಾ ಅದು ಹಬ್ಬಿತು. ಇದನ್ನು ಕಂಡು ಸೇಕು ಖುಶಿ, ಹೆಮ್ಮೆಗಳಲ್ಲಿ ಉಬ್ಬಿಹೋದ.

ಇಷ್ಟರಲ್ಲಿ ವಾಪಾಸು ಬಂದ ಶಂಭುಸೆಟ್ಟಿ, ಅಜ್ಜಿ ಮತ್ತು ಮೊಮ್ಮಗ ಒಟ್ಟಿಗೆ ಕೂತು ನಗುವುದನ್ನು ಕಂಡು ಆಶ್ಚರ್ಯಚಕಿತನಾದ. ಆಮೇಲೆ ನೂರರ ನೋಟಿನ ಕಥೆ ಕೇಳಿ ಅದನ್ನು ಕೈಯಲ್ಲಿ ಹಿಡಿದು ಪರಿಶೀಲಿಸಿ, ಇದು ಅವನು ಕೈಯಲ್ಲಿ ಹಿಡಿದ ಪ್ರಥಮ ನೂರರ ನೋಟಾಗಿದ್ದರೂ, ಇಂಥಾ ನೋಟುಗಳು ತನ್ನ ಎಂದಿನ ವಹಿವಾಟಿಗೇನೂ ಹೊರತಲ್ಲ ಎಂಬ ಧಾಟಿಯಲ್ಲಿ, 'ಹೌದೌದು, ನೋಡಿದ ತಕ್ಷಣವೇ ನನಗೆ ಗೊತ್ತಾಯ್ತು' ಎಂದು ಬಿಟ್ಟ.

ತನ್ನ ಪಾಲಿಗೆ ಅದೃಷ್ಟ ತಂದ ಈ ಪಡಾವನ್ನು ಏನು ಮಾಡುವುದೆಂದು ಸೀತು ಸೆಡ್ತಿಗೆ ಹೆಚ್ಚು ಯೋಚಿಸುವ ಅಗತ್ಯ ಬೀಳಲಿಲ್ಲ. ಅವಳನ್ನು ಸದಾ ಕಾಡಿಸುವ ದುಡ್ಡಿನ ಅಡಚಣೆಯನ್ನು ಈ ನೂರು ರೂಪಾಯಿ ಇನ್ನೂ ಮೂರು ನಾಲ್ಕು ತಿಂಗಳಿಗಾದರೂ ದೂರವಿಡಬಹುದಿತ್ತು. ಆದರೆ ಈ ಆಲೋಚನೆ ಅವಳಿಗೆ ಬರಲೇ ಇಲ್ಲ. ತನ್ನ ಕೋಣೆಯಲ್ಲಿ ಅಸಹಾಯಕನಾಗಿ, ಹಣವೂ ಇಲ್ಲದೆ, ಶುಶ್ರೂಷೆಯನ್ನೂ ಪಡೆಯಲಾಗದೆ, ಬಿದ್ದುಕೊಂಡಿರುವ ಜಗನ್ನ ಮಾತ್ರ ಅವಳಿಗೆ ಕಂಡ. ನೂರರ ನೋಟನ್ನು ಶಂಭು ಸೆಟ್ಟಿಯ ಕೈಯಲ್ಲಿ ಇಟ್ಟು,- ಇದು ಜಗನ್ನನಿಗೆ, ನನಗೊಂದು ಉಪಕಾರ ಮಾಡು, ಶಂಭು, ಕೂಡಲೇ ಮನಿಯಾರ್ಡರು ಮಾಡಿ ಅವನಿಗೆ ಕಳಿಸಿಬಿಡು,- ಎಂದಳು. ಇಷ್ಟು ಸುಲಭದಲ್ಲಿ ನೂರರ ನೋಟನ್ನು ಬಿಟ್ಟುಕೊಟ್ಟ ಸೀತು ಸೆಡ್ತಿಯ ತ್ಯಾಗಶೀಲತೆ ಯನ್ನು ಕಂಡು ಶಂಭು ದಂಗಾದ. 'ಈರ್ ಪಂಡಿಲೆಕ್ಕ' (ನೀವು ಹೇಳಿದಂತೆ) ಎಂದ ಶಂಭು, ನೋಟನ್ನು ತೆಗೆದುಕೊಂಡು, ಮಡಚಿ ಮೇಲೆ ಕಟ್ಟಿದ ತನ್ನ ಧೋತಿಯ ಅಂಚನ್ನು ಮೇಲೆ ಸರಿಸಿದಾಗ ಅನಾವರಣವಾದ, ಹಸಿರು ಬಣ್ಣದ ಭಾರೀ ಗಾತ್ರದ ಒಳ ಚಡ್ಡಿಯ ಕಿಸೆಗೆ ಅದನ್ನು ತುರುಕಿಸಿದ.

ಮತ್ತೆ ಹೆಚ್ಚು ಹೊತ್ತು ಅಲ್ಲಿ ನಿಲ್ಲದ ಶಂಭು ಸೆಟ್ಟಿ, ಸಂಗಾತಿ ಐತುವನ್ನು ಅಲ್ಲೇ ಕೈಬಿಟ್ಟು, ಸೀತು ಸೆಡ್ತಿಯ ಕೆಲಸ ನೆರವೇರಿಸಲಿಕ್ಕೆಂದು ತುರ್ತಾಗಿ ಪೇಟೆಯತ್ತ ನಡೆದ. ರಸ್ತೆ ಸೇರಿದ ಶಂಭು ಸೆಟ್ಟಿ ಡಾಕ್ಟ್ರು ಕುಪ್ಪಣ್ಣಯ್ಯನ 'ಶಾಪು' ದಾಟಿ, ಅದರ ಒತ್ತಿನಲ್ಲೇ ಇದ್ದ ಪೋಸ್ಟ್ ಆಫೀಸಿನ ಒಳ ಹೊಕ್ಕುವ ಬದಲು, ಶಿರ್ವ-ಮಂಚಕಲ್ಲಿನ ಏಕಮಾತ್ರ ರಸ್ತೆಯಲ್ಲಿ ಮುಂದೆ ಸಾಗಿದಾಗ, ಅವನ ಉದ್ದೇಶದ ಮಟ್ಟಿಗೆ ಸಂಶಯ ಪಡುವ ಹಾಗಿತ್ತು. ಕುದ್ರರ ಹೋಟೇಲನ್ನೂ

ದಾಟಿ. ಮೋರಿಸನ ಟೈಲರ್ ಅಂಗಡಿ, ಭಟ್ಟರ ಫೇಮಸ್ ವಸ್ತ್ರಾಲಯ, ಇವೆಲ್ಲವನ್ನೂ ದಾಟಿ, 'ಬೊಂಬೇ ಹೇರ್ ಕಟಿಂಗ್ ಸಲೂನ್' ಬದಿಯ ಓಣಿಗೆ ತಿರುಗಿದಾಗ ಶಂಭು ಸೆಟ್ಟಿಯ ಉದ್ದೇಶ ಸ್ಪಷ್ಟವಾಗತೊಡಗಿತ್ತು. ಅದೇ ಓಣಿಯಲ್ಲಿ ಶಂಭುಸೆಟ್ಟಿಗೆ ಪ್ರಿಯವಾದ ಎರಡು ತಾಣಗಳಿವೆ– ಅಪ್ಪೀಬಾಯಿಯ ಮನೆ ಮತ್ತು ಸಂಜೀವನ ಮನೆಯ ಜಗುಲಿಯಲ್ಲಿ ಜರಗುವ ಇಸ್ಪೀಟ್ ಕಳ. ಆದರೆ ಅಪ್ರಿಯ ಸಂಗತಿಯೆಂದರೆ ಎರಡೂ ತಾಣಗಳಲ್ಲಿಯೂ ಶಂಭುಸೆಟ್ಟಿಯ ಸಾಲ ಬೃಹದಾಕಾರವನ್ನು ತಾಳಿ ಅವನಿಗೆ ಅವೆರಡೂ ಕಡೆ ಸ್ವಾಗತ ಸಿಗದೆ ಹಲವು ಕಾಲ ಸಂದಿತ್ತು. ಆದರೆ ಇವತ್ತಿನ ಸಂಗತಿ ಬೇರೆ. ಅಪ್ಪೀಬಾಯಿಯ ಕೈಗೆ ದುಡ್ಡು ಬೀಳುತ್ತಲೇ ಅವಳು ಸಂತೋಷದಲ್ಲಿ ಹಿಗ್ಗುವುದನ್ನೂ, ಇಸ್ಪೀಟು ಕಳದ ಸಂಗಾತಿಗಳು ತನ್ನನ್ನು ಮುಕ್ತವಾಗಿ ಸ್ವಾಗತಿಸುವುದನ್ನೂ ಮನಸ್ಸಿನಲ್ಲಿ ಕಲ್ಪಿಸುತ್ತಾ, ಓಣಿಗೆ ತಿರುಗಿದ ಶಂಭುಸೆಟ್ಟಿಯ ಮುಖದಲ್ಲಿ ನಗೆ ಕಿವಿಯಿಂದ ಕಿವಿಗೆ ಪಸರಿಸಿತ್ತು.

ಸಂಜೆಯ ಹೊತ್ತಿಗೆ ಸೀತು ಸೆಡ್ತಿ ನೆರೆಮನೆಯ ಶಾರದಮ್ಮನನ್ನು ಕಂಡು ಮಾತನಾಡಿಸಲು ಹೊರಟಳು. ಶಾರದಮ್ಮ ಅವಳನ್ನು ಇತಿ, ಮಿತಿಯೊಳಗೆ, ವಿಶ್ವಾಸದಿಂದ ಮಾತನಾಡಿಸುತ್ತಾಳೆ. ಸೀತುವಿಗೆ ಇದು ನೆಮ್ಮದಿ ಕೊಡುತ್ತಿತ್ತು. ಇವತ್ತು ಅವಳಿಗೆ ಆ ನೆಮ್ಮದಿಯ ಅಗತ್ಯವಿತ್ತು. ದಿನವಿಡೀ ಜಗನ್ನನ ಅಪಾಯಕರ ಸ್ಥಿತಿಯನ್ನು ನೆನೆಸಿಕೊಂಡು ಅವಳ ಒಡಲು ಹೆದರಿಕೆಯಿಂದ ಜಜ್ಜಿಹೋಗಿತ್ತು.

ಶಾರದಮ್ಮನೊಡನೆ ಮಾತು ಸುರುವಾದ ಸ್ವಲ್ಪದರಲ್ಲೇ ಜಗನ್ನನ ಈಗಿನ ದುಃಸ್ಥಿತಿಗೆ ಬಂದು ಮುಟ್ಟಿತು. ಜಗನ್ನನ ವಿಷಯದಲ್ಲಿ, ಬೊಂಬಾಯಿಯಲ್ಲಿದ್ದ ತನ್ನ ದೊಡ್ಡ ಮಗ ಶ್ರೀನಿವಾಸ ಹಾಗೇನು ಬರೆಯಲಿಲ್ಲವಲ್ಲ, ಅಥವಾ ಅವನಿಗೆ ಜಗನ್ನ ಇತ್ಲಾಗೆ ಸಿಕ್ಕಲಿಲ್ಲವೋ ಏನೋ.– ಎಂದು ಅನಂತುವಿನ ಅಮ್ಮ ಹೇಳಿದಾಗ, ಸೀತು ತನ್ನ ಸೆರಗಿನ ಒಳಗಿನಿಂದ ಕಾಗದವನ್ನು ತೆಗೆದು– ನೀವೇ ನೋಡಿ– ಎಂದು ಕಂಪಿಸುವ ಕೈಯಿಂದ ಅವಳಿಗೆ ಕೊಟ್ಟಳು.

ಅನಂತುವಿನ ಅಮ್ಮ ಓದು ಬರಹ ಇದ್ದವಳು, ಏನಿದ್ದರೂ ಸಲೀಸಾಗಿ ಓದುತ್ತಾಳೆ. ಪತ್ರವನ್ನು ಬಿಡಿಸಿ, ಓದಿದವಳಿಗೆ ಆಶ್ಚರ್ಯವಾಯಿತು. ಶಂಭು ಸೆಟ್ಟಿ ಏನು ಓದಿದ್ದಾನೆ, ಅವನ ಕರ್ಮ ! ನಮ್ಮ ಜಗನ್ನನಿಗೆ ಯಾವ ಮಂಡೆಮಾರಿಯೂ ಬರಲಿಲ್ಲ,– ಎಂದು ನಕ್ಕು, ಅವನ ಪತ್ರ ಓದಿ ಹೇಳಿದಳು.

ಜಗನ್ನ ತನ್ನ ಅಣ್ಣಂದಿರ ಮತ್ತು ಉಳಿದ ಸಂಬಂಧಿಕರ ಬಗ್ಗೆ ಬರೆದಾದ ಮೇಲೆ, ತನ್ನ ವಿಷಯಕ್ಕೆ ಬರುತ್ತ,– ಈಗೊಂದೆರಡು ದಿವಸದಿಂದ ಮೈ ಸರಿಯಿಲ್ಲ. ಉಳಿದವರೆಲ್ಲಾ ಕೆಲಸಕ್ಕೆ ಹೋಗಿದ್ದಾರೆ. ಹಾಗಾಗಿ ನಾನೊಬ್ಬನೇ ಖೋಲಿಯಲ್ಲಿ ಕೂತುಕೊಂಡು ಈ ಪತ್ರ ಬರೆಯುತ್ತಿದ್ದೇನೆ. ನಾಳೆಯಿಂದ ಕೆಲಸಕ್ಕೆ ಹೋಗುತ್ತೇನೆ. ಈ ತಿಂಗಳ ಅಖೇರಿಯಲ್ಲಿ ಇಪ್ಪತ್ತೈದು ರೂಪಾಯಿ ಮನಿಯಾರ್ಡರು ಮಾಡುತ್ತೇನೆ. ಸೇಕು ತಪ್ಪದೆ ಶಾಲೆಗೆ ಹೋಗುತ್ತಾನಾ? ಎಲ್ಲರನ್ನೂ ಕೇಳಿದ್ದಾಗಿ ತಿಳಿಸು– ಎಂದು ಕಾಗದ ಮುಗಿಸಿದ್ದ.

ತನ್ನ ಜಗನ್ನ ಹುಶಾರಿದ್ದಾನೆಂದು ಕೇಳಿದ ಸೀತು ಸೆಡ್ತಿಗೆ ಮನಸ್ಸು ಹಗುರವಾಗಿ, ಗಾಳಿಯಲ್ಲಿ ತೇಲಿಹೋದಂತಾಯಿತು. ಫಕ್ಕನೆ ತಿಳಿಯಾದ ಅವಳ ಮನಸ್ಸಿನಲ್ಲಿ ಸೇಕು ತಂದ ನೂರರ ನೋಟಿಗೆ ಈಗ ಇಂಬು ಸಿಕ್ಕಿತು.– ಅದನ್ನು ತನ್ನ ಕಿಸೆಗೆ ತುರುಕಿಸಿಕೊಂಡು ಅವಸರದಲ್ಲಿ ಹೊರಟುಹೋದ ಶಂಭುಸೆಟ್ಟಿಯನ್ನು ನೆನೆಸಿ, 'ಆ ಘಟಿಂಗೆ ಬರಡ್, ತೂಪೆ!' (ಆ ಘಟಿಂಗ ಬರಲಿ, ಅವನನ್ನು ನೋಡುಕೊಳ್ಳುತ್ತೇನೆ) ಎಂದು ಅಲ್ಲಿಂದ ಹೊರಟಳು.

✣ **ಯು. ವೆಂಕಟ್ರಾಜ ರಾವ್** : ೪೦೧, ಆಶಿಯಾನಾ, ೨೧, ಸೆಂಟ್ ಪಾಲ್ ರಸ್ತೆ,
ಬಾಂದ್ರಾ (ಪ), ಮುಂಬಯಿ–೪೦೦ ೦೫೦ ✣

ನಾಲ್ಕು ಕವಿತೆಗಳು

ಸುಮತೀಂದ್ರ ನಾಡಿಗ

೧. ಆ ಮುಹೂರ್ತದಲ್ಲಿ

ಇದ್ದಕಿದ್ದಂತೆ ಬೆಳಕು ನಕ್ಕಂತೆ ನಿಂತವೆರಡು ಕಣ್ಣು
ನನ್ನತನವನ್ನು ಕಿತ್ತುಕೊಂಡಂತೆ ನಾ ಗೊಂಬೆಯಾದ ಮಣ್ಣು.
ನನ್ನ ಎಳೆದಿತ್ತು ತನ್ನ ಕಡೆಗೇನೆ ಬೆಳಕು ಸೂಜಿಗಲ್ಲು
ನಾನು ಏನಲ್ಲ ಮುಗ್ಧ ಮಗುವಾದೆ ಕೈಯಲ್ಲಿ ಬಿಸಿಲುಕೋಲು.

ಬಿಸಿಲುಕೋಲ ಜೊತೆ ಆಟವಾಡಿದ್ದೆ ಆನಂದ ಕೇಕೆ ಹಾಕಿ
ಮತ್ತೆ ಕ್ಷಣದಲ್ಲಿ ತಾಯ ಕಂಡಿದ್ದೆ ದೇದೀಪ್ಯ ನೋಟ ತಾಕಿ.
ತಾಯ ಹಿಡಿಯಬೊ ಬಿಸಿಲು ಕೋಲನ್ನೊ ಇಬ್ಬಂದಿ ಭಾವದಲ್ಲಿ
ಹುಟ್ಟಿ ಬಂತೊಂದು ದಿವ್ಯ ಕಮಲವು ವೈಹಿಕದ ಕೆಸರಿನಲ್ಲಿ.

ಆಗ ಕುಣಿದಾಡಿ ಮತ್ತೆ ಸೆಳೆದಿತ್ತು ದಿವದ ಬಿಸಿಲುಕೋಲು,
ಹೃದಯ ಕಮಲದಲಿ ಬಂದು ಕೂತಿತ್ತು ಮಡಿಚಿಕೊಂಡು ಕಾಲು.
ಹೃದಯದಾಕಾಶ ತುಂಬಿಕೊಂಡಿತ್ತು, ಬೆಳುದಿಂಗಳಂಥ ನೋಟ
ಅಂಗ ಅಂಗಗಳ ಕೆಸರ ಬದಲಿತ್ತು, ಸಂಪಿಗೆಯ ಒಂದು ತೋಟ.

ಹಿಂದೆ ನಾ ಕಂಡ ನನ್ನ ಪರಿಚಿತಳ ಕಣ್ಣುಗಳಿಗಿಂಥ ಸೆಳವು
ಆ ಮುಹೂರ್ತದಲಿ ಉದ್ಭವಿಸಿತೆಂತು, ಬರಲಿಲ್ಲ ಅದರ ತಿಳಿವು.
ಆ ಅಲೌಕಿಕತೆ ಅವತರಿಸಲಿಕ್ಕೆ ಸಿದ್ಧತೆಯು ಹೇಗೆ ಬಂತು ?
ಯಾರು ಸಿದ್ಧರು ಯಾರು ಸಾಧಕರು ನಮಗೆ ಹೊಳೆವುದೆಂತು?

೨. ತುಂಬಿದ ಕೊಡ

ತುಂಬಿದ ಈ ಕೊಡ ತುಳುಕುತ್ತಲೆ ಇದೆ
ತುಂಬಿಕೊಳ್ಳುತ್ತೆ ತಿರುತಿರುಗಿ,
ಪೂರ್ಣ ಕೊಡವೆತ್ತಿ ಸುರಿದುಕೊಂಡರೂ
ಮತ್ತೆ ತುಂಬುತ್ತೆ ನಮಗಾಗಿ. ೧

ಕೊರಕಲು ಗುಂಡಿಯ ದಾಟುವುದಕ್ಕೆ
ಬದುಕಿನ ಗಾಡಿಯ ಅಲುಗಾಟಕ್ಕೆ
ದ್ರೋಹ ಕೃತಘ್ನತೆ ಹೊಡೆತಕ್ಕೆ
ಜಗ್ಗದೆ ಕೂತಿದೆ ಈ ಕೊಡ. ೨

ಯಾವುದೊ ಅದೃಶ್ಯ ಚಿಲುಮೆ ತುಂಬುತಿದೆ
ಕೊಡ ಬರಿದಾಗಲು ಬಿಡದೆ,
ಬದುಕಿನ ಬಂಡಿಯು ಅದನ್ನು ಹೊತ್ತಿದೆ
ನಮಗೂ ನಿಮಗೂ ನಡುವೆ. ೩

ಇದರ ಸೆಲೆಯೆಲ್ಲಿ, ಎಲ್ಲಿ ಜಲನಯನ,
ಎಲ್ಲಿದೆ ಒಗತೆಯ ಮೂಲ ?
ನಮ್ಮ ಕಣ್ಣುಗಳ ತೊಳಕೊಳ್ಳೋಣ
ಇದೊಂದು ಅದ್ಭುತ ಅವಕಾಶ. ೪

ಮೊದಲು ಭೂಮಿಯಲಿ ತುಂಬಿದ ಈ ಕೊಡ
ಅಮೃತ ಪುತ್ರರೇ ಬಿಟ್ಟದ್ದು,
ಇದರ ತಳದಲ್ಲಿ ನೀರಕಣ್ಣುಗಳ
ಅಮೃತ ಪುತ್ರರೇ ಬಿಡಿಸಿದ್ದು. ೫

ಸಿಕ್ಕಿದೆ ಇದಕ್ಕೆ ಶ್ರೀ ಭೂದೇವಿಯ
ಹೃದಯದ ಅಂತರ್ಜಲ,
ಆ ಅಂತರ್ಜಲ ಈ ಕೊಡ ಸೇರಿದೆ
ಪಡಕೊಳ್ಳೋಣ ಅದರ ಫಲ. ೬

ತುಂಬಿದ ಈ ಕೊಡ ತುಳುಕುತ್ತಲೆ ಇದೆ
ಸುತ್ತಲ ಹಸುರಿನ ಬೆಳಗೆ
ಹೇಳಿ ಮುಗಿಸುವೆವು ಧನ್ಯವಾದಗಳ
ನಮ್ಮ ಕೃತಜ್ಞತೆ ನಿಮಗೆ. ೭

೩. ನನ್ನ ಕನಸಿನ ನೆರಳು

ಕನಸಿನಲ್ಲೂ ನೀನು ಕಳ್ಳ ಹೆಜ್ಜೆಯನಿಟ್ಟು
ಬರಬೇಕು ಏಕೆ ?
ಅಪರಿಚಿತೆ ನೀ ಬಂದು ಯಾರೆಂದು ಹೇಳದೆಯೆ
ನನ್ನ ಕಣ್ಣುಗಳನ್ನು ಮುಚ್ಚಬೇಕೆ ? ೧

ಯಾರು ನೀನೆಂದಾಗ ಮೌನದಲ್ಲೇ ನಿನ್ನ
ಕಣ್ಣುಗಳು ನಕ್ಕ ಹಾಗೆ,
ಕಂಪಿಸಿದೆ ನೀ ಬಾಗಿ ಗಾಳಿ ಕೈಯಲಿ ಮುಟ್ಟಿ
ಬೆಳಕು ಕುಡಿ ಹೋದ ಹಾಗೆ. ೨

ಹೊಳಹಾಗಿ ಬಂದಿದ್ದಿ ಕಣ್ಣು ಕಾಣದ ರೂಪ
ಬೆರಗು ಬೆಳಕಿನ ನೆರಳು ಬಂದ ಹಾಗೆ;
ನನಗೆ ನೀ ಕಂಡಿದ್ದಿ, ಸ್ಮೃತಿಯ ಕೊಳದಿಂದೆದ್ದ
ಜನ್ಮಾಂತರದ ಆಚೆ ಗೆಳತಿ ಹಾಗೆ. ೩

ಕ್ಷಣವೊಂದು ತುಂತುರಿನ ಸ್ತ್ರೀರೂಪ ಮೈದಾಳಿ
ತೇವವೇ ಹರಿದ ಹಾಗೆ
ಬೆಳಕು ರಾಶಿಯ ಶಿಲ್ಪಿ ಗಾಳಿಯಲಿ ವಿಗ್ರಹವ
ಕನಸಲ್ಲಿ ಕಟೆದ ಹಾಗೆ. ೪

ಯಾರಿಗಾದರು ನಿನ್ನ ಹೇಗೆಂದು ವರ್ಣಿಸಲಿ
ಮೂಗನಿಗೆ ಬಿದ್ದೊಂದು ಕನಸಿನಂತೆ;
ಕಂಡು ಕಾಣದ ಹಾಗೆ ಕನಸಾಗಿ ಬರುವಂಥ
ಈ ಬುದ್ಧಿ ಏಕೆ ಬಂತೆ ? ೫

ನನ್ನನ್ನು ರೂಪಿಸಿದ ಪಂಚಭೂತಗಳನ್ನು
ಆಡಿಸುವ ಪ್ರಾಣದಂತೆ
ಮತ್ತೆ ಮತ್ತೆ ಬರುತ್ತಿ ಎಷ್ಟು ಸೂಕ್ಷ್ಮವೆ ನೀನು
ನನ್ನ ಕನಸಿನ ಮೈಯ ನೆರಳಿನಂತೆ. ೬

೪. ಒಂದು ಗಜಲ್

ನದಿಯಾದೆನೆ ನಾನು, ನದಿಯಾದೆನೆ
ಕಡಲಾದನೆ ಅವನು ಕಡಲಾದನೆ.

ನದಿಯಾದೆನೆ ಸಖಿ ಸಿಹಿಯಾದೆನೆ
ಕಡಲಾದನೆ, ಅವನು ಉಪ್ಪಾದನೆ.

ಕಡಲಾದರೆ ಅವನು ತಡೀಲಾರೆನೆ
ನದಿಯಾಗಿಯೇ ನಾನು ಉಳೀಲಾರೆನೆ

ಕಡಲನ್ನು ಸೇರುವೆ ನಾನು ಉಪ್ಪಾಗುವೆ
ರವಿಯ ಕಾರುಣ್ಯಕ್ಕೆ ಮಳೆಯಾಗುವೆ

ಮಳೆಯಾಗುವೆ ಮತ್ತೆ ನದಿಯಾಗುವೆ
ಸಿಹಿಯಾಗಿ ಹರಿಹರಿದು ಕಡಲಾಗುವೆ.

✣ **ಸುಮತೀಂದ್ರ ನಾಡಿಗ :**
'ಅಪೂರ್ವ', # ೩೮, ಕವಿ ಸುಮತೀಂದ್ರ ನಾಡಿಗ ಮಾರ್ಗ,
೧ನೇ ಮೇನ್, ೩ನೇ ಫೇಸ್, ೬ನೇ ಬ್ಲಾಕ್,
ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫ ✣

ನಾಟಕ, ಆಟ ಮತ್ತು ವಚನ ಸಾಹಿತ್ಯ

ಪ್ರಸಾದ್ ರಕ್ಷಿದಿ

ಕನ್ನಡದಲ್ಲಿ ಲಿಖಿತ ನಾಟಕ ಮತ್ತು ರಂಗಕೃತಿ ಎರಡಕ್ಕೂ ನಾಟಕ ಎಂದೇ ವಾಡಿಕೆಯಲ್ಲಿ ಬಳಸುತ್ತಿದ್ದೇವೆ. 'ನಾಟಕವಾಡಿದರು'. 'ನಾಟಕ ಆಡುತ್ತೇವೆ' ಪದಗಳಲ್ಲಿರುವ ಆಡುವುದು ಅಂದರೆ 'ಆಟ' ರಂಗಕೃತಿಯಾಗುತ್ತದೆ. ಯಕ್ಷಗಾನ ಬಯಲಾಟವನ್ನು ಆಡುಮಾತಿನಲ್ಲಿ 'ಆಟ' ಎಂದೇ ಕರೆಯುತ್ತಾರೆ. ನೀನಾಸಂ ತನ್ನ ರೆಪರ್ಟರಿಗೆ 'ತಿರುಗಾಟ' ಎಂದೇ ಹೆಸರಿಟ್ಟಿದೆ; ಇಲ್ಲೆಲ್ಲ 'ಆಟ' ಎಂದರೆ ರಂಗಕೃತಿಯೇ ಆಗಿರುತ್ತದೆ.

ನಾವು ಆಡುವ ಆಟಗಳು ಬಹುಮಟ್ಟಿಗೆ, ಅಭಿನಯವೇ. ಕೆಲವು ನಿಯಮಗಳ ಚೌಕಟ್ಟಿನಲ್ಲಿ ನಡೆಸುವ, ಅಭಿನಯಿಸುವ ಕ್ರಿಯೆಯನ್ನು 'ಆಟ' ಎನ್ನುತ್ತೇವೆ. ಆಟದಲ್ಲೂ ಒಬ್ಬೊಬ್ಬನೂ ಒಂದೊಂದು ಪಾತ್ರ ವಹಿಸುತ್ತಾನೆ. ಮಕ್ಕಳ ಆಟದಲ್ಲಂತೂ ಹೆಚ್ಚಿನ ಪಾಲು ಅಭಿನಯವೇ– ಇಂಗ್ಲಿಷ್‌ನಲ್ಲಿ ನಾಟಕಕ್ಕೆ ಹೇಳುವ 'play' ಎನ್ನುವ ಪದವೂ ಇದನ್ನೇ ಧ್ವನಿಸುತ್ತದೆ.

ಈ ಆಟ ಕಟ್ಟುವ ಕ್ರಿಯೆಗೆ ಅತೀ ಅಗತ್ಯವಾದ ವಿಷಯಗಳೆಂದರೆ, ಒಬ್ಬ ಆಡುವವ (ನಟ), ಇನ್ನೊಬ್ಬ ನೋಡುವವ (ಪ್ರೇಕ್ಷಕ). ಇವರಿಬ್ಬರ ನಡುವೆ ಸಂವಹನಕ್ಕೆ, ಚಲನೆ, ಸಂಜ್ಞೆ ಮಾತು ಇತ್ಯಾದಿಗಳು. ಉಳಿದಂತೆ ರಂಗಸಜ್ಜಿಕೆ, ಪರಿಕರ, ಪ್ರಸಾಧನ ಇತ್ಯಾದಿಗಳೆಲ್ಲ ನಂತರದವುಗಳು.

ಈ ಆಟಕ್ಕೆ ಅಂದರೆ, ರಂಗಕೃತಿಗೆ ಒಬ್ಬ ನಟನಿಗೆ, ಚಲನೆ ಮತ್ತು ಸಂಜ್ಞೆಗಳು (ಅಭಿನಯ) ಅಂದರೆ, 'ನಡೆ' ಮತ್ತು ಮಾತು, 'ನುಡಿ' ಪ್ರಪ್ರಥಮ ಆದ್ಯತೆಯವುಗಳು. ಈ ಹಿನ್ನೆಲೆಯಲ್ಲಿ ಈ ವಚನವನ್ನು ನೋಡಿ :

ನಡೆಯೊಳಗೆ ನುಡಿತುಂಬಿ
ನುಡಿಯೊಳಗೆ ನಡೆತುಂಬಿ,
ನಡೆ ನುಡಿ ಎರಡು ಪರಿಣಾಮದಲ್ಲಿ ತುಂಬಿ.... (ಷಣ್ಮುಖಸ್ವಾಮಿ)

ಈ ನಡೆ ನುಡಿ ಒಂದಾಗುವ ಕ್ರಿಯೆ ಜೀವನದಲ್ಲಿ ಹೇಗೋ, ಹಾಗೆ ಆಟ(ರಂಗಕೃತಿ) ದಲ್ಲೂ ಅದ್ಭುತವನ್ನು ಸೃಷ್ಟಿಸುತ್ತದೆ. ನಡೆ(ಚಲನೆ, ಕಾರ್ಯಕಾರಣ). ನುಡಿ(ಮಾತು)– ಎರಡೂ ಪರಿಣಾಮದಲ್ಲಿ ಅಂದರೆ ರಂಗಕೃತಿಯಲ್ಲಿ ಏಕೀಭವಿಸಿದರೆ ಒಳ್ಳೆಯ ರಂಗಕೃತಿ ಸೃಷ್ಟಿಯಾಗುತ್ತದೆ. ನಡೆ–ನುಡಿ ಒಂದಾಗಿ ಪರಿಣಾಮದಲ್ಲಿ ಏಕೀಭವಿಸಿದ ವ್ಯಕ್ತಿ ನಿಜವಾದ ಶರಣನಾಗುತ್ತಾನೆ. ಈಗ ಈವಚನವನ್ನು ನೋಡಿ :

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು (ಬಸವಣ್ಣ)

ಇದರೊಂದಿಗೆ ಕನ್ನಡದ ಪ್ರಮುಖ ರಂಗನಿರ್ದೇಶಕರಲ್ಲಿ ಒಬ್ಬರಾದ ಪ್ರಸನ್ನ ಅವರ 'ನಾಟಕ ರಂಗಕೃತಿ'ಯಲ್ಲಿ ಹೇಳಿದ ಮಾತುಗಳನ್ನು ಗಮನಿಸಿ:

"ಶುದ್ಧ ಸ್ಫಟಿಕದಂತೆ ಬೆಳಗಬಲ್ಲ ಮಾತು". "ಒಳ್ಳೆ ನಟನು ಮಾತುಗಳನ್ನು ಮತ್ತಷ್ಟು ಶುಚಿಗೊಳಿಸಿ ಅಂತರಂಗ ಗೋಚರಿಸುವಂತೆ ಮಾಡಿ ಸ್ಫಟಿಕದಂತೆ ಹೊಳೆಯುವ ಮಾತುಗಳನ್ನು ಪ್ರೇಕ್ಷಕರಿಗೆ ಒಪ್ಪಿಸುತ್ತಾನೆ"– ಈ ಮಾತುಗಳನ್ನು ಬರೆಯುವಾಗ ಪ್ರಸನ್ನ ಅವರ ಮನಸ್ಸಿನಲ್ಲಿ ಖಂಡಿತವಾಗಿಯೂ ಮೇಲಿನ ವಚನ ಸುಳಿದಿರಲೇಬೇಕೆಂದು ನನ್ನ ಅನಿಸಿಕೆ. ಅದೇನೇ ಇರಲಿ, ಅದೇ ಕೃತಿಯಲ್ಲಿ "ನಾಟಕದ ಭಾಷೆ ಮಾತಿನಷ್ಟು ನೇರ ಸಂವಹನೆಯಾಗುವುದರ ಜೊತೆಗೆ ಕಾವ್ಯ ಗುಣದ ಸುತ್ತು ಬಳಸಿನ ಅರ್ಥಗಳನ್ನು ಪಡೆದಿರಬೇಕು" ಎನ್ನುತ್ತಾರೆ. ಎಲ್ಲಾ ಒಳ್ಳೆಯ ನಾಟಕಗಳು ಈ ಗುಣವನ್ನು ಪಡೆದಿರುತ್ತವೆ.

ಹನ್ನೆರಡನೇ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿ ತನಗೆ ಬೇಕಾದಂತಹ ಮಾಧ್ಯಮವನ್ನು, ಭಾಷೆಯನ್ನು ಸೃಷ್ಟಿಸಿಕೊಂಡಿತ್ತು. ಪುರೋಹಿತಶಾಹಿ ಸಂಸ್ಕೃತಿಗೆ ಪರ್ಯಾಯವಾಗಿ ಜನಸಾಮಾನ್ಯರ ಸಂಸ್ಕೃತಿಯನ್ನು ಕಟ್ಟುತ್ತಿದ್ದ ವಚನಕಾರರಿಗೆ–ಆಧುನಿಕ ನಾಟಕಕಾರರಿಗೆ ದಕ್ಕಿದಂತಹ ರಂಗಭಾಷೆ ಅಂದೇ ದಕ್ಕಿಬಿಟ್ಟಿತ್ತು!

ಹೊಸ ಧರ್ಮವೊಂದನ್ನು ಕಟ್ಟುತ್ತಿದ್ದ ವಚನಕಾರರಿಗೆ ಪ್ರಬುದ್ಧ ಜೀವನಾನುಭವಗಳನ್ನು ಜನಸಮೂಹಗಳಿಗೆ ತಲುಪಿಸಬೇಕಾದ ತುರ್ತು ಇದ್ದುದರಿಂದ ಅವರಿಗೆ ಈ 'ಮಾತಿನ ಕಾವ್ಯ' ಸಿದ್ಧಿಸಿರಬೇಕು.

ಅಂದಿನ ಅನುಭವ ಮಂಟಪ–ಮಹಾಮನೆಯಲ್ಲಿನ ಘಟನೆಗಳು ವಿಚಾರಮಂಥನಗಳಷ್ಟೇ ಅಲ್ಲ, ಈ ಕ್ರಾಂತಿಯ ಕಾರಣಕರ್ತರಾದ ಶರಣರ ಜೀವನ ಮತ್ತು ಅಂದಿನ ಸಮಾಜದ ಅನೇಕ ಘಟನಾವಳಿಗಳು ಒಂದು ರಂಗಪರಂಪರೆಯನ್ನೇ ಹುಟ್ಟುಹಾಕಬೇಕಾಗಿತ್ತು ಅಥವಾ ಯಾವುದೇ ರಂಗ ಪರಂಪರೆಗೆ ಮೂಲಸೆಲೆಯಾಗಬೇಕಾಗಿತ್ತು. ಆದರೆ ಇದಾವುದರ ಸೂಚನೆಗಳೇ ಇಲ್ಲದೆ ಹೋಗಿವೆ!

ಇದಕ್ಕೆ ಕಾರಣಗಳನ್ನು ಊಹಿಸಬಹುದು. ಮೊದಲನೆಯದಾಗಿ, ಭಾರತದಲ್ಲಿ ಒಂದು ಅವಿಚ್ಛಿನ್ನವಾದ ರಂಗಪರಂಪರೆ ಇರಲಿಲ್ಲ. ಸಂಸ್ಕೃತ ನಾಟಕಗಳ ಕಾಲದ ನಂತರ ಭಾರತೀಯ ರಂಗ ಪರಂಪರೆಯೊಂದು ಬೆಳೆದು ಬರಲೇ ಇಲ್ಲ. ಹೊಸ ರಂಗ ಪರಂಪರೆಯೊಂದನ್ನು ಹುಟ್ಟು ಹಾಕಬೇಕಾದ (?), ಹುಟ್ಟು ಹಾಕುವ ಸಾಧ್ಯತೆಗಳಿದ್ದ ಕಲ್ಯಾಣದ ಕ್ರಾಂತಿ ವಿಫಲವಾದ ನಂತರದ ದಿನಗಳಲ್ಲಿ ಶರಣಧರ್ಮವೂ ಮಾರ್ಪಾಡಾಗಿ, ಬಯಲು ಆಲಯ ಒಂದಾಗಿ ಬಯಲೇ ಆಗಿದ್ದ 'ಶರಣಧರ್ಮ' ನಿಧಾನವಾಗಿ ಮತ್ತೆ ಆಲಯದೊಳಗೆ ಸರಿದು ಹೊಸ ಧರ್ಮದ ಬದಲು ಜಾತಿ ಪದ್ಧತಿಯಲ್ಲಿ ಮುಳುಗಿ ಹೋಯಿತು.

ಮತ್ತೆ ಹತ್ತೊಂಭತ್ತನೇ ಶತಮಾನದಲ್ಲಿ ಪಾರ್ಸಿ ರಂಗಭೂಮಿಯಿಂದ ಪ್ರೇರಣೆ ಪಡೆದ ನಮ್ಮ ವೃತ್ತಿ ರಂಗಭೂಮಿ ನಾಟಕಕ್ಕಿಂತ 'ಆಟ'ಕ್ಕೆ (ವೃತ್ತಿ ರಂಗಭೂಮಿಯ ನಕಲಾಗಿ ಬಂದ ನಮ್ಮ ಸಿನಿಮಾ ಕೂಡ ಇಂದಿಗೂ ದಿನವಹಿ ಮೂರು 'ಆಟ'ಗಳು ಎಂದು ಪ್ರಚಾರ ಮಾಡುವುದನ್ನು ಗಮನಿಸಿ), ಅಂದರೆ ಲಿಖಿತ ನಾಟಕಕ್ಕಿಂತ ರಂಗಕೃತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು. ಪ್ರದರ್ಶನಕ್ಕಾಗಿಯೇ ನಾಟಕ ರಚನೆ ಮಾಡುವುದು ಪ್ರಾರಂಭವಾಯಿತಾದರೂ ಹೆಚ್ಚಿಗೆ ಆಯ್ದುಕೊಂಡದ್ದು ದಶಾವತಾರ, ಕುರುಕ್ಷೇತ್ರ, ಸತ್ಯಹರಿಶ್ಚಂದ್ರದಂತಹ ಪೌರಾಣಿಕ ಕಥೆಗಳನ್ನು. ಕೆಲವೊಮ್ಮೆ ಶರಣರ ಕಥೆಗಳನ್ನು ಬಳಸಿಕೊಂಡಾಗಲೂ ಶೈಲಿ ಮತ್ತದೇ ವೈಭವೀಕೃತ ಅವತಾರ ಪುರುಷರದ್ದೇ ಆಗಿತ್ತು. ಇನ್ನು ಕರಾವಳಿಯ ಯಕ್ಷಗಾನವಂತೂ ಲಿಖಿತ ನಾಟಕದ ಗೋಜಿಗೇ ಹೋಗದೇ ಶುದ್ಧ ಶೈಲೀಕೃತವಾಗಿ, ಆಟ(ರಂಗಕೃತಿ)ವೇ ಆಗಿಹೋಯಿತು. ಅಲ್ಲದೆ ಪೌರಾಣಿಕ ಮತ್ತು ಅದೇ ಶೈಲಿಯ ಕಥಾನಕಗಳಿಂದ ತುಂಬಿ ಬೇರೆಡೆಗೆ ಹೊರಳಲೇ ಇಲ್ಲ. ಕೆ. ಮರುಳಸಿದ್ದಪ್ಪನವರ 'ಆಧುನಿಕ ಕನ್ನಡ ನಾಟಕ' ದಲ್ಲಿನ ಈ ಮಾತುಗಳನ್ನು ನೋಡಿ : "ಕನ್ನಡದ ಶಿವಶರಣರ ಕಥಾವಸ್ತುವನ್ನು ಪಡೆದ ಕೆಲವು ಆಧುನಿಕ ನಾಟಕಗಳು ಅವರನ್ನು ಗಾಂಧಿವಾದದ ಹಿನ್ನೆಲೆಯಲ್ಲಿ ಚಿತ್ರಿಸುತ್ತವೆ. ಬಿ. ಪುಟ್ಟಸ್ವಾಮಯ್ಯ ನವರ ಅಕ್ಕಮಹಾದೇವಿ ಹಾಗೂ ಅ.ನ.ಕೃ. ಅವರ ಬಸವಣ್ಣ ಈ ಬಗೆಯವು", "ಅ.ನ.ಕೃ. ಮತ್ತು ಪುಟ್ಟಸ್ವಾಮಯ್ಯ ಇಬ್ಬರೂ ತಮ್ಮ ಕಥಾನಾಯಕರ ಜನನ ಮರಣಗಳಿಗೆ ದೈವಿಕ ಹಿನ್ನೆಲೆ ಸೃಷ್ಟಿಸುತ್ತಾರೆ", "ರಂ. ಶ್ರೀ. ಮುಗಳಿಯವರ 'ಅಕ್ಕ ಮಹಾದೇವಿ'ಯಲ್ಲಿಯೂ.... ಅಕ್ಕನ ಪಾತ್ರವನ್ನು ಆದರ್ಶಮಯವಾಗಿಸುವ ಭರದಲ್ಲಿ ಭಾವಾವೇಶಕ್ಕೆ ಅವಕಾಶವಾಗಿದೆ."

ಇವರಾರಿಗೂ ಹನ್ನೆರಡನೇ ಶತಮಾನದ ಮಹಾನ್ ಕ್ರಾಂತಿ ತಟ್ಟದೆ ಹೋದದ್ದು ಯಾಕೆ?

ಬಹುಶಃ ಬ್ರಿಟಿಷ್ ದೊರೆಗಳನ್ನು ಒಪ್ಪಿಕೊಂಡಿದ್ದ ಅಥವಾ ಅವರನ್ನು ವಿರೋಧಿಸಿದಾಗಲೂ ನಮ್ಮ ರಾಜಶಾಹಿಯನ್ನೋ ಅಥವಾ ನಮ್ಮದೇ ಫ್ಯೂಡಲ್ ಪಾಳೇಗಾರೀ ವ್ಯವಸ್ಥೆಯನ್ನೋ ಒಪ್ಪಿಸಿಕೊಂಡಿದ್ದ ಇವರಿಗೆ ಹೆಚ್ಚೆಂದರೆ ಗಾಂಧೀಜಿಯ ರಾಮರಾಜ್ಯದ ಕನಸುಗಳು ಮಾತ್ರ ಸಾಧ್ಯವೆನಿಸಿರಬೇಕು. ಹಾಗಾಗಿಯೇ ಇವರಿಗೆ ಆದರ್ಶ ಸಮಾಜ ಸುಧಾರಕರ ಕಲ್ಪನೆಗಳಾಚೆ ಶರಣರನ್ನು ಕಾಣಲಾಗಲಿಲ್ಲ.

ಇದಕ್ಕೆ ಕೆಲವು ಅಪವಾದವಾಗಿದ್ದ ನಾಟಕಕೃತಿಗಳನ್ನು ಮರುಳಸಿದ್ದಪ್ಪನವರು ಗುರುತಿಸಿದ್ದಾರೆ: "ಎಚ್. ತಿಪ್ಪೇರುದ್ರಸ್ವಾಮಿಯವರ 'ನಿಜಗುಣ ಶಿವಯೋಗಿ'ಯಲ್ಲಿ ಶಿವಯೋಗಿಯ ಬದುಕಿನ ಹಿನ್ನೆಲೆಯಲ್ಲಿ ಸಂಸ್ಕೃತಿಯ ಯಥಾವತ್ತಾದ ಚಿತ್ರಣವನ್ನು ಸಾರ್ಥಕವಾಗಿ ಮೂಡಿಸುತ್ತಾರೆ", "ಜಿ. ಎಸ್. ಶಿವರುದ್ರಪ್ಪನವರ ಮತ್ತು ಪ್ರಭುಪ್ರಸಾದರ 'ಮಹಾಸಂಗಮ' ಮತ್ತು 'ನಾದಸೇತು' ನಾಟಕಗಳಲ್ಲಿ ಇನ್ನೂ ವಿಸ್ತಾರವಾದ ಹಿನ್ನೆಲೆಯಲ್ಲಿ ಸಾಮಗ್ರಿಯನ್ನು ಬಳಸುವ ಅವಕಾಶವನ್ನು ಕಳೆದುಕೊಂಡಿದ್ದಾರೆ. ಏಕಾಂಕ ನಾಟಕದ ಮಿತಿ ಇದನ್ನು ಸೀಮಿತಗೊಳಿಸಿರಬೇಕು" (ಆಧುನಿಕ ಕನ್ನಡ ನಾಟಕ).

ಹೀಗೆ ಅಪರೂಪಕ್ಕೊಮ್ಮೆ ಈ ರೀತಿಯ ಪ್ರಯತ್ನಗಳಿದ್ದರೂ ಅದನ್ನು ಅರ್ಥೈಸಿಕೊಂಡು ರಂಗಕೃತಿಯಾಗಿಸುವವರ ಕೊರತೆಯಂತೂ ಇದ್ದೇ ಇತ್ತು.

ಆದರೆ ವೃತ್ತಿ ರಂಗಭೂಮಿಯನ್ನು ಒಪ್ಪದ, ಲೇವಡಿ ಮಾಡಿದ, ಅವರಿಗಿಂತ ಭಿನ್ನವಾದ 'ಆಟ ಕಟ್ಟುವ' ಕ್ರಿಯೆಗೆ ಮುಂದಾದ ನಮ್ಮ ಹಲವು ಲೇಖಕರಲ್ಲಿ, 'ಚೋಮನ ದುಡಿ'ಯಂತಹ ಕಾದಂಬರಿಯನ್ನು ಬರೆದ ಶಿವರಾಮ ಕಾರಂತರು, ಪುರೋಹಿತಶಾಹಿ ವಿರೋಧಿ ನೆಲೆಯಿಂದ ಬರೆದ ಕುವೆಂಪುರವರು, ಇರಲಿ. ಶ್ರೀರಂಗ, ಕೈಲಾಸಂ ಅಂಥವರಿಗೂ ವಚನಕಾರರು, ವಚನಗಳು ಮತ್ತು ಕಲ್ಯಾಣದ ಕ್ರಾಂತಿ ಯಾಕೆ ರಂಗಕ್ಕೆ ವಸ್ತುವಾಗಲಿಲ್ಲ ಎನ್ನುವುದು ಕುತೂಹಲಕಾರಿಯಾಗಿದೆ.

ಮತ್ತೊಮ್ಮೆ ಪ್ರಸನ್ನರ 'ನಾಟಕ ರಂಗಕೃತಿ'ಯ ಈ ಸಾಲುಗಳನ್ನು ಗಮನಿಸಿ: (ಪು. ೧೧೨) "ಸುಧಾರಣಾವಾದಿ ರಾಜಕೀಯ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ರೂಪುಗೊಂಡ ಹಳೆ ಮೈಸೂರಿನ ಲೇಖಕರಿಗೆ ಸಜ್ಜನಿಕೆ, ಲಿಬರಲ್ ಧೋರಣೆ, ಉನ್ನತ ವಿದ್ಯಾಭ್ಯಾಸಗಳ ಜೊತೆ 'ಸ್ವಾಮಿನಿಷ್ಠೆ'ಯೂ ಸಾಂಸ್ಕೃತಿಕ ಬಳುವಳಿಯಾಗಿ ಬಂದಿದ್ದರೆ ಅದಕ್ಕೆ ಆಶ್ಚರ್ಯ ಪಡಬೇಕಾದ್ದಿಲ್ಲ". ಇಲ್ಲಿ ಗಮನಿಸಬೇಕಾದ ಬಹು ಮುಖ್ಯ ಅಂಶವೆಂದರೆ ಸಮಾಜದ ಓರೆಕೋರೆಗಳನ್ನು ಊನವನ್ನು ತಿದ್ದುವತ್ತ ಗಮನಹರಿಸಿದ ಈ ಜಾಣ ಮನಸ್ಸುಗಳು ಅಷ್ಟೇ ಸುಲಭವಾಗಿ ಸಮಾಜದ ಮೂಲಭೂತ ವೈರುಧ್ಯಗಳನ್ನು ಇಲ್ಲವಾಗಿಸಿಬಿಟ್ಟವು.

ಹೀಗೆ ಸಮಾಜದ ಮೂಲಭೂತ ವೈರುಧ್ಯಕ್ಕೆ ಸರಳ ಪರಿಹಾರವನ್ನು ಇವರು ಯೋಚಿಸಿ ಕೊಂಡದ್ದು, ಹನ್ನೆರಡನೇ ಶತಮಾನದ ಕ್ರಾಂತಿಯನ್ನು ಇಂದಿನ ಸಂದರ್ಭದಲ್ಲಿ ಪುನರ್‌ವ್ಯಾಖ್ಯಾನಿಸ ಬೇಕಾದ, ಅದರಿಂದ ಚೈತನ್ಯ ಪಡೆಯಬೇಕಾದಂತಹ ಅಗತ್ಯವನ್ನು, ಅವಕಾಶವನ್ನು ಇವರಿಗೆ ಇಲ್ಲವಾಗಿಸಿಬಿಟ್ಟಿತ್ತು.

ಆದರೆ ಕನ್ನಡದ ರಂಗಭೂಮಿಗೆ ಕಲ್ಯಾಣದ ಕ್ರಾಂತಿಯಿಂದ ವಿಮುಖವಾಗಲು ಸಾಧ್ಯವಾಗಲೇ ಇಲ್ಲ. ತಡವಾಗಿಯಾದರೂ ಕನ್ನಡ ನಾಟಕಕಾರರು ಮತ್ತೆ ಹನ್ನೆರಡನೇ ಶತಮಾನವನ್ನು ತಿರುಗಿ ನೋಡಬೇಕಾಯಿತು. ಇದು ನಡೆದದ್ದು ನಾಟಕ ಮಾತ್ರವಲ್ಲ, ಕನ್ನಡ ಸಾಹಿತ್ಯವೂ ಪ್ರಬುದ್ಧಮಾನಕ್ಕೆ ಬಂದದ್ದರ ಸಂಕೇತವೆಂದು ಪರಿಗಣಿಸಲ್ಪಟ್ಟ ಕಾರ್ನಾಡರ 'ತುಘಲಕ್' ನಾಟಕ ಬಂದ ನಂತರವೇ.

ನಂತರ ನಮ್ಮ ಮೂವರು ಪ್ರಮುಖ ಲೇಖಕರು, ನಾಟಕಕಾರರು ಹನ್ನೆರಡನೇ ಶತಮಾನದತ್ತ ಮುಖ ಮಾಡಿದರು. ಲಂಕೇಶ್‌ರ 'ಸಂಕ್ರಾಂತಿ', ಎಚ್. ಎಸ್. ಶಿವಪ್ರಕಾಶರ 'ಮಹಾಚೈತ್ರ' ಮತ್ತು ಕಾರ್ನಾಡರ 'ತಲೆದಂಡ'. ಈ ಮೂರೂ ನಾಟಕಗಳು, ಮೂರು ಬೇರೆ ಬೇರೆ ಸ್ತರಗಳಿಂದ,

ಕೋನಗಳಿಂದ ಕಲ್ಯಾಣದ ಕ್ರಾಂತಿಯನ್ನು, ಶರಣರನ್ನು ಅರ್ಥೈಸಲು, ವ್ಯಾಖ್ಯಾನಿಸಲು ಪ್ರಯತ್ನಿಸಿವೆ.

ಗಿರೀಶ ಕಾರ್ನಾಡರ ಈ ಮಾತುಗಳನ್ನು ಗಮನಿಸಿ: "ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಪ್ರತಿಯೊಬ್ಬ ಕನ್ನಡಿಗ ಮತ್ತೆ ಮತ್ತೆ ಆ ಯುಗದ ಬೆರಗುಗೊಳಿಸುವ ಪ್ರತಿಭೆಗೆ ಆ ಉತ್ಸಾಹಕ್ಕೆ ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಗೆ ಗೆಲುವಿನ ನೋವಿಗೆ ಮರಳುವುದು ಹೊಸ ಸಂದರ್ಭದಲ್ಲಿ ಅರ್ಥೈಸಲು ಯತ್ನಿಸುವುದು ಅನಿವಾರ್ಯ" (ತಲೆದಂಡ).

ಈ 'ಅನಿವಾರ್ಯ' ಇನ್ನಿಬ್ಬರು ಪ್ರಮುಖ ನಾಟಕಕಾರರನ್ನೂ ಕಾಡಿದೆ. ಆದರೆ ಫಲವೇ ಲಂಕೇಶರ 'ಸಂಕ್ರಾಂತಿ' ಮತ್ತು ಎಚ್. ಎಸ್. ಶಿವಪ್ರಕಾಶರ 'ಮಹಾಚೈತ್ರ'. ನಡೆಗೂ ನುಡಿಗೂ ಅಗಾಧ ಅಂತರವಷ್ಟೇ ಅಲ್ಲ, ಅರ್ಥಾರ್ಥ ಸಂಬಂಧವೇ ಕಳಚಿ ಹೋಗುತ್ತಾ ಪರಿಣಾಮದಲ್ಲಿ 'ಆಟ' ಕಳೆಗೆಟ್ಟಿರುವ ಈ ವರ್ತಮಾನದಲ್ಲಿ ನಡೆ-ನುಡಿ ಒಂದಾಗಿಸಿ ಪರಿಣಾಮದಲ್ಲಿ ಕ್ರಾಂತಿಯ ಸಾಧ್ಯತೆಗಳನ್ನು ಕಂಡುಕೊಂಡು ಹನ್ನೆರಡನೇ ಶತಮಾನದ ಶರಣರ ಜೊತೆ ಮುಖಾಮುಖಿ ಯಾಗುವುದು, ಆ ಮೂಲಕ ನಮ್ಮ 'ಆಟ'ಕ್ಕೆ ಹೊಸ ಚೈತನ್ಯ ಮತ್ತು ಅರ್ಥವನ್ನು ತಂದು ಕೊಳ್ಳುವುದರ ಸಾಧ್ಯತೆಯನ್ನು ಈಗ ನಾವು ಮತ್ತೊಮ್ಮೆ ಪರಿಶೀಲಿಸಬೇಕಾಗಿದೆ.

ಹಾಗಾಗಿ ಶರಣರ ನಾಟಕ, ಶರಣರ ವಚನ 'ರಂಗ'ಕ್ಕೆ ಹೇಗೋ, ಹಾಗೇ 'ಜೀವನರಂಗ'ಕ್ಕೂ ಹೊಸ ಅರ್ಥಗಳನ್ನು ತರುವ ಸಾಧ್ಯತೆಯ ಕಡೆ ಗಮನ ಹರಿಸುವುದು ಎಲ್ಲಾ ಸಾಹಿತಿಗಳ, ರಂಗಕರ್ಮಿಗಳ ಜವಾಬ್ದಾರಿ.

✣ ಪ್ರಸಾದ್ ರಕ್ಷಿದಿ : ಕ್ಯಾಮನಹಳ್ಳಿ ಅಂಚೆ, ಸಕಲೇಶಪುರ-೫೭೩ ೧೩೪ (ಹಾಸನ) ✣

ಧೃತರಾಷ್ಟ್ರ ಶೋಕ

ಎಂ. ಎಂ. ಪುರದನಗೌಡರ

"ಸಮರ ಸಮಾಪ್ತಗೊಂಡಂತೆ ತೋರುವುದು,
ಎತ್ತ ಹೋದನೋ ಸಂಜಯ...
ಗಾಂಧಾರಿ, ಹಿಡಿ ಕೈ, ನಡೆ ಮುಂದೆ
ಕಾಡುತ್ತಿದೆ ಸುಯೋಧನನ ಸಾವಿನ ಸಂಶಯ,
ಹುಡುಕೋಣ ಸತ್ತ ಸೈನ್ಯದಲ್ಲಿ ಪುತ್ರನನ್ನು,
ಹೇಗೆ ಗುರುತಿಸುವುದು ಅವನನ್ನು ಶವರಾಶಿಗಳಲ್ಲಿ?
ಏನು ಹೇಳಲಿ ಗಾಂಧಾರಿ ಗುರುತು,
ಸಾಯುವನೆ ಅವನು ನನ್ನನ್ನು ಮರೆತು?"

"ಪತಿದೇವ, ನೀವು ನೂರೊಂದು ಮಕ್ಕಳ ತಂದೆ
ನಿಮಗೆ ಈ ಮಗನ ಮೇಲೆಂಥ ಮೋಹ ಎಂದೆ..."

"ಗಾಂಧಾರಿ, ಸತ್ತ ಸೈನಿಕರ ಅನಾಥ ಸಂತಾನಕ್ಕೆ
ಶತಪುತ್ರ ಮಾತಾ-ಪಿತರು ನಾವು ಈ ದಿನಕ್ಕೆ.
ಸ್ವಲ್ಪ ಆಲಿಸು ಅತ್ತ... ಮೆಲ್ಲನೆ ಶವಾಂಗಣದಲ್ಲೆಲ್ಲೊ
ಮರುಗಿ ಮುಲುಗುವ ಆ ದನಿ ಅವನದೇ ಸೊಲ್ಲು..."

ತಡಕಾಡಿದಳು ಗಾಂಧಾರಿ ತಡವರಿಸುತ್ತ ಹೆಣದ ಬಣಬೆ.

"ಕೇಳುತ್ತಿಲ್ಲವೆ ಪ್ರಿಯೆ, ಕ್ಷಣಕ್ಷಣಕ್ಕೂ ಅಪ್ಪ... ಅಪ್ಪ..."

"ಇಲ್ಲ, ನನಗೆ ಕೇಳುತ್ತಿಲ್ಲ, ಬದುಕಿನ ಸುಳುಹಿಲ್ಲ,
ರಣರಂಗ ಸುಡುಗಾಡು, ನಿಡುಸುಯ್ಯುವ ನಿಟ್ಟುಸಿರು.
ನಡೆಯಲಾಗದು ಮುಂದೆ, ಮೆಲ್ಲಗೆ ಬನ್ನಿ ಪತಿದೇವ,

ಇಲ್ಲಿ ಬರೀ ರಕ್ತ ರೊಜ್ಜು ಮಾಂಸ ಮಜ್ಜೆ ಹೊಲಸು ಕೊಳೆ
ಹರಿದಿರುವ ಕರುಳ ಬಳ್ಳಿ ಕೊಚ್ಚೆ ಹುಚ್ಚೆ ಹೊಳೆ..."

"ನಡೆಯಬಾರದಿತ್ತೇನೊ ಈ ಇಂಥ ಕಲಹ ಕದನಾರ್ಭಟ
ಹದ್ದು ಕಾಗೆ ಹಾರಾಟ, ನಾಯಿ ನರಿ ತೋಳ ಚೀರಾಟ
ಇಲ್ಲಿ, ಇಂಥಲ್ಲಿ ಹೇಗೆ ಕೇಳೀತು ಕಂದನ ಆಕ್ರಂದನ...
ನೋಡು, ಹೌದೆ, ವಿದುರ, ಧರ್ಮನು ಎದುರಲ್ಲಿ ಬರುವಂತಿದೆ...
ಮರೆಯಾಗು ಗಾಂಧಾರಿ, ಮರೆಯಾಗು, ಮರೆಯಾಗು..."

✣ ಎಂ. ಎಂ. ಪುರದನಗೌಡರ : # ೩೧೭, ಸೊಪ್ಪಿಮಠ ಓಣಿ, ಕಲಘಟಗಿ-೫೮೧ ೨೦೪ ✣

ಅವ್ವ

ವೀಣಾ ಕುಲಕರ್ಣಿ

ವರ್ತಮಾನದ ಬಸಿರಲಿ ಭವಿಷ್ಯತ್ತಿಗೆ ಜನ್ಮ ನೀಡಿದ ಅವ್ವ
ಬೆವರು ಬಸಿದು, ರಕ್ತ ಹನಿಸಿ
ಮೂಳೆ ಮಜ್ಜೆಗಳಿಗೆ ಶಕ್ತಿ ನೀಡಿದವಳು
ಕತ್ತರಿಸಿದ ಹೊಕ್ಕಳ ಹುರಿಗೆ ಗಂಟು ಹಾಕಿಕೊಂಡಳು

ನಿಂತ ನೆಲದಲ್ಲೇ ಬಿಳಲು ಬಿಟ್ಟ ಆಲದಂತಿರುವ ಅವ್ವ
ರೆಂಬೆ ಕೊಂಬೆಗೆ
ಕರುಳ ಬಳ್ಳಿಗಳ ಹಬ್ಬಿಸಿದಳು
ರೆಕ್ಕೆ ಬಲಿಯದ ಹಕ್ಕಿಗೆ ಗೂಡಾದಳು

ಹಟ ಹಿಡಿದ ರಾಮನಿಗೆ ಕನ್ನಡಿಯಲಿ
ಚಂದಿರನ ತೋರಿಸಿದ ಅವ್ವ,
ಹಟಕಾಗಿ ಬದುಕು ಪಣವಿಟ್ಟ
ಸುಯೋಧನನಿಗೆ ಕಣ್ಣಿದ್ದೂ ಕುರುಡಾದಳು

ಕಪ್ಪು ಹೊಲದಲ್ಲಿ, ಹಸಿರು ಬೆಳೆ ತೆಗೆದ ಅವ್ವ
ಫಸಲು ಕಟಾವಾದಾಗ ಮನದಲ್ಲಿ ಬಿಕ್ಕಿದಳು
ಒಟ್ಟಿಕೊಂಡ ರಾಶಿ ಪರರ ಪಾಲಾದಾಗ ಒಂಟಿಯಾಗಿ ಅತ್ತಳು
ಅಳುವ ತುಟಿಗಳಿಗೆ ಮಂದಹಾಸ ಮೂಡಿಸಿದಳು

ನೋವ ವಿಷವುಂಡು ನಂಜುಂಡನಂತಿರುವ ಅವ್ವ
ವಿಷ ನೀಡಿದವರಿಗೂ ಅಮೃತ ಹನಿಸಿದಳು
ಸೋತ ಹೆಜ್ಜೆಗಳಿಗೆ ಬಲ ನೀಡಿ ಗಮ್ಯವನು
ಅಣಿಗೊಳಿಸಿದ ಅವ್ವ, ನಿಂತ ನಿಲುಪಿನಲಿ ಮೈಲಿಗಲ್ಲಾದಳು

ಭವಿಷ್ಯತ್ತಿಗೆ ಭಾಷ್ಯ ಬರೆಯುವ ಅವ್ವ
ಕಳೆದು ಹೋಗುತ್ತಾಳೆ ಭೂತದ ಕನವರಿಕೆಗಳಲಿ
ನಿಂತಲ್ಲಿಯೇ ಮುಗಿಲ ಮಲ್ಲಿಗೆಯಾಗುವ ಅವ್ವ
ಬೆಳದಿಂಗಳಿನಲ್ಲಿ ಚುಕ್ಕೆಯಾಗಿ ಮಿನುಗುತ್ತಾಳೆ.

✣ ವೀಣಾ ಕುಲಕರ್ಣಿ : ಕಮಲಕುಂಜ, ೬೧/೧, ಪಂಚಕಚೇರಿ ಓಣಿ,
ಕಾಮನಕಟ್ಟಿ, ಧಾರವಾಡ – ೫೮೦ ೦೦೧ ✣

ಶೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್' : ಒಂದು ಮರುಚಿಂತನೆ

ಶ್ರೀಧರ ಪಿಸ್ಸೆ

ಪೀಠಿಕೆ :

'ಕಿಂಗ್ ಲಿಯರ್' ನಾಟಕದ ಕಥಾಸಾರವನ್ನು ನಾನು ಮೊದಲಿಗೆ ೧೯೭೪-೭೫ ರಲ್ಲಿ ಇಂಗ್ಲಿಶ್ ಪಠ್ಯದ ಭಾಗವಾಗಿ ಓದಿದೆ. ಇಂಗ್ಲೆಂಡ್ ದೇಶದ ರಾಜನೊಬ್ಬ ತನ್ನ ಹೆಣ್ಣುಮಕ್ಕಳ ಪ್ರೀತಿಯ ಮಾತು ಆಲಿಸಿ ಅದರ ಆಧಾರದ ಮೇಲೆ ಸಾಮ್ರಾಜ್ಯ ಪಾಲು ಮಾಡುವ ಮತ್ತು ತನ್ನ ಮುದಿತನದಲ್ಲಿ ಸಂಕಷ್ಟದ ಸರಮಾಲೆ ಮೈಮೇಲೆ ಎಳೆದುಕೊಳ್ಳುವ ವಿಚಿತ್ರ ಮತ್ತು ಕುತೂಹಲ ಕೆರಳಿಸುವ ಸಂಗತಿಗೆ ಮರುಳಾದೆ. ಅದರ ವಿಚಿತ್ರ ಸೌಂದರ್ಯದ ಸೆಳೆತಕ್ಕೆ ಒಳಗಾದೆ. ಆ ಹೊತ್ತಿಗಾಗಲೇ ಈ ನಾಟಕದ ಎರಡು ಕನ್ನಡ ಅನುವಾದಗಳು ಹೊರಬಂದಿದ್ದು ಹಳೆಯದಾಗಿಬಿಟ್ಟಿದ್ದವು ಎಂಬುದು ನನಗೆ ಆಗ ತಿಳಿಯದ ವಿಷಯವಾಗಿತ್ತು.

ನನ್ನ ಶೈಕ್ಷಣಿಕ ಪಠ್ಯದ ಭಾಗವಾಗಿದ್ದ ಶೇಕ್ಸ್‌ಪಿಯರ್‌ನ 'ಜೂಲಿಯಸ್ ಸೀಜರ್', 'ಆಸ್ ಯು ಲೈಕ್ ಇಟ್' ಮತ್ತು 'ಒಥೆಲೊ' ನಾಟಕಗಳಲ್ಲಿ ಆಗ್ಗೆ ಶೈಕ್ಷಣಿಕ ಚಟುವಟಿಕೆಗೆ ಮೀರಿದ ಆಸಕ್ತಿಯ ಭಾಗವಾಗಿ ತೊಡಗಿಸಿಕೊಂಡೆ. ನಂತರದ ಹಂತದಲ್ಲಿ ಶೇಕ್ಸ್‌ಪಿಯರ್‌ನ ಇನ್ನುಳಿದ ನಾಟಕ ಮತ್ತು ಕಾವ್ಯಕೃತಿಗಳನ್ನು ಮೂಲದಲ್ಲಿ, ಅನುವಾದ ರೂಪದಲ್ಲಿ ಅರಿಯಲು ಪ್ರಯತ್ನಪಟ್ಟೆ. ಇದರಿಂದ ಶೇಕ್ಸಪಿಯರ್‌ನ ನಾಟಕ ರಚನಾ ಕುಶಲತೆ, ಜೀವನ ಕುರಿತ ದೃಷ್ಟಿಕೋನ, ಮಾನವ ಸ್ವಭಾವಗಳ ಚಿತ್ರಣ, ಸಂಘರ್ಷಾತ್ಮಕ ನೆಲೆಯಲ್ಲಿ ಅವನ್ನು ಮುಖಾಮುಖಿಗೊಳಿಸುವ ಕ್ರಮ, ಅಂಥ ನೆಲೆಗಳನ್ನು ಮೀರುವಲ್ಲಿ ಪಡಿಮೂಡುವ ಸಹಾಯಕ ಭಿನ್ನ ಆಯಾಮಗಳು, ಆ ಮೂಲಕ ಮಾನವನ ಮನಸ್ಸನ್ನು ಪ್ರಭಾವಿಸಿರುವ ಅಂಶಗಳು ಮತ್ತು ಜೀವನ ಕುರಿತು ಕಟ್ಟಿಕೊಂಡ ಕಲ್ಪನೆ. ಇವನ್ನು ಮೀರಿದ ಜೀವನದ ನಿತಾಂತ ಚಲನಶೀಲ ಗುಣ ಕಟ್ಟುವ ವಿಧಾನ-ಇವೆಲ್ಲವನ್ನು ಪರಿಚಯ ಮಾಡಿಕೊಳ್ಳಲು ಅನುಕೂಲವಾಯಿತು.

ಪ್ರವೇಶ :

ನಮ್ಮನ್ನು ನಾವು ಸರಿಯಾಗಿ, ಪೂರ್ತಿಯಾಗಿ ಅರಿಯಲು ಸಾಧ್ಯವಾಗುವುದಾದರೆ ನಮ್ಮ ಸಮಸ್ಯೆಗಳನ್ನೂ ಅರಿಯಲು ಸಾಧ್ಯ. ರೋಗ ಯಾವುದು, ಅದರ ಗುಣ ಲಕ್ಷಣಗಳು ಯಾವುವು ಎಂದು ಪತ್ತೆ ಮಾಡಿದರೆ ಅದನ್ನು ಪರಿಹರಿಸಿಕೊಳ್ಳಲು ದಾರಿಗಳು ಕೂಡ ಪತ್ತೆಯಾಗುತ್ತವೆ. ಹಾಗಾಗಿಯೆ ನಮ್ಮ ಸಮಸ್ಯೆಗಳನ್ನು ಅರಿತುಕೊಳ್ಳುವುದು ಎಷ್ಟು ಮುಖ್ಯವೋ ಅದಕ್ಕಿಂತ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನಮ್ಮನ್ನು ಅರಿತುಕೊಳ್ಳುವುದು ಕೂಡ ಅಷ್ಟೇ ಮುಖ್ಯ. ಇದು ನನ್ನ ಹಲವು ಊಹಾತ್ಮಕ ನಿಲುವುಗಳಲ್ಲಿ ಒಂದು.

ನಮ್ಮೆಲ್ಲರ ಅರಿವಿನಲ್ಲಿರುವ ಹಾಗೆ ನಾವು ಆಧುನಿಕತೆ – ವಸಾಹತುಶಾಹಿಯ ನೆರಳಿನಿಂದ ಆದುನಿಕೋತ್ತರ– ವಸಾಹತೋತ್ತರ ಅಂದರೆ ಇಂದು ಹೆಚ್ಚು ಚಾಲ್ತಿಯಲ್ಲಿರುವ ಪಾರಿಭಾಷಿಕ ಪದಗಳಾದ ಜಾಗತೀಕರಣ – ಉದಾರೀಕರಣದ ಕಡೆಗೆ ಹೊರಳಿದ್ದೇವೆ. ವಸಾಹತುಶಾಹಿಗೂ ಮೊದಲು ನಾವು ಹಲವು ಆಕ್ರಮಣಗಳಿಗೆ ಒಳಗಾಗಿದ್ದೇವೆ. ಅದರ ಪ್ರಕ್ರಿಯೆಗಳು, ಫಲಾಫಲಗಳು, ಗಳಿಕೆ–ಕಳೆದುಕೊಳ್ಳುವಿಕೆಗಳು ವಸಾಹತುಶಾಹಿಯ ಅನುಭವದಷ್ಟು ಹಚ್ಚಹಸುರಾಗಿ ನಮ್ಮಲ್ಲುಳಿದಿಲ್ಲ. ಹಾಗಾಗಿ ಆಧುನಿಕತೆ – ವಸಾಹತುಶಾಹಿ ನಮ್ಮನ್ನು ಆವರಿಸಿ ಮೀರಿ ಬೆಳೆದದ್ದನ್ನು ಪ್ರತಿಭಟನೆ ಜೆರತ ಬೆರಗುಗಣ್ಣಲ್ಲಿ ಕಂಡಿದ್ದೇವೆ. ಅದನ್ನು ಪ್ರಜ್ಞಾಪೂರ್ವಕವಾಗಿ ಎದುರುಗೊಳ್ಳಲು ಸಾಧ್ಯವಾಗದೆ ಕೈಚೆಲ್ಲಿದ್ದೇವೆ. ಇದಕ್ಕೆ ನಮ್ಮ ಮನಸ್ಸುಗಳು ಆಧುನಿಕತೆ–ವಸಾಹತುಶಾಹಿ ಮೈಪಡೆದುಕೊಳ್ಳಲಿರುವ ರೀತಿಯನ್ನು ಸಮಗ್ರವಾಗಿ ಮತ್ತು ಸಮರ್ಥವಾಗಿ ಮೊದಲೆ ನಿರೀಕ್ಷಿಸಲು ಸಾಧ್ಯವಾಗದೆ ಹೋದುದು

ಕಾರಣ. ಈಗ ನಮ್ಮೆದುರು ಅಂಥದೆ ಮತ್ತೊಂದು ಸಂದರ್ಭ ಎದುರಾದಂತೆ ಕಾಣತೊಡಗಿದೆ. ಹಿಂದಿನ ಅನುಭವದ ಹಿನ್ನೆಲೆಯಲ್ಲಿ ನಾವು ಇಂದು ಅಂಥ ಸವಾಲುಗಳನ್ನು ಸಮರ್ಥವಾಗಿ ಎದುರುಗೊಳ್ಳಲು ಸಾಧ್ಯವೇನೋ. ಗೊತ್ತಿಲ್ಲ. ಇಂಥ ಸಮಸ್ಯೆಯನ್ನು ಅರಿಯುವ ತುರ್ತಲ್ಲಿ ನಾವು ಇದಕ್ಕಿಂತ ಮೊದಲು ನಮ್ಮನ್ನು ಅರಿತುಕೊಳ್ಳಬೇಕಿದೆ. ನಮ್ಮನ್ನು ಸರಿಯಾಗಿ ಅರಿತುಕೊಂಡಲ್ಲಿ ನಮ್ಮ ಸಮಸ್ಯೆಯನ್ನು ಅರಿತುಕೊಳ್ಳುವುದು ಅಷ್ಟು ಕಷ್ಟದ ಕೆಲಸವಾಗುಳಿಯುವುದಿಲ್ಲ. ನಮ್ಮನ್ನು ಅರಿತುಕೊಳ್ಳುವ ಹಾದಿಯಲ್ಲಿ ಎರಡು ದಾರಿಗಳು ಇವೆ. ಒಂದು ಒಳಗಿನ ದಾರಿ, ಮತ್ತೊಂದು ಹೊರಗಿನ ದಾರಿ. ಮೊದಲನೆಯದು ನಮ್ಮನ್ನು ಅಂದರೆ ನಮ್ಮ ಜೀವನ ಆವರಿಸಿಕೊಂಡಿರುವ ಪ್ರತಿಯೊಂದು ನೆಲೆಯನ್ನೂ ಒಳಗಿನವನಾಗಿ ಕಂಡು ಅವನ್ನು ಇಂದಿನ ಅಗತ್ಯಕ್ಕನುಗುಣವಾಗಿ ಮರುಕಟ್ಟುವುದು. ಎರಡನೆಯದು ನಮಗೆ ಪರಿಚಯವಿರದ, ಅನ್ಯಭಾಷೆ, ಸಮಾಜ, ಸಂಸ್ಕೃತಿಗೆ ಸೇರಿದ ನಮಗನ್ವಯವಾಗುವ ಉನ್ನತ ಅಂಶಗಳನ್ನು, ನಮ್ಮ ಅಗತ್ಯಕ್ಕೆ ಅನುಗುಣವಾಗಿ ಅಳವಡಿಸಿಕೊಳ್ಳುವುದು ಮತ್ತು ನಮ್ಮನ್ನು ಮರುರೂಪಿಸಿಕೊಳ್ಳುವುದು, ಇಂದಿಗೆ ಸರಿಪಡಿಸಿ ಕೊಳ್ಳುವುದು. ಈ ಎರಡೂ ಬಗೆಗಳಲ್ಲಿ ನಮ್ಮ ವ್ಯಕ್ತಿತ್ವವನ್ನು ವಿವೇಚನೆಯುಕ್ತ ಮರುಕಟ್ಟುವಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಸೂಕ್ತವಾಗಿ ಕಾಣುತ್ತದೆ.

ಹಾಗೆಯೆ ಇಂಗ್ಲಿಶರ ದೊರೆಯಾದ ಕಿಂಗ್‌ಲಿಯರ್‌ನನ್ನು ಸೆಂಟಿಮೆಂಟಲೆಂದು ಗುರುತಿಸಿರುವುದು ಮಾರ್ಮಿಕವಾಗಿದೆ. ಅವನ ದುರಂತಕ್ಕೆ ಈ ಗುಣವೇ ಕಾರಣವೆಂಬುದು ವಿದ್ವತ್‌ವಲಯದ ಅಭಿಪ್ರಾಯ. ನಮ್ಮ ಗುಣಗಳನ್ನು ಅವಗುಣಗಳೆಂದು ಬೈದು ನಮ್ಮನ್ನಾಳಲು ಅವಕಾಶ ಪಡೆದ ಅನ್ಯದೇಶದ ಜನ ಅಂಥದೆ ಅವಗುಣಗಳನ್ನು ಪಡೆದ ತಮ್ಮ ದೇಶದ ರಾಜನಿಂದ ಆಳ್ವಿಕೆಗೆ ಒಳಪಟ್ಟಿದ್ದರು ಎಂಬುದನ್ನು ಈ ನಾಟಕ ನಮ್ಮ ನೆನಪಿಗೆ ತರುತ್ತದೆ. ಮಾನವ ಸ್ವಭಾವಗಳು, ಅದರ ಇತಿಮಿತಿಗಳು ಹಾಗೂ ಅವನ್ನು ತಮ್ಮ ಅನುಕೂಲಕ್ಕೆ ಅನುಗುಣವಾಗಿ ದುಡಿಸಿಕೊಳ್ಳುವ ನೋಟ–ಇವನ್ನು ಬ್ರಿಟಿಶರು ನಮ್ಮನ್ನಾಳುವ ಮೊದಲೆ ತಮ್ಮ ಸಂಸ್ಕೃತಿಯ ಭಾಗವನ್ನಾಗಿ ಮಾಡಿಕೊಂಡಿದ್ದರೆಂದು ತಿಳಿಯಲು ಅವಕಾಶ ಒದಗಿಸುತ್ತದೆ. ಮತ್ತೊಬ್ಬರ ಗುಣದೋಷಗಳ ಇತಿಮಿತಿಗಳು ಅವನ್ನು ಸ್ವಹಿತಕ್ಕೆ ದುಡಿಸಿಕೊಳ್ಳುವವನ ಹಕ್ಕು ಎಂಬುದಾಗಿ ಪರಿಗಣಿತವಾಗಿದ್ದು ಇಲ್ಲಿ ಕಾಣಬಹುದು. ಪಾಶ್ಚಾತ್ಯ ನಾಗರಿಕ ಸಮಾಜದ ಐತಿಹಾಸಿಕ ಬೆಳವಣಿಗೆ ಹಾದು ಬಂದ ಕ್ರಮವನ್ನು ಈ ಅಂಶ ಸೂಚಿಸುತ್ತದೆ. ಈ ಮೂಲಕ ಅದು ಮಾನವತೆಗೆ ಹಾಗೂ ವಿಶ್ವ ಮಾನವ ಕಲ್ಪನೆಗೆ ನೀಡಿದ ಕೊಡುಗೆಯನ್ನು ಕಾಣಿಸುತ್ತದೆ.

ಕಿಂಗ್ ಲಿಯರ್ ನಾಟಕವನ್ನು ಓದುತ್ತ ಅಥವಾ ನೋಡುತ್ತ ಹೋದಂತೆ ನಿವೃತ್ತ ಮನಃಸ್ಥಿತಿಯ ಮುದುಕನೊಬ್ಬ ತನ್ನ ಜವಾಬುದಾರಿಯನ್ನು ನಿರ್ವಂಚನೆಯಿಂದ ತನ್ನ ಮಕ್ಕಳಿಗೆ ವಹಿಸಿ ತಾನು ಅಸಹಾಯಕನಾಗುವುದು, ಅದರ ಪರಿಣಾಮಗಳಿಂದ ನರಳಿ ದುರಂತವನ್ನಪ್ಪುವುದು ಈ ಕತೆಯಲ್ಲಿ ಗೋಚರವಾಗುವ ಸರಳ ಅಂಶವಾಗಿದೆ. ಆದರೆ ಈ ನಾಟಕದ ಮೊದಲ ದೃಶ್ಯದಿಂದ ಕೊನೆ ದೃಶ್ಯದ ತನಕ ಒಂದು ಬಲವಾದ ತಿಕ್ಕಾಟವಿದೆ, ಸಂಘರ್ಷವಿದೆ. ಇದು ಮೊದಲನೆಯ ದೃಶ್ಯದಲ್ಲಿ ಸುಪ್ತವಾಗಿ ಗೋಚರಿಸುತ್ತದೆ. ಈ ಅಂಶ ನಾಟಕದುದ್ದಕ್ಕೂ ಬೆಳೆದು ಕೊನೆಯ ದೃಶ್ಯದಲ್ಲಿ ಘೋರತರವಾದ ತಮ್ಮ ಶಕ್ತಿಗೆ ಮೀರಿದ ಸಂಘರ್ಷದಲ್ಲಿ ಪ್ರಕಟವಾಗಿದೆ. ಹೀಗೆ ಸೆಣಸಾಡಿದ ಪಾತ್ರಗಳು ಎರಡು ವಿರುದ್ಧ ಸ್ವಭಾವಕ್ಕೆ ಸೇರಿದ್ದು, ಅವು ದುರಂತವನ್ನಪ್ಪುವ ಘಟನೆಯಿದೆ. ಆ ಪಾತ್ರಗಳೆಂದರೆ, ಒಂದು–ಕಿಂಗ್ ಲಿಯರ್. ಮತ್ತೊಂದು–ಗ್ಲಾಸ್ಟರ್‌ನಿಗೆ ಅವನು ಇಟ್ಟುಕೊಂಡವಳಿಂದ ಹುಟ್ಟಿದ ಕಿರಿಯ ಮಗ ಎಡ್ಮಂಡ್. ಇನ್ನುಳಿದ ಪಾತ್ರಗಳೆಲ್ಲ ಈ ಎರಡು ಪಾತ್ರಗಳ ಪೋಷಣೆಗೆ ಬರುವ ಪಾತ್ರಗಳೇ ಹೊರತು ಅವುಗಳಿಗೆ ಸ್ವತಂತ್ರ ಉದ್ದೇಶಗಳಿಲ್ಲ.

ಈ ಎರಡು ಪಾತ್ರಗಳು ಮಾನವ ಸ್ವಭಾವದ ಎರಡು ವಿಭಿನ್ನ ಗುಣಗಳ ಸಂಕೇತಗಳಾಗಿವೆ. ಮಾನವನ ಏಳುಬೀಳುಗಳಿಗೆ ಈ ಎರಡು ಬಗೆಯ ಪಾತ್ರಗಳ ನಡುವಿನ ತಿಕ್ಕಾಟ, ಹೊಂದಾಣಿಕೆಗಳು ಕಾರಣವಾಗುತ್ತವೆ. ಭಿನ್ನ ಗುಣಗಳ ನಡುವಿನ ಘೋರ ಸಂಘರ್ಷ ದುರಂತಕ್ಕೆ

ಮೂಲ ಕಾರಣವಾಗುತ್ತದೆ ಎಂದು ಚಿತ್ರಿಸಿದೆ. ದುರಂತವನ್ನು ಪ್ರಧಾನಗೊಳಿಸುವ ಮೂಲಕ ಜೀವನದ ಮತ್ತೊಂದು ಸಾಧ್ಯತೆಯನ್ನು ಶೇಕ್ಸ್‌ಪಿಯರ್ ಮೌನವಾಗಿ ಸೂಚಿಸಿದ್ದಾನೆ. ಅದೆಂದರೆ ಸಂಘರ್ಷರಹಿತ ಹೊಂದಾಣಿಕೆ. ಇದು ಸಾಧ್ಯವೆ ಎಂಬುದು ಬೇರೆ ಪ್ರಶ್ನೆ. ಅದರಿಂದ ದುರಂತದ ಸಾಧ್ಯತೆ ತಪ್ಪಿ ಜೀವನದ ಹಲವು ಭಿನ್ನ ಸಾಧ್ಯತೆಗಳು ತೆರೆದುಕೊಳ್ಳಲು ಅವಕಾಶ ದೊರಕುತ್ತದೆ ಎಂಬ ಸೂಚನೆ ಇದೆ.

ವಾಸ್ತವ ಮತ್ತು ತೋರಿಕೆ ನಡುವಿನ ಅಂತರವರಿಯದ ಪರದೆ :

ಲಿಯರ್‌ನ ಮೆಚ್ಚುಗೆ ಬಯಸುವ ಮನಃಸ್ಥಿತಿ :

ಕಿಂಗ್ ಲಿಯರ್ ನಾಟಕದ ಅತ್ಯುನ್ನತ ಶಿಖರವೆಂದು ಮೂರನೆಯ ಅಂಕವನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ನನ್ನನ್ನು ಹಲವು ವರುಷಗಳ ಕಾಲ ತನ್ನ ಸೆಳೆತಕ್ಕೆ ಒಳಪಡಿಸಿ ಕಾಡಿಸಿರುವ ಮೊದಲ ದೃಶ್ಯದ ಸಂಗತಿಗಳು ಈ ನಾಟಕದ ಮೂಲಧಾತು ಮತ್ತು ಈ ನಾಟಕ ಮಂಡಿಸಲಿರುವ ಜೀವನದ ಸಂಘರ್ಷಾತ್ಮಕ ಅಂಶಗಳು ಬೀಜರೂಪದಲ್ಲಿ ಪ್ರಕಟವಾಗುವ ನೆಲೆಯೆಂದು ನನಗೆ ತೋರುತ್ತದೆ. ಹಾಗಾಗಿಯೇ ಈ ದೃಶ್ಯವನ್ನು ನಾನು ಈ ಪತ್ರದ ಕೇಂದ್ರಬಿಂದು ಎಂದು ಗುರುತಿಸುತ್ತೇನೆ. ಕಿಂಗ್ ಲಿಯರ್ ಎಲ್ಲರನ್ನು ಕಾಡಿಸುವುದೆ ಮಾನವನ ವಿಚಿತ್ರ ಸ್ವಭಾವವನ್ನು ತೆರೆದಿಡುವ ಈ ದೃಶ್ಯದಿಂದ ಎಂದು ನನ್ನ ಭಾವನೆ. ಹಾಗಾಗಿಯೆ ಈ ನಾಟಕಪತ್ರದ ಮೊದಲ ದೃಶ್ಯವನ್ನು ಪ್ರಧಾನವೆಂದು, ಉಳಿದವನ್ನು ಪೂರಕ ಮತ್ತು ಆನುಷಂಗಿಕವೆಂದು ಕಂಡಿದ್ದೇನೆ.

ಇಡೀ ನಾಟಕ ತೋರಿಕೆಯ ಸತ್ಯ ಮತ್ತು ವಾಸ್ತವ ಸತ್ಯ ಒಂದೆಯಾಗಿರುವುದಿಲ್ಲವೆಂದು ನಾಟಕೀಯವಾಗಿ ಸಾಬೀತುಪಡಿಸುತ್ತದೆ. ಇದರ ಎಲ್ಲ ದೃಶ್ಯಗಳು ಇದನ್ನು ಮನವರಿಕೆ ಮಾಡಿ ಕೊಡಲು ರಂಗದ ಮೇಲೆ ಮೂಡುತ್ತವೆ. ನಾಟಕ ಎತ್ತುವ ಮೂಲ ಸಮಸ್ಯೆ ಮತ್ತು ನಿರೂಪಿಸುವ ಸಂಘರ್ಷದ ಕೇಂದ್ರ ಲಿಯರ್ ಮಹಾಶಯನಾಗಿದ್ದಾನೆ. ಆತ ಸರಳ ಮತ್ತು ನೇರ ಸ್ವಭಾವದ ವ್ಯಕಿತ್ವ ಪಡೆದಿರುವ ಹಾಗೆಯೆ ವ್ಯಕ್ತಿಧರ್ಮ ಪಾಲಕನಾಗಿ ಮೊದಲಿಗೆ ಮೂಡಿನಿಲ್ಲುತ್ತಾನೆ. ವ್ಯಕ್ತಿಧರ್ಮ ಅವನ ವ್ಯಕ್ತಿತ್ವದ ಮೂಲಸೆಲೆಯೆಂದು ಹೇಳಲು ನಾಟಕದ ಮೊದಲೆರಡು ಅಂಕಗಳ ನಂತರದ ಅವನ ನಡವಳಿಕೆ ಸಾಕಷ್ಟು ಪುಷ್ಟಿ ಒದಗಿಸುವುದಿಲ್ಲ. ಅವನ ಹಿರಿಯ ಇಬ್ಬರು ಹೆಣ್ಣುಮಕ್ಕಳು ವ್ಯಕ್ತಿಧರ್ಮ ಪಾಲಕರಷ್ಟೇ ಆಗಿರದೆ ಕಪಟಿಗಳೂ ಆಗಿರುವುದು ಉದ್ದಕ್ಕೂ ಸಾಬೀತುಗೊಳ್ಳುತ್ತಾ ಸಾಗುವ ಅಂಶವಾಗಿದೆ. ಇವರಿಬ್ಬರಿಗೆ ಎಡ್ಮಂಡ್ ಆಧಾರಸ್ತಂಭವಾಗಿ ಒದಗಿಬರುತ್ತಾನೆ. ಲಿಯರ್‌ನ ಸರಳ ಮತ್ತು ನೇರ ಸ್ವಭಾವದ ಉತ್ತರಾಧಿಕಾರಿಯಾದ ಅವನ ಕಿರಿಯ ಮಗಳು ನೈಜ ಪ್ರೇಮ ಮತ್ತು ಕರ್ತವ್ಯನಿಷ್ಠೆಯ ಪ್ರತಿರೂಪವಾಗಿದ್ದಾಳೆ. ತಂದೆ ಮಗಳ ಈ ಗುಣಗಳ ಗುಂಪಿಗೆ ಹೆಚ್ಚು ಒಪ್ಪುವಂತೆ ಕೆಂಟ್, ಎಡ್ಗರ್ ಮತ್ತು ಹಾಸ್ಯಗಾರ ಕಾಣಿಸಿಕೊಳ್ಳುತ್ತಾರೆ. ಹೀಗೆ ನಾಟಕದ ಎಲ್ಲ ಘಟನೆಗಳು ಎರಡು ಗುಣಗಳ ಗುಂಪಿನ ಪಾತ್ರಗಳ ನಡುವಿನ ಸಂಘರ್ಷಕ್ಕೆ ಭೂಮಿಕೆಯಾಗಿದೆ.

ಹಾಗಾಗಿ ನಾಟಕದ ವಸ್ತು ಒಳಗೊಂಡಿರುವ ಸಂಘರ್ಷಾತ್ಮಕ ನಿಲುವನ್ನು ಎರಡು ಬಗೆಗಳಲ್ಲಿ ಗುರುತಿಸಬಹುದು :

೧. ಸರಳ ಸ್ವಭಾಪ ಮತ್ತು ಕಪಟತನಗಳ ನಡುವಿನ ಸಂಘರ್ಷ.

೨. ಸಾಮಾಜಿಕ ನ್ಯಾಯಕ್ಕಾಗಿ ನಡೆಯುವ ಹೋರಾಟದಿಂದ ಉಂಟಾಗುವ ಸಂಘರ್ಷ.

ಸರಳ ಸ್ವಭಾವ ಮತ್ತು ಕಪಟತನಗಳ ನಡುವಿನ ಸಂಘರ್ಷ ಸ್ಫುಟವಾಗಿ ಲಿಯರ್‌ನ ಹೆಣ್ಣುಮಕ್ಕಳಲ್ಲಿ ಎರಡು ಗುಂಪುಗಳನ್ನು ಮಾಡುತ್ತದೆ. ಆದರೂ ಅವುಗಳಿಗೆ ಆತನೆ ಮೂಲವಾಗಿರುವಂತೆ ಕಾಣುತ್ತದೆ. ಆವನಿಗೆ ಸರಳ ಮತ್ತು ನೇರ ಸ್ವಭಾವದ ಕಿರಿಯ ಮಗಳಂತೆ ಕಪಟಿಗರಾದ ಹಿರಿಯ ಹೆಣ್ಣುಮಕ್ಕಳು ಮೆಚ್ಚುಮುದ್ದು ಅಲ್ಲ. ಹೀಗಿದ್ದರೂ ಆತ ಅವರು ತನ್ನ ಕುರಿತು ವ್ಯಕ್ತಪಡಿಸುವ

ಪ್ರೀತಿಯ ಭಾವನೆಗಳನ್ನು ಅವರ ಬಾಯಿಂದಲೇ ಕೇಳಬಯಸುತ್ತಾನೆ. ಅಲ್ಲದೆ ಅವರ ಮಾತುಗಳು ವಾಸ್ತವದಲ್ಲಿ ಎಷ್ಟು ತೂಗುತ್ತವೆ ಎಂದು ವಿವೇಚಿಸದೆ ಅವುಗಳಿಗೆ ಮರುಳಾಗುತ್ತಾನೆ. ವಾಸ್ತವ ಸತ್ಯ ಮತ್ತು ತೋರಿಕೆಯ ಸತ್ಯಗಳ ನಡುವೆ ಅಂತರ ಮತ್ತು ವ್ಯತ್ಯಾಸಗಳನ್ನು ಪತ್ತೆ ಮಾಡಲಾರದೆ ಹೋಗುತ್ತಾನೆ. ಇದು ಹಿರಿಯ ಹೆಣ್ಣುಮಕ್ಕಳ ನಡತೆ-ನಡವಳಿಕೆಗಳು ಅಪ್ರಿಯವಾಗಿದ್ದರೂ ಅವರಿಗೆ ಹಿತವನ್ನು ಕೋರುವ ತಂದೆಯಾಗಿ ಅವನ ಮನಸ್ಸು ಮೆದುವಾದ ಸ್ಥಿತಿ ಇರಬಹುದು. ಆದರೆ ಅವರ ಕುರಿತು 'ನನ್ನ ಕುಡಿಗಳೇ! ನೀವು ತುಂಬಾ ಕಠಿಣರು!' ಎಂದು ಹೇಳುವಷ್ಟು ದೂರ ಲಿಯರ್‌ನ ಮನಸ್ಸು ಏಕೆ ಹೋಯಿತು? ಅವನ ತಂದೆತನದ ಮನಸ್ಸು ಅವರ ಅಪರಾಧವನ್ನು ಮನ್ನಿಸುವ ಹಂತ ಏಕೆ ತಲುಪಲಿಲ್ಲ? ಹಿರಿಯ ಮಕ್ಕಳ ಕಪಟತನಕ್ಕೆ ರೋಸಿ ಅಸಹನೆಯಿಂದ ಆವೇಶಭರಿತನಾಗಿ ಶಪಿಸುವ ಸ್ಥಿತಿ ಏಕೆ ಉಂಟಾಯಿತು? ಮೊದಲ ದೃಶ್ಯದಲ್ಲೂ ಲಿಯರ್‌ನ ನಡವಳಿಕೆ ಕಾರ್ಡೀಲಿಯಾಳ ವಿಚಾರದಲ್ಲಿ ಇದೇ ಬಗೆಯದಾಗಿರಲು ಏನು ಕಾರಣ? ಫ್ರಾನ್ಸ್ ಅಭಿಪ್ರಾಯ ಪಡುವಂತೆ ಅವನ ಮನಸ್ಸಿನ ಆಸರಿಕೆ-ಬೇಸರಿಕೆ ಮಾತ್ರ ಇದಕ್ಕೆ ಕಾರಣವೆ? ಲಿಯರ್ ಮೊದಲಿಗೆ ಕಾರ್ಡೀಲಿಯಾ ಬಗ್ಗೆ ನಂತರದಲ್ಲಿ ಗಾನ್‌ರಿಲ್ ಮತ್ತು ರೀಗನ್‌ರ ಬಗ್ಗೆ ನಡೆದುಕೊಳ್ಳುವ ಕ್ರಮದಲ್ಲಿ ಏಕರೂಪತೆ ಇದೆಯಲ್ಲವೆ? ಏಕೆ? ಹಿರಿಯ ಹೆಣ್ಣುಮಕ್ಕಳ ಕಪಟತನ ಮತ್ತು ಕಿರಿಯ ಮಗಳ ಸರಳ ಸ್ವಭಾವದಿಂದಾಗಿ ಓದುಗ ಅಥವಾ ನೋಡುಗರು ಕಾರ್ಡೀಲಿಯಾಳ ಪರವಾಗಿ ಓಲುವಂತೆ ಮಾಡುತ್ತದೆಯಾದರೂ ಲಿಯರ್ ತನ್ನ ಮಕ್ಕಳನ್ನು ನಡೆಸಿಕೊಳ್ಳುವ ಕ್ರಮ ಭಿನ್ನ ಸಂದರ್ಭಗಳಲ್ಲಿ ವ್ಯತ್ಯಾಸವಿಲ್ಲವೆಂಬುದು ಎದ್ದು ಕಾಣುತ್ತದೆಯಲ್ಲವೆ?

ಲಿಯರ್‌ನನ್ನು ಎಂಬತ್ತು ವರುಷದ ಮುದುಕ. ಅವನಿಗೆ ಅರುಳುಮರುಳು. ಅವಿವೇಕಿ. ದುಡುಕು ಮತ್ತು ಒರಟು ಸ್ವಭಾವದವನು. ಅಧಿಕಾರದ ಹುಂಬತನದಿಂದ ಮನೋದೃಷ್ಟಿ ಕಳೆದುಕೊಳ್ಳುವವನು. ಭಾವಾವೇಶಕ್ಕೆ ಒಳಗಾಗಿ ತಿಕ್ಕಲುತನ ರೂಢಿಸಿಕೊಂಡವನು. ಹುಚ್ಚು ಮನಸ್ಸಿನವನು ಎಂದೆಲ್ಲ ಅವನ ಗುಣ-ವ್ಯಕ್ತಿತ್ವವನ್ನು ನಕಾರಾತ್ಮಕವಾಗಿಯೆ ಸಾಮಾನ್ಯವಾಗಿ ಹೇಳಲಾಗುತ್ತದೆ. ಇವು ಅವನ ಗುಣಸ್ವಭಾವಗಳು ಎಂದು ಒಪ್ಪಿಕೊಳ್ಳುವ ಹಾಗೆ ಮೇಲ್ನೋಟಕ್ಕೆ ಕಾಣುತ್ತವೆ ಕೂಡ. ಆದರೆ ಅವನ ಈ ಗುಣ ಸ್ವಭಾವಗಳು ಯಾವ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತವೆ ಎಂಬುದು ಮುಖ್ಯ. ಕಾರ್ಡೀಲಿಯಾ ಲಿಯರ್‌ನ ಅಕ್ಕರೆಯ ಮಗಳು. ಅವಳ ನಡತೆ, ಸ್ವಭಾವ, ಗುಣಗಳು ಅವನಿಗೆ ಅಚ್ಚುಮೆಚ್ಚು. ಆದರೆ ಆಕೆ ಅವನಿಗೆ ಇಷ್ಟವಾಗುವಂತೆ ತನ್ನ ಪ್ರೀತಿಯ ಭಾವನೆಗಳನ್ನು ಅಲಂಕಾರದ ಭಾಷೆಯಲ್ಲಿ ಹೇಳಬೇಕು. ಅವನ ಇಚ್ಛೆಯನ್ನು ನಿರಾಕರಿಸಿ ತನ್ನ ಮನಸ್ಸಿನಂತೆ ಅಭಿಪ್ರಾಯ ವ್ಯಕ್ತಪಡಿಸಿದರೆ ಆಗ ಅದು ಅವನಿಗೆ ಅಪಥ್ಯವಾಗುತ್ತದೆ. ಅದಕ್ಕೆ ವಿರುದ್ಧವಾಗಿ ಅವನ ಅರುಳುಮರುಳುತನ, ಅವಿವೇಕ, ದುಡುಕುತನ, ಒರಟು ಸ್ವಭಾವ, ಸಿಟ್ಟು-ಸೆಡವು, ಶಾಪ ಎಲ್ಲವೂ ಅಸ್ತ್ರವಾಗಿ ಬಳಕೆಯಾಗುತ್ತವೆ. ಹಿರಿಯ ಹೆಣ್ಣುಮಕ್ಕಳಾದ ಗಾನ್‌ರಿಲ್ ಮತ್ತು ರೀಗನ್ ಲಿಯರ್‌ನ ಇಚ್ಛೆಯಂತೆ ಅವರ ಅಭಿಪ್ರಾಯವನ್ನು ಹೇಳಿದರು. ಅವನ ಮನಸ್ಸು ಸಂತೋಷಪಡಿಸಿದರು. ಅವರ ಮಾತು ಮನಸ್ಸಿಗೆ ನೇರವಾಗಿತ್ತು ಅಥವಾ ಅವು ಬಣ್ಣದ ಮಾತುಗಳಾಗಿದ್ದವು ಎಂಬುದು ಅವನಿಗೆ ಮುಖ್ಯವಾಗಿರಲಿಲ್ಲ. ತೋರಿಕೆಯ ಮಾತು ಹುಸಿಹೋಗಿ ನಾಳೆ ಉಂಟಾಗುವ ಪರಿಣಾಮದ ಬಗ್ಗೆ ಆತನಿಗೆ ಯಾವ ಲಕ್ಷ್ಯವೂ ಇಲ್ಲ. ಲಿಯರ್‌ನಿಗಿದ್ದದ್ದು, ಮಕ್ಕಳು ರಾಜನಾದ ತನ್ನ ಮಾತು ಮೀರದೆ ವಿಧೇಯರಾಗಿ ನಡೆದುಕೊಳ್ಳಬೇಕು ಎಂಬ ನಿರೀಕ್ಷೆ. ಕಾರ್ಡೀಲಿಯಾಳ ಮನಸ್ಸಿಗೆ ನೇರ ನುಡಿವ ಮತ್ತು

ನಡೆವ ನಿಷ್ಠೆಯ ಜೀವನ ರಾಜನಿಚ್ಛೆಗೆ ಅನುಗುಣವಾಗಿರಬೇಕು, ಇಲ್ಲದಿದ್ದರೆ ಅದು ರಾಜ ವಿರೋಧಿ ಎಂಬುದು ಅವನ ನಿಲುವು. ಹಾಗಾಗಿಯೆ ಲಿಯರ್‌ನ ಪ್ರಕಾರ ಕಾರ್ಡೀಲಿಯಾಳ ನಿಲುವು ಒಣ ಜಂಭ ಮತ್ತು ಸೊಕ್ಕಿನ ನಡತೆಯಾಗಿದೆ. ಅವಳನ್ನು ಸಾಮ್ರಾಜ್ಯದ ಪಾಲು ಪಡೆಯಲು ಅಯೋಗ್ಯಳನ್ನಾಗಿ ಮಾಡುತ್ತದೆ. ಇದೇ ನಿಲುವು ಗಾನ್‌ರಿಲ್ ಮತ್ತು ರೀಗನ್‌ರಿಬ್ಬರೂ ಜೊತೆಗೂಡಿ ತಮ್ಮ ಆಳ್ವಿಕೆಗೆ ಆತಂಕಕಾರಿಯೆಂದು ಭಾವಿಸಿದ ಲಿಯರ್‌ನಿಂದ ರಕ್ಷಣೆ ಪಡೆಯಲು ಅವನ ಸಹಾಯಕ ಪಡೆಯನ್ನು ಕಡಿಮೆಗೊಳಿಸಲು ಪ್ರಯತ್ನ ಮಾಡಿದಾಗ, ಅವನನ್ನು ಉದಾಸೀನದಿಂದ ನಡೆದುಕೊಂಡು ಅಪಮಾನಿಸಿದಾಗ ಕೂಡ ವ್ಯಕ್ತವಾಗುತ್ತದೆ. ರಾಜನಾದ ತನ್ನಿಂದ ಉಪಕೃತರಾದ ಮಕ್ಕಳು ಕೃತಘ್ನರಾಗಿರುವುದು ಅವರ ನಡತೆಯಿಂದ ಅವನಿಗೆ ಕಾಣುತ್ತದೆ. ಅವರೊಂದಿಗೆ ಬಾಳಲು ಮನಸ್ಸು ಒಪ್ಪದೆ ಎದುರಾಗುವ ಸ್ಥಿತಿಯನ್ನು ಎದುರಿಸಲು ನಿರ್ಧರಿಸುತ್ತದೆ. ಎಲ್ಲರೂ ತನ್ನ ಅಧೀನರಾಗಿರಬೇಕು, ತನ್ನಿಂದ ಪಡೆದ ಉಪಕಾರಕ್ಕೆ ತನಗೆ ಪ್ರತ್ಯುಪಕಾರ ಮಾಡಬೇಕು, ಅವರು ಅದರ ಧನ್ಯತಾಭಾವದಲ್ಲಿ ತನಗೆ ವಿಧೇಯರಾಗಿರಬೇಕೆಂದು ಬಯಸುವ ಸ್ವಭಾವ ಲಿಯರ್‌ಸದು. ಅವನ ಈ ಸ್ವಭಾವಕ್ಕೆ ಅವಕಾಶ ದೊರೆಯದಾದಾಗ ಅವನ ನಡೆವಳಿಕೆಯಲ್ಲಿ ಸಮಸ್ಯೆ ಉಂಟಾಗುತ್ತದೆ. ಅವನ ಈ ಸಮಸ್ಯೆ ವ್ಯಕ್ತಿಧರ್ಮವನ್ನು ಅನುಸರಿಸುವುದರಿಂದ ಉಂಟಾಗಿದ್ದು. ಫ್ಯೂಡಲ್ ವ್ಯವಸ್ಥೆಯ ಸ್ವಹಿತಕೇಂದ್ರಿತ ದೃಷ್ಟಿಕೋನ ಮತ್ತು ನಿಲುವನ್ನು ಲಿಯರ್ ಬಿಟ್ಟುಕೊಡುವ ವರೆಗೂ ಇದಕ್ಕೆ ಪರಿಹಾರವೆಂಬುದು ದೂರದ ಮಾತಾಗಿ ಪರಿಣಮಿಸುತ್ತದೆ.

ಗಾನ್‌ರಿಲ್ ಮತ್ತು ರೀಗನ್ ಕಪಟಿಗಳು, ಸ್ವಾರ್ಥಿಗಳು, ವ್ಯಕ್ತಿಧರ್ಮ ಪಾಲಿಸುವವರು. ಆಸ್ತಿ ಅಧಿಕಾರಕ್ಕಾಗಿ ತಂದೆಯ ವಿರುದ್ಧ ಕೈಜೋಡಿಸಲೂ ಹಿಂಜರಿಯದವರು. ಲಿಯರ್ ಬಗೆಗೆ ಅವರ ಪ್ರೀತಿ ಅಷ್ಟಕ್ಕಷ್ಟೆಯಾದರೂ ಅವರು ತಂದೆಯ ಎದುರು ಆಡಿದ ಹೊಗಳಿಕೆಯ ಮಾತು ಸ್ವಹಿತ, ಸ್ವಸುಖ, ಸ್ವಲಾಭದ ದೃಷ್ಟಿಕೋನದ್ದು. ಅವರಿಗೆ ಅದೊಂದು ಉಪಾಯ. ಲಿಯರ್ ಬದುಕಿದ್ದಾಗಲೇ ಅವನ ಸಾಮ್ರಾಜ್ಯದ ಪಾಲು ಪಡೆದು ಅದನ್ನು ಆಳುವ ಉದ್ದೇಶ ಈಡೇರಿಕೆಯದು. ಅವರ ಈ ವ್ಯಕ್ತಿಗತ ಮನೋಧರ್ಮದಿಂದಲೆ ಮುಂದೆ ಅವರು ತಮ್ಮ ಗಂಡಂದಿರಿಗೂ ವಂಚನೆ ಮಾಡಲು ಮುಂದಾಗುತ್ತಾರೆ. ಅವರಿಬ್ಬರೂ ಎಡ್ಮಂಡ್‌ನಲ್ಲಿ ಆಸಕ್ತರಾಗುವಲ್ಲಿ ಪ್ರೇರೇಪಿತರಾಗುತ್ತಾರೆ. ಎಡ್ಮಂಡ್‌ನನ್ನು ತನ್ನವನನ್ನಾಗಿ ಮಾಡಿಕೊಳ್ಳುವ ಹಠದಲ್ಲಿ ಇಬ್ಬರೂ ವೈರಿಗಳಾಗುತ್ತಾರೆ. ಈ ವಿಷಯವಾಗಿ ಗಾನ್‌ರಿಲ್ ತನ್ನ ತಂಗಿಗೆ ವಿಷವುಣಿಸುವ ಹಂತ ತಲುಪುವುದಲ್ಲದೆ ತನ್ನ ಭಗ್ನಪ್ರೇಮ ಬಯಲಾದ ಸಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇವೆಲ್ಲ ಸರಳ ಸ್ವಭಾವದ ಲಿಯರ್ ಮತ್ತು ಕಾರ್ಡೀಲಿಯಾಳ ವಿರುದ್ಧ ಸೆಣಸಾಡುವ ಕಪಟತನ ಮೇಲುಗೈ ಸಾಧಿಸುವ ಕ್ರಮ.

ಇದರೊಂದಿಗೆ ಗ್ಲಾಸ್ಟರ್‌ನ ತೊತ್ತಿನ ಮಗನಾದ ಎಡ್ಮಂಡ್ ತನ್ನ ಹುಟ್ಟಿನ ಸ್ಥಿತಿಯಿಂದ ಉಂಟಾದ ಸಾಮಾಜಿಕ ಹೀನತೆಯ ವಿರುದ್ಧ ಹೋರಾಡುತ್ತಾನೆ. ಗ್ಲಾಸ್ಟರ್‌ನ ಮಗನಾದ ಎಡ್ಗರ್ ಮತ್ತು ತೊತ್ತಿನ ಮಗನಾದ ಎಡ್ಮಂಡ್ ಜನ್ಮದಿಂದ ಸೋದರರು. ಆದರೂ ಎಡ್ಮಂಡ್ ಸಾಮಾಜಿಕವಾಗಿ ತನ್ನ ಅಣ್ಣನ ಸಮಾನ ಸ್ಥಾನಮಾನವಿಲ್ಲದವನೆಂಬ ಪ್ರಜ್ಞಾವಂತಿಕೆ ಪಡೆದವನು. ಅವನು ಎಡ್ಗರ್‌ನ ಉತ್ತರಾಧಿಕಾರತ್ವದ ವಿರುದ್ಧ ಸಂಚು ಮಾಡುತ್ತಾನೆ. ಅವನ ವಿರುದ್ಧ ಅಪರಾಧದ ಬಲೆ ಹೆಣೆದು ಯಶಸ್ವಿಯೂ ಆಗುತ್ತಾನೆ. 'ನನ್ನ ಅದೃಷ್ಟ ಎಷ್ಟು ಕ್ರೂರವಾಗಿದೆ! ನಾನು ನ್ಯಾಯವಂತನಾಗಿರುವೆನಲ್ಲ ಎಂದು ಪಶ್ಚಾತ್ತಾಪಪಡಬೇಕಿದೆ' ಎಂದು ತನಗೆ ತಾನೆ

ತನ್ನ ಯಶಸ್ಸಿನ ಬಗ್ಗೆ ಕರುಬುವಷ್ಟು ಮೇಲಿನ ಹಂತಕ್ಕೆ ಏರುತ್ತಾನೆ. ಗಾನ್‌ರಿಲ್ ಮತ್ತು ರೀಗನ್‌ರ ವಿಶ್ವಾಸ ಪಡೆದು ಫ್ರಾನ್ಸ್ ವಿರುದ್ಧದ ಯುದ್ಧದಲ್ಲಿ ಅವರಿಬ್ಬರ ಪಡೆಯನ್ನು ಮುನ್ನಡೆಸಿ ಜಯ ಸಾಧಿಸುತ್ತಾನೆ. ಆದರೂ ಅವನು ಅನಸುರಿಸಿದ ಕಪಟದ ಮತ್ತು ವಂಚನೆಯ ಮಾರ್ಗವೇ ಅವನಿಗೆ ಮುಳುವಾಗಿಬಿಡುತ್ತದೆ. ಕಾಪಟ್ಯ ಜೀವನದ ಸುಳ್ಳು ಮತ್ತು ಬರಡುತನದಿಂದ ಅವನ ಜೀವನ ಸೀಮಿತ ಹಾಗೂ ಇಕ್ಕಟ್ಟಿನ ಮಾರ್ಗಕ್ಕೊಳಪಟ್ಟು ಕೊನೆ ಕಾಣುತ್ತದೆ. ಎಡ್ಮಂಡ್‌ನ ಹೋರಾಟ ಸಾಮಾಜಿಕ ಸ್ಥಾನಮಾನ ಮತ್ತು ಉನ್ನತ ಜೀವನಕ್ಕಾಗಿ ನಡೆದರೂ ಅದು ಗುಣ ಸಂಘರ್ಷದ ಭಾಗವಾಗಿ ಚಿತ್ರಿತವಾಗಿದೆ. ಭಾರತದಂತೆ ಸಾಮಾಜಿಕ ನ್ಯಾಯದ ಹೋರಾಟ ಹುಟ್ಟಿನ ಸ್ಥಾನಮಾನ ತಂದುಕೊಡುವ ಹೀನ ಸ್ಥಿತಿಗತಿಗಳನ್ನು ಬದಲಿಸುವ ಉದ್ದೇಶ ಹೊಂದಿರುವುದು ವಿಶ್ವದ ಎಲ್ಲೆಡೆ ನಡೆಯುವ ಸಾಮಾಜಿಕ ನ್ಯಾಯದ ಹೋರಾಟ ತುಳಿತಕ್ಕೊಳಪಟ್ಟವರ ಹೋರಾಟ ವಾಗಿರುತ್ತದೆ ಎಂಬುದನ್ನು ಕಾಣಿಸುತ್ತದೆ.

ಕಾರ್ಡೀಲಿಯಾ, ಕೆಂಟ್ ಮತ್ತು ಎಡ್ಗರ್ ಸರಳ ಸ್ವಭಾವದ ವ್ಯಕ್ತಿತ್ವದವರು. ಮೊದಲ ಇಬ್ಬರು ಲಿಯರ್‌ನಿಂದ ಹಾಗೂ ನಂತರದವನು ತನ್ನ ತಮ್ಮ ಎಡ್ಮಂಡ್‌ನಿಂದ ವಂಚನೆಗೆ ಒಳಗಾಗುತ್ತಾರೆ. ಆದರೆ ಕಾರ್ಡೀಲಿಯಾ ಮತ್ತು ಕೆಂಟ್ ಲಿಯರ್ ಬಗ್ಗೆ ತಮ್ಮ ಮನಸ್ಸಿನ ಹದ ಕೆಡಿಸಿಕೊಳ್ಳುವುದಿಲ್ಲ. ಅವರ ಬಗ್ಗೆ ಹಿಂದಿನ ಪ್ರೀತಿ, ನಿಷ್ಠೆ ಮತ್ತು ಭಕ್ತಿಯನ್ನು ಉಳಿಸಿಕೊಳ್ಳುವುದಲ್ಲದೆ ತಾವು ಮಗಳು ಮತ್ತು ಆಪ್ತ ಸೇವಕರಾಗಿರುವ ಹಿನ್ನೆಲೆಯಲ್ಲಿ ತಮ್ಮ ಅಧೀನತೆ, ಕರ್ತವ್ಯ, ನಿಷ್ಠೆ ಮತ್ತು ಪ್ರೀತಿ ಭಾವದ ನಿಲುವಿನಿಂದ ವಂಚನೆಗೆ ಒಳಗಾದ ಭಾವನೆಯನ್ನೂ ತಾಳುವುದಿಲ್ಲ. ಆದರೆ ಎಡ್ಗರ್‌ನ ಮನಃಸ್ಥಿತಿ ಇದೇ ಬಗೆಯದಲ್ಲ. ಅವನು ತನ್ನ ತಮ್ಮನ ಸಂಚಿಗೆ ಒಳಗಾಗಿ ತನ್ನ ಬದುಕನ್ನು ಕಳೆದುಕೊಂಡವನು. ಅದನ್ನು ಅವನಿಂದ ಕಸಿದುಕೊಳ್ಳುವ ತನಕ ಪಡಬಾರದ ಕಷ್ಟಗಳಿಗೆ ಒಳಗಾಗುತ್ತಾನೆ ಹಾಗೂ ಅದನ್ನು ಮರಳಿ ಪಡೆಯುತ್ತಾನೆ. ಎಡ್ಗರ್‌ಗೆ ಎಡ್ಮಂಡ್ ವಿರುದ್ಧದ ಹೋರಾಟ ತನ್ನ ಹಕ್ಕುಗಳನ್ನು ಮರಳಿ ಪಡೆಯುವುದಕ್ಕಾಗಿ ನಡೆಸುವ ಹೋರಾಟವಾಗಿದೆ. ಈ ಹೋರಾಟ ಗುಣ ಸ್ವಭಾವಗಳ ನೆಲೆಯಲ್ಲಿ ಸಾಮಾಜಿಕ ಜೀವನ ಮೌಲ್ಯ ಪ್ರತಿಪಾದನೆ ಮಾಡುವ ಕ್ರಮವಾಗಿ ರೂಪ ತಳೆಯುತ್ತದೆ. ನಾಟಕದ ಹಲವು ಸಂಘರ್ಷಗಳ ಕೇಂದ್ರಬಿಂದು ವಾಸ್ತವ ಮತ್ತು ತೋರಿಕೆಯ ಸತ್ಯವರಿಯಲು ಸೋಲುವ ಅಥವಾ ಸತ್ಯವರಿಯ ಲಾರದೆ ಅನಗತ್ಯ ಕಷ್ಟಪರಂಪರೆಗೆ ನಾಂದಿ ಹಾಡುವ ಲಿಯರ್‌ನೇ ಆಗಿರುವುದು ಈ ಎಲ್ಲ ಪರಿಣಾಮಗಳಿಗೆ ಕಾರಣವಾಗಿದೆ.

ಲಿಯರ್ ತನ್ನ ಸಾಮ್ರಾಜ್ಯವನ್ನು ತನ್ನ ಹೆಣ್ಣುಮಕ್ಕಳಿಗೆ ಪಾಲು ಮಾಡಿಕೊಡುವುದಕ್ಕೂ ಅವರು ತನ್ನನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಾರೆ ಎಂಬುದನ್ನು ಅವರ ಬಾಯಿಂದಲೇ ಕೇಳಿ ಆನಂದ ಪಡುವುದಕ್ಕೂ ಸಂಬಂಧ ಕಲ್ಪಿಸುತ್ತಾನೆ. ಇದೊಂದು ತಿಕ್ಕಲುತನದ ನಿರ್ಧಾರವೆಂದು ಮೇಲುನೋಟಕ್ಕೆ ಕಾಣುತ್ತದೆ. ಏಕೆಂದರೆ ಹೀಗೆ ಆತ ಆಲಿಸಲು ಬಯಸಿರುವ ಮಾತು ತಾನು ಹೆತ್ತ ಮಕ್ಕಳ ಮಾತುಗಳಾಗಿವೆ. ಯಾವ ತಂದೆ ತಾಯಿಯರಿಗೆ ತಾವು ಹೆತ್ತ ಮಕ್ಕಳ ಶಕ್ತಿ-ಸಾಮರ್ಥ್ಯ, ಇತಿಮಿತಿಗಳು, ಅರೆ-ಕೊರೆಗಳು, ಕೊರತೆ-ನ್ಯೂನತೆಗಳು, ದೋಷ-ಪರಿಹಾರ ತಿಳಿದಿರುವುದಿಲ್ಲ? ಆ ಮಕ್ಕಳ ಸ್ವಭಾವ, ಪ್ರವೃತ್ತಿ, ಮನಃಸ್ಥಿತಿ ಗೊತ್ತಿರುವುದಿಲ್ಲ? ಅವರನ್ನು ತಿದ್ದಿ ಅವರ ಬಾಳನ್ನು ಮತ್ತಷ್ಟು ಮೇಲ್ಮಟ್ಟಕ್ಕೇರಿಸುವ, ಅವರ ಶಕ್ತಿಯನ್ನು ಹೆಚ್ಚು ಮಾಡುವ, ಹತ್ತು ಜನರಿಗೆ ಹಿತವಾಗುವಂತೆ ಮಾಡುವ, ಸಮಾಜದ ಎದುರು ಬೆಳಗುವಂತೆ ಮಾಡುವ ಆಸಕ್ತಿ, ತುಡಿತ, ಮಿಡಿತಗಳಿರುವುದಿಲ್ಲ? ಮಕ್ಕಳು ಅಂದರೆ ತಂದೆ ತಾಯಿಯರು ತಾವೆ ಹುಟ್ಟಿಸಿದ,

ಮುದ್ದು, ತಿದ್ದು, ತೀಡಿದ ಬೊಂಬೆಗಳು. ಹಾಗಾಗಿ ಹೆತ್ತವರು ತಮ್ಮನ್ನು ಕುರಿತು ತಮ್ಮ ಮಕ್ಕಳ ಪ್ರೀತಿಪೂರ್ವಕ ಅಭಿಪ್ರಾಯ ಕೇಳಿ ಆನಂದಪಡುವುದು ವಿನೋದದಾಟದ ಭಾಗವಾಗಬಹುದು. ಆದರಿದು ನಾಟಕ ಸಂದರ್ಭದಲ್ಲಿ ಗಂಭೀರ ಸ್ವರೂಪ ಪಡೆದುಕೊಂಡಿದೆ. ಇದೊಂದು ವಿಚಿತ್ರ ಬಗೆಯ ಬಯಕೆಯಾಗಿ ಕಾಣುತ್ತದೆ.

ಈ ನಾಟಕದಲ್ಲಿ ಇಂಥ ಹೆತ್ತವರ ಸ್ಥಾನವನ್ನು ಅಲಂಕರಿಸಿರುವ ನಾಡದೊರೆ ಹಲವು ವರುಷಗಳ ಕಾಲ ದೇಶವನ್ನು ಆಳಿದವನು, ಮುನ್ನಡೆಸಿದವನು. ಆತ ಒಬ್ಬ ನುರಿತ ಮುತ್ಸದ್ದಿ, ರಾಜತಾಂತ್ರಿಕ ಕಲೆಯಲ್ಲಿ ನೈಪುಣ್ಯತೆ ಸಾಧಿಸಿದ ಅಪ್ರತಿಮ ರಾಜಕಾರಣಿ. ಆತ ಉದ್ದೇಶಪೂರ್ವಕವಾಗಿ ತನ್ನ ಹೆಣ್ಣುಮಕ್ಕಳು ತನ್ನ ಬಗೆಗೆ ಆಡುವ ಪ್ರೀತಿಯ ನುಡಿಗಳಿಗೂ ಅವರಿಗೆ ದೊರಕಿರುವ ಸಾಮ್ರಾಜ್ಯದ ಪಾಲಿನ ಪ್ರಮಾಣಕ್ಕೂ ಸಂಬಂಧ ಕಲ್ಪಿಸಿ ಅವರಲ್ಲಿ ಆಸೆ ಮೂಡಿಸಿದ್ದಾನೆ. ಅವರು ದೊರೆ ಬಗ್ಗೆ ಪ್ರೀತಿಯ ಮಾತುಗಳನ್ನಾಡುವಂತೆ ನಿರ್ಬಂಧಪಡಿಸಿದ್ದಾನೆ. ಅವರ ಮಾತು ತೋರಿಕೆಯದೊ ವಾಸ್ತವ ಮನಃಸ್ಥಿತಿಯ ಪ್ರತಿಬಿಂಬವೊ ಎಂದು ತಲೆ ಕೆಡಿಸಿಕೊಳ್ಳದ, ಸರಳ ಮತ್ತು ನೇರ ಸ್ವಭಾವದ ದೊರೆಗೆ ಸಾಮ್ರಾಜ್ಯದ ಆಗುಹೋಗುಗಳ ಹಾಗೆ ಕೌಟುಂಬಿಕ ಆಗುಹೋಗುಗಗಳು ಕೂಡ ರಾಜತಾಂತ್ರಿಕ ನಡೆಗೆ ಒಳಪಟ್ಟುದ್ದುದೆಂಬ ಗ್ರಹಿಕೆ ಎಟುಕದೆ ಹೋಗಿದೆ. ದೊರೆಗೆ ತಾನು ಆಲಿಸಲು ಬಯಸಿದ ಮಕ್ಕಳ ಪ್ರೀತಿಪೂರ್ವಕ ಮಾತು ತನ್ನ ಹೆಣ್ಣುಮಕ್ಕಳನವು ಎಂಬ ಪ್ರಜ್ಞಾವಂತಿಕೆ ಕೂಡ ಇಲ್ಲದೆ ಹೋಗಿದೆ. ತಂದೆ ಮಕ್ಕಳ ವಾತ್ಸಲ್ಯ, ಮಮತೆ ತುಂಬಿದ ಪ್ರೀತಿ ಲಿಂಗಭೇದದಾಚೆಗಿನದಾದರೂ ಲಿಂಗಭೇದವನ್ನು ಮರೆಯುವಹಾಗಿಲ್ಲವೆಂಬುದು ಕಾರ್ಡೀಲಿಯಾಳ ಮಾತುಗಳಲ್ಲಿ ವ್ಯಕ್ತವಾಗಿರುವುದು ಗಮನಾರ್ಹ. ಈ ಸೂಕ್ಷ್ಮವನ್ನು ಗಮನಕ್ಕೆ ತಂದುಕೊಳ್ಳದೆ ಹೋಗುವುದರಿಂದ ಈ ಕ್ರಿಯೆ ತಂದೆ ಮಕ್ಕಳಲ್ಲಿ ತಪ್ಪು ಕಲ್ಪನೆಗೆ ದಾರಿ ಮಾಡಿಕೊಡುತ್ತದೆ. ಅಥವಾ ಈ ಅವಕಾಶ ಹಿರಿಯ ಹೆಣ್ಣುಮಕ್ಕಳಿಗೆ ತಮ್ಮ ಉದ್ದೇಶ ಸಾಧನೆಗೊಂದು ಸಂದರ್ಭವಾಗಿ, ತಮ್ಮ ಪೂರ್ವಯೋಜಿತ ತಂತ್ರದ ಭಾಗವಾಗಿ ಬಳಕೆ ಮಾಡಲು ಅನುಕೂಲವಾಗಿ ಒದಗುತ್ತದೆ. ಲಿಯರ್‌ನ ಸಾಮ್ರಾಜ್ಯದ ಪಾಲು ಬಯಸಿದ ಅವರಿಬ್ಬರಿಗೂ ತಮ್ಮ ಪ್ರೀತಿ ಮಾತು ಬಣ್ಣದ ಮಾತುಗಳಾಗಿ ತೋರಿಕೆಯ ಪ್ರೀತಿಯಾಗಿ ಅಭಿವ್ಯಕ್ತಿಸಲು ಪೂರ್ವಯೋಜಿತವಲ್ಲವೆಂದು ನಂಬಿಸುವ ಸಾಂದರ್ಭಿಕ ಅವಕಾಶ ಉಂಟು ಮಾಡುತ್ತದೆ. ಲಿಯರ್ ತನ್ನ ಹಿರಿಯ ಮಕ್ಕಳ ತೋರಿಕೆಯ ಪ್ರೀತಿ ಮಾತುಗಳನ್ನೇ ಅವರ ವಾಸ್ತವ ಮನಃಸ್ಥಿತಿಯೆಂದು ನಂಬುತ್ತಾನೆ. ಏಕೆಂದರೆ ಹೊಗಳಿಕೆಯ ಮಾತು ತಂದುಕೊಡುವ ಸುಖಕ್ಕೆ ಈಗಾಗಲೆ ಲಿಯರ್ ತನ್ನನ್ನು ತಾನು ತೆತ್ತುಕೊಂಡುಬಿಟ್ಟಿದ್ದಾನೆ. ವಿವೇಕ ಮತ್ತು ಎಚ್ಚರಿಕೆಯ ಮನಃಸ್ಥಿತಿಯ ಬದಲು ತನ್ನ ಮನಸ್ಸಿಗೆ ಮುದನೀಡುವ ಮಾತುಗಳನ್ನು ಕೇಳಿಸಿಕೊಳ್ಳಲು ಮಾತ್ರ ತನ್ನ ಮನಸ್ಸನ್ನು ಸಿದ್ಧಪಡಿಸಿಕೊಂಡಿದ್ದಾನೆ. ತನ್ನ ಈ ಮನಃಸ್ಥಿತಿಗೆ ತಾಳೆಯಾಗದ, ತನ್ನ ಮೆಚ್ಚಿನ ಸರಳ ಮತ್ತು ನೇರ ಸ್ವಭಾವದ ಕಿರಿಯ ಮಗಳ ವಾಸ್ತವ ಮನಃಸ್ಥಿತಿ ಬಿಂಬಿಸುವ ಮಾತು ಸೊಕ್ಕಿನ ನಡೆಯಾಗಿ ಕಾಣುತ್ತದೆ. ಈ ಕುರಿತು ಲಿಯರ್‌ಗೆ ಅರಿವು ಮೂಡಿಸುವ ಕೆಂಟ್‌ನ ಪ್ರಯತ್ನ ದೊರೆತನದ ಅಹಂ ಮತ್ತು ಅಧಿಕಾರವನ್ನು ಅಸ್ತ್ರವಾಗಿ ಬಳಸಿಕೊಳ್ಳಲು ಎಡೆ ಮಾಡಿಕೊಡುತ್ತದೆ. ಈ ಮೂಲಕ ದೊರೆಯ ನಡೆಯನ್ನು ತಿದ್ದಲು ಹೊರಟ ನಿಲುವನ್ನು ಮಣಿಸುತ್ತದೆ. ಇದಕ್ಕಿಂತ ಮುಖ್ಯವಾಗಿ ಲಿಯರ್‌ನ ದೊರೆತನ ಮತ್ತು ತಂದೆತನದ ಅನುಭವ ಇಲ್ಲಿ ಕಾರ್ಯಪ್ರವೃತ್ತವಾಗಿ ವಿವೇಚನೆಯ ಭಾಗವಾಗದಿರುವುದು ಸೋಜಿಗವಾಗಿದೆ, ವಿಚಿತ್ರವಾಗಿದೆ. ಹೀಗಾಗಿಯೋ ಏನೋ ಒಟ್ಟಿನಲ್ಲಿ ಇದು ಎಲ್ಲಕ್ಕಿಂತ ಹಿರಿತನದ ಸೋಲಾಗಿ, ಅತೀವ ಆತ್ಮವಿಶ್ವಾಸದ ಸೋಲಾಗಿ, ಹೆಪ್ಪುಗಟ್ಟಿದ ಅಧಿಕಾರದ ಸೋಲಾಗಿ, ಜೀವನದ ಬದಲಾವಣೆಯ ಗತಿಗೆ ಮೂಲವಾಗಿದೆ. ತನ್ನ ಮಕ್ಕಳು ಮತ್ತು ಪರಿವಾರದವರು ತುಂಬಿದ ತನ್ನ ಜಗತ್ತನ್ನು

ಪಾರದರ್ಶಕವಾಗಿ ಕಾಣುವ ನೋಟ ಕಳೆದುಕೊಂಡ ಲಿಯರ್‌ನ ದೃಷ್ಟಿ ಕುರುಡಾಗಿ, ಅಪರಿಚಿತತನಕ್ಕೆ ಪಕ್ಕಾಗಿಬಿಟ್ಟಿದೆ.

ಹಾಗಾಗಿಯೆ ಲಿಯರ್ ತೋರಿಕೆಯ ಮಾತುಗಳಿಗೆ ಮರುಳಾಗಿ ಯಥಾರ್ಥ ಮಾತುಗಳನ್ನು ಸ್ವೀಕರಿಸದೆ ವಿರೋಧಿಸಿ ಉದ್ದೇಶಪೂರ್ವಕವಾಗಿ ಭಾವಾವೇಶಕ್ಕೊಳಗಾಗುವ, ದುಡುಕುವ, ಅವಿವೇಕದಿಂದ ನಡೆದುಕೊಳ್ಳುವ, ಸಿಟ್ಟಿಗೇಳುವ, ಅಧಿಕಾರದ ಬಲದಿಂದ ನಡೆದುಕೊಳ್ಳುವ, ಶಪಿಸುವ ಉಪಾಯಗಳಿಗೆ ಶರಣಾಗುವುದು ಆತ ತನ್ನ ಮನಸ್ಸಿಗೆ ಹಿತಕರವಾದ, ತಾನು ಬಯಸಿದ ಸ್ಥಿತಿಯನ್ನು ಪಡೆದುಕೊಳ್ಳಲು ಅನುಸರಿಸುವ ಒತ್ತಡ ಹೇರುವ ಕ್ರಮವಾಗಿದೆ. ಲಿಯರ್‌ನ ಮನಸ್ಸಿಗೆ ಹಿತವನ್ನುಂಟು ಮಾಡಿದ ತೋರಿಕೆಯ ಬಣ್ಣದ ಮಾತುಗಳು ಅವು ಯಾವುದೇ ವ್ಯಕ್ತಿಯ ಮನಸ್ಸಿನ ಮೇಲೆ ಉಂಟುಮಾಡುವ ಪ್ರಭಾವ, ಪರಿಣಾಮ ಏಕಪ್ರಕಾರದ್ದು. ಹೊಗಳಿಕೆಯ ಮಾತು ವಾಸ್ತವ ಸತ್ಯಕ್ಕಿಂತ ಹೆಚ್ಚು ಆಪ್ಯಾಯಮಾನ, ಪ್ರಿಯಕರ. ಲಿಯರ್ ಅದರ ಸೆಳೆತಕ್ಕೆ ಒಳಗಾಗಿದ್ದಾನೆ. ಇದು ಅವನ ಪ್ರೌಢ ವ್ಯಕ್ತಿತ್ವದಲ್ಲಿ ಅಡಕವಾಗಿರುವ ದೌರ್ಬಲ್ಯವನ್ನು ಸೂಚಿಸುತ್ತದೆ.

ತಾನು ಮತ್ತೊಬ್ಬರಿಗೆ ಎಷ್ಟರ ಮಟ್ಟಿಗೆ ಇಷ್ಟದವನೆಂದು ತಿಳಿದುಕೊಳ್ಳುವ ಬಯಕೆ ಲಿಯರ್‌ನ ದುರ್ಬಲ ಮನಸ್ಸಿನ ಪ್ರತೀಕ. ಹಾಗೆ ನೋಡಿದರೆ ಮಾನವ ತಾನು ಇನ್ನೊಬ್ಬರ ಮೆಚ್ಚುಗೆಯ ವಸ್ತುವಾಗಲು ಎಲ್ಲ ಕಾಲಕ್ಕೂ ಮಾಡುತ್ತ ಬಂದಿರುವ ಸರ್ಕಸ್ಸುಗಳೆಲ್ಲ ಅವನ ದುರ್ಬಲ ಮನಸ್ಸಿನ ಪ್ರತಿಬಿಂಬವೆ ಆಗಿದೆ. ಲಿಯರ್‌ನದು ಕೂಡ ಇಂಥ ಮಾನವ ಸಹಜ ದೌರ್ಬಲ್ಯ. ಅವನು ತೋರಿಕೆ ಮತ್ತು ವಾಸ್ತವಗಳ ನಡುವಿನ ಅಂತರ ಮತ್ತು ವ್ಯತ್ಯಾಸಗಳನ್ನು ಗುರುತಿಸುವಲ್ಲಿ ಸೋಲುವುದು, ಹಿರಿಯ ಹೆಣ್ಣುಮಕ್ಕಳ ಬಣ್ಣದ ಮಾತುಗಳನ್ನು ಯಥಾರ್ಥ ನೈಜಸ್ಥಿತಿಯೆಂದು ಒಪ್ಪುವುದು, ಕಿರಿಮಗಳ ವಾಸ್ತವ ಮನಃಸ್ಥಿತಿಯನ್ನು ಒಣ ಜಂಭದ, ಅವಿನಯದ, ಸೊಕ್ಕಿನ ಮನಃಸ್ಥಿತಿಯೆಂದು ಗ್ರಹಿಸುವುದು ಇದರ ಪರಿಣಾಮವೇ ಆಗಿದೆ. ಇದು ಲಿಯರ್‌ನ ದುರಂತಕ್ಕೆ ಮೂಲ. ನಾವು ಯಾರಿಗೆ ಎಷ್ಟು ಪ್ರಿಯರೆಂಬುದನ್ನು ಅರಿಯುವ ಪ್ರಯತ್ನವೆ ಸ್ವರತಿ ಸಂಪ್ರೀತಿಯ ಸ್ವರೂಪದ್ದು. ಸ್ವಕೇಂದ್ರಿತ ವ್ಯಕ್ತಿಧರ್ಮ ಪ್ರೇರಿತವಾದದ್ದು. ಈ ಸಣ್ಣ ಸಂಗತಿಗೆ ಪ್ರಾಮುಖ್ಯತೆ ನೀಡುವುದು, ಅದನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನ ಮಾಡುವುದು ಎಲ್ಲ ಬಗೆಯ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆಂದು ಈ ನಾಟಕ ತಿಳಿಯಪಡಿಸುತ್ತದೆ. ಮಾನವನ ಸ್ವಹಿತದ ಪ್ರಜ್ಞೆ ಅವನನ್ನು ತಪ್ಪು ನಿರ್ಧಾರಗಳಿಗೆ ಈಡು ಮಾಡುತ್ತದೆ ಹಾಗೂ ಜೀವನಕ್ರಮ ಹೇಗೆ ಹಾದಿ ತಪ್ಪುತ್ತದೆ ಎಂಬುದನ್ನು ನಾಟ್ಯೀಕರಿಸುತ್ತದೆ. ಜೀವನ ಕಟ್ಟಿಕೊಳ್ಳುವ ಕ್ರಿಯೆಯಲ್ಲಿ 'ಎಚ್ಚರಿಕೆ' ಮತ್ತು 'ವಿವೇಕದ ನಡೆ' ವಹಿಸುವ ಸೂಕ್ಷ್ಮ ಪಾತ್ರದ ಮಹತ್ವವನ್ನು ಮನದಟ್ಟು ಮಾಡುತ್ತದೆ.

ಕೊನೆ ಮಾತು :

ಆರಂಭದಿಂದ ನಾಟಕ ಉದ್ದಕ್ಕೂ ಲಿಯರ್‌ನ ದೊರೆತನದ ಛಾಪು ಪ್ರಖರವಾಗಿದೆ. ನಾಟಕ ಸಾಗುತ್ತ ಹೋದಂತೆ ಅದರ ಪರಿಣಾಮವಾಗಿ ಅವನಿಗೆದುರಾಗುವ ವಾಸ್ತವ ಸ್ಥಿತಿಗತಿಗಳು ಮೈಪಡೆಯತೊಡಗುತ್ತವೆ. ದೊರೆತನದ ರಾಜಕೀಯ ಅಧಿಕಾರದ ಸಾಂಸ್ಥಿಕ ವ್ಯಕ್ತಿತ್ವದಿಂದ ಲಿಯರ್‌ನ ವೈಯಕ್ತಿಕ ವ್ಯಕ್ತಿತ್ವದ ಇತಿಮಿತಿಗಳು ಹಾಗೂ ಅನುಭವದ ಕಡೆಗೆ ಈ ನಾಟಕ ಚಲಿಸುತ್ತದೆ. ಹಾಗಾಗಿ ಈ ನಾಟಕವನ್ನು 'ದೊರೆ ಲಿಯರ್' ಎಂದು ಕರೆಯಲಾಗಿದೆ. ಲಿಯರ್ ಮೊದಲಿಗೆ 'ದೊರೆ' ನಂತರ 'ಲಿಯರ್' ವ್ಯಕ್ತಿಯಾಗಿ ಮಾರ್ಪಾಡು ಹೊಂದುವ ಅಭಿವ್ಯಕ್ತಿಯಾಗಿದೆ ಇದು. ಅಲ್ಲದೆ 'ದೊರೆ' ಕೇವಲ ರಾಜಕೀಯ ಸ್ಥಾನಮಾನ ಮತ್ತು ಅಧಿಕಾರ ಸಂಕೇತಿಸುವ ಪದವಾಗಿರದೆ, ಅದು ಲಿಯರ್‌ನ ವ್ಯಕ್ತಿತ್ವ ಒಳಗೊಂಡಿರುವ ಐಲುತನ, ಹುಚ್ಚುತನ, ತಿಕ್ಕಲುತನಗಳ ಉಪಾಯ ಬಿಂಬಿಸುವ ಗುಣವಾಚಕವಾಗಿಯೂ ಒಪ್ಪುತ್ತದೆ.

✣ ಡಾ. ಶ್ರೀಧರ ಪಿಸ್ಸೆ : ದೇಸಾಯಿ ಓಣಿ, ಕಮಲಾಪುರ-೫೮೩ ೨೨೧ (ಬಳ್ಳಾರಿ) ✣

ನನ್ನಪ್ಪ ನನ್ನವ್ವ

ಸುಮಿತ್ರಾ ಕುಂಬಾರ

ಪ್ರಾತಃಕಾಲದ ಐದು ಗಂಟೆ. ಊರೆಲ್ಲಾ ಇನ್ನೂ ನಿದ್ರೆಯಲ್ಲಿ ಮುಳುಗಿದೆ. ಇದಕ್ಕೆ ನಾನೂ ಹೊರತಲ್ಲ. ಕತ್ತಲೆ ಗರ್ಭವನ್ನು ದಾಟಿ ಬರುವ ಸೂರ್ಯ ಕಿರಣದಂತೆ, ಬ್ರಾಹ್ಮೀ ಮುಹೂರ್ತದಲ್ಲಿ ಗುರುಕುಲದ ಪ್ರಾಂಗಣದಲ್ಲಿ ಪಲ್ಲವಿಸಿದ ನಾದಲಹರಿಯಂತೆ

ಗಾಂಧಿ ಅಜ್ಜನ ರಾಟಿಯು ನಮಗೆ
ಸ್ವರಾಜ್ಯ ಗಳಿಸಿತ್ತು;
ಜಾತಿ–ಮತಗಳ ಭೇದವ ತೊರೆದು
ಒಂದಾಗಿ ಸಾಗಿತ್ತು;
ಸತ್ಯ ಅಹಿಂಸೆ ತ್ಯಾಗಗಳಿಂದ
ಶಾಂತಿಯ ತೋರಿತ್ತು

ಈ ಹಾಡಿನ ಜೊತೆಗೆ ರಾಟಿಯು ಗಿರ್ ಗಿರ್ ಗಿರಾಟವು ಬೆರತು ನನ್ನ ನಿದ್ರೆಯ ಜಡತೆಯನ್ನು ಕಳಚಿತ್ತು. ಮುಸುಕು ಹಾಕಿದ ಕೌದಿಯನ್ನು ಸರಿಸಿ ಕಣ್ಣ ಕಿಂಡಿಯಿಂದ ನೋಡಲು ಅಪ್ಪಾಳೆ – ಚಪ್ಪಾಳೆ ಹಾಕಿ ಕುಳಿತು 'ಅಣ್ಣಾರಿ' (ಅಪ್ಪನನ್ನು ನಾವು ಕರೆಯುತ್ತಿದ್ದುದು ಹೀಗೆ) ರಾಟಯಿಂದ ಏಕಾಗ್ರ ಚಿತ್ತದಿಂದ ನೂಲುತ್ತಿದ್ದಾರೆ. ಬಲಗೈಯಿಂದ ರಾಟಿ ತಿರುಗಿಸುತ್ತ, ಎಡಗೈ ಯಿಂದ ಎಳೆ ಎಳೆದು ತಕಲಿಗೆ ಸುತ್ತುವ ಲಯಬದ್ಧವಾದ ಮೋಜಿನಾಟವನ್ನು ಅವರ ತೊಡೆಯ ಮೇಲೆ ಕುಳಿತು ಅವ್ಯಾಹತವಾಗಿ ವೀಕ್ಷಿಸುತ್ತಿರುವ ಮರಿ ಬೆಕ್ಕು ಹಾಗೂ ಈ ಏಕಾಗ್ರತೆಯನ್ನು ಮೇಳೈಸಿ ಕೊಂಡು ಹೊರಹೊಮ್ಮುತ್ತಿದ್ದ ಹಾಡು ಜೋಗುಳ ಪದದಂತೆ ನನ್ನ ಕಣ್ಣಿಗೆ ಮಂಪರು ತರಿಸಿ ಪುನಃ ಸಕ್ಕರೆಯ ನಿದ್ರೆಗೆ ತಳ್ಳಿತ್ತು. ಇದು ಅವರ ನಿತ್ಯ ಪೂಜೆ.

ನನ್ನ ಅಪ್ಪ ಎಲ್ಲರಂತಲ್ಲ. ಅವರದೇ ಆದ ಅಪರೂಪದ ವ್ಯಕ್ತಿತ್ವ ಹೊಂದಿದವರು. ಅಪ್ಪಟ ಗಾಂಧೀವಾದಿ, ಶಿಸ್ತಿನ ಸಿಪಾಯಿ. ಬೆಳಗ್ಗೆ ಎದ್ದಾಗ ಹಾಸಿಗೆ ಹೊದಿಕೆ ಮಡಚುವದರಿಂದ ರಾತ್ರಿ ಮಲಗುವ ವರೆಗೂ ಹಾಸುಹೊಕ್ಕಾಗಿತ್ತು. ನಿದ್ರೆಯೂ ಅಷ್ಟೆ, ನಿಶ್ಚಿತ ವೇಳೆ, ನಿಶ್ಚಿತ ಅವಧಿ ಮಾತ್ರ ನನಗೆ ತಿಳುವಳಿಕೆ ಬಂದಾಗ ಅವರು 'ಕುಂಬಾರ ಗುರೂಜಿ' ಎಂದು ಕರೆಯಲ್ಪಡುತ್ತಿದ್ದರು. ಮಿತ ಭಾಷಿ, ಮೃದು ಹೃದಯಿ. ಎಲ್ಲರನ್ನೂ ವಯಸ್ಸು ಹಾಗೂ ಲಿಂಗ ತಾರತಮ್ಯವಿಲ್ಲದೆ 'ರೀ' ಎಂದು ಬಹುವಚನದಿಂದ ಕರೆಯುತ್ತಿದ್ದರು. ಅಂತೆಯೇ, 'ದುಂಡಪ್ಪ ಮಾಸ್ತರರ ಮಗಳೇನs, ಅವ್ನಾ ಆಕಳಂಥಾ ಮನಸ್ಯಾ. ಹಾದೀ ಮ್ಯಾಗ ಹೊಂಟ್ರ ಹೆಂಗಸ್ರಗೆ, ಹುಡುಗರ್‍ಗೆ ಸಹಿತ ಹಾದಿ ಬಿಟ್ಟ ದಂಡಿಂದ ನಡ್ಯಾವ್ನ' ಎಂದು ಈಗಲೂ ಅವರ ಸಮಕಾಲೀನ ಹಿರಿಯರು ಹೇಳುತ್ತಾರೆ.

ಅವರು ಯಾವಾಗ್ಲೂ ತೊಡುತ್ತಿದ್ದುದು ಖಾದಿ ಬಟ್ಟೆ. ಅದೂ ಕೊಂಡು ತಂದ ಬಟ್ಟೆಯಲ್ಲ ಎನ್ನುವುದೆ ವಿಶೇಷವಾದದ್ದು. ತಾವೆ ಕೈರಾಟಿಯಿಂದ ನೂತು ನೇಯಿಸಿದ ಧೋತಿ ಹಾಗೂ ನೆಹರು ಶರ್ಟ ತೊಡುತ್ತಿದ್ದರು. ಅಷ್ಟು ಮಾತ್ರವಲ್ಲ ಸಮಕಾಲೀನ ಗೆಳೆಯರಿಗೆ ಹಾಗೂ ಸಹೋದ್ಯೋಗಿಗಳಿಗೆ ವರ್ಷಕ್ಕೊಂದು ಜೊತೆ ಬಟ್ಟೆ ಕೊಡುತ್ತಿದ್ದರು. ಹುಬ್ಬಿ ರಾಷ್ಟ್ರಧ್ವಜ ತಯಾರಿಸಲು ನೂಲು ಕೊಡುತ್ತಿದ್ದರು. ಅವರು ಕೆಲಸ ಮಾಡಿದ ಶಾಲೆಯಲ್ಲಿ ಹಾಗೂ ಸುತ್ತಮುತ್ತಲಿನ ಸಂಘ ಸಂಸ್ಥೆಗಳಲ್ಲಿ ಅವರು ಕೊಟ್ಟ ರಾಷ್ಟ್ರಧ್ವಜಗಳು ಈಗಲೂ ರಾಷ್ಟ್ರೀಯ ಹಬ್ಬಗಳಲ್ಲಿ ಹಾರಾಡಿ ಅವರ ದೇಶಪ್ರೇಮವನ್ನು ಸಾರುತ್ತಿವೆ. ಅವರು ಆಚರಿಸುತ್ತಿದ್ದ ದಸರಾ ಹಬ್ಬದ 'ಖಂಡೆ ಪೂಜೆ' (ಆಯುಧ ಪೂಜೆ) ರಾಟಿ, ತಕಲಿ, ನೂಲಿನ ಖಂಡಿಕೆ ಇವುಗಳಿಗೆ ಸಲ್ಲಿಸುವುದು ತುಂಬ ಔಚಿತ್ಯಪೂರ್ಣವಾಗಿರುತ್ತಿತ್ತು. ಇಂದಿಗೂ ಅವೆಲ್ಲ ನಮ್ಮ ಮನೆಯಲ್ಲಿವೆ. ಆದರೆ ಅವುಗಳನ್ನು

ಮೀಟಿದ ಕೈಗಳಿಲ್ಲ. ಅವರು ನೂತು ನೂಲಿನ ಖಂಡಿಕೆ ಹಾರವಾಗಿ, ಅವರು ಗುರುಗಳನ್ನಾಗಿಸಿಕೊಂಡ ಮಹಾತ್ಮಾಜಿಯವರ ಭಾವಚಿತ್ರಕ್ಕೆ ತೊಡಿಸುವ ರೂಢಿಯನ್ನು ನಾವು ಈಗಲೂ ಇರಿಸಿಕೊಂಡಿದ್ದೇವೆ. ಇದರಿಂದ ನನ್ನಪ್ಪ ಸಂತೃಪ್ತಗೊಳ್ಳುವರೆಂಬ ಆಶಯ ನಮ್ಮದಾಗಿದೆ.

ಅಪ್ಪನನ್ನು ಕಳೆದುಕೊಂಡು ಇಪ್ಪತ್ತಕ್ಕೂ ಹೆಚ್ಚು ವರ್ಷಗಳು ಸಂದಿವೆ. ಈ ಅವಧಿಯ ಅಂತರ ಒಡನಾಟದ ನೆನಪುಗಳನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಅಮೂಲ್ಯ ಆಸ್ತಿಯಂತೆ ಶುಭ್ರ ಚೌಕಾದ ಖಾದಿ ಬಟ್ಟೆಗಳಲ್ಲಿ ಕಟ್ಟಿದ ದೊಡ್ಡ ದೊಡ್ಡ ಪುಸ್ತಕಗಳ ಗಂಟುಗಳು ಕೋಕೆ (ದೊಡ್ಡ ಕಟ್ಟಿಗೆ ಪೆಟ್ಟಿಗೆ) ತುಂಬಿವೆ. ಅವರ ಮರಣಾನಂತರ ಕುತೂಹಲದಿಂದ ನೋಡುತ್ತಿದ್ದಾಗ ಅವರ ಮುಲ್ಕಿ ಪರೀಕ್ಷೆಯ ಸರ್ಟಿಫಿಕೇಟ್ ದೊರೆಯಿತು. ಅದರಲ್ಲಿ ನಮೂದಾದ ಇಸ್ವಿಯಿಂದ ನಮ್ಮಪ್ಪ ಹುಟ್ಟಿದ್ದು ೧೯೧೬ ರಲ್ಲಿ ಎಂದು ತಿಳಿಯಿತು. ಅದು ದೊರೆತಾಗ ನಮಗೆ ಮಹತ್ವದ ಪ್ರಾಚ್ಯವಸ್ತು ದೊರೆತಷ್ಟು ಸಂಭ್ರಮವಾಯಿತು. ಈಗಿನ ಸರ್ಟಿಫಿಕೇಟುಗಳಿಗಿಂತ ನಾಲ್ಕು ಪಟ್ಟು ದೊಡ್ಡದಾದ ದಪ್ಪ ಹಾಳೆಯ ಅದರಲ್ಲಿ ಅಕ್ಷರಗಳು ಮಸುಕಾಗಿದ್ದರೂ ತಿಳಿಯುವಂತಿವೆ. ಅದು ಅಂದಿನ ಮುಂಬಯಿ ಕರ್ನಾಟಕ ಸರಕಾರದಿಂದ ಕೊಡಮಾಡಿದ್ದು.

ಹಲವರ ಜೀವನ ಸುಖದ ಸುಪ್ಪತ್ತಿಗೆ. ಆದರೆ ಕೆಲವರ ಬಾಳು ಮುಳ್ಳಿನ ಹಾಸಿಗೆ. ಅಪ್ಪ ಎರಡನೇ ಸಾಲಿಗೆ ಸೇರಿದವರು. ತಾವು ಮುಳ್ಳಿನ ಮೇಲೆ ನಡೆದು ಅವಲಂಬಿತರಿಗೆ ಹೂವಿನ ಹಾಸಿಗೆ ಹಾಸಿದರು. ಅವರು ಹೆಚ್ಚಿಗೆ ಕಲಿತವರಲ್ಲ. ಮುಲ್ಕಿ ಮುಗಿಸುವುದಕ್ಕೆ ಭಗೀರಥ ಪ್ರಯತ್ನ ಪಟ್ಟರಂತೆ. ಅಂದು ಕೃಷಿ ಪ್ರಧಾನ ಅವಿಭಕ್ತ ಕುಟುಂಬದಲ್ಲಿ ಶಾಲೆಗೆ ಕಳಿಸುವುದಕ್ಕೂ ಪ್ರತಿಕೂಲ ವಾತಾವರಣವಿತ್ತು. ಆದರೆ ಶಾಲೆ ಕಲಿಯುವ ಅಪ್ಪನ ಅಪಾರ ಹಂಬಲದಿಂದ ಅವರ ಗುರುಗಳಾದ ವಿರೂಪಾಕ್ಷ ಮಲ್ಲೊಳ್ಳಿ ಇವರ ಸೇವೆ ಮಾಡಿ (ನೀರು ತರುವುದು, ತಲೆ ಮೇಲೆ ೪-೫ ಮೈಲಿಯಿಂದ ಕಟ್ಟಿಗೆ ಹೊತ್ತು ತರುವುದು ಇತ್ಯಾದಿ) ಕಲಿತರಂತೆ. ಮುಲ್ಕಿ ಪರೀಕ್ಷೆ ಕಟ್ಟಲು ಜಿಲ್ಲಾ ಸ್ಥಳ(ಬೆಳಗಾವಿ)ಕ್ಕೆ ನಮ್ಮೂರಿನಿಂದ ಎಪ್ಪತ್ತು ಮೈಲಿ ದೂರದ ದಾರಿ ಹೋಗಬೇಕಾಗಿತ್ತು. ಅಲ್ಲಿಯವರೆಗೆ ನಡೆದು ಹೋಗಿ ಪರೀಕ್ಷೆ ಕಟ್ಟಿದರಂತೆ. ಅಂಥ ತಪಸ್ಸು ಅವರಿಗೆ ಮಾತ್ರ ಸಾಧ್ಯ. ಗುರುಗಳ ಮೇಲೆ ಅಪಾರ ಭಕ್ತಿ, ಶ್ರದ್ಧೆ ಹೊಂದಿದವರು. ಎಂದೂ ವಿಚಲಿತರಾಗದ ಅಪ್ಪ ಗುರುಗಳ ಮರಣದ ಸುದ್ದಿ ಕೇಳಿ ಚಿಕ್ಕ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತದ್ದು, ಧೋತರದ ಅಂಚಿನಿಂದ ಕಣ್ಣೀರನ್ನೊರಸಿಕೊಂಡದ್ದು ಅವ್ವ ನೆನೆಸಿಕೊಳ್ಳುತ್ತಾಳೆ.

ಅದೇ ಹೊತ್ತಿಗೆ ಸ್ವಾತಂತ್ರ್ಯ ಹೋರಾಟದ ಅಲೆ ದೇಶದಲ್ಲಿ ಪಸರಿಸಿತ್ತು. ರಾಷ್ಟ್ರಪಿತನ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಿದರು. ಹೋರಾಟ ಕೊನೆಗೊಂಡು ದೇಶ ಸ್ವತಂತ್ರವಾಗಿದ್ದೂ, ನಮ್ಮಜ್ಜ ಸಾವನ್ನಪ್ಪಿದ್ದೂ ಒಂದೇ ವರ್ಷದಲ್ಲಿ. ಆವಾಗ್ಗೆ ಅಪ್ಪ ಸಂಸಾರದ ಹೊರೆ ಹೊರಬೇಕಾಯಿತು. ಅದು ಖಾಲಿ ಮನೆಯ ಅವಿಭಕ್ತ ಕುಟುಂಬದ ಹಿರಿ ಮಗನ ಜವಾಬ್ದಾರಿಯಾಗಿತ್ತು. ಅದೇ ಕಾಲಕ್ಕೆ ಅವರ ಮದುವೆ ಅಂದರೆ ಹೊರುವ ಹೆಗಲಿಗೆ ಮತ್ತೊಂದು ಹೊರೆ. ನನ್ನವ್ವ ಅವರ ಸೋದರ ಸೊಸೆ. ಅವರ ಅಕ್ಕನ ಮಗಳು. ಅವ್ವನನ್ನು ಹೆತ್ತ ನಮ್ಮಜ್ಜಿ ಸತ್ತಳಂತೆ. ಹೆತ್ತವ್ವೆಯನ್ನು ಸಾಯಿಸಿದ ಕರಗಾಲದವಳು (ಕೆಟ್ಟ ಕಾಲಗುಣದವಳು) ಎಂದು ಈ ಮನೆಯ ಅಜ್ಜಿ (ಅಪ್ಪನ ಅವ್ವ) ಅವಳನ್ನು ಮನೆತುಂಬಿಸಿಕೊಳ್ಳಲು ಒಪ್ಪಲಿಲ್ಲ. ಆಗ ಗಾಂಧೀತತ್ವದ ಮೂಢ ನಂಬಿಕೆಯಿಂದ ದೂರವಾದ ಅಪ್ಪ ಅವಳನ್ನು ಮದುವೆಯಾದರಂತೆ. ಹೀಗಾಗಿ ನನ್ನವ್ವೆ ಮತ್ತು ಅವರ ಮಧ್ಯೆ ಇಪ್ಪತ್ತು ವರ್ಷಗಳ ಅಂತರ. ಅವರ ಕಾಲಕ್ಕೆ ಇದು ಸಾಮಾನ್ಯವೂ ಹೌದು.

ಅವ್ವ ಹುಟ್ಟುವಾಗಲೇ ಪರದೇಶಿ. ನಂತರ ಮಲತಾಯಿ ಕೈಯಲ್ಲಿ ಬೆಳೆದವಳು. ಅವಳ ಬಾಲ್ಯದ ಅನುಭವಗಳ ನೆನಪನ್ನು ಕೆದಕಿದಾಗ 'ಬಾಲನಾಗಮ್ಮ' ಪಟ್ಟ ಪಾಡು ನೆನಪಾಗುತ್ತದೆ. ಬರಿಗಾಲಲ್ಲಿ, ಅರೆಹೊಟ್ಟೆಯಲ್ಲಿ ದನ ಕಾಯುತ್ತ ಗಿಡಮಂಗನಾಟ ಆಡುತ್ತಿದ್ದ ಬಾಲ್ಯದಲ್ಲೇ

ಮದುವೆಯಾಯಿತು. ಇನ್ನು ಇಲ್ಲಿ ಸೇರಿದ ಮನೆ ಬೆಂಕಿಯಿಂದ ಜಾರಿ ಬಾಣಲೆಗೆ ಬಿದ್ದಂತೆ. ನಮ್ಮ ಅಜ್ಜಿ (ಅಪ್ಪನ ಅವ್ವ) ನಸುಕಿನ ಮೂರು ಗಂಟೆಗೆ ಜೋಳ ಬೀಸಲು ಎಬ್ಬಿಸುತ್ತಿದ್ದಳಂತೆ. ಅವಳು 'ಅವಾವ ನಿಮ್ಮ ಜ್ವಾಳ ಉಳಿದಾವ ನಮ್ಮ ಹಾಡs' ಎಂದು ಹಾಡುತ್ತಾ ಕಲ್ಲು ನಿಲ್ಲಿಸಿದಾಗ ಅವಳ ತೊಡೆಯ ಮೇಲೆ ತಲೆ ಇಟ್ಟು ನಿದ್ರಿಸುತ್ತಿದ್ದ ನನಗೆ ಜೋಳ ಇಷ್ಟು ಬೇಗ ಯಾಕೆ ಮುಗಿದವು ಎನಿಸುತ್ತಿತ್ತು.

ಅವ್ವನ ಹೆಸರು ಗೌರಿ. ಆ ಹೆಸರಿಗೆ ಘನತೆಯನ್ನು ತಂದುಕೊಟ್ಟ ಜಾನಪದ ಗರತಿ. ಗೌರ ವರ್ಣದ ಅಗಲ ಮುಖ. ಹಣೆಯ ಮೇಲೆ ಅಚ್ಚೊತ್ತಿದ ವಿಭೂತಿ ಧಾರಣ. ಕಾಸಿನಗಲದ ಕುಂಕುಮ. ಮುತ್ತಿನ ಮೂಗುತಿ. ಕಿವಿಯಲ್ಲೂ ಮುತ್ತಿನ ಹೂವು. ಕೈ ತುಂಬ ಹಸಿರು ಬಳೆ. ಕಾಲ್ಬೆರಳು ಕಟ್ಟಿದ ಬೆಳ್ಳಿ ಕಾಲುಂಗುರು. ಭಿಲ್ಲಿ. ತಲೆಯ ಮೇಲೆ ಸೆರಗು ಹೊದ್ದು, ತಲೆಯ ಮೇಲೊಂದು, ಸೊಂಟದ ಮೇಲೊಂದು ಕೊಡ ಹೊತ್ತು ಮಾಸದ ನಗುಮುಗದಿಂದ ರಸ್ತೆಯಲ್ಲಿ ಬರುತ್ತಿದ್ದರೆ ವೈಕುಂಠದಿಂದ ಸಾಕ್ಷಾತ್ ಲಕ್ಷ್ಮಿ ಸಾಗಿ ಬಂದಂತೆ ತೋರುತ್ತಿತ್ತು. ಅವಿಭಕ್ತ ಕುಟುಂಬದ ಜೋಣೆಗಾರಿಕೆ ಹೊತ್ತವಳು. ನೆರೆಹೊರೆಯವರೊಂದಿಗೆ ಹಿತಮಿತವಾಗಿ ಕಲೆತು, ಕಷ್ಟ ಸುಖಿಗಳಿಗೆ ಸ್ಪಂದಿಸಿದವಳು. ಚಿಕ್ಕಪ್ಪಂದಿರಿಗೆ ಆತ್ಮೀಯ ವೈಣಿಯಾಗಿ, ಅಜ್ಜ ಅಜ್ಜಿಯರಿಗೆ ಕಾಳಜಿಯ ಮಗಳಾಗಿ ಸೇವೆ ಮಾಡಿದವಳು. ನಿಲ್ಲದ ಸಮಯ ಬರುತ್ತಿದ್ದಂತೆಯೇ ನನ್ನ ನಂತರ ಕ್ರಮವಾಗಿ ನಾಲ್ವರು ತಮ್ಮಂದಿರಿಗೆ ಒಡಲಾಸರೆ ನೀಡಿದವಳು.

ಈ ಮೊದಲೇ ಹೇಳಿದಂತೆ ಗಾಂಧಿವಾದಿಯಾದ ಅಪ್ಪ ಲಿಂಗಭೇದ, ಜಾತಿಭೇದ ಮೆಟ್ಟಿ ನಿಂತವರು. ನನ್ನನ್ನು ಮಗಳಾಗಿ ಬೆಳೆಸದೇ ಮಗನಾಗಿ ಬೆಳೆಸಿದರು. ಚಿಕ್ಕಂದಿನಲ್ಲೇ ಕರ್ತವ್ಯ ಪಾಲನೆ, ಸ್ವಾಭಿಮಾನ, ಆದರ್ಶಗಳ ಬೀಜ ನೆಟ್ಟರು. ಪ್ರಾಥಮಿಕ ಶಾಲೆಯ ಮುಲ್ಕಿ ಮಾಸ್ತರರಾಗಿ ಬಡತನದ ವೈಭವದಲ್ಲಿಯೂ ನನ್ನನ್ನು ಪದವಿ ವರೆಗೆ ಓದಿಸಿದ್ದು ಅಂದಿನ ದಿನಗಳಲ್ಲಿ ಸಾಮಾನ್ಯ ಮಾತಾಗಿರಲಿಲ್ಲ. ಈ ಸಂದರ್ಭದಲ್ಲಿ ಅವ್ವನ ಸಹಕಾರವೂ ಕಡಿಮೆಯದಲ್ಲ. ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಕಟ್ಟುವಾಗ ನಮ್ಮೂರಿಂದ ಚಿಕ್ಕೋಡಿಗೆ ನಡೆಯುತ್ತ ಬಂದು (ನನ್ನನ್ನು ಬಸ್ಸಿಗೆ ಕಳಿಸುತ್ತಿದ್ದರು). ಪೇಪರ ಬಿಡುವ ವರೆಗೆ ಗಿಡದ ನೆರಳಲ್ಲಿ ಕಾಯ್ದು ನಿಂತು, ನೆಹರು ಶರ್ಟಿನ ಉದ್ದನೆಯ ಕಿಸೆಯಲ್ಲಿ ಜೋಪಾನವಾಗಿ ತಂದ ಬಾಳೆಹಣ್ಣು ತಿನ್ನಲು ಕೊಡುತ್ತಿದ್ದುದು ನೆನಪಿಸಿಕೊಂಡರೆ ಕಣ್ಣು ಒದ್ದೆಯಾಗುತ್ತವೆ.

ಅಂತೂ ಅಪ್ಪ ನಿವೃತ್ತಿ ಹೊಂದುವುದಕ್ಕೆ ಸರಿಯಾಗಿ ನನಗೊಂದು ಕೆಲಸ ಸಿಕ್ಕಿ ಅವರಿಗೆ ಸ್ವಲ್ಪ ಆಧಾರವಾದೆ. ನಂತರದ ನಾಲ್ಕೈದು ವರ್ಷಗಳಲ್ಲಿ ಹೃದಯಾಘಾತದಿಂದ ಅವರು ಇನ್ನಿಲ್ಲವಾದಾಗ ನನ್ನ ಕೊನೆಯ ತಮ್ಮ ಇನ್ನೂ ಎಸ್.ಎಸ್.ಎಲ್.ಸಿ. ಓದುತ್ತಿದ್ದ. ಅಂದಿನಿಂದ ಇಂದಿನ ವರೆಗೆ ನಮ್ಮ ಬಾಳ ಪಯಣಕ್ಕೆ ಅವ್ವಳೆ ದಾರಿದೀಪ. ಅಸಾಧ್ಯವೆಂಬ ಶಬ್ದವೇ ಅವಳಲ್ಲಿಲ್ಲ. ಕೆಲವೊಮ್ಮೆ ಬೇರೆಯವರ ಹೊಲದಲ್ಲಿ ಕೂಲಿ ಸಹ ಮಾಡಿದಳು. ಕಾಲ ಗರ್ಭದಲ್ಲಿ ಆ ಕಷ್ಟದ ದಿನಗಳೆಲ್ಲ ಕಳೆದಿವೆ. ತಮ್ಮಂದಿರು ಸ್ವಪ್ರಯತ್ನದಿಂದ ಅಪ್ಪನ ಹಂಬಲದಂತೆ ಅವರ ಮಾರ್ಗದರ್ಶನದಲ್ಲಿ ಗೌರವಯುತ ಸ್ಥಾನಮಾನ ಪಡೆದಿದ್ದಾರೆ.

ಇಂದಿನ ದಿನಗಳಲ್ಲಿ ಅಪರೂಪ ಎನ್ನಬಹುದಾದ ಇಪ್ಪತ್ತಕ್ಕೂ ಹೆಚ್ಚು ಜನರು ಒಂದೇ ಸೂರಿನಡಿಯಲ್ಲಿ ವಾಸವಾಗಿದ್ದೇವೆ. ಈ ಅವಿಭಕ್ತ ಕುಟುಂಬದ ಒಗ್ಗಟ್ಟನ್ನು ತನ್ನ ಅದ್ಭುತವಾದ ಕೌಶಲ್ಯದಿಂದ ಅವ್ವ ಇಂದಿಗೂ ಕಾಪಾಡಿಕೊಂಡು ಹೋಗುತ್ತಿದ್ದಾಳೆ. ಗಂಧದ ಕೊರಡಿನಂತೆ ತನ್ನ ದೇಹವನ್ನು ತೇಯುತ್ತಿದ್ದಾಳೆ. ಇಂದಿಗೂ ಎಲ್ಲಕ್ಕೂ ಮೊದಲಿಗೆ ಏಳುವದು, ಎಲ್ಲರ ನಂತರ ಮಲಗುವದು ಅವಳೇ. ಈ ಅರವತ್ತೊಂಭತ್ತರಲ್ಲೂ ಬುತ್ತಿ ತುಂಬಿಕೊಂಡು ಹೊಲಕ್ಕೆ ಹೋಗುವದು, ಧಾರೆ ತೆಗೆಯುವದು ಮಾಡುವಳು. ಅವಳ ಚಾಕಚಕ್ಯತೆ, ವೇಗದ ಗತಿ ದೈವದತ್ತ ಕೊಡುಗೆ. ಚರಚರನೆ ಹಿಟ್ಟು ನಾದಿ, ಕೈ ರೊಟ್ಟಿ ತಟ್ಟಿ, ಕೆಂಡಕ್ಕೆ ಇಟ್ಟು, ಬೇಯಿಸಿ

ಸಾಲಾಗಿ ಕುಳಿತ ನಮ್ಮ ತಟ್ಟೆಗೆ ಬಿಸಿ ಬಿಸಿ ರೊಟ್ಟಿ ಬಳ್ಳೊಳ್ಳಿ ಖಾರ ಮೊಸರು ತಿನ್ನುತ್ತಿರುವಾಗಲೇ ಕೊನೆಯ ರೊಟ್ಟಿ ಬೇಯಿಸಿ ನಮ್ಮೊಂದಿಗೆ ತಾನೂ ಊಟಕ್ಕೆ ಸೇರಿಕೊಳ್ಳುತ್ತಾಳೆ.

ನಮ್ಮೂರಲ್ಲಿ ಏನೇ ಘಟಿಸಿದರೂ ಅಲ್ಲಿ ಇರಲೇಬೇಕು. ಮದುವೆ ಇರಲಿ, ಸ್ಮಶಾನ ಯಾತ್ರೆ ಇರಲಿ ಅಲ್ಲಿ ಅವ್ವ ಹಾಜರು. ಅತ್ತೆ ಸೊಸೆ, ತಾಯಿ ಮಕ್ಕಳು, ಅಣ್ಣ ತಮ್ಮಂದಿರು, ಇವರ ಜಗಳಕ್ಕೆಲ್ಲ ಇವಳೇ 'ಜಜ್ಜು'. ಇವಳ ನಿರ್ಣಯದ ಮುಂದೆ ಅಪೀಲಿಗೆ ಅವಕಾಶವೇ ಇಲ್ಲ. ಭಿಕ್ಷುಕರಿಗೆ, ತಿರುಗುತ್ತ ಬರುವ ವ್ಯಾಪಾರಿಗಳಿಗೆ, ಕರಡಿ ಕುಣಿತದವರಿಗೆಲ್ಲ ನಮ್ಮ ಮನೆಯ ಹೊರ ಜಗಲಿ ಊಟದ ಸ್ಥಳ. ಅವರಿಗೆ ನುಚ್ಚು ಮಜ್ಜಿಗೆ ಅಂಬಲಿ ನೀಡಿ ಆನಂದಿಸುತ್ತಾಳೆ. ಅವಳ ಪ್ರಬುದ್ಧತೆ ದುಡಿಮೆಗಷ್ಟೇ ಸೀಮಿತವಾಗಿಲ್ಲ. ಶಾಲೆಯ ಗಂಧ ಇಲ್ಲದಿದ್ದರೂ ದಿನಪತ್ರಿಕೆ ಓದಬಲ್ಲಳು. ಪ್ರಚಲಿತ ವಿದ್ಯಮಾನ ತಿಳಿಯುತ್ತಾಳೆ. ಹಣಕಾಸಿನ ವ್ಯವಹಾರದಲ್ಲಂತೂ ಅರ್ಥ ಮಂತ್ರಿಗೂ ಮಿಗಿಲಾದ ಎಚ್ಚರ. ಪೋಲಿಗೆ ಅವಕಾಶವಿಲ್ಲ, ಅವಶ್ಯಕತೆಗೆ ಜಿಪುಣತನವಿಲ್ಲ. ಮಂತ್ರಾಲೋಚನೆಯಲ್ಲಾ ಎಲ್ಲರ ಸಮ್ಮುಖದಲ್ಲಿ ನಡೆಯುವದು. ಇಂಥ ಅವ್ವನ ಮಮತೆಯ ಸೆರಗಿನ ಹೊದಿಕೆ ಎಷ್ಟೊಂದು ಹಿತಕರವಾಗಿದೆ...

✣ **ಸುಮಿತ್ರಾ ಕುಂಬಾರ** : ಚಿಂಚಣಿ–೫೯೧ ೨೩೭ ತಾ. ಚಿಕ್ಕೋಡಿ (ಬೆಳಗಾವಿ) ✣

ಕುಂ. ವೀ. ಅವರ 'ಭಳಾರೆ ವಿಚಿತ್ರಂ!'

ಅನಂತ ಹುದೆಂಗಜೆ

ಬಯಲು ಸೀಮೆಯ ನೆಲದಲ್ಲಿ ಸಿಹಿ ನೀರಿನ ಹಳ್ಳವನ್ನು ಹರಿಸಿರುವ ಕುಂ. ವೀರಭದ್ರಪ್ಪನವರ ಕಥೆಗಳ ಓದು ಸೊಗಸಾದ ಅನುಭವಕ್ಕಾಗಿ ನಮ್ಮ ಮನಸ್ಸನ್ನು ಮುಟ್ಟುತ್ತದೆ, ಗಾಢವಾಗಿ ತಟ್ಟುತ್ತದೆ. ಕುಂ. ವೀ. ಯವರ ೨೦ ಕತೆಗಳ ಸಂಕಲನ 'ಭಳಾರೆ ವಿಚಿತ್ರಂ' ತನ್ನ ವೈಶಿಷ್ಟ್ಯಗಳಿಂದಲೇ ಮನಗೆಲ್ಲುತ್ತದೆ. ಬಂಡಾಯ ಮನೋಧರ್ಮದ ಗಮನಾರ್ಹ ಲೇಖಕರಾಗಿರುವ ಕುಂ.ವೀ. ಅವರ ಕತೆಗಳಲ್ಲಿ ಮನ ತುಂಬಿಕೊಳ್ಳುವ ಗುಣವಿದೆ. ಅವರು ಕತೆ ಬರೆಯುವುದಿಲ್ಲ, ಹೇಳುವುದು. ಕುಂ.ವೀ. ಕತೆಗಳನ್ನು ನಾವು ಜೋರಾಗಿ ಬಾಯಿ ತುಂಬಾ ಹೇಳಿಕೊಳ್ಳಬಹುದು. ಅವುಗಳಿಗೆ ಗಟ್ಟಿಯಾಗಿ ಓದಿಸಿಕೊಳ್ಳುವ ಗುಣವಿದೆ. ದನಿ ಎತ್ತರಿಸಿ, ಕುಗ್ಗಿಸಿ, ತಗ್ಗಿಸಿ, ಪಿಸುಗುಟ್ಟಿ, ಎಳೆದು, ದನಿಯ ಜೋರಿನೊಡನೆ ವೇಗವನ್ನು ಬೆರೆಸಿ, ಕತೆಗಳನ್ನು ವಾಚಿಕಾಭಿನಯ ಮಾಡಬಹುದು. ಕತೆಯೇ ವರ್ಣನೆ ಮತ್ತು ವರ್ಣನೆಯೇ ಕತೆಯಾಗುವ ಕುಂ.ವೀ. ಬರವಣಿಗೆಯು ಆಡು ಮಾತಿನ ಭಾಷೆಯಲ್ಲಿ ವಾಸ್ತವದ ಚಿತ್ರ ಕಟ್ಟಿಕೊಡುತ್ತದೆ. ಕನ್ನಡ ಕತೆಗಳ ಕಾಮನಬಿಲ್ಲಿನಲ್ಲಿ ಕುಂ.ವೀ. ಬರವಣಿಗೆಯದೇ ಪ್ರತ್ಯೇಕ ಬಣ್ಣ – ಎಂದು ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ ಹೇಳಿರುವುದು 'ಭಳಾರೆ ವಿಚಿತ್ರಂ' ಸಂಕಲನದ ಹಿನ್ನೆಲೆಯಲ್ಲಿ ಔಚಿತ್ಯಪೂರ್ಣವಾಗಿದೆ.

ಕುಂ.ವೀ.ಯವರು ಬಳಸುವ ಆಡುಮಾತಿನ ಭಾಷೆ, ಉದ್ದುದ್ದ ವಾಕ್ಯಗಳ ಸರಣಿ ಕತೆಗಳಿಗೆ ಸೊಗಸಾದ ಲಯವನ್ನು ಕೊಟ್ಟಿದೆ. ಉತ್ತರ ಕರ್ನಾಟಕದ ಹಳ್ಳಿ ಜೀವನದ ಹಸಿ ಹಸಿ ಚಿತ್ರಗಳು ವ್ಯಂಗ್ಯ ಬೆರೆತ ವಿಷಾದವಾಗಿ, ತಿಳಿನಗೆಯ ವಿನೋದವಾಗಿ, ವಾಸ್ತವದ ನೆಲೆಗಟ್ಟಿನಲ್ಲಿ ಗಟ್ಟಿಯಾಗಿ ತಳವೂರಿ ಸಿಡಿದು ನಿಂತ ಬಂಡಾಯವಾಗಿ, ರಂಜನೀಯ ಓದಿಗೆ ದಾರಿ ಮಾಡಿಕೊಟ್ಟಿವೆ. ಇಲ್ಲಿಯ ಕತೆಗಳಲ್ಲಿ ಕಥೆಗಾರ ಮರೆಯಾಗದೆ, ಕಥೆ ಹೇಳುವುದೇ ತೋರಿಸುವ ಕ್ರಮವೂ ಆಗಿದ್ದರಿಂದ ಕನ್ನಡದ ಕಥೆಗಾರಿಕೆಗೆ ಹೊಸ ಶಕ್ತಿ ದೊರೆತು, ವಾಸ್ತವ – ಅವಾಸ್ತವಗಳ ಕಂದಕ ಮುಚ್ಚಿಹೋಗಿದೆ.

ವಾಸ್ತವವನ್ನೇ ಕಣ್ಣಿಗೆ ಕಟ್ಟುವಂತೆ ಹೇಳಿದರೂ 'ಇವು ಕತೆಗಳು ಮಾತ್ರ' ಎಂಬ ತಟಸ್ಥ ನಿಲುವು ವೀರಭದ್ರಪ್ಪನವರದು. ಬಂಡಾಯ ಮನೋಧರ್ಮವಿದ್ದರೂ ಅವರ ಈಚಿನ ಕತೆಗಳಲ್ಲಿ ವಾಸ್ತವವನ್ನು ಬದಲಾಯಿಸುವ ಹಠವಿಲ್ಲ. ವಾಸ್ತವವನ್ನು ನೋಡುವ, ನೋಡಿದ್ದನ್ನು ಕತೆ ಮಾಡುವ ಕುತೂಹಲ ಮಾತ್ರ ವ್ಯಕ್ತವಾಗಿದೆ. ಕೆಟ್ಟವರು, ಕ್ರೂರಿಗಳು ಮತ್ತು ದುಷ್ಟರಿಗೆ ಬದಲಾಗಿ ಕೆಟ್ಟತನ, ಕ್ರೌರ್ಯ ಮತ್ತು ದುಶ್ಚಟಗಳು ಕತೆಯ ಪಾತ್ರಗಳಾಗುತ್ತಿವೆ. ಅವೆಲ್ಲ ಇರುವಂತೆಯೇ ಅವುಗಳನ್ನು ನೋಡುವ ಜೀವನಪ್ರೀತಿ ಮತ್ತು ಧೈರ್ಯಗಳ ಜೊತೆಗೆ ಮೌಲ್ಯಗಳೂ ಈ ಕತೆಗಳಲ್ಲಿವೆ.

ವಿ-ಚಿತ್ರ :

'ಭಳಾರೆ ವಿಚಿತ್ರಂ' ಕೃತಿಯ ಮುಖಚಿತ್ರವೇ 'ವಿ-ಚಿತ್ರ'ವಾಗಿ ಪುಸ್ತಕಕ್ಕೊಂದು ಆಕರ್ಷಕ ಪ್ರವೇಶಿಕೆಯನ್ನು ನೀಡಿದೆ. ತಾರಸಿಯ ತಡೆಗೋಡೆಯನ್ನು ದುರಸ್ತಿ ಮಾಡುವ ಸನ್ನಿವೇಶದಂತೆ ಗೋಚರಿಸುವ ಚಿತ್ರವು ತಳವಾಗಿಯೂ, ತಾರಸಿಯಾಗಿಯೂ ಏಕಕಾಲಕ್ಕೆ ಕಾಣಿಸಿ ವಿಸ್ಮಯವನ್ನು ಉಂಟುಮಾಡುತ್ತದೆ.

'ಪ್ರಯಾಣ' ಕತೆ ಅರಾಜಕತೆಯ ಸ್ಪಷ್ಟ ಚಿತ್ರಣ. ಅವೇಳೆಯಲ್ಲಿ ಆಗಮಿಸುವ ಸರಕಾರಿ ಬಸ್ಸುಗಳಲ್ಲಿ ಪ್ರಯಾಣಿಸುವ ಹಳ್ಳಿಜನ ಸೀಟಿಗಾಗಿ, ಕಡೇ ಪಕ್ಷ ಆರಾಮವಾಗಿ ನಿಲ್ಲುವ ಸ್ಥಳಾವಕಾಶಕ್ಕಾಗಿ ಪರದಾಡುವುದು ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಇಂದಿಗೂ ಸಾಮಾನ್ಯ ದೃಶ್ಯವಾಗಿದೆ. 'ಬಳ್ಳಾರಿ ಸೀಮೆಯ ಹಗರಿ ಸಾಲಿನ ಮಂದಿ ಗೋರ್ಮೆಂಟು ಬೊಸ್ಸು ಕಾಯೋದ್ನ ನೋಡೋಕೇ ವಂದು ಛಂದ. ಚಾದಂಗಡೀಂದ ಬೀಡಿಯಂಗಡಿಗೆ, ಬೀಡಿಯಂಗಡಿಯಿಂದ ವಂದ ಮಾಡಲಕ, ದೊಡ್ಡೀಗೆ ಹೋಗಲಕ, ಹುಳಾ ಹರಿದಾಡಿದಂಗ ವಂದೇ ಸಮನೆ ಹರಿದಾಡ್ತಾನೆ ಇದ್ದರು.' ಟಾಪ್ ಪ್ರಯಾಣವೂ ಆಗೀಗ ಕಂಡು ಬರುವ ಸಾಮಾನ್ಯ ದೃಶ್ಯವೇ. ಬಸ್ಸಿನಲ್ಲಿ ಜಗಳಾಡುತ್ತಲೇ ಜೊತೆಯಾಗುವ ಪೈಲ್ವಾನ ಮತ್ತು ನಾಗಿಯರನ್ನು ಕಂಡಾಗ ಬಸ್ಸು ಊರುಗಳನ್ನು ಮಾತ್ರವಲ್ಲ ಬದುಕು ಹಾಗೂ ಸಂಬಂಧಗಳನ್ನೂ ಬೆಸೆಯುವುದೆಂಬ ಸತ್ಯ ಮನವರಿಕೆಯಾಗುತ್ತದೆ. ಕುಸ್ತಿಯಲ್ಲಿ ಜಟ್ಟಿಗಳನ್ನು ಮಣ್ಣು ಮುಕ್ಕಿಸಿದ ಪೈಲ್ವಾನ ನಾಗಿಗೆ ಸೋತು ಆಕೆಯನ್ನು ಗೆಲ್ಲುವುದು ಸೋಜಿಗ. ಬಾಣಂತಿ ರಕುಶದಂತೆ ಕೆಂಪಗಿದ್ದ ಬೊಸ್ಸು ; ದೈವರ್‍ರಾಮನ ಕೈಯಲ್ಲಿರುವ ಸುದರ್ಶನ ಚಕ್ರ ; ತೆಂಗಿನ ಚಿಪ್ಪಿನಂಗಿದ್ದ ಮಾರಿ ಮ್ಯಾಲಿನ ಕಸಬಾರಿಗೆಯಂಗಿದ್ದ ಮೀಸೆಯನ್ನು ಯಡ್ಡೂಕ ಬಲ್ಡೂಕ ತೀಡ್ಕಂಡು ಅಬ್ಬರಿಸಿದ – ಎಂಬಿತ್ಯಾದಿ ಕಲ್ಪನೆಗಳು ರಮ್ಯಾದ್ಭುತವಾಗಿವೆ. ಕೃಶಕಾಯದ ಕಂಡಟ್ರಂಜನಿ, ಅಂಜುಬುರುಕ, ಕುತಂತ್ರಿ ಶೆಟ್ಟಿ ಮುಂತಾದ ಪಾತ್ರಗಳು ಕತೆಗೆ ರಕ್ತ-ಮಾಂಸ ತುಂಬಿವೆ. ಭಾಷೆಯ ಬಳಕೆಯಲ್ಲಿ ಅಳುಕಿಲ್ಲದಿರುವುದು ಕತೆಯ ಗಮನಾರ್ಹ ಅಂಶ.

ಅಕ್ಷರ ಕಂಡರೆ ಗಡಗಡ ನಡುಗಿ ಮೂರು ಮಾರು ದೂರ ನಿಲ್ಲುವ ಸಾಧು ಸ್ವಭಾವದ ಮಂದಿಯೇ ತುಂಬಿರುವ ವಡ್ಡಟ್ಟಿ ಗ್ರಾಮದ ಮುದುಕಿ ಬಂಡೆವ್ವಜ್ಜಿ ಮತ್ತು ಆಕೆಯ ಮಗ ನೆಟ್ಟಕಲ್ಲು ಮಧ್ಯೆ ನಡೆಯುವ ತಲೆಮಾರಿನ ತಿಕ್ಕಾಟವಂತೆ ಗೋಚರಿಸುವ 'ಕುಬುಸ' ಕತೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳಲ್ಲಿ ಬೆಳೆಯುತ್ತದೆ. ನಾಲ್ಕಕ್ಷರ ಕಲಿತು ಸರಕಾರಿ ಕಛೇರಿಯಲ್ಲಿ ಜವಾನನಾಗಿ ಸೇರುವ ನೆಟ್ಟಕಲ್ಲು ನಗರಕ್ಕೆ ಬಂದಂತೆ ಹೆಸರನ್ನೂ, ಭಾಷೆಯನ್ನೂ, ವೇಷವನ್ನೂ, ಜೀವನಶೈಲಿಯನ್ನೂ ಬದಲಾಯಿಸಿಕೊಂಡು ಮಿ। ಎನ್. ಕೆ. ವಡವಟ್ ಆಗಿ ಮಾರ್ಪಾಟುಗೊಳ್ಳುವುದು ಒಂದು ಸಾಂಸ್ಕೃತಿಕ ಸ್ಥಿತ್ಯಂತರವಾಗಿದೆ. ಬೆತ್ತಲೆಯವರ ಮಧ್ಯೆ ಬಟ್ಟೆ ತೊಟ್ಟವನಿಗೇ ನಾಚಿಕೆಯಾಗುವುದಂತೆ. ಹಾಗೆ ಕುಬುಸ ತೊಡದ ವಡ್ಡಟ್ಟಿಯ ಜನ

ಕಮಲಳನ್ನು ಸೊಸೆಯಾಗಿ ಸ್ವೀಕರಿಸಲು ಸಿದ್ಧರಿರಲಿಲ್ಲ. ಕುಬುಸ ತೊಡುವುದು ನಾಗರಿಕ ಸಮಾಜದ ಲಕ್ಷಣವೆಂದರಿತ ವಡವಟ್ ಊರವರ ಅಪೇಕ್ಷೆಗೆ ವಿರುದ್ಧವಾಗಿ ಕಮಲಳ ಕೈ ಹಿಡಿಯುತ್ತಾನೆ.

ಸಂಸಾರ ಬೆಳೆದು ಖರ್ಚು ಹೆಚ್ಚಿದಾಗ ಉಳಿತಾಯದ ಒಂದು ಮಾರ್ಗವಾಗಿ ವಡ್ಡಟ್ಟಿಯ ಭೂಮಿಯನ್ನು ಮಾರಿ ಮುದುಕಿಯನ್ನು ನಗರಕ್ಕೆ ಕರೆತರುವ ಆಲೋಚನೆ ಮಾಡುತ್ತಾಳೆ ಕಮಲ. ಕಾಮನಬಿಲ್ಲಿನಂತೆ ಬಾಗಿದ ಮುದುಕಿ ಮೊದಮೊದಲು ಶಹರಕ್ಕೆ ಬರಲು ನಿರಾಕರಿಸಿದರೂ ದಿನಕ್ಕೊಂದು ಚಂದದಲ್ಲಿ ಬೆಳೆಯುತ್ತಿರುವ ಮೊಮ್ಮಕ್ಕಳನ್ನು ಕಾಣುವ ಆಸೆಯಿಂದ ಬಸ್ಸನ್ನೇರಿ ಇತಿಹಾಸ ನಿರ್ಮಿಸುತ್ತಾಳೆ. ಆದರೆ, ನಗರದಲ್ಲಿ ಆಕೆ ಎಲ್ಲರ ಕುತೂಹಲದ ಹಾಗೂ ಲೇವಡಿಯ ವಸ್ತುವಾಗುತ್ತಾಳೆ. ಆಕೆಗೆ ಕುಬುಸ ತೊಡಿಸುವ ಪ್ರಯತ್ನ ವಿಫಲವಾಗುತ್ತದೆ. ಇನ್ನೊಬ್ಬರು ಎದೆ ಮುಚ್ಚುವಂತೆ ಸೆರಗು ಹೊದ್ದುಕೊಳ್ಳಬೇಕೆಂದು ಪ್ರಜ್ಞಾಪೂರ್ವಕವಾಗಿ ಬಯಸುವ ಈ ಮುದುಕಿ ಕುಬುಸ ತೊಡಲು ಯಾಕೆ ನಿರಾಕರಿಸುತ್ತದ? ಎಂಬುದೇ ಯಕ್ಷ ಪ್ರಶ್ನೆ. ಆಧುನಿಕತೆಯನ್ನು ಮೈಗೂಡಿಸಿಕೊಳ್ಳಲು ನಿರಾಕರಿಸುವ ಹಠವಾದಿ ಮುದುಕಿ ಆಸೆ, ಆಮಿಷ, ಒತ್ತಾಯ, ಮಂತ್ರ-ತಂತ್ರಗಳಿಗೆ ಜಗ್ಗದೆ ವಡ್ಡಟ್ಟಿಗೆ ಮರಳುತ್ತದೆ. ನಾಗರಿಕತೆ, ಆಧುನಿಕತೆ ಹಾಗೂ ಸಂಪ್ರದಾಯದ ತಾಕಲಾಟವನ್ನು ಸೊಗಸಾಗಿ ವಿವರಿಸುವ ಕತೆ ಬಟ್ಟೆ ತೊಟ್ಟರೂ 'ಬೆತ್ತಲಾಗಿರುವ' ಬಗ್ಗೆ ಸೂಕ್ಷ್ಮವಾಗಿ ಪ್ರಶ್ನೆ ಎತ್ತುತ್ತದೆ.

ಕಥೆ ಯಾರದು ?

ಕಥೆ ಹೇಳುವುದನ್ನು ಕರಿಯಜ್ಜ ನಿಲ್ಲಿಸಿದ್ದು ಊರ ಮಂದಿಗೆ ಆತಂಕದ ವಿಚಾರವಾಗುತ್ತದೆ. ಕೇಳುವವರ ಅಂಡಿಗೆ ಗೆದ್ದಲು ಹತ್ತೋಮಟ ಒಂದರ ಮ್ಯಾಲೊಂದು ಕಥೆ ಹೇಳುತ್ತಿದ್ದ ಕರಿಯಜ್ಜ ಮೌನಕ್ಕೆ ಶರಣಾಗಿದ್ದ. ಕಪ್ಪಾತಿ ಕಪ್ಪಗಿದ್ದ ಕರಗಲ್ಲಂತೆ ಕೂತುಬಿಟ್ಟಿದ್ದ. 'ಹೆಣ್ಣೇಸಾಂತೆ ಮಾಗಿದ; ಊರು ವೋಗಂತಾದೆ, ಕಾಡು ಬಾ ಅಂತಾದೆ' ಎಂಬಂಥ ಕಾಲದಲ್ಲಿ ಕತೆಗಳು ಹೊರಬರಲು ತವಕಿಸುತ್ತವೆ. ಅವಕಾಶ ಸಿಗದೆ ದಂಗೆಯೇಳುತ್ತವೆ. ಹೊಟ್ಟೇಲಿರೋ ಕೂಸು ಬಯಸಿದರೂ ಸೊಗಸಾಗಿ ಕಥೆ ಹೇಳುತ್ತಿದ್ದ, ಕಥೆ ಹೇಳುತ್ತ ಹೇಳುತ್ತ ಬದುಕುವ ಉತ್ಸಾಹ ತುಂಬಿ ಎಲ್ಲರಿಗೂ ಆಪ್ತನಾಗಿದ್ದ, ಹುಟ್ಟಾ ವಿಕಲಾಂಗನಾದರೂ ಹೆಂಡತಿಗೆ ಕಥೆಗಳ ಮೂಲಕವೇ ಸಂಭೋಗಕ್ಕಧಿಕವಾದ ಸುಖ ನೀಡುತ್ತಿದ್ದ, ಪ್ರತಿ ಕಥೆಯನ್ನೂ ಹೆತ್ತ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಕರಿಯಜ್ಜನನ್ನು ಶಿವಪೂಜೆ ರುದ್ರಗೌಡ ಮಗನೆಂಬ ಸಂಬಂಧದಲ್ಲಿ ಕರಿಯನನ್ನು ಕಟ್ಟಿ ಹಾಕುತ್ತಾನೆ. ಕತೆಗಳ ಒಡೆತನ ಪಡೆದ ಗೌಡ ಪೊಗದಿ ವಸೂಲಿಗೆ ತೊಡಗಿ, ಜನಕ್ಕೆ ಕಥೆ ಸಿಗದೆ, ಕರಿಯ ಕಥೆ ಹೇಳಲಾರದೆ, ಕತೆಗಳಿಗೆ ಹೊರದಾರಿ ಇರದೆ ಅಸಹನೀಯ ಮೌನ ಕವಿಯುತ್ತದೆ.

ಕಥೆ ಹೇಳುತ್ತಲೇ ದಂತಕಥೆಯಾಗಿ ಮಾರ್ಪಟ್ಟ ಕರಿಯಜ್ಜ ಒಮ್ಮೊಮ್ಮೆ ಇದು ತಾನು ಹೇಳಿದ ಕಥೆಯೇ?- ಎಂದು ಸಂದೇಹ ಪಡುವಷ್ಟರ ಮಟ್ಟಿಗೆ ಬೆಳೆದಿರುತ್ತಿದ್ದ, ಬದಲಾಗುತ್ತಿದ್ದ ಕಥೆಗಳ ಬಗ್ಗೆ ಬೆರಗಾಗುತ್ತಿದ್ದ. ಕತೆಗಳ ಮೂಲಕವೇ ಪರಿಹಾರ ಸೂಚಿಸುತ್ತಿದ್ದ ಕರಿಯಜ್ಜ ತನ್ನ ಬೇಗುದಿಗೆ ನಿಸ್ಸಹಾಯನಾದ. ಸ್ವಾತಂತ್ರ್ಯ ಯಾರಿಗೆ ಬೇಕು? ಕಥೆಗೋ? ಕಥೆಗಾರನಿಗೋ? ಕತೆಗಾರನಿಲ್ಲದೆ ಕತೆಯಿದ್ದೀತೇ? ಸಮುದಾಯ ಬೆಳೆದೀತೇ? ಮನಸ್ಸೆಂಬೋ ಹೆಜ್ಜೇನು ಗೂಡಿನ ಸಾವಿರಾರು ಕೋಣೆಗಳೊಳಗೆ ಸಂಸಾರ ಹೂಡಿರೋ ಕತೆಗಳಿಗೆ ಗೌಡ ಒಡೆಯ ಹೇಗಾದಾನು? ಅಪ್ಪಟ ಎರೆಹೊಲದಂತೆ ಮನುಷ್ಯ ಮಾತ್ರ ಕಥೆಗಳ ಬರೋಬ್ಬರಿ ಫಸಲು ತೆಗೆಯಬಲ್ಲ. ಅಸಲಿಯಾಗಿ ಕಥೆ-ಸಾಹಿತ್ಯ ಯಾರ ಸೊತ್ತು? ನಮ್ಮ ವಿಮರ್ಶೆಯೂ, ಬದುಕಿನ ಧೋರಣೆಯೂ ಕೃತಿ ವ್ಯಕ್ತಿಗಿಂತ ಮುಖ್ಯವೆಂದು ಮಾನ್ಯ ಮಾಡಿದೆ. 'ಕಥೆ ಹೇಳೋ ಕರಿಯಜ್ಜ' ಉತ್ತಮ ಕಥೆಗಾರನೊಬ್ಬನ

ಆತ್ಮಕಥೆಯಂತಿದೆ. ಓತಪ್ರೋತವಾಗಿ ಹರಿವ ಕಥಾ ಧಾರೆ ತಟ್ಟನೆ ಬಂದಾಗುವುದುಂಟು. ಒಮ್ಮೊಮ್ಮೆ ಪ್ರತಿಯೊಂದು ಕಥೆಯ ವಿಸ್ತರಿಸಿಕೊಂಡ ಅಂತರಂಗದಲ್ಲಿ ಹುಟ್ಟಿಕೊಂಡ ನೂರಾರು ಉಪಕಥೆಗಳು ಹಾಲು ಕಾಣದ ಹಸುಳೆಗಳಂತೆ ಚೀರಿಡುತ್ತವೆ. ಕತೆಗಾರ ಕರಿಯಜ್ಜ ಬದುಕುತ್ತಾನೋ? ಕಥೆಗಳು ಸ್ವತಂತ್ರವಾಗುತ್ತವೋ? ಓದುಗರೇ ಊಹಿಸಬೇಕು.

ಈ ಕಥೆ ನಮ್ಮ ಸಾಹಿತ್ಯ ಕ್ಷೇತ್ರದ ಎಲ್ಲ ಚಳವಳಿಗಳನ್ನೂ ಸಾಂಕೇತಿಕವಾಗಿ ಧ್ವನಿಸುತ್ತದೆ. ಸಾಹಿತ್ಯ ಹೇಗೆ ಕೆಲವು ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಸಿಲುಕಿ ಒದ್ದಾಡುತ್ತಿದೆ? ಎಂಬ ಚಿತ್ರ ಸಿಗುತ್ತದೆ. ಹೇಳಿ(ಬರೆ)ದವುಗಳು ಮಾತ್ರ ಕಥೆಗಳೇ? ಒಳಗಿರುವುದೆಲ್ಲ ಕಥೆಗಳಲ್ಲದೆ ವ್ಯಥೆಗಳೇ? –ಎಂಬ ಪ್ರಶ್ನೆ ಉಳಿಯುತ್ತದೆ.

ಬರಿಗೊಡಗಳು ತುಂಬ್ಯಾವೇ?

ಬಯಲು ಸೀಮೆಯ ನೀರಿನ ಬವಣೆಯನ್ನು ವಿಶದವಾಗಿ ಕಟ್ಟಿಕೊಡುವ ಎರಡು ಕತೆಗಳು ಇಲ್ಲಿವೆ. 'ಬರಿಗೊಡಗಳು' ಕತೆಯಲ್ಲಿ ಸಿಹಿನೀರಿಗಾಗಿ ನಡೆಸುವ ಹೋರಾಟ, ಅಲೆದಾಟಗಳ ಚಿತ್ರಣವಿದೆ. ಸಿಹಿನೀರನ್ನು ಅಮೂಲ್ಯ ನಿಧಿಯೆಂಬಂತೆ ಕಾಪಾಡುತ್ತಾರೆ. 'ಸೀನೀರ್ನೊಂದ ಬಿಟ್ಟು.... ಯಿಗಾ..... ವಂದ್ಯೆತ್ತೂಲಿ ಬಂಗಾರ ಕ್ಯೋಳು. ಕ್ಪಟ್ವೇನು' ಇತ್ಯಾದಿ ಮಾತುಗಳಲ್ಲಿ ಈ ಭಾವ, ನೀರಿನ ಅಭಾವ ವ್ಯಕ್ತವಾಗಿದೆ. ನಲ್ಲಿಯಲ್ಲಿ ನೀರು ಬರುವವರೆಗೂ ಗೆಳತಿಯರಾಗಿದ್ದವರು ಆ ಬಳಿಕ ಶತ್ರುಗಳಂತೆ ಕಾದಾಡುತ್ತಾರೆ. 'ಆ ಕ್ಷಣ ಧರೆಗುರುಳಿದ ತಲೆಗೂದಲೆಷ್ಟೋ, ಹರಿದು ಚಿಂದಿ ಚಿಂದಿಯಾದ ಕುಬುಸ, ಸೀರೆಗಳೆಷ್ಟೋ. ಆದರೆ, ನಲ್ಲಿ ಮಾತ್ರ ಸ್ಸಸ್ಸಂತ ಶಬ್ದ ಮಾಡುತ್ತಲೇ ಇತ್ತು.' ನೀರು ಬರಲಿ, ಬರದೇ ಇರಲಿ. ಜಗಳವಂತೂ ನಡೆಯುತ್ತದೆ.

'ಬರಗಾಲದ ಒಂದು ದಿನ' ಕಥೆ ಮಳೆ ಬರಲೆಂದು ಕತ್ತೆಯ ಮೆರವಣಿಗೆ ಮಾಡಿಸುವ ಜಾನಪದ ನಂಬಿಕೆಯೊಂದರ ಸುತ್ತ ಹೆಣೆದುಕೊಂಡಿದೆ. ಯಂಕೋಬಿ–ಲಸುಮಿ ಹೆಸರಿನ ಅಗಸ ದಂಪತಿಗಳಿಗೆ ಅರ್ಜುನನೆಂಬ ಗಾರ್ದಭ, ಬಡಿಗೆಯೆಂಬ ವಜ್ರಾಯುಧ– ಎಂಬಂತಹ ಸವಿರಾದ ಹಾಸ್ಯದ ಮೂಲಕ ಓದಿಸಿಕೊಳ್ಳುವ ಕಥೆ ನಮ್ಮ ಮನ ಕಲಕುವುದು ಕತ್ತೆ ಮೆರವಣಿಗೆಯಿಂದ ಬಂದ ನೂರಿಪ್ಪತ್ತು ರೂಪಾಯಿ ಸಂಭಾವನೆಯನ್ನು ಗಂಡ–ಹೆಂಡತಿ ಹಂಚಿಕೊಳ್ಳಲು ತಕರಾರು ನಡೆಸಿದಾಗ. ಕುಡಿದ ಮತ್ತಿನಲ್ಲಿ ಯಂಕೋಬಿ ಸಂಪಾದನೆಗೆ ಕಾರಣವಾದ ಕತ್ತೆಯನ್ನೇ ಥಳಿಸುವುದು ಕೃತಘ್ನತೆಯ ನಿದರ್ಶನ.

ಹತ್ಯೆಯಲ್ಲ, ಹುಟ್ಟು :

'ಹತ್ಯೆ' ಪರಿವರ್ತನೆಯ ಕಥೆ. ಆದರೆ, ಮನಃಪರಿವರ್ತನೆಯ ಸಾಮಾನ್ಯ ಕಥೆಯಂತೆ ತೋರುವ ಅಪಾಯದಿಂದ ಅದು ಪಾರಾಗಿದ್ದು ಇಲ್ಲಿನ ಭಾವತೀವ್ರತೆ, ಸೂಕ್ಷ್ಮವೂ ಹರಿತವೂ ಆದ ಭಾಷೆಯ ಬಳಕೆ, ಕ್ರೌರ್ಯ, ಮಾನವೀಯತೆ ಹಾಗೂ ಪ್ರೀತಿಯ ಮಗ್ಗುಲುಗಳಿಂದ. ಸಂತನಂತೆ ಕಂಡರೂ ಕೊಲೆಗಾರನಾದ ಬಲರಾಮನಿಗೆ ಕತ್ತಲಲ್ಲಿ ನಡೆಯುವ ಕಥೆ ಬೆಳಕು ಕೊಡುತ್ತದೆ. ಗೌರಮ್ಮನ ಭ್ರಾತೃತ್ವದ, ಬಾಂಧವ್ಯದ ಸೆಳೆತದಿಂದಾಗಿ ಕೊಲೆ ಕರುಳ ಬಳ್ಳಿಯನ್ನು ತುಂಡರಿಸಲು ಬಳಕೆಯಾಗುತ್ತದೆ. ಮಗುವಿನ ಹುಟ್ಟಿನೊಂದಿಗೆ ಕೊಲೆಗಡುಕತನ ಹತ್ಯೆಯಾಗುತ್ತದೆ.

ಸಂಬಂಧಗಳನ್ನೇ ಕಾಣದ (ಅಥವಾ ಮರೆತ, ಅರ್ಥಮಾಡಿಕೊಳ್ಳದ) ವ್ಯಕ್ತಿ ಅಡ್ಡದಾರಿ ಹಿಡಿಯುತ್ತಾನೆ. ಪ್ರೀತಿಯ ಬೆಳಕನ್ನು ಅಕ್ಕನ ರೂಪದಲ್ಲಿ ಮೂಡಿಸಿದ ಗೌರಮ್ಮ 'ಕಸ ಎಲ್ಲಿರುತ್ತದೋ ಅಲ್ಲಿ ಪೊರಕೆಯೂ ಇರುತ್ತದೆ' ಎನ್ನುವಂತಿದ್ದಾಳೆ. ಅಪರಿಮಿತದ ಕತ್ತಲಲ್ಲಿ ವಿಪರೀತದ ಬೆಳಕು ಮೂಡಿಸುವ ಈ ಕಥೆ ಸೊಗಸಾಗಿದೆ, ಧ್ವನಿಪೂರ್ಣವೂ ಆಗಿದೆ.

'ಮುಳ್ಳು' ಭ್ರಷ್ಟ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಕಾಲ್ಪನಿಕ ಕಥೆಯಂತೆ ತೋರಿದರೂ ದೇಶದ ದುಃಸ್ಥಿತಿಯನ್ನು ನಮ್ಮ ಕಣ್ಣ ಮುಂದೆ ತರುತ್ತದೆ. ಮುಳ್ಳು ಗಿಡಗಳ ಬಗ್ಗೆ ಸಂಶೋಧನೆ ನಡೆಸಿ

ಜಗದ್ವಿಖ್ಯಾತನಾದ ಬೀರಪ್ಪ ನಾಯಕನ ಮಗನೇ ವಿಷಪೂರಿತ ಮುಳ್ಳಿಗೆ ಬಲಿಯಾದಾಗ ಪ್ರೊಫೆಸರನ ಭ್ರಮೆ ಕರಗುತ್ತದೆ. ಬೇಡವೆಂದರೂ ಬಿಟ್ಟುಕೊಡದ ಮುಳ್ಳಿನ ಗಿಡ ವಿಶ್ವವ್ಯಾಪ್ತಿ ಯಾಗುತ್ತದೆ. ಎಲ್ಲ ಒಳ್ಳೆಯತನವನ್ನೂ ಕಿತ್ತುಕೊಳ್ಳುತ್ತದೆ. ಅಣ್ವಸ್ತ್ರ, ಲಂಚ, ಭ್ರಷ್ಟಾಚಾರ, ಧುಶ್ಚಟ- ಎಲ್ಲಕ್ಕೂ 'ಮುಳ್ಳು' ಪ್ರತೀಕವಾಗಿದೆ.

ಆರ್ಥಿಕ ಸ್ವಾತಂತ್ರ್ಯವಿಲ್ಲದೆ...

'ಲೋಹಿಯಾವಾದಿಯೊಬ್ಬನ ಕಥೆ' ಸರಳವಾಗಿದೆ, ನೇರವಾಗಿದೆ. ಉಪನ್ಯಾಸಕನಾಗಿದ್ದ ಬಸವರಾಜ ಹಣದ ವ್ಯವಹಾರವನ್ನು ಹೆಂಡತಿಗೊಪ್ಪಿಸಿ, ತಾನು ಲೋಹಿಯಾ ಬಗ್ಗೆ ಭಾಷಣ ಮಾಡಲು ಹೋಗಬೇಕಿದ್ದರೂ ಹಣಕ್ಕಾಗಿ ಹೆಂಡತಿಯ ಬಳಿ ದಂಬಾಲು ಬೀಳುವ ಪರಿಸ್ಥಿತಿಗೆ ಬರುತ್ತಾನೆ. ಸವರ್ಣೀಯನಾದ ಪರಮೇಶಿ ಬಂದಾಗಲೂ ಈ ಲೋಹಿಯಾವಾದಿಯಿಂದ ಅಡುಗೆಮನೆಯೊಳಗೆ ಆತನಿಗೆ ಊಟ ಹಾಕಲು ಸಾಧ್ಯವಾಗಲಿಲ್ಲ. ಒತ್ತಾಯದ ಕಟ್ಟುಪಾಡು ಗಳಿಂದಾಗಿ ಆಚಾರ, ಉಪದೇಶ, ಅನುಷ್ಠಾನ- ಇವು ಪ್ರತ್ಯೇಕವಾಗಿ ಉಳಿಯುತ್ತವೆ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಯಾವ ವಾದವೂ, ಚಳವಳಿಯೂ ಅರ್ಥಹೀನ ಎಂಬುದು ಮನವರಿಕೆ ಯಾಗುತ್ತದೆ. ಕುಬುಸ ತೊಡಲು ನಿರಾಕರಿಸುವ ಬಂಡೆವ್ವಜ್ಜಿಯಂತೆ, ಬಸವರಾಜನ ಹೆಂಡತಿಯೂ ಸಂಪ್ರದಾಯವಾದಿಯಾಗಿ ಕಾಣಿಸುತ್ತಾಳೆ. ಈ ಹೊತ್ತಿನಲ್ಲಿ ತನ್ನ ದೌರ್ಬಲ್ಯವನ್ನು ಮೀರಿ ಬೆಳೆಯುವ ಬಸವರಾಜ ಉಪನ್ಯಾಸಕ್ಕೆ ಹೋಗಲೆಂದು ಇಟ್ಟುಕೊಂಡಿದ್ದ ಇನ್ನೂರು ರೂಪಾಯಿ ಗಳನ್ನು ಪರಮೇಶಿಗೆ ಕೊಡಲು ಮುಂದಾಗುತ್ತಾನೆ. ಹಣ ತೆಗೆದುಕೊಳ್ಳಲು ನಿರಾಕರಿಸುವ ಪರಮೇಶಿ 'ಏನೂ ಇಲ್ಲದೆ ನಾನು ಸಾಧ್ಯವಾದಷ್ಟು ದಿನ ಬದುಕಬಲ್ಲೆ'- ಎನ್ನುತ್ತಾರೆ. ಇಂಥವ ರಿಂದಲೇ ಚಳವಳಿ ಬೆಳೆದೀತು.

ಕೂರ್ಮಾವತಾರ, ಮೊಲಂ ಸಿಂಹಮಂ ಕೊಂದ ಕಥೆಯು, ಪಾವಲಿ ಮುಂತಾದ ಕತೆಗಳೂ ಬಹುಕಾಲ ಮನದಲ್ಲಿ ಉಳಿಯಬಲ್ಲವು. 'ಕಳ್ಳ ಮನೆ ಹೊಕ್ಕೊಂಡೆ ಶುಭವೆನ್ನಿರಯ್ಯಾ' ಗಾಳಿ ಲಿಂಗನೆಂಬ ಕಳ್ಳನ ಚಾತುರ್ಯದ ಕಥೆ. 'ಬಚ್ಚಿಟ್ಟದ್ದು ಪರರಿಗೆ' ಎಂಬ ನೀತಿಯನ್ನು ಪರೋಕ್ಷವಾಗಿ ತಿಳಿಸುತ್ತದೆ. 'ಬಂದನಾ ಬ್ರೆಡ್‌ರಾಯ' ಹಳ್ಳಿಗಳಿಗೆ ವ್ಯಾಪಿಸುತ್ತಿರುವ ಆಧುನಿಕತೆಯ ಚಿತ್ರಣ. ದೆವ್ವ ಬಂತು ದೆವ್ವ, ದೇವರ ತಳ ಸಡಲಿದಾಗ ಕಥೆಗಳು ಮೂಢನಂಬಿಕೆಗಳ ವಿರುದ್ಧ ದನಿಯೆತ್ತಿವೆ. ಬಾಳೆಹಣ್ಣಿನಲ್ಲಿ ಭೇದಿ ಮಾತ್ರೆ ತಿನ್ನಿಸಿ ವನ್ನೂರ ಸ್ವಾಮಿಯನ್ನು ಫಜೀತಿಗಿಡಿಸಿದ್ದು 'ದೇವರ ತಳ ಸಡಲಿದಾಗ'ದ ತಿರುಳು. 'ಸಂತಪಿಟ್ಟನು ಜಠರದಲ್ಲಿ' ಕೂಳುಬಾಕ ಬಾಷಾಸಾಬನ ಊಟದ ವರ್ಣನೆ. 'ಕೋನ' ಮಾಪಕ ಕಥೆ ಸಿಡುಕ ಪಾಟೀಲನ ಮೇಲೆ ಜವಾನ ತಿರುಗಿಬಿದ್ದ ಸನ್ನಿವೇಶವಾಗಿದೆ.

ಬಯ್ಯುವವರನ್ನು ಹೊಗಳಬೇಕೇ?- ಹೌದೆನ್ನುತ್ತದೆ ಮಾತೇ ಜ್ಯೋತಿರ್ಲಿಂಗಪ್ಪಾಜಿ. ಬಯ್ಯುವುದನ್ನೇ ವೃತ್ತಿಯಾಗಿಸಿಕೊಂಡ ಲಿಂಗಪ್ಪಾಜಿ ಕೊತ್ತಚಿಂತಿಯ ಪಾಳೇಗಾರರನ್ನು ಬೈದು, ಅವರಿಂದ ಹೊಗಳಿಸಿಕೊಂಡ ಮೇಲೆ ಬಯ್ಯುವುದನ್ನೇ ಬಿಟ್ಟರು. ಹತ್ಯೆಯ ಕಸುಬನ್ನು ಬಿಟ್ಟ ಬಲರಾಮ, ಕತೆ ಹೇಳುವುದನ್ನು ನಿಲ್ಲಿಸಿದ ಕರಿಯಜ್ಜ ಹಾಗೂ ಬಯ್ಯುವುದನ್ನು ಬಂದ್ ಮಾಡಿದ ಲಿಂಗಪ್ಪಾಜಿ- ಇವರ ಮಧ್ಯೆ ಎಂಥ ಸಾಮ್ಯವಿದೆ!

ಕರಿಯಜ್ಜನ ಕತೆಗಳಂತೆ ಕುಂ.ವೀ. ಕತೆಗಳು ಸ್ವತಂತ್ರವಾಗಿ ಊರೂರು ಅಲೆದಾಡಿಕೊಂಡು, ಕೇಳುವವರ- ಓದುವವರ ಮನಸ್ಸಿನಲ್ಲಿ ಬೆಳೆಯುತ್ತಿರುವಂಥವು.

✣ **ಅನಂತ ಹುದೆಂಗಜೆ**, ಸಹಸಂಪಾದಕ, 'ಮಂಜುವಾಣಿ' ಮಾಸಪತ್ರಿಕೆ,
ಉಜಿರೆ-೫೭೪ ೨೪೦, ತಾ. ಬೆಳ್ತಂಗಡಿ (ದ.ಕ.)

✣

೧. ಸಾಲಾರ್‌ಜಂಗ್ ಮ್ಯೂಸಿಯಂನಲ್ಲಿ*

೧.

ನೆನ್ನೆ ಹಾಕಿದ ಸೆಲವಾರ್ ಸೂಟಿನ
ರಾಜನಿಲ್ಲ, ಇಂದು
ಅವನ ಕಾಲುಚೀಲದಿಂದ ಹಿಡಿದು
ಎಲ್ಲ ಬೆಚ್ಚಗಿರಿಸಿದ್ದಾರೆ, ಒಳಗೆ

ಜುಂಗು ಹಿಡಿದ ರೇಷ್ಮೆ ವಸ್ತ್ರ
ನುಣುಪು ಧೂಳಿನ ಆವರಣ
ಎಷ್ಟೇ ಕಾದರು ಹಾಳು ಬೀಳುವ
ಹಳದಿಯಾಗುವ ಭಾವಚಿತ್ರ

ಪ್ರತಿ ಕೋಣೆಗು ಅವನದೇ ಚಿತ್ರ
ಅವನ ಗೋತ್ರ ವೈಭವ
ಏನುಂಟು ಏನಿಲ್ಲ ಅವನಲ್ಲಿ
ಸಾಮಾನು ಬಹಳ

ರಾಜನ ಔದಾರ್ಯ ದೊಡ್ಡದು
ಬುದ್ಧನನ್ನೂ ಕರೆಸಿದ್ದಾನೆ, ಇಲ್ಲಿ
ಧ್ಯಾನ ಮುದ್ರೆಯಲ್ಲಿ
ಸಮ್ರಾಟನ ಕೆಳಗೆ ಯಾರಾದರೇನು?

ನ ಜಾನೇ ಕ್ಯಾ ಲಿಖಾ ಜಾತಾ
ದಾನೇ ದಾನೇ ಪೇ?
ಋಣವಿದ್ದಲ್ಲಿ ನಜರು ಹಾಕುತ್ತವೆ
ಕಲಾಕೃತಿಗಳು

೨.

ಜಂಗನ ಖಾಸಗಿ ಕೋಣೆ
ಮಲಗುವ ಮಂಚ
ಅದೇ ತೂಗುಕತ್ತಿ
ವಂದಿಮಾಗಧರ ದನಿ
ಬಾಗಿಲು ದಾಟಿ ನುಗ್ಗಲು
ಖಾಸಗಿಯ ಕದಿಯಲು
ಎಷ್ಟು ಭದ್ರತೆ!

೩.

ನೆತ್ತಿ ನೆರೆವ
ಬಿಳಿಕೂದಲ ರಾಜ ಇವನಲ್ಲ
ಸಡಿಲಗೊಂಡು ಹಲ್ಲು ಅಲ್ಲಾಡುವುದಿಲ್ಲ
ಬೆವರುವ ಒಣಗುವ ಬಾಯಾರುವ
ಲಕ್ಷಣಗಳಿಲ್ಲ
ಸಾಮಾನ್ಯರ ಸೂತಕಗಳೊಂದೂ
ಇವನಿಲ್ಲ
ಕತ್ತಲಾದರೂ ಪೋಷಾಕು ಕಳಚುವ
ಹಂಗಿಲ್ಲ
ಸದಾ ಸುಖಿ ಸದಾ ಸುಖಿ
ಜಂಗ ಬಹುಪರಾಕ್...

* ಹೈದರಾಬಾದ್‌ನ ಸಾಲಾರ್‌ಜಂಗ್ ಮ್ಯೂಸಿಯಂನಲ್ಲಿ ೨೨ಕ್ಕೂ ಮಿಕ್ಕಿದ ಬೃಹತ್ ಕೋಣೆಗಳಲ್ಲಿ ದೇಶವಿದೇಶಗಳ ಕಲಾಕೃತಿಗಳಿವೆ.

೨. ತಳಕು

ಕಡೇ ಸಾಲು ಎತ್ತಿಕೊಡು
ಹಾಡುವೆ ಮುಂದಿನದನ್ನು
ನಿನ್ನ ಸಂಭಾಷಣೆಯ ತುದಿಪದ
ಕೊಡು, ಪಾತ್ರ ನಿರ್ವಹಿಸುವೆ
ಪರಾಗರೇಣುವಿದ್ದರೆ ಸಂತಾನ ಸುಲಭ
ಹೂವಿನ ದಂಟು ದುಂಬಿಗೆ ಸರಾಗ
ಹೊಕ್ಕುಳ ಬಳ್ಳಿಯ ನಂಟಿದ್ದರೆ
ಒದ್ದೆ ಮಿದುವಾಗುವುದು ಎದೆ
ಅರ್ಥ ಅನರ್ಥಕ್ಕೆ, ಧ್ವನಿ ಅಸ್ಪಷ್ಟತೆಗೆ
ಹೀಗೆ ಯಾವುದು ಯಾವುದಕ್ಕೋ ದಿಕ್ಕು
ಇಂಥಲ್ಲಿ ಪದ್ಯಕ್ಕೆ ಜಾಗವಿದೆ.

✦ ತಾರಿಣಿ ಶುಭದಾಯಿನಿ :
ಸಿರಿ, ೧ನೇ ಕ್ರಾಸ್, ನೃಪತುಂಗ ಬಡಾವಣೆ
ಬ್ಯಾಂಕ್ ಕಾಲನಿ, ಚಿತ್ರದುರ್ಗ-೫೭೭ ೫೦೧ ✦

ಎಮಿಲಿ ಡಿಕಿನ್‌ಸನ್‌ಳ ೧೫ ಕವನಗಳು

ಎಲ್. ವಿ. ಶಾಂತಕುಮಾರಿ

೧. ಜಗತ್ತಿಗೊಂದು ಪತ್ರ

ಎಂದೂ ನನಗೆ ಬರೆಯದಿದ್ದ ಈ ಜಗಕೆ
ಇದು ನನ್ನ ಪತ್ರ.
ಪ್ರಕೃತಿ ಹೇಳಿದಳು ಕೋಮಲ ವೈಭವದ
ಸರಳ ವಾರ್ತೆಯನು.
ಅವಳ ಸಂದೇಶ ರವಾನಿಸಲ್ಪಟ್ಟಿದೆ
ನಾನು ನೋಡಲಾಗದ ಕೈಗಳಿಗೆ.
ನನ್ನಕ್ಕರೆಯ ದೇಶ ಬಾಂಧವರೆ, ಅವಳ ಪ್ರೀತಿಗಾಗಿ
ವಿಮರ್ಶಿಸಿ ನನ್ನನ್ನು ಸೌಮ್ಯವಾಗಿ.

೨. ಭರವಸೆಯೊಂದು ಗರಿಗಳ ವಸ್ತು

ತುಪ್ಪುಳ ಹೊಂದಿರುವ ವಸ್ತು ಭರವಸೆಯೆಂಬುವುದು
ಆತ್ಮದಲ್ಲದು ಬಂದು ತಂಗುವುದು.
ಮತ್ತು ಪದಗಳಿಂದ ರಾಗವನ್ನದು ಹಾಡುವುದು
ಮತ್ತು ನಿಲ್ಲಿಸುವುದಿಲ್ಲ ಹಾಡನೆಂದೆಂದೂ.
    ಕೇಳಿಸುವುದದು ಅತ್ಯಂತ ಮಧುರವಾಗಿ ಬಿರುಗಾಳಿಯಲ್ಲಿ.
    ಎಷ್ಟೋ ಮಂದಿಯನು ಬೆಚ್ಚಗಿಟ್ಟಂಥ
    ಆ ಪುಟ್ಟ ಹಕ್ಕಿಯನು ದಿಗ್ಭ್ರಮೆಗೊಳಿಸಿದಂಥ
    ಆ ಬಿರುಗಾಳಿ ತೀಕ್ಷ್ಣವಿದ್ದಿರಲೇ ಬೇಕು.
ಅತ್ಯಂತ ಶೈತ್ಯದ ನಾಡಿನಲು ಕೇಳಿದ್ದೇನೆ ನಾನದನು
ಮತ್ತು ಕೇಳಿದ್ದೇನೆ ಅಪರಿಚಿತ ಸಾಗರದಲು
ಆದರೂ ಎಂದೂ ಅತ್ಯಂತ ಕಷ್ಟ ಸಮಯದಲು
ಕೇಳಲಿಲ್ಲ ನನ್ನಿಂದ ಅದು ತುಣುಕು ರೊಟ್ಟಿಯನು.

೩. ಸೂರ್ಯ ಹೇಗೆ ಉದಯಿಸಿದನೆಂದು

ತಿಳಿಸುವೆನು ನಿಮಗೆ ಸೂರ್ಯ ಹೇಗೆ ಉದಯಿಸಿದನೆಂದು
ಒಮ್ಮೆ ಅಲಂಕಾರದ ಪಟ್ಟಿಯಂತಿದ್ದನು.
ಈಜಿದವು ಪದ್ಮರಾಗದಲಿ ಇಗರ್ಜಿಯ ಗೋಪುರಗಳು
ಸುದ್ದಿ ಓಡಿತು ಅಳಿಲುಗಳಂತೆ.
    ಬೆಟ್ಟಗಳು ತಮ್ಮ ಕುಲಾವಿಗಳ ಕಳಚಿದವು
    ಹಾಡುಹಕ್ಕಿಗಳು ಗಾಯನಕೆ ಶುರು ಹಚ್ಚಿದವು

ಆಗ ನನಗೆ ನಾನೇ ಹೇಳಿಕೊಂಡೆ ಮೆದುವಾಗಿ
‘ಅದು ಸೂರ್ಯನೇ ಆಗಿದ್ದಿರಬೇಕು’.
ಆದರೆ ಅವನು ಮುಳುಗಿದ ಹೇಗೆ, ನನಗೆ ತಿಳಿಯದು.
ಅಲ್ಲಿತ್ತು ನೇರಳೆ ಬಣ್ಣದ ಅಟ್ಟಣಿಗೆಯೊಂದು
ಹಳದಿ ಬಣ್ಣದ ಚಿಕ್ಕ ಬಾಲಕ ಬಾಲಕಿಯರು
ಯಾವಾಗಲೂ ಹತ್ತಿ ಇಳಿಯುತ್ತಿದ್ದಂತಹದು.
ಅವರೆಲ್ಲ ತಲುಪಿದ ಮೇಲೆ ಅತ್ತ ಕಡೆಯ ದಡವನ್ನು
ಬೂದು ಬಣ್ಣದ ನಿಲುವಂಗಿಯ ಪಾದ್ರಿಯೊಬ್ಬನು
ಮೆಲ್ಲನೆ ಇಳಿಸಿದನು ಸಂಜೆಯ ಅಡ್ಡಮರವನು
ಮತ್ತು ನಡೆಸಿಕೊಂಡು ಹೋದನು ಮಂದೆಯನು.

೪. ಯಶಸ್ಸು ಪರಿಗಣಿಸಲ್ಪಟ್ಟಿರುವುದು ಅತ್ಯಂತ ಸವಿಯೆಂದು

ಯಶಸ್ಸು ಪರಿಗಣಿಸಲ್ಪಟ್ಟಿರುವುದು ಅತ್ಯಂತ ಸವಿಯೆಂದು,
ಎಂದೂ ಯಶಸ್ವಿಗಳಾಗದವರಿಂದ.
ಅಮೃತವನು ಅರ್ಥ ಮಾಡಿಕೊಳ್ಳಲು
ಅತ್ಯಂತ ದಾರುಣತೆಯ ಅಗತ್ಯವಿಹುದು.
ಇಂದು ವಿಜಯ ಧ್ವಜ ಹಿಡಿದಿರುವ
ಕೆನ್ನೀಲಿ ಬಣ್ಣದ ಆ ದಂಡಿನಲ್ಲಿರುವ ಒಬ್ಬನೂ
ಹೇಳಲಾರ ವಿಜಯದ ಸೂತ್ರವನು
ಅಷ್ಟು ಸ್ಪಷ್ಟವಾಗಿ ಆ ಅವನಂತೆ,
ದೂರದ ಯಶೋಗಾನದೆಳೆ
ತನ್ನ ನಿಷಿದ್ಧ ಕಿವಿಗಳ ಮೇಲೆ
ಸ್ಪಷ್ಟ ಹಾಗೂ ಯಾತನಾಮಯವಾಗಿ ಆಸ್ಫೋಟಿಸುತ,
ಸೋಲಿಸಲ್ಪಟ್ಟು, ಸಾಯುತ್ತಿರುವವನಂತೆ.

೫. ನಾ ಮಡಿದೆ ಸೌಂದರ್ಯಕಾಗಿ

ನಾ ಮಡಿದೆ ಸೌಂದರ್ಯಕಾಗಿ, ಆದರಿನ್ನೂ
ಹೊಂದಿಕೊಳ್ಳುತ್ತಿರುವಾಗಲೆ, ಅಲ್ಲಿ ಗೋರಿಯಲಿ
ಹೂಳಲ್ಪಟ್ಟನೊಬ್ಬ, ಸತ್ಯಕಾಗಿ ಮಡಿದವನು,
ಹೊಂದಿಕೊಂಡಂತಿದ್ದ ಪಕ್ಕದ ಕೋಣೆಯಲಿ.
‘ನೀನೇಕೆ ವಿಫಲನಾದೆ?’ ಮೆಲ್ಲನವ ಕೇಳಿದ
‘ಸೌಂದರ್ಯಕಾಗಿ’ ನಾ ಉತ್ತರಿಸಿದೆ.
‘ಮತ್ತು ನಾನು ಸತ್ಯಕಾಗಿ, ಆ ಎರಡು ಒಂದೆ.
ನಾವೀಗ ಸೋದರರು’ ಅವ ಹೇಳಿದ.

ಹಾಗಾಗಿ, ಇರುಳಿನಲಿ ಭೇಟಿಯಾದ ಬಂಧುಗಳಂತೆ ನಾವು
ಆ ಕೋಣೆಗಳೆರಡರ ನಡುವೆ ಮಾತನಾಡಿದೆವು -
ಪಾಚಿ ಮುಟ್ಟುವ ತನಕ ನಮ್ಮ ತುಟಿಗಳನು -
ಮತ್ತು ಮುಚ್ಚುವ ತನಕ ನಮ್ಮ ಹೆಸರುಗಳನು.

೬. ನೊಣವೊಂದು ಝೇಂಕರಿಸುವುದ ಕೇಳಿದೆನು ನಾನು ಮಡಿದಾಗ

ನೊಣವೊಂದು ಝೇಂಕರಿಸುವುದ ಕೇಳಿದೆನು ನಾನು ಮಡಿದಾಗ.
ಕೊಠಡಿಯೊಳಗಣ ಆ ಸ್ತಬ್ಧತೆ
ಇತ್ತು ಬಿರುಗಾಳಿಗಳ ನಿಟ್ಟುಸಿರ ನಡುವಿನ
ಗಾಳಿಯೊಳಗಣ ನಿಶ್ಚಲತೆಯಂತೆ.
ತಮ್ಮನ್ನು ತಾವೆ ಹಿಂಡಿ ಒಣಗಿಸಿಕೊಂಡಿದ್ದವು ಸುತ್ತಲಿದ್ದ ಕಣ್ಣುಗಳು.
ದೃಢತೆಯನು ಒಟ್ಟುಗೂಡಿಸಿಕೊಳುತಿದ್ದವು ಉಸಿರುಗಳು
ಆ ಕಡೆಯ ಆಕ್ರಮಣಕಾಗಿ – ಆ ದೊರೆಯ
ಬರುವಿಕೆಗೆ, ಆ ಕೊಠಡಿಯಲಿ, ಸಾಕ್ಷಿ ಆಗುವುದಕಾಗಿ
ಉಯಿಲು ಮಾಡಿದೆನು ನನ್ನ ನೆನಪಿನ ವಸ್ತುಗಳನು, ರುಜು ಮಾಡಿದೆನು
ನನ್ನದಾದ ಯಾವ ಭಾಗಗಳನು
ವಿತರಿಸಬಹುದೊ ಅವೆಲ್ಲವನು.
ಆಗ ನಡುವೆ ಬಂದಿತು ನೊಣವೊಂದು,
ಬೆಳಕಿಗು ಮತ್ತು ನನಗು ನಡುವೆ
ತನ್ನ ನೀಲಿ ಸಂದಿಗ್ಧ ಅಪಚಲನೆಯ ಝೇಂಕಾರದೊಡನೆ.
ಮತ್ತು ಕಿಟಕಿಗಳು ವಿಫಲವಾದವು – ಮತ್ತು ಆಗ
ಕಾಣಿಸುವುದನು, ನಾನು ನೋಡಲಾರದಾದೆನು.

೭. ಅಂತ್ಯಕ್ಕೆ ಮುನ್ನವೇ ಅಳಿದಿತ್ತು ಎರಡು ಬಾರಿ ನನ್ನ ಬಾಳು

ಅಪರಾಂತ್ಯಕ್ಕೆ ಮುನ್ನವೇ ಅಳಿದಿತ್ತು ಎರಡು ಬಾರಿ ನನ್ನ ಬಾಳು.
ಆದರಿನ್ನೂ ನೋಡುವುದುಳಿದಿದೆ,
ಅಮರತ್ವ ಅನಾವರಣ ಮಾಡುವುದ
ಮೂರನೆಯ ಘಟನೆಯನು ನನಗೆಂದು.
ಅಷ್ಟೇ ಅಗಾಧ, ಗ್ರಹಿಸಲು ಅಷ್ಟೇ ನಿರಾಶಾಭರಿತ
ಎರಡು ಬಾರಿ ಘಟಿಸಿದಂಥ ಆ ಎರಡರಂತೆ.
ನಾವು ತಿಳಿದಿರುವುದು ಬೇರ್ಪಡುವುದೊಂದನು ಮಾತ್ರ ಸ್ವರ್ಗದಿಂದ.
ಮತ್ತು ಬೇಕಾಗಿರುವುದೂ ಅದೊಂದೇ ನಮಗೆ ನರಕದಿಂದ.

೮. ಆತ್ಮ ಅರಸುವಳು ತನ್ನದೇ ಸಂಗಾತಿಯನು

ಆತ್ಮ ಅರಸುತ್ತಾಳೆ ತನ್ನದೇ ಸಂಗಾತಿಯನ್ನು -
ನಂತರ ಮುಚ್ಚಿಬಿಡುತ್ತಾಳೆ ಬಾಗಿಲನ್ನು -
ಅವಳ ದೈವೀ ಭವ್ಯತೆಯ ಎದುರು
ಕಾಣಿಸದು ಬೇರೇನೂ.
ಅವಿಚಲಿತಳಾಗಿ ಗಮನಿಸುತ್ತಾಳವಳು, ರಥಗಳು
ತಗ್ಗಿನಲ್ಲಿರುವ ತನ್ನ ಹೆಬ್ಬಾಗಿಲ ಬಳಿ ನಿಲ್ಲುವುದನ್ನು,
ಅವಿಚಲಿತಳಾಗಿ ನೋಡುತ್ತಾಳೆ, ಚಕ್ರವರ್ತಿ ಮಂಡಿಯೂರುತ್ತಿರುವುದನ್ನು
ಅವಳ ಹುಲ್ಲು ಚಾಪೆಯ ಮೇಲೆ.
ನಾನವಳನರಿತಿದ್ದೇನೆ - ವಿಪುಲ ಜನಾಂಗಗಳಿಂದ
ಆರಿಸುವಳು ಒಬ್ಬನನು.
ನಂತರ ಮುಚ್ಚಿಬಿಡುವಳು ತನ್ನೆಲ್ಲ ಆಸಕ್ತಿಯ ಕವಾಟಗಳನು
ಕಲ್ಲಿನಂತೆ.

೯. ಪರಮ ಸಂಕಷ್ಟದ ನಂತರ ಬರುವುದು ಕ್ರಮಬದ್ಧ ಸಂವೇದನೆ

ಪರಮ ಸಂಕಷ್ಟದ ನಂತರ ಬರುವುದು ಕ್ರಮಬದ್ಧ ಸಂವೇದನೆಯೊಂದು.
ನರಗಳು ವಿಧ್ಯುಕ್ತ ಕರ್ಮಾಚರಣೆಯಲ್ಲಿ ಕೂಡುವುವು ಸಮಾಧಿಗಳಂತೆ
ಸೆಟೆದ ಹೃದಯ ಪ್ರಶ್ನಿಸುವುದು : ಅವನೆ ಏನು ಅದ ಹೊತ್ತವನು ?
ನಿನ್ನೆಯೋ ? ಅಥವಾ ಶತಮಾನಗಳ ಮೊದಲೊ ?
ಯಾಂತ್ರಿಕ ಪಾದಗಳು ಸುತ್ತುವುವು
ನೆಲದಲ್ಲಿ, ಅಥವಾ ಗಾಳಿಯಲ್ಲಿ ಅಥವಾ ಒತ್ತಾಯವಾಗಿ
ಆ ಹಲಗೆಯ ಹಾದಿಯಲ್ಲಿ
ನೋವಿಗೆ ಲಕ್ಷಿಸದೆ ಬೆಳೆದು
ಸ್ಫಟಿಕ ಶಿಲೆಯ ಸಂತೃಪ್ತಿಯಲಿ, ಕಲ್ಲಾಗುವುವು.
ಇದೊಂದು ಸೀಸದಂತಹ ಭಾರದ ಗಳಿಗೆ
ಇದನ್ನು ಪಾರಾಗಿ ಬದುಕಿ, ನೆನೆಸಿಕೊಂಡರೆ
ಹಿಮವಾಗುತಿರುವವರು ಹಿಮವ ನೆನಪಿಸಿಕೊಳುವಂತೆ,
ಮೊದಲು - ಕೊರೆವ ಛಳಿ - ಮತ್ತೆ ಮಂಪರು - ನಂತರ ಬಿಡುಗಡೆ.

೧೦. ಮಲಗಿರುವಳು ಅವಳು ಆಟದಲೊ ಎನುವಂತೆ

ಮಲಗಿರುವಳು ಅವಳು ಆಟದಲೊ ಎನುವಂತೆ
ಅವಳ ಜೀವ ಆಗಲೇ ಹಾರಿತ್ತು ದೂರಕ್ಕೆ
ಹಿಂತಿರುಗಿ ಬರುವ ಉದ್ದೇಶದಿಂದ
ಆದರೆ ಶೀಘ್ರವಾಗಿಯಲ್ಲ.

ಆಟದ ವಿರಾಮದಲೆಂಬಂತೆ
ಅರ್ಧ ಕೆಳಬಾಗಿದ್ದ ಅವಳ ಉಲ್ಲಾಸದ ಬಾಹುಗಳು
ಒಂದು ಕ್ಷಣ ಮರೆತು ಬಿಟ್ಟಿದ್ದವು
ಚಲಿಸುವ ಉಪಾಯವನು.
ಅರ್ಧ ತೆರೆದ ಅವಳ ಕುಣಿವ ಕಣ್ಣುಗಳು
ಅವುಗಳ ಒಡೆಯನನ್ನೂ
ನಿಮ್ಮ ರಂಜನೆಗಾಗಿ
ಮಿನುಗುತಿದ್ದಾಳೆ ಎನುವಂತಿದ್ದವು.
ಅವಳ ಮುಂಜಾವು ಬಾಗಿಲಲಿ
ಸಂಚು ಹೂಡಿತ್ತು - ನನಗಿದು ನಿಶ್ಚಿತ -
ಅತಿ ಹಗುರ - ಅತಿ ಗಹನ
ನಿದ್ರೆಗವಳನ್ನು ಒತ್ತಾಯಿಸಿತ್ತು.

೧೧. ಮನೆಯೊಳಗಣ ಗಲಿಬಿಲಿ

ಮರಣಾನಂತರದ ಮುಂಜಾವಿನಲ್ಲಿ
ಮನೆಯೊಳಗಣ ಗಲಿಬಿಲಿ,
ಈ ಇಳೆಯಲ್ಲಿ ಅಭಿನಯಿಸಲ್ಪಡುವ
ಎಲ್ಲ ಕ್ರಿಯೆಗಳಿಗಿಂತ ಅತ್ಯಂತ ಗಂಭೀರ.
ಗುಡಿಸಿಬಿಡುವುದು ಎದೆಯನ್ನು
ದೂರವಿಡುವುದು ಪ್ರೇಮವನ್ನು.
ಅನಂತತೆಯ ತನಕ
ಮತ್ತೆ ಬಳಸಲಿಚ್ಛಿಸುವುದಿಲ್ಲ ನಾವದನ್ನು.

೧೨. ಕಾಲ ಮಾಯಿಸುವನು ಎನ್ನುವರು

'ಕಾಲ ಮಾಯಿಸುವನು' ಎಂದು ಹೇಳುವರು,
ಮಾಯಿಸಲಿಲ್ಲ ಕಾಲ ಎಂದೂ :
ಗಟ್ಟಿಗೊಳ್ಳುವುದು ಅಸಲಿ ವೇದನೆ
ಸ್ನಾಯುಗಳಂತೆ, ವಯಸು ಬೆಳೆದಂತೆ.
ಕಷ್ಟಗಳ ಪರೀಕ್ಷೆಯಾಗಿಹುದು ಕಾಲ
ಆದರದು ಚಿಕಿತ್ಸೆಯಲ್ಲ.
ಇದು ಹೀಗೆಂದು ಪ್ರಮಾಣಿತವಾದಲ್ಲಿ
ಧೃಢೀಕರಿಸುವುದು ಬೇನೆಯೇ ಇರಲಿಲ್ಲ ಎಂಬುದನು

೧೩. ಬಿರುಗಾಳಿ

ಮೆಲ್ಲನಲ್ಲಾಡಿಸತೊಡಗಿತು ಗಾಳಿ
ಬುಸುಗುಟ್ಟುವ ಮಂದ್ರ ಸ್ವರದಲ್ಲಿ.
ಎಸೆದಿತು ಭೂಮಿಯೆಡೆಗೆ ಒಂದು ಅಪಾಯದ ಸೂಚನೆ
ಅಂತೆಯೇ ಗಗನದೆಡೆಗೂ ಒಂದು ಅಪಾಯದ ಸೂಚನೆ.
ಮರದಿಂದ ಎಲೆಗಳು ತಂತಾನೆ ಕೊಂಡಿ ಕಳಚಿಕೊಂಡವು.
ಎಲ್ಲ ಕಡೆಯಲ್ಲೂ ಚೆದುರಿ ಬಿದ್ದವು.
ಮೋಡ ತನ್ನ ತಾನೇ ಸುತ್ತುಗಳ ಮಾಡಿಕೊಂಡಿತು
ಮತ್ತು ಬೆನ್ನಟ್ಟಿ ಮತ್ತೆ ಎಸೆಯಿತು.

ರಸ್ತೆ ಮೇಲೆ ಚುರುಕಾದವು ಚಕ್ಕಡಿಗಳು.
ಗುಡುಗು ಧಾವಿಸಿತು ಮಂದಗತಿಯೊಳು.
ಸಿಡಿಲು ತೋರಿಸಿತು ತನ್ನ ಹಳದಿ ಕೊಕ್ಕನ್ನು
ಮತ್ತು ಕ್ರುದ್ಧ ನೀಲ ಮುಖವನ್ನು.
ಹಕ್ಕಿಗಳು ಗೂಡುಗಳಿಗೆ ಅಡ್ಡ ಮರವಿಟ್ಟವು
ಜಾನುವಾರುಗಳು ಕೊಟ್ಟಿಗೆಗಳಿಗೆ ಧಾವಿಸಿದವು
ಆಗ ಬಂದಿತು ಮಳೆಯ ಒಂದು ದೈತ್ಯ ಹನಿ,
ಮತ್ತಾಗ, ಅಣೆಕಟ್ಟುಗಳ ತಡೆದು ಹಿಡಿದಿದ್ದ
ಕೈಗಳು, ಹಿಡಿತವನೆ ಬಿಟ್ಟುಬಿಟ್ಟವೋ ಎನುವಂತೆ
ಹಾಳುಗೆಡವಿತು ನೀರು ಆಕಾಶವನ್ನು
ಆದರೆ ಉಳಿಸಿತ್ತು ನನ್ನ ತಂದೆಯ ಮನೆಯನ್ನು
ಬರಿ ಒಂದು ಮರವನ್ನು ಮಾತ್ರ ಸೀಳುತ್ತ.

೧೪. ನಾನನುಭವಿಸಿದೆನು ಶವಸಂಸ್ಕಾರವನು ನನ್ನ ಮಿದುಳಿನಲಿ

ನಾನನುಭವಿಸಿದೆನು ಶವಸಂಸ್ಕಾರವನು ನನ್ನ ಮಿದುಳಿನಲಿ
ಅಳುವವರು ಅತ್ತಿಂದಿತ್ತ ಇತ್ತಿಂದತ್ತ
ಹೆಜ್ಜೆ ಹಾಕುತ್ತಲಿದ್ದರು– ಹೆಜ್ಜೆ ಹಾಕುತ್ತಲಿದ್ದರು, ಪ್ರಜ್ಞೆ
ಭೇದಿಸಲ್ಪಡುತ್ತಿತ್ತೆನಿಸುವ ತನಕ.
ಆ ಎಲ್ಲರೂ ಕುಳಿತ ಮೇಲೆ,
ಶವಸಂಸ್ಕಾರದ ಪ್ರಾರ್ಥನೆ ನಗಾರಿಯಂತೆ
ಬಡಿಯುತ್ತಿತ್ತು - ಬಡಿಯುತ್ತಿತ್ತು, ನನ್ನ ಮನಸ್ಸು
ನಿಷ್ಕ್ರಿಯವಾಗುತ್ತಿತ್ತೆಂದು ನಾನು ಯೋಚಿಸುವ ತನಕ.
ಆಗ, ಪೆಟ್ಟಿಗೆಯೊಂದನೆತ್ತುವುದ ಕೇಳಿಸಿಕೊಂಡೆನು
ಮತ್ತು ನನ್ನಾತ್ಮಕಡ್ಡವಾಗಿದ್ದ ಕೀರಲೊಂದನು
ಮತ್ತದೇ ಸೀಸಧ ಪಾದರಕ್ಷೆಗಳ ದನಿಯನ್ನು
ಆಗ ಅಂತರಿಕ್ಷ ನಿದಾನವಾಗಿ ಘಂಟಾನಾದ ಮಾಡತೊಡಗಿತು
ಇಡೀ ಸ್ವರ್ಗವೆಲ್ಲವೂ ಒಂದು ಘಂಟೆಯೋ ಎಂಬಂತೆ,
ಅಸ್ತಿತ್ವ ಬರಿಯದೊಂದು ಕಿವಿಯಾಗಿ
ನಾನು, ಮೌನ ಮತ್ತು ಹಲವು ಅಪರಿಚಿತ ಕುಲಗಳು
ನಾಶವಾದವು ಇಲ್ಲಿ ಏಕಾಂತದಲ್ಲಿ.
ಆಗ ಮುರಿಯಿತು ವಿವೇಚನೆಯಲೊಂದು ಹಲಗೆ
ಮತ್ತು ಕೆಳಗೆ ಬಿದ್ದಿತು - ಮತ್ತೂ ಕೆಳಗೆ
ಒಂದೊಂದು ಇಳಿತದಲು, ಬಡಿಯಿತೊಂದೊಂದು ಜಗತ್ತಿಗೆ
ಮತ್ತು ಅರಿಯುವಿಕೆ ಕೊನೆಯಾಯಿತು ಕಡೆಗೆ.

೧೫. ಅವಳು ಜೀವಿಸಿದ್ದ ಕಡೆಯ ರಾತ್ರಿ*

ಅವಳು ಬದುಕಿದ್ದ ನಿನ್ನೆ ರಾತ್ರಿ
ಒಂದು ಸಾಮಾನ್ಯ ರಾತ್ರಿ
ಅವಳು ಸಾಯುವುದೊಂದನ್ನು ಹೊರತು – ಅದರಿಂದ ನಮಗೆ
ಬೇರೆಯೇ ಕಂಡಿತ್ತು ಪ್ರಕೃತಿ.

ಸೂಕ್ಷ್ಮತಮ ವಸ್ತುಗಳನೂ ಗಮನಿಸಿದೆವು
ಹಿಂದೊಮ್ಮೆ ಕಡೆಗಣಿಸಿದ್ದ ವಿಷಯಗಳೂ
ಈ ಮಹಾಬೆಳಕಿನಿಂದ, ಮೂಡಿದ್ದುವು ನಮ್ಮ ಮನಸುಗಳ ಮೇಲೆ
ದಪ್ಪಕ್ಷರಗಳಲಿ, ಕೊರೆದಿದ್ದಂತೆ.

ಅವಳು ಜೀವಿಸಿದ ಕೊನೆಯ ಕೋಣೆಗೂ
ಮತ್ತು ಇತರರು ನಾಳೆಯೂ
ಜೀವಿಸಿರುವ ಬೇರೆ ಕೋಣೆಗಳಿಗೂ
ನಾವು ಓಡಾಡುತ್ತಿದ್ದಾಗ ಒಳಹೊರಗೆ

ನಿಂದ್ಯವೆನಿಸಿತಿದು : ಬೇರೆಯವರು ಜೀವಿಸಬಹುದಾದಾಗ
ಅವಳು ಶಾಂತವಾಗಿ ಕೊನೆಯುಸಿರನೆಳೆಯಬೇಕೆಂಬುದು.
ಅನಂತವೆನಿಸುವಂತಹ ಅಸೂಯೆ
ಮೊಳೆಯಿತು ಅವಳ ಬಗೆಗೆ.

ಅವಳುಸಿರು ಹೋಗುತ್ತಿರುವಾಗ ನಾವು ಕಾದೆವು.
ಅದೊಂದು ಸೂಕ್ಷ್ಮ ಸಂಕಟದ ಕಾಲವಾಗಿತ್ತು.
ಮಾತನಾಡಲಾರದಂಥ ತಾಕಲಾಟದಲ್ಲಿದ್ದುವು ನಮ್ಮಾತ್ಮಗಳು
ಕಟ್ಟಕಡೆಗೆ ಬಂದಿತ್ತು ಸೂಚನೆ.

ಅವಳು ಹೆಸರಿಸಿದಳು – ಮತ್ತು ಮರೆತಳು
ನಂತರ ಲಘುವಾಗಿ, ಹುಲ್ಲಿನೆಳೆ ಬಾಗುವಂತೆ
ನೀರಿನೆಡೆಗೆ, ಬಾಗಿದಳವಳು – ಇಷ್ಟು ಒದ್ದಾಡಲಿಲ್ಲ
ಸಮ್ಮತಿಸಿದಳು ಮತ್ತು ಮಡಿದಳು.

ಮತ್ತು ನಾವು – ಅವಳ ಕೂದಲನು ಸರಿ ಮಾಡಿದೆವು
ಮತ್ತು ಅವಳ ತಲೆಯನ್ನು ನೇರ ಮಾಡಿದೆವು –
ನಂತರ ಭಯಗೊಳಿಸುವಂಥ ವಿರಾಮ ನಮಗಿತ್ತು
ನಂಬಿಕೆಯನು ಕ್ರಮಬದ್ಧಗೊಳಿಸಲು.

* [illegible]

✤ ಎಸ್. ಪಿ. [illegible] : # [illegible]
[illegible]

ರಜನಿ ಬಕ್ಷಿ ಅವರ 'ಬಾಪು ಕುಟಿ'

ಕೆ. ಸತ್ಯನಾರಾಯಣ

ನಮ್ಮನ್ನು ನಿಜವಾಗಿಯೂ ಕಲಕುವ, ನಮ್ಮ ಒಳ ಹಸಿವಿಗೆ ಸ್ಪಂದಿಸುವ ಪುಸ್ತಕವೊಂದು ಯಾವ ರೀತಿಯ ಸಾರ್ವಜನಿಕ/ಸಮೂಹ ಮಾಧ್ಯಮದ ಪರಿಚಯವೂ ಇಲ್ಲದೆ ಸ್ನೇಹಿತರ ವಲಯದಲ್ಲೇ ಹೇಗೆ ಬೆಳೆದು ಆಪ್ತವಾಗಬಹುದೆಂಬುದಕ್ಕೆ 'ಬಾಪು ಕುಟಿ'ಯ ಅನುವಾದದ ಈಚಿನ ಪ್ರಕಟಣೆಯೇ ಸಾಕ್ಷಿಯಾಗಿದೆ.

ಈ ಪುಸ್ತಕ ನನಗೆ ಓದಲು ದೊರಕಿದ್ದು ಆಕಸ್ಮಿಕವಾಗಿ. ಓದಿದ ತಕ್ಷಣವೇ ಗುಂಗು ಹಿಡಿಸಿತು. ನಮಗೆಲ್ಲರಿಗೂ ಆದರ್ಶದ ಬಗ್ಗೆ ಪ್ರೀತಿ, ಗೌರವ ಇರುತ್ತದೆ. ಆದರೆ ಗಾಂಧಿ ಆಗುತ್ತೇವೆ, ಇಲ್ಲದಿದ್ದರೆ ಹೀಗೆ ಕುಳಿತುಕೊಂಡೇ ಇರುತ್ತೇವೆ ಎಂಬ ನಿಲುವಿನವರಾದ ನನ್ನಂತಹವರೂ ನಮ್ಮ ನಮ್ಮ ಪುಟ್ಟ ಪ್ರಪಂಚದೊಳಗೇ, ಆತ್ಮೀಯ ವಲಯದೊಳಗೇ ತಾನು ಮಾಡಬಹುದೆಂದು ಯೋಚಿಸುವುದಿಲ್ಲ. ಈ ಪುಸ್ತಕದಲ್ಲಿ ಚರ್ಚೆಗೆ ಒಳಗಾದವರೆಲ್ಲ ಗಾಂಧಿಯಷ್ಟು ದೊಡ್ಡವರಾಗಲು ಪ್ರಯತ್ನಪಡಲಿಲ್ಲ, ನಾವೇಕೆ ಗಾಂಧಿಯಂತಲ್ಲ ಎಂದು ಯೋಚಿಸಲೂ ಇಲ್ಲ. ಅವರವರ ಸ್ವಭಾವ, ವ್ಯಕ್ತಿ ವೈಶಿಷ್ಟ್ಯವನ್ನು ಉಳಿಸಿಕೊಂಡೇ ತಾವು ಗಾಂಧಿವಾದಿಗಳೆಂದು ಕೂಡ ಹೇಳಿಕೊಳ್ಳದೆ ಗಾಂಧಿಯನ್ನೂ ಕ್ರಿಯಾಶೀಲವಾಗಿಡುವ, ಜೀವಂತವಾಗಿಡುವ ಪ್ರಯತ್ನ, ಪ್ರಯೋಗ ಮಾಡಿದವರು. ಹೀಗಾಗಿ ಇಂತಹದೊಂದು ಪುಸ್ತಕವನ್ನು ಕನ್ನಡ ಓದುಗರ ವಿಶಾಲ ವಲಯಕ್ಕೆ ತಲುಪಿಸಬೇಕೆಂಬ ನನ್ನ ಆಸೆಗೆ ಇಂಬುಗೊಟ್ಟವರು ಜಿ. ಎಸ್. ರಂಗನಾಥರಾವ್. ಪತ್ರಿಕೆಯೊಬ್ಬರ ಸಂಪಾದಕರನ್ನು ನಾನಾಗೇ ಕೇಳಿಕೊಂಡು ಅವಕಾಶ ಕೋರಿ, ನಂತರ ಬರೆದ ಕೆಲವೇ ಬರೆಹಗಳಲ್ಲಿ ಇದೂ ಒಂದು. ಲೇಖನ ಪ್ರಕಟವಾದ ನಂತರ ಪತ್ರಿಕೆಯಲ್ಲಿ ಪ್ರಕಟವಾದ ಪ್ರತಿಕ್ರಿಯೆ ಅದ್ಭುತವಾಗಿತ್ತು.

ಓದಿದ ಉತ್ತಮ ಪುಸ್ತಕಗಳನ್ನೆಲ್ಲ ತಕ್ಷಣವೇ ಸ್ನೇಹಿತರ ಕೈಲೂ ಓದಿಸುವ ನನ್ನ ಎಂದಿನ ಅಭ್ಯಾಸದಂತೆ ಮೊದಲಿಗೆ ಎನ್. ವಿದ್ಯಾಶಂಕರ್ ಅವರ ಹತ್ತಿರ ಓದಿಸಿದೆ. ನಂತರ ಎಚ್.ಎಸ್. ರಾಘವೇಂದ್ರರಾವ್‌ಗೆ ಹೇಳಿರಬೇಕು. ಓದಿದ ನಂತರ ಅವರು ಈ ಪುಸ್ತಕವನ್ನು,– ವಿಶೇಷವಾಗಿ ಇದರಲ್ಲಿ ಬರುವ ರವೀಂದ್ರ ಶರ್ಮಾನ ವ್ಯಕ್ತಿತ್ವವನ್ನು ಎಷ್ಟು ಹಚ್ಚಿಕೊಂಡಿದ್ದರೆಂದರೆ– ನಾನೇ ಇದನ್ನು ಅನುವಾದಿಸುತ್ತೇನೆ ಎಂದು ಪದೇ ಪದೇ ಹೇಳುತ್ತಿದ್ದರು. ಕರ್ನಾಟಕದ ಹೊರಗಡೆ ಇರುವುದರಿಂದ ಅಭಿನವ ಪ್ರಕಾಶನದ ರವಿಕುಮಾರ ಅವರೊಡನೆ ನನ್ನದು ಬಿಟ್ಟು ಬಿಟ್ಟು ಇರುವ ಸಂಬಂಧ. ಫೋನ್‌ನಲ್ಲಿ ಸಿಕ್ಕಿದಾಗಲೆಲ್ಲ ಈ ಪುಸ್ತಕದ ಬಗ್ಗೆ ಉತ್ಸಾಹದಿಂದ ಪ್ರಸ್ತಾಪಿಸುತ್ತಿದ್ದರು. ಯಾರ ಯಾರ ಕೈಲಿ ಈ ಪುಸ್ತಕ ಓದಿಸಿದೆ ಎಂದೆಲ್ಲಾ ಹೇಳಿ, ಪುಸ್ತಕದ ಅನುವಾದ ಕೂಡ ಸಿದ್ಧವಾಗುತ್ತಿದೆ ಎಂದು ಹೇಳುತ್ತಿದ್ದರು. ಈ ಪ್ರಸ್ತಾಪವೆಲ್ಲ ಹೀಗೆ ಮುಗಿದು ಹೋಗುತ್ತದೆ, ರವಿಕುಮಾರ ಹತ್ತಿರ ಪ್ರಕಟಣೆಗೆ ಕಾಯ್ದುಕೊಂಡಿರುವ ಪುಸ್ತಕಗಳ ಸಾಲಿನಲ್ಲಿ ಈ ಪುಸ್ತಕಕ್ಕೆ ಆದ್ಯತೆ ಇರಲಾರದು ಎಂದೆಲ್ಲಾ ಅಂದುಕೊಳ್ಳುತ್ತಿದ್ದಾಗ ಪ್ರಕಟವಾಗಿ ಬಂದ ಈ 'ಬಾಪು ಕುಟಿ' ಕನ್ನಡ ಅನುವಾದದ ಮೂಲಕ ಮತ್ತೆ ನಮ್ಮನ್ನೆಲ್ಲಾ ಆಹ್ವಾನಿಸುತ್ತಿದೆ.

ಕೆ. ವೆಂಕಟರಾಜು ಅವರ ಅನುವಾದ ಸಮರ್ಪಕವಾಗಿದೆ. ಮತ್ತು ಅಂತರಂಗದ ಆಸಕ್ತಿಯಿಂದ ಮೂಡಿಬಂದುದಾಗಿದೆ. 'ಬಾಪು ಕುಟಿ' ಪ್ರಸ್ತುತಪಡಿಸುವ ಚಟುವಟಿಕೆಗಳು ಮತ್ತು ಆದರ್ಶಕ್ಕೆ ಅವರ ಅಂತರಂಗ ತೆರೆದುಕೊಂಡಿರುವುದರಿಂದ ಈ ಅನುವಾದಕ್ಕೆ ತಾಂತ್ರಿಕ ಪರಿಣತಿಯನ್ನು ಮೀರಿದ ಒಂದು ಆರ್ತತೆ ಕೂಡ ಪ್ರಾಪ್ತವಾಗಿದೆ. ವೆಂಕಟರಾಜು ಮುನ್ನುಡಿಯಲ್ಲಿ 'ಬಾಪು ಕುಟಿ' ಪ್ರಸ್ತುತಪಡಿಸುವ ರೀತಿಯ ಕ್ರಿಯಾಶೀಲತೆ ಕರ್ನಾಟಕದಲ್ಲಿ ಎಲ್ಲೆಲ್ಲಿ, ಯಾರಲ್ಲಿ ಕಂಡುಬಂದಿದೆ ಎಂಬುದನ್ನು ಚರ್ಚಿಸಿದ್ದಾರೆ. ಇಂಥವರು ಇಂತಹ ಸಂಘಟನೆಗಳನ್ನೊಳಗೊಂಡ– ಕರ್ನಾಟಕಕ್ಕೆ ವಿಶೇಷವಾದ– ಕೃತಿಯೊಂದನ್ನು ಕ್ಷೇತ್ರ ಕಾರ್ಯದ ನಂತರ ಕನ್ನಡದಲ್ಲಿ ಕೆ. ವೆಂಕಟರಾಜು

ಅವರು ರಚಿಸುವುದಾದರೆ ಈ ಅನುವಾದದ ಸಾರ್ಥಕತೆಗೆ ಇನ್ನೂ ಒಂದು ಮಜಲು ಸಿಕ್ಕಂತಾಗುತ್ತದೆ. 'ಬಾಪು ಕುಟಿ' ಇನ್ನೂ ಬೆಳೆದಂತಾಗುತ್ತದೆ.

'ಬಾಪು ಕುಟಿ' ಇಂಗ್ಲಿಷಿನಲ್ಲಿ ಪ್ರಕಟವಾಗಿ ಮುಂದಿನ ವರ್ಷಕ್ಕೆ ಒಂದು ದಶಕವೇ ತುಂಬುತ್ತದೆ. ಈ ಕಾಲಾವಧಿಯಲ್ಲಿ ಜಾಗತೀಕರಣ, ಉದಾರೀಕರಣವೆಲ್ಲ ಇನ್ನಿಲ್ಲದಂತೆ ಬೆಳೆಯಿತು ಎಂದು ಹೇಳುವುದು ಸುಲಭ. ಈ ಕಾಲಾವಧಿಯಲ್ಲಿ ನಮ್ಮ ನಮ್ಮ ವೈಯಕ್ತಿಕ ಜೀವನದಲ್ಲಿ ಏನಾಯಿತು, ಏನಾಗಬೇಕಿತ್ತು ಎಂದು ಯೋಚಿಸುವುದು 'ಬಾಪು ಕುಟಿ'ಯನ್ನು ಸರಿಯಾಗಿ ಓದಬೇಕಾದ ರೀತಿ ಎನಿಸುತ್ತದೆ.

ಈ ಕಾಲಾವಧಿಯಲ್ಲೇ ಅಣ್ಣಾ ಹಜಾರೆಯಂಥವರು ಮತ್ತಷ್ಟು ಕ್ರಿಯಾಶೀಲರಾದರು. ಅರುಣಾ ರಾಯ್ ಹೋರಾಟ ಸಾರ್ಥಕ ಘಟ್ಟವನ್ನು ತಲುಪಿ ಮಾಹಿತಿ ಪಡೆಯುವ ಹಕ್ಕು ದೇಶಾದ್ಯಂತ ಜಾರಿಗೆ ಬಂತು. ಎಂ. ರಾಜಗೋಪಾಲ್ 'ಗಾಂಧೀಜಿ ರೂಪಕ'ಗಳನ್ನು ಕುರಿತಂತೆ ನಾವೆಲ್ಲರೂ ಹೆಮ್ಮೆಪಟ್ಟುಕೊಳ್ಳುವಂತಹ ಒಂದು ಸ್ವೋಪಜ್ಞ ಕೃತಿ ರಚಿಸಿದರು. ಇವುಗಳ ಜೊತೆಗೆ ವೆಂಕಟರಾಜು ಮುನ್ನುಡಿಯಲ್ಲಿ ಪ್ರಸ್ತಾಪಿಸಿರುವ ಕನ್ನಡ ನಾಡಿನ ಬೇರೆ ಬೇರೆ ಚಳುವಳಿಗಳನ್ನು ಸೇರಿಸಿಕೊಂಡರೆ 'ಬಾಪು ಕುಟಿ'ಯ ಪ್ರೇರಣೆ ಗುಪ್ತಗಾಮಿನಿಯಾಗಿಯೇ ಆದರೂ ಸರಿಯೇ ಇನ್ನೂ ಜೀವಂತವಾಗಿದೆ ಎನಿಸುತ್ತದೆ.

ವಯಸ್ಸಾಗುತ್ತ, ಸೂಕ್ಷ್ಮರಾಗುತ್ತ, ನಮ್ಮಗಳ ಅಂತರಂಗಕ್ಕೆ ಸ್ಪಂದಿಸುವ ಶಕ್ತಿಯೇ ಹೊರಟು ಹೋಗುತ್ತದೆ; ಒಂದು ರೀತಿಯ ಜಡತೆ ಆವರಿಸಿಕೊಳ್ಳುತ್ತದೆ. ಒಳಗಡೆ ಬೆಳೆಯುವುದು ಕುಬ್ಜತೆಯೊಂದೇ. ಇದನ್ನೆಲ್ಲಾ ಅಲುಗಾಡಿಸಿ ನಮ್ಮ ಅಂತರಂಗದ ಭಾಗವಾಗಬಲ್ಲ ಪುಸ್ತಕಗಳು ಸ್ನೇಹಿತರು, ಅನುಭವಗಳು ಕೂಡ ಕಡಿಮೆಯಾಗುತ್ತ ಹೋಗುತ್ತವೆ. ನಾವೂ ಕೂಡ ಇದನ್ನೆಲ್ಲಾ ಹುಡುಕಿಕೊಂಡು ಹೋಗುವುದಿಲ್ಲ. ಇಂತಹ ಒಂದು ಮಾನಸಿಕ ಸ್ಥಿತಿಯಲ್ಲೂ 'ಬಾಪು ಕುಟಿ'ಯ ಓದು ಕೇವಲ ಓದಾಗದೇ ನಮ್ಮನ್ನು ಕಲಕುವ ಅನುಭವವಾಗಿ ನಂತರ ಅಂತರಂಗದಲ್ಲಿ ಸದಾ ನಮ್ಮೊಡನೆಯೇ ಉಳಿದುಬಿಡುತ್ತದೆ.

✤ ಕೆ. ಸತ್ಯನಾರಾಯಣ : ಸಿ-೪೦೩, ೪ನೇ ಮಹಡಿ, ಸಿ-ವಿಂಗ್, ಅಯೋಧ್ಯಾ ಪಾರ್ಕ್,
ಪುಣೆ-ಬೆಂಗಳೂರು ಹೆದ್ದಾರಿ, ಕೊಲ್ಹಾಪುರ-೪೧೬ ೦೦೫ (ಮಹಾರಾಷ್ಟ್ರ) ✤

ಬರಡು ಮರದ ರೆಂಬೆ

ಗುಂಡಣ್ಣ ಕಲಬುರ್ಗಿ

ಮಾತುಗಳೇಕೋ ಮುನಿಸಿಕೊಂಡಿವೆ
ಹೃದಯಗಳೇಕೋ ಬಿರುಕು ತೋರಿವೆ
ಎಲ್ಲಿ ನೋಡಿದಲ್ಲಿ ಪ್ರೀತಿಯಿಲ್ಲದ ಗಳಿಗೆ
ಎಲ್ಲಿ ತೋರಿದಲ್ಲಿ ರಕುತದ ಕಾಲುವೆ ೧

ಭಾವನೆಗಳೇಕೋ ಬೇಸರಗೊಂಡು
ಬಿಸಿಲನು ಉಸಿರಿಕೊಂಡಿವೆಯಲ್ಲ!
ಸ್ನೇಹಗಳೇಕೋ ಸಾಮೀಪ್ಯವಿಲ್ಲದ
ಯಂತ್ರಗಳ ಹಾಗೆ ನಟಿಸುತಿವೆಯಲ್ಲ! ೨

ಸಾಂತ್ವನಗಳೆಲ್ಲಿ ಓಡಿಹೋದವೋ ಏನೋ
[illegible] ಮನದ ಜೀವ
[illegible] ನೋಡೋ
[illegible] ೩

ಹಕ್ಕಿ ಹಾರುವುದಕೆ ಯಾರು ಬಿಡುವರು ಹೇಳೋ
ನೆತ್ತಿ ಕುಕ್ಕಲು ಬರುವ ಹದ್ದುಗಳೇ ನೋಡೋ
ನೀರು ಹರಿಯುವ ನಾದವನು ಯಾರು ಬಲ್ಲರು ಕೇಳೋ
ಪ್ರೀತಿಯಂಥ ವಸ್ತು ಎಲ್ಲಿ ಸಿಗುವುದು ತೋರೋ ೪

ಭಕುತಿಯಿಲ್ಲ, ಶ್ರದ್ಧೆಯಿಲ್ಲ, ಮಾನವ ಕುಲಕೆ ಬೆಲೆಯಿಲ್ಲ
ಬದುಕ ಹೂಡುವ ದೋಣಿ ಹೇಗೆ ನಡೆಸುವುದೋ
ಯಾರು ಯಾರನು ಕೇಳುವರಿಲ್ಲ, ಮರಳಿ ಬರುವ ಮಾತಿಲ್ಲ
ಬದುಕಿನರ್ಥ ಹುಡುಕುವ ಯಾತ್ರಿಕನ [illegible] ೫

ಮುರಿದುಕೊಂಡ ಎಲ್ಲ ಮನಸುಗಳೇ ಹೇಳಿ
ಬಿದ್ದು ಹೋದ ಎಲ್ಲ ಮೌಲ್ಯಗಳೇ ಕೇಳಿ
ಮತ್ತೆ ಜೋಪಾನವಾಗಿಸಬೇಕಾಗಿದೆ ಬದುಕು
ಬರಡು ಮರದ ರೆಂಬೆಗಳ ಮತ್ತೆ ಚಿಗುರಿಸಬೇಕಾಗಿದೆ. ■

✤ ಡಾ. ಗುಂಡಣ್ಣ ಕಲಬುರ್ಗಿ : 'ಸೃಷ್ಟಿ', [illegible] ಮೂಡಲಗಿ - [illegible] (ಬೆಳಗಾವಿ) ✤

ಕಾರಂತರ ಜೀವಂತ ಪಾತ್ರಗಳು - ೨

ಸಿ. ಸೋಮಶೇಖರಯ್ಯ

ಕಾರಂತರ ನಿಸರ್ಗ ಪ್ರೀತಿಯ ಪರಾಕಾಷ್ಠೆಯೇ, ನಿಸರ್ಗದ ನೇರ ಅಭಿವ್ಯಕ್ತಿಯಾದ ಸ್ತ್ರೀ ಕುಲದ ಮೇಲಣ ಅಭಿಮಾನದ ಪರಾಕಾಷ್ಠೆ. ನಿಸರ್ಗವನ್ನು ತಾವು ಆರಾಧಿಸುವಷ್ಟೇ ತನ್ಮಯತೆಯಿಂದ, ಹೆಣ್ಣುಜೀವಗಳನ್ನೂ ಅವರು ಗೌರವಿಸುತ್ತಾರೆ. ದೇವರು ಎಲ್ಲ ಕಡೆ ತಾನಿರಲು ಸಾಧ್ಯವಾಗದುದಕ್ಕಾಗಿಯೇ ಮಾತೆಯರನ್ನು ಸೃಷ್ಟಿಸಿದ, ಎಂಬ ಉಕ್ತಿಯನ್ನು ಸಮರ್ಥಿಸುವ ಶೈಲಿಯಲ್ಲಿಯೇ ಕಾರಂತರು ಹೆಣ್ಣನ್ನು ಅಭಿಮಾನದಿಂದ ಚಿತ್ರಿಸುತ್ತಾರೆ. ಅವರು ಕಟೆದು ನಿಲ್ಲಿಸಿದ ಅನೇಕ ಸ್ತ್ರೀ ಜೀವಗಳು, ಅವರು ಮಕ್ಕಳಿಂದ ಮುದುಕಿಯರವರೆಗೆ ; ಸಾಮಾನ್ಯರಿಂದ ವಿಶೇಷ ಮನಸ್ಸಿನವರವರೆಗೆ, ಕುಟುಂಬಕ್ಕಾಗಿ, ಸಮಾಜಕ್ಕಾಗಿ ಜೀವ ತೇದವರು. ಓದುಗನಲ್ಲಿ ವಿಚಾರಗಳನ್ನು ಪ್ರಚೋದಿಸುತ್ತಲೇ ಹೋಗುವವರು. ಹಾಗೆಂದು ಹೆಣ್ಣುಮಕ್ಕಳನ್ನು ಅವರು ಅತಿಮಾನುಷವಾಗಿಯೇನೂ ಚಿತ್ರಿಸುವುದಿಲ್ಲ. ಈ ಭೂಮಿಯ ಮೇಲಣ ರಕ್ತ ಮಾಂಸಗಳಿಂದ ಕೂಡಿದ ಎಲ್ಲ ಜೀವಗಳ ರೀತಿಯಲ್ಲಿಯೇ ಹೆಣ್ಣಿನ ಚಿತ್ರಣವೂ ಬರುತ್ತದಾದರೂ, ಪುರುಷರು ಕಟ್ಟಿರುವ ಸಮಾಜದ ನೆಲೆಯಲ್ಲಿ ಹೆಣ್ಣಿನ ಸ್ಥಾನ, ಆಕೆಯ ದರ್ಜೆ ಇವೆಲ್ಲಾ ಕಾರಂತರ ಪರಿಶೀಲನೆಗೆ ಒಳಪಡುವ ವಿಷಯಗಳು. ಈ ಲೋಕದ ಸಹ ಮಾನವಿಯರಾಗಿ, ಹೆಣ್ಣಿನ ದೌರ್ಬಲ್ಯಗಳನ್ನೂ ತೋರಿಸುವುದರಲ್ಲಿ ಸಹ ಕಾರಂತರು ಹಿಂದೆ ಬೀಳುವುದಿಲ್ಲವಾದರೂ ('ಹೆತ್ತಳಾ ತಾಯಿ'ಯ ಕುಸುಮೆ, 'ಬತ್ತದ ತೊರೆ'ಯ ಅಂಜಲಿ, 'ಅಳಿದ ಮೇಲೆ'ಯ ಕಮಲಮ್ಮ, 'ಇದ್ದರೂ ಚಿಂತೆ'ಯ ಸಾವಿತ್ರಮ್ಮ) ಪುರುಷ ಪ್ರಪಂಚದ ಬೇಜವಾಬ್ದಾರಿಯ ಎದುರಿನಲ್ಲಿ ಮಹಿಳೆಯ ಓರೆಕೋರೆಗಳು ಸಹನೀಯವೆನಿಸುತ್ತವೆ. ಮತ್ತು ಅನೇಕ ಬಾರಿ ಪರಿಸ್ಥಿತಿಯ ಶಿಶುಗಳಾಗಿ ಅಥವಾ ಸ್ವಾರ್ಥಿಗಳ ಕೈಯ ಕೈದುವಾಗಿ, ಅವರು ಬಳಸಲ್ಪಡುತ್ತಾರೆ ಎನ್ನುವುದನ್ನು ಕಾರಂತರು ನೆನಪಿಸುತ್ತಾರೆ.

ಯಾವಯಾವುದೋ ಕಾರಣಕ್ಕೆ ಅಥವಾ ಸ್ವಾರ್ಥಿಗಳ ಕೈ ಮೇಲಾದ ಸಂದರ್ಭಗಳಲ್ಲಿ, ಈ ಪ್ರಪಂಚದ ಕೆಲವು ಮುಗ್ಧ ಸಮಾಜಗಳ ಮೇಲೆ ಬುದ್ಧಿವಂತ ಸಮಾಜಗಳು ತಮ್ಮ ಅಭಿಪ್ರಾಯಗಳನ್ನು ಬಲವಂತವಾಗಿ ಹೇರಿ ಅವರನ್ನು ಗುಲಾಮಗಿರಿಗೆ ದೂಡಿರುವುದೂ; ಅಮಾನವೀಯವಾಗಿ ಶೋಷಣೆಗೆ ಒಳಪಡಿಸಿರುವುದೂ ಜಗತ್ತಿನ ವಿದ್ಯಮಾನಗಳಲ್ಲಿ ನಡೆದಿರುವಂಥದೇ. ಅದರಲ್ಲೂ ಹೆಣ್ಣು ಕುಲದ ಶೋಷಣೆಗೆ ಕೊನೆ ಮೊದಲಿಲ್ಲ. ಅವರು ಬಲಾಢ್ಯ ಸಮಾಜ ರಕ್ಷಣೆಯಲ್ಲಿರಲಿ ಅಥವಾ ಆ ಸಮಾಜದ ಭೋಗಲಾಲಸೆಗೆ ಈಡಾಗಿರಲಿ ಅವರದೇ ಆದ ದನಿ ಎಂಬುದನ್ನು ಈ ಸಮಾಜ ಯಾವ ಕಾಲಕ್ಕೂ ಸರಿಯಾಗಿ ಆಲಿಸಿದ್ದೇ ಇಲ್ಲ. ಪುರುಷ ಸಮಾಜ ನಯವಂಚನೆಯಿಂದ ಹೆಣ್ಣುಕುಲವನ್ನು ಶೋಷಿಸುವುದರಲ್ಲಿ ನಿಸ್ಸೀಮವಾದುದು. ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ ದೇವದಾಸಿಯರನ್ನಾಗಿಸುವುದು ಅಥವಾ ವೇಶ್ಯೆಯರದೇ ಒಂದು ಕುಲವನ್ನು ನಿರ್ಮಿಸಿ, ಆ ಪಂಜರದಿಂದ ಹೊರಬರುವ ದಾರಿಗಳನ್ನೇ ಭದ್ರವಾಗಿ ಮುಚ್ಚಿಡುವುದು, ಅಸಹಾಯಕ ಸ್ಥಿತಿಗೆ ಸಿಲುಕಿದ ಮುಗ್ಧೆಯರ ಬಾಳನ್ನು ಮತ್ತೊಂದು ತಲೆ ಎತ್ತದಂತೆ ಹೊಸಕಿ ಹಾಕುವುದು ಇತ್ಯಾದಿ ರಾಕ್ಷಸ ಮಾರ್ಗಗಳನ್ನು ಯಜಮಾನ ಸಂಸ್ಕೃತಿಯ ಸಮಾಜ ಸಾಮಾಜಿಕ ಕಟ್ಟಳೆಗಳೆಂಬಂತೆ ಜಾರಿಗೆ ತಂದುದು ಇತಿಹಾಸ.

ಈ ದೃಷ್ಟಿಯಿಂದ **'ಬತ್ತದ ತೊರೆ'** ಪರಿಶೀಲನಾರ್ಹವಾದ ಕಾದಂಬರಿ. ಗುಲಾಮಗಿರಿಗೆ ದೂಡಿದವರು ಹಾಯಾಗಿರಬಹುದು. ಆದರೆ ದೂಡಿಸಿಕೊಂಡವರ ಪರಿಸ್ಥಿತಿ ಎಷ್ಟೊಂದು ಕಳವಳಕಾರಿ ಎಂಬ ಅಂಶದ ಮೇಲೆ ಬೆಳಕು ಚೆಲ್ಲಲು ಈ ಸಮಾಜ ವಿಫಲವಾಗುತ್ತದೆ. ಅದನ್ನು ತೋರಿಸಲು ಮಾತ್ರ ಮಾನವೀಯ ಗುಣಗಳಿರುವ ಮಹಾನುಭಾವರೇ ಬರಬೇಕು.

ಕಾರಂತರ ಅನೇಕ ಕಾದಂಬರಿಗಳು ವೇಶ್ಯೆಯರ ಕುಲದಲ್ಲಿ ಹುಟ್ಟಿ, ಆ ಬಾಳಿಗೆ ಹೇಸಿ, ಹೊರಬರಲು ಪ್ರಯತ್ನಿಸುವ ಅಸಹಾಯಕ ಹೆಣ್ಣುಮಕ್ಕಳ ವ್ಯಕ್ತಿತ್ವಗಳನ್ನು ಚಿತ್ರಿಸಲೆಂದೇ ಮೀಸಲಾಗಿವೆ. ಕಾರಂತರು ಮಹಾಪೂರ್ವಕವಾಗಿ ತೊಡಗಿಕೊಂಡ ಕ್ಷೇತ್ರಗಳಲ್ಲಿ ಇದು ಮುಖ್ಯವಾದುದು. 'ಮೈ ಮನಗಳ ಸುಳಿಯಲ್ಲಿ', 'ಬೆಟ್ಟದ ತೊರೆ', 'ಉಕ್ಕಿದ ನೊರೆ' ಇವಲ್ಲದೆ ಬೇರೆ ಬೇರೆ ಕಾದಂಬರಿಗಳಲ್ಲಿಯೂ ಈ ವಿಷಯದ ಮೇಲೆ ಕಾರಂತರು ಬೆಳಕು ಚೆಲ್ಲುತ್ತಾರಾದರೂ ಆ ರೀತಿಯ ಸಾಮಾಜಿಕ ಪಂಜರಗಳಿಂದ ಹೊರಬರಲು ತುಡಿಯುತ್ತಿರುವ ಜೀವಗಳ ಕಳವಳಕಾರಿ ಮನಃಸ್ಥಿತಿಗಳನ್ನು ಈ ಮೂರೂ ಕಾದಂಬರಿಗಳಲ್ಲಿ ಅತ್ಯಂತ ಮನೋಜ್ಞವಾಗಿ ಅವರು ಪ್ರತಿಬಿಂಬಿಸುತ್ತಾರೆ. ಅಪ್ಪ ಸಮಾಜದ, ಉಕ್ಕಿನ ಪಂಜರಗಳಲ್ಲಿ ನತದೃಷ್ಟರಾಗಿ ಬಂದಿಗಳಾಗಿರುವ ಈ ಜೀವಗಳು ಅತೀವ ಸಾಹಸದಿಂದ ಅವುಗಳಿಂದ ಹೊರಬಿದ್ದರೆ ಈ ನಾಗರಿಕ ಸಮಾಜ ಅವರನ್ನು ನಡೆಸಿಕೊಳ್ಳುವ ರೀತಿ ಮಾತ್ರ ಅತ್ಯಂತ ಅಮಾನವೀಯವಾದುದು, ಅನಾಗರಿಕತೆಯಿಂದ ಕೂಡಿದುದು. 'ಉಕ್ಕಿದ ನೊರೆ'ಯ ಗುಲಾಬಿಯಂತಹವರಿಗೆ ಸಾಮಾಜಿಕ ಅಭದ್ರತೆಯ ಭಯ ಕಾಡಿದರೂ ಒಂದು ರೀತಿಯ ಮುಗ್ಧ ಮನೋಭಾವದ, ಆದರೆ ತನ್ನರಿವಿಗೇ ಬಾರದ ರೀತಿಯಲ್ಲಿ ಮನೋದೃಢತೆಯನ್ನು ಹೊಂದಿರುವ ಶರಭಯ್ಯನಂತಹವರು ಆಸರೆಗೆ ಒದಗಬಹುದಾದರೂ ಎಲ್ಲರಿಗೂ ಅಂತಹ ಅದೃಷ್ಟ ದೊರೆಯಲಾರದೆಂಬುದನ್ನು 'ಬೆಟ್ಟದ ತೊರೆ'ಯ ವಿನತೆಯ ಪಾತ್ರದ ಮೂಲಕ ಕಾರಂತರು ತೋರಿಸಿಕೊಡುತ್ತಾರೆ. ವಿನತೆ ವೇಶ್ಯೆಯರ ಕುಲದ ಹೆಣ್ಣು ಮಗಳಾದರೂ ಆ ರೀತಿಯ ಜೀವನಕ್ಕೆ ಪ್ರಚೋದಿಸುವ ವಾತಾವರಣಕ್ಕೆ ಹೇಸಿ ಮನೆಯನ್ನೇ ತೊರೆಯುತ್ತಾಳೆ. ಆದರೆ ಅವಳ ಅಂತರಂಗವನ್ನು ಗ್ರಹಿಸಲಾರದ ಅಪಾತ್ರ ಗಂಡಿನ ಕೈಗೆ ಸಿಕ್ಕು ಒದ್ದಾಡುವ ನತದೃಷ್ಟೆಯಾಗುತ್ತಾಳೆ. ಅವಳ ಮಾನಸಿಕ ಸಂಸ್ಕಾರಕ್ಕೆ ಒಂದಿಷ್ಟೂ ಹೊಂದಿಕೆಯಾಗದ, ಅವಳ ಇಡೀ ಜೀವನವನ್ನು ತನ್ನ ಮೂರ್ಖತನದಿಂದಾಗಿ ದುರಂತದ ಕೊನೆ ಇಲ್ಲದ ಪ್ರಪಾತಕ್ಕೆ ದೂಡಿ, ತಾನೂ ನಾಶವಾಗುವ ಶ್ರೀಧರ ಗಾಂವ್ಕರನದು, ಗಂಡಿನ ಅಹಂಕಾರ ಎಷ್ಟೊಂದು ವಿನಾಶಕಾರಿ ಎನ್ನುವುದಕ್ಕೆ ಪುರಾವೆಯನ್ನೊದಗಿಸುವ ಪಾತ್ರ. ಶೀಲವೆನ್ನುವುದು ಯಾವ ಕುಲದ ಸ್ವತ್ತೂ ಅಲ್ಲವೆನ್ನುವುದನ್ನು, ಅದು ಕೇವಲ ಒಂದು ಸ್ವಭಾವ; ಒಂದು ಮನಃಸ್ಥಿತಿ ಎಂಬುದನ್ನು ವಿನತೆಯು ತನ್ನ ಸ್ವಭಾವದ ಮೂಲಕ ಸಾರಿ ಸಾರಿ ಹೇಳುತ್ತಾಳೆ. ಅದನ್ನೇ ಸಾಮಾಜಿಕವಾಗಿ ಸಭ್ಯ ಕುಟುಂಬಗಳಿಂದ ಬಂದ ಮಂಜುಳ ಮತ್ತು ಅಂಜಲಿಯರು ತಮಗೊದಗಿದ ಸನ್ನಿವೇಶಗಳಲ್ಲಿ ನಡೆದುಕೊಳ್ಳುವ ವಿಭಿನ್ನ ರೀತಿಗಳು ಪರಿಣಾಮಕಾರಿಯಾಗಿ ಸಮರ್ಥಿಸುತ್ತವೆ.

'ಬೆಟ್ಟದ ತೊರೆ' ಅನೇಕ ಕಾರಣಗಳಿಗಾಗಿ ಗಮನಾರ್ಹವಾದುದು. ಇಲ್ಲಿನ ವಿಷಯ ಹೆಣ್ಣು ಗಂಡುಗಳ ನಡುವಣ ಪ್ರೇಮ, ಕಾಮ, ಆಸೆ, ನಿರಾಸೆ, ಸಾಧನೆ, ಸೋಲು ಇವುಗಳನ್ನು ಪ್ರಧಾನವಾಗಿ ಚಿತ್ರಿಸುತ್ತಾ ಇಡೀ ಮನುಷ್ಯ ಕುಲ ತನ್ನ ಅಜ್ಞಾನ ಅಹಂನಿಂದಾಗಿ ಅಥವಾ ತಿಳಿಯಲಿಲ್ಲದೆಯೇ ಸನ್ನಿವೇಶದ ದಾಸನಾಗಿ ಅಂತೂ ದುರಂತದತ್ತಲೇ ನಡೆಯುವ ಅಸಹಾಯಕತೆಯನ್ನು ಚಿತ್ರಿಸುತ್ತದೆ. ಇಲ್ಲಿ ಮರುಗುವುದು ಯಾರಿಗಾಗಿ? ಹೊಸ ಹೊಸ ಅನುಭವಗಳಿಗೆ, ಪ್ರಲೋಭನೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಾ ಯಾವ್ಯಾವುದನ್ನೋ, ಕೊನೆಗೆ ಬಾಳನ್ನೇ ಸಹ ಗಂಭೀರವಾಗಿ ಸ್ವೀಕರಿಸದ ಮನೋಹರ ತನ್ನನ್ನು ನಂಬಿದವರನ್ನು ದೋಚಿಕೊಳ್ಳುತ್ತಾ, ತಾನೂ ಮೋಸ ಹೋಗುತ್ತಾ ತನ್ನನ್ನೇ ಆಧಾರವೆಂದು ನಂಬಿದ ತನ್ನ ಮನೆಯವರನ್ನು ಅಲಕ್ಷಿಸಿ, ಮಂಜುಳೆಯಂತಹ ಅಮಾಯಕ ಹುಡುಗಿಯನ್ನು ನಂಬಿಸಿ, ನಡುನೀರಲ್ಲಿ ಕೈ ಬಿಟ್ಟು; ತಾನೂ ಸಹ [illegible]

ಒದ್ದಾಡುವ ಎಲ್ಲ ಮಾನವರ ಪಾಡಿನಂತೆಯೇ ಮಂಜುಳೆಯದೂ ಸಹ.

ಒಂದು ದಿನ ಅವಳು ವಯೋವೃದ್ಧರಾದ ಪಮ್ಮ ದುಗ್ಗಿಯರನ್ನು ಕಾಣುತ್ತಾಳೆ. ಆ ಎರಡೂ ಜೀವಗಳು ಬಾಳಿನ ದಾರಿಯಲ್ಲಿ ಬಹು ದೂರ ಪಯಣಿಸಿ, ಹಣ್ಣಾದ ಜೀವಗಳು. ಕುರುಡಿ ಹೆಂಡತಿ ವಯಸ್ಸಾದ ದುಗ್ಗಿಯನ್ನು ಅಷ್ಟೇ ವಯಸ್ಸಾದ ಪಮ್ಮ ಅನುನಯಿಸುವ ರೀತಿಗೆ ಮಂಜುಳೆ ಅವಾಕ್ಕಾಗಿ ಹೋಗುತ್ತಾಳೆ. ಅವರು ತುತ್ತು ಅನ್ನಕ್ಕಾಗಿ ಪರರ ಮನೆಯ ಬಾಗಿಲಲ್ಲಿ ನಿಲ್ಲುವ ಅವಸ್ಥೆಯವರು. ಆದರೆ ಅಲ್ಲಿನ ಪರಸ್ಪರರ ಒಲುಮೆ ಅನ್ಯೋನ್ಯತೆಗಳು ಮನುಷ್ಯನ ಮಾತಿಗೆ ಸಿಗಲಾರದಂತಹ ಭಾವಗಳು. ಅವಳ ಮನಸ್ಸು ಚೀರಿ ಹೇಳುತ್ತದೆ, ತಾನು ಬಯಸಿದ್ದು ಇಂಥ ಬಾಳನ್ನು ಎಂದು. ಆದರೆ ಪಮ್ಮ ದುಗ್ಗಿಯರಂತಹ ನಿರ್ಗತಿಕರಿಗೆ ಸಹಜ ಸಂಪತ್ತಾದ ಅಂತಹ ಬಾಳು, ಅವಳ ಪಾಲಿಗೆ ಮುಗಿಲಮಲ್ಲಿಗೆ!.

ಮಂಜುಳೆಯ ಬಾಳಿನಲ್ಲಿ ಬರುವ ಕಂಡೂರು ವಾಸುದೇವ ಪೈ, ಕೊಕ್ಕರಣೆಯ ಶೀನ, ಸುಬ್ರಾಯ ಉಳ್ಳೂರ, ಮೇಕಮನೆ ಸುಬ್ರಾಯ, ನಂಜಪ್ಪ, ಲಕ್ಷ್ಮಣತೀರ್ಥ ಸ್ವಾಮಿ ಎಲ್ಲವೂ ವಿಭಿನ್ನ ಪಾತ್ರಗಳು. ಇದ್ದುದರಲ್ಲಿ ಅವಳಲ್ಲಿನ ಕಲಾವಿದೆಯನ್ನು ಗುರುತಿಸುವಲ್ಲಿ ಸುಬ್ರಾಯ ಉಳ್ಳೂರ ಒಂದಿಷ್ಟು ಸಹೃದಯಿ. ನಂಜಪ್ಪ, ಕಾರಂತರೇ ಹೇಳುವಂತೆ, ಗೂಳಿಯ ರೀತಿಯ ಆಕ್ರಮಣಕಾರಿ. ಅವನಿಗೆ ಮಂಜುಳೆಯೊಳಗಿನ ಕಲಾವಿದೆಯ ಕಿರುನೋಟ ಸಹ ದೊರೆಯುವುದಿಲ್ಲ. ಅಲ್ಲಿ ಮನಸ್ಸೇ ಇಲ್ಲ. ಇದೆ ಎಂದುಕೊಂಡದ್ದೂ ಸಹ ಭ್ರಮೆ ಎಂಬುದು, ಮಂಜುಳೆಗೆ ಅರಿವಾಗಲು ಬಹಳ ಸಮಯ ಬೇಕಾಗಲೇ ಇಲ್ಲ. ಅವನು ಕಬ್ಬಿನ ತೋಟಕ್ಕೆ ನುಗ್ಗಿ ಕೊಬ್ಬಿದ ಟಗರು; ಕಬ್ಬಿನೊಳಗಣ ಮಾಧುರ್ಯದ ಜ್ಞಾನವೇ ಅವನಿಗಿಲ್ಲ. ಕಬ್ಬಿನ ಗರಿಯನ್ನು ತಿಂದು ವಿರೂಪಗೊಳಿಸುವ ಸ್ವಭಾವವಷ್ಟೇ ಅವನದು. ಲಕ್ಷ್ಮಣತೀರ್ಥ ಸ್ವಾಮಿ, ಮನುಷ್ಯ ಸ್ವಭಾವಕ್ಕೇ ವಿರುದ್ಧವಾದ ಸಂಕಲೆಗಳಿಂದ ಬಂಧಿತನಾದ ಮಠವೊಂದರ ಸ್ವಾಮಿ. ಅದರಿಂದ ಹೊರಬರಲು ಅವನು ನಡೆಸುವ ಪರದಾಟ ಕರುಣಾಜನಕ. ಸಹಜವಲ್ಲದ, ಬಲವಂತದ ವೈರಾಗ್ಯ ಎಂಥ ಹೃದಯಹೀನವಾದದ್ದು ಎಂಬ ವಿವರಣೆಯನ್ನು ಕಾರಂತರ ಶೈಲಿಯಲ್ಲಿಯೇ ಗ್ರಹಿಸಬೇಕು. ಅವನು ಮಂಜುಳೆ ಎದುರಿನಲ್ಲಿ ಮಗುವೂ ಆಗುತ್ತಾನೆ, ಪ್ರೇಮಿಯೂ ಆಗುತ್ತಾನೆ.

ಜೀವಿಗಳ ನಡುವೆ ಅಪಾರ ಆಕರ್ಷಣೆಯನ್ನು ಹೊಂದಿರುವ, ಕ್ಷಣಿಕವಾದರೂ ಮರು ಸಂಭ್ರಮಗಳ ಪ್ರಲೋಭನೆಯಿಂದ ಕೂಡಿರುವ, ಸೃಷ್ಟಿಯ ದಾರಿಯನ್ನು ಸುಗಮಗೊಳಿಸಿರುವ ಒಂದು ದೃಷ್ಟಿಯಲ್ಲಿ ಜೀವ ಸಂಕುಲಗಳ ಭಾವಜಗತ್ತನ್ನೇ ಆಳುತ್ತಿರುವ, ಈ ಕಾಮವೆಂಬುದು ಈ ಅಪಾರ ಸೃಷ್ಟಿಯ ಯಾವ ತರ್ಕಬದ್ಧ ಮಹತ್ವಪೂರ್ಣ ವಿಭಾಗದ ಅನ್ವೇಷಣೆ? ಯಾವ ಬೃಹನ್‌ಮನಸ್ಸಿನ ಮನೋಹರ ಕಲ್ಪಕ ಶಕ್ತಿ? ಇಂಥದೊಂದು ಘೋರ್ಗರೆತದ ಮೊರೆತವನ್ನು ರೂಪಿಸಿ, ಜಾರಿಗೊಳಿಸಿದ ಆ ಅದ್ಭುತ ವಿಶಿಷ್ಟ ಶಕ್ತಿಯ ಅಧ್ಯಯನವೇ ಮಾನವನ ಮನಸ್ಸಿನ ಶಕ್ತಿಗೆ ಸವಾಲಾದ ಅಧ್ಯಯನ.

ಹೀಗೆ ಈ ಪ್ರಕೃತಿಯೆಂಬ ಮಾಯಾ ಲೋಕ ಸೃಷ್ಟಿಸಿಕೊಂಡಿರುವ, ಅಸೀಮ ತಲ್ಲಣವಾದ ಕಾಮದ ಒಳ ಹೊರಗನ್ನು ಮಾನವೀಯ ನೆಲೆಯಲ್ಲಿ ವಿಸ್ಮಯಪೂರ್ವಕವಾಗಿ ಗ್ರಹಿಸುತ್ತಾ ಅದನ್ನು ಉದ್ವೇಗ, ಉತ್ಪ್ರೇಕ್ಷೆಗಳಿಲ್ಲದಂತೆ ವಿವರಿಸುವ ಶಕ್ತಿ ಕಾರಂತರ ಮಾಗಿದ ಮನಸ್ಸಿಗೆ ಸಾಧ್ಯವಾದಂತೆ ಅನ್ಯತ್ರ ಸಾಧ್ಯವಿಲ್ಲ.

✣ ಪಿ. ಸೋಮಶೇಖರಯ್ಯ : 'ಅರಿವು', ಸೊಸಾಯಿಟಿ ಹಿಂಭಾಗ,
ಚೊಳಗುಡ್ಡ, ಚಿತ್ರದುರ್ಗ ೫೭೭ ೫೦೧ ✣

ಕವಿರಾಜಮಾರ್ಗದಲ್ಲಿ ಬರುವ ಬಾಹ್ಲೀಕಾದಿ ಪದಗಳ ಅರ್ಥವ್ಯಾಪ್ತಿ

ಷ. ಶೆಟ್ಟರ್

'ಗ್ರಾಮ್ಯಾಳಾಪಂಗಳ'ನ್ನು ಚರ್ಚಿಸುತ್ತಾ ಮಾರ್ಗಕಾರ ಬಾಹ್ಲೀಕಾದಿಗಳನ್ನು ಪ್ರಸ್ತಾಪಿಸುವ ಪದ್ಯ ಇಂತಿದೆ :[1]

ಗೋಪಾಲ ಬಾಳ ಲಲನಾ । ಚಾಪಾಳ ವಾಚಳ ಕಿತವ ಬಾಹ್ಲೀಕಾದಿ
ವ್ಯಾಪಾರಂಗಳ್ ಗ್ರಾಮ್ಯಾ । ಳಾಪಂಗಳ್ ಮಾರ್ಗಯುಗಳ ಪರಿಹಾರ್ಯಂಗಳ್

ದನಗಾಹಿಗಳು, ಬಾಲಕರು, ಹೆಂಗಳೆಯರು, ಚಂಚಲಚಿತ್ತರು, ಹರಟೆಕೋರರು, ಜೂಜುಗಾರ ಅಥವಾ ಮೋಸಗಾರ ಮತ್ತು ಬಾಹ್ಲೀಕ ಮೊದಲಾದವರ ಮಾತು ಗ್ರಾಮ್ಯ. [ಇಂತಹ ಗ್ರಾಮ್ಯೋಕ್ತಿಗಳನ್ನು ನೇರವಾಗಿ ಬಳಸದೆ ಅವನ್ನು ಸಂಸ್ಕರಿಸಿ ಕಾವ್ಯವನ್ನು ಪ್ರಸ್ತುತಪಡಿಸಬೇಕೆಂಬುದು ಮಾರ್ಗಕಾರನ ಅಭಿಮತ.][2]

ಇಲ್ಲಿ ಹೆಸರಿಸಲಾದವರ ವೈವಿಧ್ಯತೆಯನ್ನು ಗಮನಿಸುವುದವಶ್ಯ. 'ಗೋಪಾಳ' ಮತ್ತು 'ಕಿತವ' ಪದಗಳು ವೃತ್ತಿಯನ್ನು ; 'ಲಲನಾ' ಲಿಂಗವನ್ನು ; 'ಬಾಳ' ಆಶ್ರಮಾ(ಬಾಲ್ಯಾ)ವಸ್ಥೆಯನ್ನು; 'ಚಾಪಾಳ' ಹಾಗೂ 'ವಾಚಳ' ಗುಣಪ್ರವೃತ್ತಿಯನ್ನು ಮತ್ತು 'ಬಾಹ್ಲೀಕಾದಿ' [ಪ್ರ]ದೇಶಿಕತೆಯನ್ನು ಸೂಚಿಸುವುವು.

ವಿದೇಶಿಯರನ್ನು ಗುರುತಿಸುವ ಪದಗಳು :

ಮಾರ್ಗಕಾರನಿಗಿಂತ ಮುಂಚಿನ ಕನ್ನಡ ಶಾಸನಗಳಲ್ಲಾಗಲೀ ದ್ರಾವಿಡ (ವಿಶೇಷವಾಗಿ ತಮಿಳು) ಭಾಷಾ ಶಾಸನ ಹಾಗೂ ಸಾಹಿತ್ಯಿಕ ಕೃತಿಗಳಲ್ಲಾಗಲೀ 'ಬಾಹ್ಲೀಕ' ಪದ ಬಳಕೆಯಾದ ಬಗ್ಗೆ ನಿಖರತೆ ಇಲ್ಲ. ವಿದೇಶಿಯರನ್ನು ಯವನ, ಮ್ಲೇಚ್ಛ ಎಂಬ ಪದಗಳಿಂದ ಆರಂಭ ಕಾಲದ ತಮಿಳು ಕಾವ್ಯಗಳಲ್ಲಿ ಗುರುತಿಸಿದ ವಿವರ ದೊರಕುವುದು. ಆಂಧ್ರ ಪ್ರದೇಶದ ನಾಗಾರ್ಜುನಕೊಂಡ(ಅಂದಿನ ವಿಜಯಪುರ)ದಲ್ಲಿ ನೆಲೆಸಿದ್ದ ಬೌದ್ಧರಲ್ಲಿ ಗಂಧಾರ, ಯವನ ಮುಂತಾದವರಿದ್ದರೆಂಬುದನ್ನು ಕ್ರಿ.ಶ. ೩–೪ನೆಯ ಶತಮಾನಗಳ ಪ್ರಾಕೃತ ಶಾಸನಗಳು ತಿಳಿಸುವುವು.[3] ಯವನ, ಮ್ಲೇಚ್ಛ, ಶಕ, ಮದ್ರ, ಗಂಧಾರ, ಪಾರಸಿಕ, ತುರುಷ್ಕ ಮುಂತಾದ ಪದಗಳನ್ನು ಬಳಸದೇ 'ಬಾಹ್ಲೀಕ' ಪದವನ್ನು ಮಾತ್ರ ಕವಿರಾಜಮಾರ್ಗದಲ್ಲಿ ಬಳಸಿರುವುದೊಂದು ವೈಶಿಷ್ಟ್ಯ.

ಬಾಹ್ಲೀಕ ಅಂದರೇನು?

ಕನ್ನಡ ಸಾಹಿತ್ಯ ಪರಿಷತ್ ನಿಘಂಟಿನಲ್ಲಿ ಬಾಹ್ಲೀಕ ('ಬಾಹ್ಲಿಕ'ವೆಂದೂ ಬೇರೆಡೆ ಪ್ರಯೋಗವಾಗಿರುವ) ಪದವನ್ನು ಅರ್ಥೈಸುತ್ತಾ ಅದು (ಅ) ಒಂದು ದೇಶ, (ಆ) ಆ ದೇಶದ ರಾಜ ಮತ್ತು ಪ್ರಜೆ, (ಇ) ಆ ದೇಶದ ಕುದುರೆ ಮತ್ತು (ಈ) ಅಲ್ಲಿನ ಉತ್ಪಾದನೆಗಳಾದ ಕುಂಕುಮಕೇಸರಿ ಮತ್ತು ಹಿಂಗನ್ನು ಸೂಚಿಸುತ್ತದೆ ಎಂದು ಹೇಳಲಾಗಿದೆ. ಅಲ್ಲದೆ (ಕವಿರಾಜಮಾರ್ಗದ ಪ್ರಪ್ರಥಮ ಉಲ್ಲೇಖವನ್ನು ಹೊರತುಪಡಿಸಿ), ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಬಸವಪುರಾಣಂ (೧೩೬೯), ಅಶ್ವಶಾಸ್ತ್ರ (೧೪೦೦), ಕುಮಾರವ್ಯಾಸ ಭಾರತ (೧೪೩೦), ತೊರವೆ ರಾಮಾಯಣ (ಸು.೧೫೦೦), ಯಾದವಗಿರಿ ಮಹಾತ್ಮ್ಯ (೧೭೭೭) ಮತ್ತು ನಾಟಕ ಅಮರಕೋಶವ್ಯ(ಕಾಲ?)ಗಳಲ್ಲಿ ಬರುವ ಬಹ್ಲೀಕಾಗಳೆಡೆ ನಮ್ಮ ಗಮನ ಹರಿಸಲಾಗಿದೆ.[4]

ಈ ನಿದರ್ಶನಗಳಿಂದ 'ಬಾಹ್ಲೀಕ' ಒಂದು ಜನಾಂಗೀಯ ಪ್ರದೇಶವಾಗಿತ್ತೆಂಬುದು ಸ್ಪಷ್ಟಗೊಂಡರೂ ಇದಕ್ಕೂ ಇನ್ನುಳಿದ – ಅಂದರೆ ಯೋನ, ಕಾಂಬೋಜ, ಗಂಧಾರ, ಪಾರಸಿಕ, ಮುಂ. – ಪ್ರಾದೇಶಿಕ ವಲಯಗಳಿಗೂ ಇದ್ದ ಭೌಗೋಳಿಕ ಸಂಬಂಧ ಅಥವಾ ಸಾಮೀಪ್ಯ ಸ್ಪಷ್ಟಗೊಳ್ಳುವುದಿಲ್ಲ. ಉದಾಹರಣೆಗೆ ಬಸವಪುರಾಣದಲ್ಲಿ ಬರುವ ದ್ರವಿಳ, ಕಾಶ್ಮೀರ, ಬಾಹ್ಲಿಕ, ಘೋಟಘೊ, ಕಾಂಬೋಜ, ಕೇರಳಮುಖಿ ಮತ್ತು ಪಾರದೇಶದ ಪಟ್ಟಿಯಿಂದಾಗಲೀ, ತೊರವೆ ರಾಮಾಯಣದ ಲಾಳ, ಚೋಳ, ವರಾಳ, ಯವ, ಬಂಗಾಳ, ಬಾಹ್ಲೀಕ, ನಿಷಧ, ವಿದರ್ಭಗಳಿಂದಾಗಲೀ, ಕುಮಾರವ್ಯಾಸಭಾರತದ ಶೂರಸೇನ, ಕಳಿಂಗ, ಗಂಧಾರ ಮಾಲಿಕೆಯಲ್ಲಿ ಬರುವ ಬಾಹ್ಲೀಕದಿಂದಾಗಲೀ, ಯಾವ ರಾಜ್ಯ ಯಾವ ರಾಜ್ಯದ ನೆರೆಹೊರೆಯಲ್ಲಿತ್ತೆಂಬುದನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಬಹುಶಃ ಈ ಪ್ರದೇಶಗಳ ಭೌಗೋಳಿಕ ಪರಸ್ಪರತೆ ಈ ಕವಿಗಳಿಗೆ ಪ್ರಸ್ತುತವೆನಿಸಿರಲಿಕ್ಕಿಲ್ಲ.

ಅಶ್ವಶಾಸ್ತ್ರದಲ್ಲಿ ಬರುವ ವಿವರಗಳು ಭಾರತದ ವಾಯುವ್ಯ ಭಾಗದ ಹಯಗಳಿಗೆ ಸಂಬಂಧಿಸಿದ್ದು. ಇವುಗಳಿಂದ ಅಲ್ಲಿನ ಭೌಗೋಳಿಕ ವ್ಯವಸ್ಥೆಯನ್ನಲ್ಲದೆ ಅಲ್ಲಿ ಅಭಿವೃದ್ಧಿಗೊಂಡ ಅಶ್ವಜಾತಿಗಳ ಪರಿಸರಗಳನ್ನು ಗುರುತಿಸಲು ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದು. 'ಬಿಸ ಕಾಂಭೋಜಕ ಬಾಹ್ಲೀಕ ಸೈಂಧವಾರಟ್ಟ ತೈತಿಲಂ ವಾನೇಯಂ ಪೆಸರ ಕ್ಷೇತ್ರದ ಹಯಕಾ ಪೆಸರೆ ಪೆಸರ್'.[೫] ಎಂಬುದನ್ನು ಪರಿಸರದ ದೃಷ್ಟಿಕೋನದಿಂದ ಅರ್ಥೈಸಿದರೆ ತಾವರೆದಂಟು (ಬಿಸ), ಬಿಳಿಕಗ್ಗಲಿ ಗಿಡ(ಕಾಂಬೋಜ), ಕಡಲತೀರ (ಸೈಂಧವಾರಟ್ಟ), ಕ್ರೂರ ಮೃಗ (ತೈತಿಲ), ಗೊಂಡಾರಣ್ಯ (ವಾನೇಯ) ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದಿದ ಅಶ್ವತಳಿಗಳು ಇವಾಗಿದ್ದವೆಂಬ ಭಾವನೆ ಬರುವುದು. ಇದೇ ಜಾಡಿನಲ್ಲಿ ಮುಂದುವರಿದು ಕುಂಕುಮಗಿಡ ಅಥವಾ ಗಿರಿ ಪ್ರದೇಶವು ಬಾಹ್ಲೀಕವನ್ನು ರೂಪಿಸಿತ್ತೆಂದು ಬಗೆಯಬಹುದೇನೊ.

ಮೊದಮೊದಲ ಉಲ್ಲೇಖಗಳು:

'ಬಾಹ್ಲೀಕ'ದ ಮೊದಲ ಉಲ್ಲೇಖ ದೊರೆಯುವುದು ಅಥರ್ವ ವೇದದಲ್ಲಿ.[೬] ಸಿಂಧೂ ನದಿಯಾಚೆಗಿದ್ದ ಗಂಧಾರ, ಮದ್ರ, ಕೇಕಯ, ಪಾರಸಿಕ, ಪಾರದ, ಮಗ, ಯವನರಂತೆ ಬಾಹ್ಲಿಕರು ಪಶ್ಚಿಮ ಏಷಿಯಾ, ಅದರಲ್ಲೂ ಅಪರಗೋಯನ ಮತ್ತು ಕೇತುಮಾಲ ಪ್ರದೇಶದವರೆಂದು ಮಹಾಕಾವ್ಯ ಮತ್ತು ಪುರಾಣಗಳ ಆಧಾರಗಳ ಮೇಲೆ ನಿರ್ಧರಿಸಲು ಸಾಧ್ಯವಾಗಿದೆ. ಶಕ, ಯವನ, ಪಹ್ಲವರ ಸಾಲಿನಲ್ಲಿ ಬಾಹ್ಲೀಕರನ್ನು ನಾಟ್ಯಶಾಸ್ತ್ರ ನಿಲ್ಲಿಸಿರುವುದು.[೭]

'ಬಾಹ್ಲಿಕ' ಪ್ರತೀಪರಾಜನ ಪುತ್ರ; ಸೋಮದತ್ತನ ತಂದೆ. ದುರ್ಯೋಧನನ ಪರ ಹೋರಾಡಿ ಭೀಮನಿಂದ ಹತನಾದವನು. ವಿಪಾಶಾ ಮತ್ತು ಶತದ್ರೂ ನದಿ ನಡುವಣ ಪ್ರದೇಶ ಬಾಹ್ಲೀಕ ದೇಶ. ಈ ವಿವರಗಳು ಮಹಾಭಾರತದ ಆದಿ, ದ್ರೋಣ, ಕರ್ಣ ಮತ್ತು ಶಾಂತಿ ಪರ್ವಗಳಲ್ಲಿ ಚದುರಿಕೊಂಡಿವೆ.[೮]

ಕವಿ ಪಂಪನ ವಿವರಗಳು: ಬಾಹ್ಲೀಕದ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುವ ಮೊಟ್ಟಮೊದಲ ಕನ್ನಡ ಕವಿ ಪಂಪ. ಅಲ್ಲದೆ, ಮುಂದಿನ ಕನ್ನಡ ಕವಿಗಳಿಗೆ ಅದರ ಭೂಗೋಲವನ್ನು ರೂಪಿಸಿಕೊಟ್ಟವನೂ ಇವನೇ. 'ಕಾಂಬೋಜ, ಬಾಹ್ಲೀಕ, ತುರುಷ್ಕ... ಗಂಧಾರ... ಯವನ' ಎಂಬ 'ವಿಷಯ'ಗಳನ್ನೂ 'ಜನಪದ'ಗಳನ್ನೂ 'ಶಕ... ಗಂಧಾರ... ಬಾಹ್ಲೀಕ' 'ದೇಶ'ಗಳನ್ನೂ ಆದಿಪುರಾಣದಲ್ಲಿ ಪ್ರಸ್ತಾಪಿಸಿರುವನಲ್ಲದೆ[೯] ಇದಕ್ಕಿಂತ ಹೆಚ್ಚಿನ ವಿವರಗಳನ್ನು ವಿಕ್ರಮಾರ್ಜುನವಿಜಯದಲ್ಲಿ ಅವನು ಕೊಟ್ಟಿರುವನು.

ಸೋಮವಂಶದ ಭರತ ಆಳಿದ ಬಹುಕಾಲದ ನಂತರ ಬಂದ ಹೆಸರಾಂತ ಅರಸ ಪ್ರತಿಮ. ಇವನ ಮೂವರು ಮಕ್ಕಳಲ್ಲಿ ಬಾಹ್ಲಿಕ ಒಬ್ಬ; ಇನ್ನಿಬ್ಬರು ಶಂತನು ಮತ್ತು ದೇವಾಪಿ.

ಹಸ್ತಿನಾಪುರದ ಆಸ್ಥಾನದಲ್ಲಿ ಗೌರವಯುತ ಸ್ಥಾನ ಪಡೆದುಕೊಂಡ ಈ ವಂಶದವನೊಬ್ಬ ಕುಲವೃದ್ಧನಾಗಿದ್ದು, ಭೂರಿಶ್ರವ, ಗಾಂಗೇಯ, ಧೃತರಾಷ್ಟ್ರ, ವಿದುರ ಮತ್ತು ಸೋಮದತ್ತರಿಗೆ ಸಮಾನನಾಗಿದ್ದ. ತನ್ನ ಶಿಷ್ಯ(ಪಾಂಡವ-ಕೌರವ)ರ ಯುದ್ಧ ಕೌಶಲ್ಯವನ್ನು ಪ್ರದರ್ಶಿಸಲು ದ್ರೋಣನು ಆಹ್ವಾನಿಸಿದ ಹಿರಿಯರಲ್ಲಿ ಬಾಹ್ಲೀಕನೂ ಒಬ್ಬನಾಗಿದ್ದ. ಜರಾಸಂಧನ ವಧೆಯ ನಂತರ ನಾಲ್ಕು ದಿಕ್ಕಿನೆಡೆ ಧರ್ಮರಾಜನು ತನ್ನ ಸೋದರರನ್ನು ವಿಜಯಯಾತ್ರೆಗೆ ನಿಯಮಿಸಿ, ಅರ್ಜುನನನ್ನು ಉತ್ತರೋತ್ತರಕ್ಕೆ ಕಳುಹಿದಾಗ, ಪಾಂಚಾಲ, ಕುಲೂತಾಧೀಶ, ಕಿಂಪುರುಷ, ಮಾಳವಿಕರನ್ನು ಅರ್ಜುನ ಸೋಲಿಸಿ, ಗಂಧಾರರನ್ನು ವಿರಥಗೊಳಿಸಿ, 'ಬಾಹ್ಲೀಕರನೀಕದನಿಸಿ'ದನು. ಇದಾದ ನಂತರ ಹಸ್ತಿನಾಪುರದಲ್ಲಿ ಮಾಡಿದ ಯಾಗದಲ್ಲಿ ಪಾಲ್ಗೊಂಡು ದಾನಕ್ಕೆ ಪಾತ್ರರಾದ ಕುಲವೃದ್ಧರಲ್ಲೂ ಬಾಹ್ಲೀಕ ಒಬ್ಬನಾಗಿದ್ದನು.

ದ್ಯೂತಕಾರ್ಯ ನಿಮಿತ್ತ ದುರ್ಯೋಧನನ ಆಸ್ಥಾನಕ್ಕೆ ಕೃಷ್ಣ ಬಂದಾಗ ಅಲ್ಲಿ ಸಿಂಹಾಸನ, ಮಣಿಖಚಿತ ಚಿನ್ನದ ಪೀಠ, ಚಿನ್ನದಿಂದ ಕಟ್ಟಿದ ಜೊಂದರಿಗೆಗಳಲ್ಲಿ ಆಸೀನರಾದ ಭೀಷ್ಮ, ದ್ರೋಣ, ಶಲ್ಯ, ಶಕುನಿ ಮುಂತಾದವರಲ್ಲಿ ಬಾಹ್ಲೀಕ ಸೋಮದತ್ತ ಒಬ್ಬನಾಗಿದ್ದ. ಕುರುಕ್ಷೇತ್ರ ರಣರಂಗದಲ್ಲಿ ಕೌರವರು ರೂಪಿಸಿದ ವ್ಯೂಹದಲ್ಲಿ ಒಂದು ಲಕ್ಷ ಕುದುರೆ, ಅರವತ್ತು ಸಾವಿರ ರಥ, ಒಂದು ಅಕ್ಷೋಹಿಣಿ ಕಾಲ್ಬಳಗಳನ್ನು ತೊಡಗಿಸಿ ಭಗದತ್ತನ ದಳದ ಪಕ್ಕದಲ್ಲಿ ಸಜ್ಜಾಗಿ ನಿಂತ ಬಾಹ್ಲೀಕರ ಚಿತ್ರ ದೊರೆಯುವುದು. ಚಕ್ರವ್ಯೂಹ ಕಾಳಗದಲ್ಲಿ ಶಕಟವ್ಯೂಹ ದ್ವಾರರಕ್ಷಣೆ ಯನ್ನು ಇವರಿಗೆ ವಹಿಸಿಕೊಡಲಾಗಿತ್ತು. ಕೊನೆಗೆ ಇವರನ್ನು ಅರ್ಜುನ ಸೋಲಿಸಿ 'ಆನೆ ಮೆಟ್ಟಿದ ಕುಳುಂಪೆಯ (ಕುಂಟೆಯ) ನೀರಂತೆ ದೆಸೆದೆಸೆಗೆ ಸೂಸುವೆನ್ನಗಂ ಮೆಟ್ಟಿ'ದನು.[೧೦]

ಬಾಹ್ಲೀಕ ಮತ್ತು ಕಾರ್ದಮ :

ಮಹಾಭಾರತದಲ್ಲಿ 'ಕಾರ್ದಮ' ಎಂಬುವರ ಪ್ರಸ್ತಾಪ ಬರುವುದು. ಬಾಹ್ಲೀಕ ರಾಜ್ಯವನ್ನು ಪ್ರಜಾಪತಿ ಕಾರ್ದಮ ಅಥವಾ ಕರ್ದಮೇಯ ಆಳುತ್ತಿದ್ದನೆಂದು ರಾಮಾಯಣವೂ ತಿಳಿಸುವುದು.[೧೧] ಕ್ಷತ್ರಪರ ಎರಡು ಶಾಖೆಗಳಲ್ಲಿ ಒಂದು ಕಾರ್ದಮರದ್ದು; ಇನ್ನೊಂದು 'ಕ್ಷಹರಾತ'ರದ್ದು ಎಂಬುದನ್ನು ಇತಿಹಾಸದಲ್ಲಿ ಗುರುತಿಸಲಾಗಿದೆ. ಈ ಕ್ಷತ್ರಪರು-ಪ್ರಾಕೃತದಲ್ಲಿ ಛತ್ರಪರು-ಇರಾನೀ ಮೂಲದವರಾಗಿದ್ದು, ಕ್ರಿ.ಶ. ಆರಂಭದಿಂದ ಸು. ೪ನೆಯ ಶತಮಾನದ ವರೆಗಿನ ಭಾರತದ ಉತ್ತರಪಶ್ಚಿಮ, ಪಶ್ಚಿಮ ಮತ್ತು ದಕ್ಷಿಣದ ಮೇಲೆ ತಮ್ಮ ಪ್ರಭಾವ ಬೀರಿದ್ದರು. 'ಕ್ಷಹರಾತ' ಪದವನ್ನು (ಈಗ ಪಾಕಿಸ್ತಾನದ) ತಕ್ಷಶಿಲೆ (ಟ್ಯಾಕ್ಸಿಲಾ) ಬಳಿಯ ಒಂದು ಕೇಂದ್ರದಿಂದ, 'ಕಾರ್ದಮ' ಪದವನ್ನು ಬಾಕ್ಟ್ರಿಯಾದಲ್ಲಿ ಹರಿಯುವ ಇದೇ ಹೆಸರಿನ ನದಿಯಿಂದ ಪಡೆಯಲಾಗಿತ್ತು. ಕಾರ್ದಮಕ ವಂಶದ ಹೆಸರು ಪಾರಸಿಕ ಅಥವಾ ಪರ್ಶಿಯಾದಲ್ಲಿ ಹರಿಯುವ ನದಿ (ಪಾರಸೀಕೇಷು ಕರ್ದಮ ನಾಮ ನದೀ)ಯಿಂದ ಬಂದುದೆಂಬ ಸೂಚನೆಯೂ ಇದೆ.[೧೨] ಈ ನದಿ ಕಣಿವೆಯಲ್ಲಿ ಬೆಳೆಯುತ್ತಿದ್ದ ಭತ್ತವನ್ನೂ 'ಕರ್ದಮ' ಪದದಿಂದ ಗುರುತಿಸಲಾಗುತ್ತಿತ್ತೆಂದು ಸುಶ್ರುತಸಂಹಿತಾ ತಿಳಿಸುವುದು.

ಆರಂಭ ಕಾಲದ ಕ್ಷಹರಾತರು ಮತ್ತು ಕರ್ದಮರು ಖರೋಷ್ಠೀ ಮತ್ತು ಬ್ರಾಹ್ಮೀ (ಅಲ್ಪದ ಗ್ರೀಕ್) ಲಿಪಿಯನ್ನು ತಮ್ಮ ವ್ಯವಹಾರಕ್ಕೆ ಬಳಸಿಕೊಂಡಿದ್ದರು. ಗುಜರಾತು ಮತ್ತು ರಾಜಸ್ಥಾನದ ವರೆಗೂ ಚಲಾವಣೆಯಲ್ಲಿದ್ದ ಇವರ ನಾಣ್ಯಗಳು ಇಂಡೋಗ್ರೀಕ್, ಇಂಡೋಸಿಥಿಯನ್ ಮತ್ತು ಇಂಡೋಪಾರ್ಥಿಯನ್ ನಾಣ್ಯಗಳನ್ನು 'ಅನುಕರಿಸಿದ್ದು'ದನ್ನು ಇತಿಹಾಸಕಾರರು ಗುರುತಿಸಿರುವರು.[೧೩] ಕ್ರಮೇಣ ಇವರು ಆರ್ಯ ಸಂಸ್ಕೃತಿಯನ್ನು ಬಳಸತೊಡಗಿದರೆಂಬುದಕ್ಕೆ ಕ್ಷಹರಾತ ರುದ್ರದಾಮನ ದಾಖಲೆ ಸಾಕ್ಷಿ. ಗುಜರಾತಿನ ಕೆಲವು ಪ್ರದೇಶಗಳನ್ನು 'ಕರ್ದಮ' ಹೆಸರಿನಿಂದ ಕರೆಯಲಾಗಿದ್ದು, ಅವು ಇವರ ಮೂಲ ನೆಲೆಗಳಾಗಿದ್ದುವೆನ್ನಲಾಗಿದೆ.

ರುವುದಲ್ಲದೆ ಸಂಸ್ಕೃತದಲ್ಲಿರುವ ವಾಕ್ಯೋಕ್ತಿಯನ್ನು ಕನ್ನಡದಲ್ಲಿ ಪುನರುಕ್ತಿಗೊಳಿಸಲಾಗಿದೆ. ಸಂಸ್ಕೃತ ಬಲ್ಲ ಫಲಾನುಭವಿಗಳು ಮಾತ್ರವಲ್ಲದೆ ಕನ್ನಡವನ್ನು ಬಲ್ಲ ಸ್ಥಳೀಯರು ಇದನ್ನು ಅರಿತುಕೊಂಡು ಶಾಸನವನ್ನು ಗೌರವಿಸಬೇಕೆಂಬುದು ಇದರ ಉದ್ದೇಶವಾಗಿದ್ದರೂ ವಲಸೆ ಬಂದವರ ಮತ್ತು ನಾಡವಾಸಿಗಳ ಭಾಷೆಗಳನ್ನು ಅರಿತುಕೊಳ್ಳಲು ಇಂತಹ ಶಾಸನಗಳು ಎಷ್ಟು ಉಪಯುಕ್ತವಾಗಿವೆ ಎಂಬುದನ್ನು ನಾವಿಲ್ಲಿ ಕಂಡುಕೊಳ್ಳಬಹುದು.

ಈ ಮಿಶ್ರಭಾಷಾ ಪ್ರಯೋಗದ ಮತ್ತೊಂದು ಮುಖವನ್ನು ಕೊಮರಲಿಂಗಂ ತಾಮ್ರಪಟ ಪರಿಚಯಿಸುವುದು. ತುಂಬಾ ಅಶುದ್ಧ ಹಾಗೂ ಅಪೂರ್ಣ ಸಂಸ್ಕೃತ ಗದ್ಯ-ಪದ್ಯದಿಂದ ಪ್ರಾರಂಭವಾಗುವ ಈ ಶಾಸನದ ಸಂಸ್ಕೃತ ಪದಗಳ ಮಧ್ಯ ಮಧ್ಯ ಒಮ್ಮೆಲೇ ಕನ್ನಡ ಪದಗಳು ಪ್ರವೇಶಿಸಿ ಪುನಃ ಸಂಸ್ಕೃತ ಪದಗಳಿಗೆ ಎಡೆಮಾಡಿಕೊಡುವುವು.'' ಸಂಸ್ಕೃತ-ಕನ್ನಡ ಪದಗಳನ್ನು ಮಿಶ್ರಣ ಮಾಡಿದಂತೆ, ದ್ರಾವಿಡ 'ಱ' ಮತ್ತು 'ೞ'ಕಾರ ಪ್ರಯೋಗಗಳನ್ನೂ ಅಲ್ಲಲ್ಲಿ ಬಳಸಿ ಬರೆಯಲಾಗಿದೆ. ಈ ಕಾರಣಗಳಿಂದಾಗಿ ಕೊಮರಲಿಂಗ ತಾಮ್ರಪಟದಲ್ಲಿಯ ಸಂಸ್ಕೃತ-ಕನ್ನಡ ಪದಗಳ ಮಿಶ್ರಣದ ಸ್ವರೂಪವು ಬನವಾಸಿಪುರ ಶಾಸನದಲ್ಲಿಯ ಸಂಸ್ಕೃತ-ಕನ್ನಡ ವಾಕ್ಯಗಳ ಮಿಶ್ರಣಕ್ಕಿಂತ ವಿಭಿನ್ನವೆನಿಸುವುದು.

ಆರಂಭಕಾಲದ ಅರಸರ ಸಂಸ್ಕೃತ ವ್ಯಾಮೋಹ : ಇಲ್ಲಿ ಉದ್ಭವವಾಗುವ ಪ್ರಶ್ನೆಯೆಂದರೆ: ಹೊರಗಿನಿಂದ ಬಂದು ಕರ್ನಾಟಕ ಪ್ರದೇಶದಲ್ಲಿ ಆಳಿದ ಮೌರ್ಯ, ಶಾತವಾಹನ ಮುಂತಾದವರು ತಾವೇ ತಂದ ಪ್ರಾಕೃತ ಭಾಷೆಯಲ್ಲಿ ವ್ಯವಹರಿಸಿದ್ದು ಸಹಜ ವೆನಿಸಿದರೂ ಆರಂಭಕಾಲದ ಸ್ಥಳೀಯ ಜನಾಂಗ ನಾಯಕರುಗಳಾದ ಕದಂಬ, ಪುನ್ನಾಟ, ಗಂಗ ಮುಂತಾದವರು ಕನ್ನಡವನ್ನು ಬಿಟ್ಟು ಸಂಸ್ಕೃತ ಭಾಷೆಯನ್ನು ತಮ್ಮ ಮಾಧ್ಯಮವಾಗಿ ಮಾಡಿಕೊಂಡಿದುದ್ದೇಕೆ? ಎಂಬುದು.

ಕ್ರಿ.ಶ. ೪ನೆಯ ಶತಮಾನಕ್ಕಿಂತ ಮುಂಚಿನ ಕನ್ನಡ ಭಾಷೆ ಮತ್ತು ಲಿಪಿಯ ಬಗ್ಗೆ ನಮಗೆ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಈ ಕಾಲಾವಧಿಯಲ್ಲಿ ನಾಯಕಸ್ಥಾನಕ್ಕೇರಿದ್ದ ಸ್ಥಳೀಯರೆಲ್ಲರೂ ಮೌಖಿಕವಾಗಿಯೇ ತಮ್ಮ ವ್ಯವಹಾರವನ್ನು ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಕನ್ನಡ ವನ್ನಾಗಲೀ ಇನ್ನಾವ ಭಾಷೆಯನ್ನಾಗಲೀ ಬಳಸುವ ಅವಶ್ಯಕತೆ ಅವರಿಗೆ ಉಂಟಾಗಲಿಲ್ಲ. ಲಿಖಿತ ವ್ಯವಹಾರದ ಅವಶ್ಯಕತೆಯನ್ನು ಅವರು ಅರಿತುಕೊಂಡದ್ದು ತಮ್ಮ ಅಂತಸ್ತನ್ನೂ ವಂಶಾವಳಿಯನ್ನೂ ಉತ್ತಮಪಡಿಸಿಕೊಂಡು ತಮ್ಮ ಅರಸೊತ್ತಿಗೆಯನ್ನು ಅಧಿಕೃತಗೊಳಿಸಿ ಕೊಳ್ಳಬೇಕೆಂಬ ದಾಹ ಅವರಲ್ಲಿ ಉಂಟಾದಾಗ ಮಾತ್ರ. ಇದನ್ನು ಪೂರೈಸಿಕೊಳ್ಳಲು ಅವರು (ಅಹಿಚ್ಛತ್ರ ಮುಂತಾದ) ದೂರ ದೇಶದ ವಿದ್ವಾಂಸರನ್ನು ಬರಮಾಡಿಕೊಂಡು, ಅವರಿಗೆ ಪೋಷಣೆ ಒದಗಿಸಿ ಇಲ್ಲಿ ನೆಲೆಸಲು ಅವರ ಮನವೊಲಿಸಬೇಕಾಯಿತೆಂದು ಕಾಣುವುದು. ಈ ಪ್ರಕ್ರಿಯೆ ಆರಂಭಕಾಲದ ಕದಂಬರ ಶಾಸನಗಳಲ್ಲಿ ಹೆಚ್ಚು ಸ್ಫುಟಗೊಂಡಿರುವುದು. ಇವರು ಹಾಕಿಸಿದ (೪೪) ಶಾಸನಗಳಲ್ಲಿ ಸುಮಾರು ೩೦ ಬ್ರಾಹ್ಮಣರಿಗೆ ಹಾಕಿಕೊಟ್ಟ ಭೂದತ್ತಿಯನ್ನು ೧೨ ಜೈನ ಮತ್ತು ೨ ಬೌದ್ಧ ಧರ್ಮಸಂಸ್ಥೆಗಳಿಗೆ ಮಾಡಿದ ದಾನಕಾರ್ಯಗಳನ್ನು ಪ್ರಸ್ತಾಪಿಸು ವುವು. ಅಪರೂಪವಾಗಿ ಕದಂಬರ ವಂಶಾವಳಿಯನ್ನೂ ಪ್ರಸ್ತಾಪಿಸುವ ತಾಳಗುಂದ, ಗುಡ್ನಾಪುರ, ಹಲಸಿ ಮುಂತಾದ ಮೂರು ನಾಲ್ಕು ಶಾಸನಗಳನ್ನು ಬಿಟ್ಟರೆ, ಉಳಿದವು ಗಳೆಲ್ಲವೂ ಫಲದಾಯಿಗಳನ್ನು ಕೀರ್ತಿಸಲು, ಅವರ ಮೂಲಕ ಆಳರಸರ ಹೆಗ್ಗಳಿಕೆಯನ್ನು

ಪ್ರದರ್ಶಿಸುವ ಶಾಸನಗಳಾಗಿವೆ. ಕೆಲವು ಶತಮಾನ ಕಾಲ ಸಮುದ್ರ ಸಂಪತ್ತಿನ ಮೇಲೆಯೇ ಅವಲಂಬನ ಹೊಂದಿದ್ದ ಕದಂಬರನ್ನು ಇಲ್ಲಿ ಬ್ರಾಹ್ಮಣೋತ್ತಮ ಮತ್ತು ಕ್ಷತ್ರಿಯಶ್ರೇಷ್ಠ ಎಂದು ಹೊಗಳಲಾಗಿದೆ. ಅವರಿಗೆ ಭವ್ಯ ವಂಶಾವಳಿಯನ್ನೂ ಕುಲ-ಗೋತ್ರವನ್ನೂ ಒದಗಿಸಿ, ಗುಪ್ತ ಮುಂತಾದ ಸಮ್ರಾಟರೊಡನೆ ಮಾಡಿದ ಅವರ ನೆಂಟಸ್ತಿಕೆಯನ್ನು ಕೊಂಡಾಡುವುದು ಇವುಗಳ ಮುಖ್ಯ ಉದ್ದೇಶವಾಗಿತ್ತೆಂಬ ಭಾವನೆ ಬರುವುದು. ಆರಂಭಕಾಲದ ಇವರ ಕಡಲ ಮೇಲಿನ ಶ್ರಮಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಮಂದಗೊಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ತೋಡಿಸಿದ ಕೆಲವು ಕೆರೆ-ತಟಾಕಗಳ ಪ್ರಸ್ತಾಪ ಬಿಟ್ಟರೆ, ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಪಡುವ ಅವರ ಜನಪರ ಕಾರ್ಯಗಳ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಇಲ್ಲಿ ಅಪರೂಪವಾಗಿದೆ. ಅಂದರೆ ಇಲ್ಲಿ ಬಳಸಿದ ಭಾಷೆ ಬಹುಸಂಖ್ಯಾ ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಆಶ್ರಿತ ಬ್ರಾಹ್ಮಣ ವಿದ್ವಾಂಸರಿಗೆ ಮಾತ್ರ ಸಂಬಂಧಪಟ್ಟದ್ದಾಗಿದೆಯೆಂದು ಅರ್ಥ. ಈ ಕಾಲದಲ್ಲಿ ಸ್ಥಳೀಯ ಭಾಷೆಯನ್ನೂ ಜನಪದ ಸಂಸ್ಕೃತಿಯನ್ನೂ ರಕ್ಷಿಸಿಕೊಂಡು ಬಂದವರು ಅರಸರಲ್ಲ, ಜನಸಾಮಾನ್ಯರು. ರಾಜ್ಯದ ವ್ಯವಹಾರ ವೃದ್ಧಿಸಿ ಸಮಾಜದ ಎಲ್ಲ ವರ್ಗಗಳೊಡನೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸಬೇಕಾದ ಅನಿವಾರ್ಯತೆ ಉಂಟಾದಾಗ ಮಾತ್ರ ಇಂತಹ ಆಳರಸರು ಜನನುಡಿಯಲ್ಲಿ ವ್ಯವಹರಿಸಲು ಆಸಕ್ತರಾದರೆಂದು ಕಾಣುವುದು. ಕನ್ನಡ ನುಡಿಯ ಇತಿಹಾಸವನ್ನು ಸ್ಪಷ್ಟವಾಗಿ ಗುರುತಿಸಿದಾಗ ಮಾತ್ರ ಈ ಬದಲಾವಣೆಯ ಗತಿಯನ್ನು ಗುರುತಿಸಲು ಸಾಧ್ಯವಾಗಬಹುದೆನಿಸುವುದು.

ಆಕರಟಿಪ್ಪಣಿ :

೧. *ಇತಿಹಾಸ ದರ್ಶನ* XVII (೨೦೦೨), ಪು. ೧-೧೧
೨. ಪುರಂ. ೮೦; ೭೪-೭೫
೩. ಅಹಂ. ೨೫೩:೧೯
೪. ಅಗನಾ. ೧೧೫, ೯೧
೫. ಅಗನಾ. ೨೩,೭೨; ಪುರಂ. ೨೭೩,೩೦೩
೬. ಮಹದೇವನ್, ಅದೇ., ಸಂ. ೪೯
೭. ಎಎಸ್‌ಎಂಎಆರ್ (ಮೈಸೂರು ಪ್ರಾಕ್ತನ ವರದಿ) ೧೯೨೭, ಪು.೬೮; ಅದೇ ೧೯೧೬, ಪು.೩.೧
೮. ಎಸ್‌ಐಐ XXIV, ೨೬೯, ನೊ. ಮುನ್ನುಡಿ, ಪು. iii
೯. ಪದಿಱ್ಱು. II, ೧:೪-೧೬; ೨,೩; ೨೮, ೧-೫; IVರ ಪದಿಪಂ; ಅಪನಾ. ಮಣಿಮಿಡಪವಳಂ ೧೨೭; ೩-೧೦, ೩೪೭:೩೫; ಶಿಲಪ್ಪ. ಅದ್ಯಾ.೧೭, ಉಳ್ವರಿವಳ್ತು ೧-೨; ಅಧ್ಯಾ.೨೨.: ೧-೧೮; ೨೫: ೧೮೫-೧೮೯; ೨೮: ೧೩೫; ೨೯ ಉಸಾಲ್‌ವಾರಿ ೧೧-೩ ಮತ್ತು ವಳ್ಳೈಪತ್ತು ೩:೩. ಮುಂ.
೧೦. ಪದಿಱ್ಱು. ೭:೫; ಅಹನಾ. ೩೪೭: ೩-೭; ಶಿಲಪ್ಪ ವಳ್ಳೈಪಾಟ್ಟು ೨:೩
೧೧. ಪದಿಱ್ಱು. ೨೦: ೨-೫; V: ೧೨
೧೨. ಅಹನಾ. ೧೨೭, ೩-೧೦
೧೩. ಶಿಲಪ್ಪ ೨೩: ೧-೮೧
೧೪. ಅದೇ. ೨೫: ೧೮೫-೧೮೯
೧೫. ಅದೇ. ೨೫: ೧೫೬-೧೫೯; ೧೦೩, ೧೪೪೮-೧೪೯

೧೬. ಶಿಲಪ್ಪ XVII: ಉಳ್ವರಿವಳ್ತು ೧.೨
೧೭. ರಾಮಾಯಣಮ್, ಏನ್ಷಿಯಂಟ್ ಜಾವ್ಹ, ಪು.೧೧೪
೧೮. ಪಿಳ್ಳೈ, ಕೆ.ಕೆ., ಸೌತ್ ಇಂಡಿಯಾ ಅಂಡ್ ಶ್ರೀಲಂಕಾ: ಸರ್ ವಿಲ್ಲಿಯಮ್ ಮೆಯೆರ್ ಎಂಡೋಮೆಂಟ್ ಲೆಕ್ಚರ್ಸ್, ಮವಿವಿ. (ಮದ್ರಾಸ್, ೨೦೦೧ (ಪು.ಮು.) ಪು.೨೪
೧೯. ಇಆ. XIII, ಪು. ೩೧೩-೪೧೧
೨೦. ನೊ. ಸಂಕಲನ ೨೬, ಪು.೬೩-೬೪
೨೧. ಅಪಾ. ೬೯೬; ನೊ. ಮಾರ್. ಜೆ.ಆರ್., ಅದೇ, ಪು.೨೮೭, ಅ.ಟಿ. ೧೧
೨೨. ತಮಿಳ್ ಲೆಕ್ಸಿಕನ್ V, (ಮದ್ರಾಸ್. ೧೯೮೨). ಪು. ೨೯೧೬
೨೩. ಪೆರಿಯಪುರಾಣಂ-ಚಂಡೇಶ್ವರಿ ಚರಿತ್ರೆ, ಭಾ. ೧
೨೪. ತೊಲ್ಕಾಪ್ಪಿಯಮ್-ಸೊಲ್ಲಧಿಕಾರಮ್, ಶೈವಸಿದ್ಧಾಂತ ಪಬ್ಲಿಕೇಶನ್ ಲಿ., ತಿರುನೆಲ್ವೇಲಿ-ಚೆನ್ನೈ, ೧೯೫೨ (೨ನೆಯ ಸಂ.). ಪು. ೨೦೭
೨೫. ಮೆಕ್‌ಕಿಂಡ್ಲ್, ಜೆ.ಡಬ್ಲ್ಯು., ಏನ್ಷಿಯಂಟ್ ಇಂಡಿಯ IV, (ಪಾಂಚಿ, ೧೮೮೫), ಪು.೧೮೦
೨೬. ಮೈಸೂರು ಪ್ರಾಕ್ತನ ವರದಿ ೧೯೨೯, ಪು. ೨-೮; ಅದೇ ೧೯೧೧, ಪು.೩೨
೨೭. ಗಾಯ್ ಜಿ.ಎಸ್., ಇನ್ಸ್‌ಕ್ರಿಪ್ಷನ್ ಆಫ್ ದಿ ಅರ್ಲಿ ಕದಂಬಾಸ್, ದೆಹಲಿ. ೧೯೯೬, ಶಾ.ಸಂ. ೨೨, ಪು.೧೦೭-೧೧೧
೨೮. ಎಕ ೧, ಕೂರ್ಗ ೧ (ಸು.೪೬೬)
೨೯. ಅದೇ ಮುನ್ನುಡಿ, ಪು.೬ ಅಲ್ಲದೆ ದುರ್ವಿನೀತನ ತಾಯಿ ಕೂಡಾ ಕದಂಬ ಮನೆತನದವಳಾಗಿದ್ದಳು.
೩೦. ಮೈಸೂರು ಪ್ರಾಕ್ತನ ವರದಿ ೧೯೪೧, ಪು. ೧೨೮-೩೧; ಎಇ XLI, ಪು.೧೦೫-೧೧೩, ಎಕ (ರೈ) IV, ಚಾ ೩೪೭. ಮೈಸೂರು ಪ್ರಾಕ್ತನ ವರದಿ ೧೯೨೫, ಪು.೯೦-೯೨, ಎಕ XII, ತುಮು. ೨೩, ಎಕ III, ನಂಜ. ೨೬ ; ಮುಂ).
೩೧. ಮೈಸೂರು ಪ್ರಾಕ್ತನ ವರದಿ ೧೯೩೬, ಪು. ೧೩೫
೩೨. ಇಆ XII, ಪು. ೧೩; ಅದೇ. XVIII, ಪು. ೩೬೩
೩೩. ಎಕ IV, ಮು. ಪು.೪-೫; ಎಕ IX, ಮು ಪು.೩
೩೪. ಎಕ IV, ಹೆಗ್ಗಡ. ೫೬, ಮು. ೩-೪
೩೫. ಎಕ XI, ದೊಡ್ಡ ಬ. ೩೮
೩೬. ಎಕ VII, ಶಿಕಾ. ೨೬೪: ಸು. ೩-೪ನೆಯ ಶತಕ.
೩೭. ಜಿಎಸ್‌ಗಾಯ್, ಅದೇ ಪು. ೬೧. ಮತ್ತು ರಾಜಶೇಖರಪ್ಪ, ಬಿ., ಕಾವಪ ೧೯೮೪, (ಸಂ. ೬೯). ಪು.೧ ರಿಂದ.
೩೮. ಅದೇ.
೩೯. ಜೆಇಎಸ್‌ಐ X, ಸೊರಬ. ಪು. ೧೧೯; ಇಆ V, ಬೆಂಗ. ಪು. ೧೩೩; ಎಕ XI, ಚಿ.ದು. ೪೩
೪೦. ಎಕ (ಮೈ) IX, ಬೇಲೂ. ೫೩೭: ಎಕ (ಮೈ) XI, ಚಿ.ದು. ೧೮; ಕಇ IX, ಬಾದಾ. ೨೨೨ ಮತ್ತು ೩೦೦
೪೧. ಎಸ್‌ಐಐ XXVII, ಪಲ್ನಾಡ್ ೨೫೮, ೨೬೦; ನಂದಿಕೊಟ್ಕೂರು ೨೬೧, ೨೬೨, ೨೬೪-೨೬೯, ೨೭೧-೨೭೪; ಎಕ II, ಶ.ಬೆ. ೧೪, ೧೫, ೨೦-೨೫; ೨೭-೩೬; ಮುಂ.
೪೨. ಇಆ V, ಬೆಂಗ. ೧೩೩; ಎಕ (ಮೈ) IX, ಬೇಲೂ. ೫೩೭
೪೩. ಎಕ (ಮೈ) XII, ಕಡೂ. ೨೩; ಎಸ್‌ಐಐ XXVI, ಕಡೂ. ಪು. ೪೮-೫೦; ಎಕ (ಮೈ) XII, ತರೀ. ೧೦೩; ಎಕ XI, ದಾವ. ೬೬
೪೪. ಉದಾ. 'ಆತ್ರೇಯಸಗೋತ್ರಾಯ ಪಶುಪತಶರ್ಮಗಂ ಇತಿ ಇಪ್ಪೊರ್ವರ್ಗಂ ಏಕೋಭಾಗಮ:...' ಎಂದೆಲ್ಲ.

■ ಪ್ರಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨
email : settar@nias.iisc.ernet / profssettar@yahoo.co.in ■

ಕೆನಡಾದ ಕವಿ ಐರ್ವಿಂಗ್ ಲೇಟನ್‌ರ ೩ ಕವಿತೆಗಳು ಬಿ. ಎ. ಸನದಿ

೧. ಗುರುತುಗಳೇ ಇರಲಿಲ್ಲ

ನಡೆನಡೆಯುತ್ತ ನಾನರಿತೆ
ನಾ ನಡೆದುದೆಲ್ಲಿಗೆಂದು.
ಬಹುವಾಗಿ ದ್ವೇಷಿಸುತ, ಪ್ರೀತಿಸುವುದರಿತೆ
ಪ್ರೀತಿಸುತ, ಯಾರನ್ನು-ಏನನ್ನು ಪ್ರೀತಿಸುವುದೆಂದರಿತೆ
ದುಃಖಿಸುತ, ಹೊಟ್ಟೆ ಬಿರಿವಂತೆ ನಗುವುದನ್ನರಿತೆ
ದುರ್ಬಲತೆಯಿಂದಲೇ ಬಲ ಬೆಳೆಸಿಕೊಂಡೆ
ಅಸತ್ಯದೊಡಲಿಂದ ಸತ್ಯವನು ತಿಳಿದೆ
ಇಬ್ಬಗೆಯ ನಡೆಯಿಂದ ನೇರತನ ನೆಯ್ದೆ
ಕೊನೆಗೊಮ್ಮೆ ನಾನೀಗ ಯಾರೆಂಬುದರಿತೆ
ಅಂತೆಯೇ ಆ ಮನುಜನಾಗುವ ಧೈರ್ಯ ಪಡೆದೆ.
ಇನ್ನೊಂದು ಹೆಜ್ಜೆಯಿಟ್ಟಲ್ಲಿ
ನಾ ಹೊರಟ ತಾಣವನೆ ತಲುಪಬಲ್ಲೆ.

೨. ನನಗೊಂದು ನಾಯಿ ಕಚ್ಚಿತ್ತು

ಡಾಕ್ಟರನೊಬ್ಬ ಬರಿ ಮೋಜಿಗಾಗಿ
ಅನಗತ್ಯ ಶಸ್ತ್ರಕ್ರಿಯೆಗೈದಾಗ
ಅವನ ಹಾಗೆಯೇ ಆಗಿಬಿಟ್ಟಿತ್ತೆನ್ನ ಮೂಗು;
ಮತ್ತೊಂದು ಶಸ್ತ್ರಕ್ರಿಯೆ ಅಂಥದೇ ಕಾರಣಕೆ
ಕುರುಡುಗೊಳಿಸಿತು ನನ್ನ ಕಣ್ಣು.
ಪ್ರೇಮಗೀತೆಗಳ ರಚನೆ ಮತ್ತು
ತ್ಯಾಗಭಾವನೆಗೆ ಹೆಸರಾದ ಕವಿಯೊಬ್ಬ
ನನ್ನ ಮಡದಿಯ ಮಾನಭಂಗಕ್ಕೆ ಯತ್ನಿಸುವನು;
ನನ್ನನ್ನು ಕೊಲ್ಲಬಯಸುವ ಮಾನವರು
ಸೇನಾಪಡೆಯ ಘಟಕವೊಂದೆನಿಸುವರು.
ಒಂದೇ ಒಂದು ಸಲ
ನನ್ನನ್ನು ಕಚ್ಚಿದೆಯೊಂದು ನಾಯಿ.

೩. ಬಂಡೆಗಲ್ಲಿನ ಮೇಲೆ ಪಾತರಗಿತ್ತಿ

ಸ್ತಬ್ಧ ಸ್ಥಿತಿಯೊಳಗಿದ್ದ
ಕರಿಯ ಗೆರೆಗಳು ಬೆರೆತ ದೊಡ್ಡ ಹಳದಿ ಪಕ್ಕಗಳು.
ಮೃತ ಶರೀರದ ಮುಖದ ಮೇಲೆಯೂ ಹೀಗೆ
ಮೃತಸಾತ್ಮ ನೆಲೆಸುವುದೆಂದು ಹೇಳುವರು ಜನರು.

ಮಾತ್ರ ನನಗೆನಿಸಿದ್ದು : ಬಂಡೆಗಲ್ಲಿಗೆ ಜೀವ ಬಂದಂತೆ
ಈ ಪತಂಗವು ಶಿಲೆಯ ಮೊಗದ ಮೇಲಿನ ಕಳೆಯು
ಕಲ್ಲಿನೊಡಲಲಿ ಬೆಳೆದ ಗೂಢ ಹಂಬಲವೊಂದು
ಜೀವಧಾರಣಗೈದು ಹೀಗೆ ಕಂಗೊಳಿಸುತಿಹುದು.

ಜೋಡು ಹಲ್ಲಿನ ಎರಡು ಹಿಂಸ್ರ ಪ್ರಾಣಿಗಳು ಕಾದಿನಲಿ
ಕಡಿದಾಡಿ ಸತ್ತುದನು ಕಂಡಿದ್ದರೂ ಈಗ ಮರೆತ ಮಾತು.
ನೋವೆಂಬುದು ನಿಜವಲ್ಲ, ಸಾವೆಂಬುದು ಭ್ರಮೆಯು
ಇಲ್ಲಿ ಭೂಮಿಯ ಮೇಲೆ ಸಾವೆಂಬುದೇ ಇಲ್ಲ.
ನನ್ನ ಒಳದನಿಯಿಂತು ಎಚ್ಚರಿಸಿತು.
ಪಾತರಗಿತ್ತಿಯ ಬಳಿ ನನ್ನ ಕೈ ಸರಿದಾಗ
ಕೆಳಗಡೆಯ ಬಂಡೆಯೇ ಚಲಿಸಿದಂತೆನಿಸಿತು!

■ ಡಾ. ಬಿ. ಎ. ಸನದಿ : ಮಿಲನ, ಸಾ ಮಿಲ್ ಎದುರು, ಹೆರವಟ್ಟಾ, ಕುಮಟಾ-೫೮೧ ೩೪೩ ■

ಪಯಣ

ಜಗದೀಶ ಮಂಗಳೂರಮಠ

ನಡೆದು ನಡೆದು ಹಾದಿಯಾಗಿ
ಹಾದಿ ಬೀದಿಯಾಗಿ ರಾಜಮಾರ್ಗವಾಗಿ
ಬೆಳೆದದ್ದು ಹಳೆಯ ಕಥೆ.

ನಡೆವ ಓಡುವ ಹುಡುಕುವ
ಕುತೂಹಲ ಕ್ರಿಯೆಗಳೆಲ್ಲ ಮಾಯವಾಗಿ
ದಾರಿದಾರಿಗಳು ಧಿಕ್ಕು ಹೊಡೆಯುವ ಕಣ್ಣು ಕುಕ್ಕುವ ವ್ಯಥೆ.

ಹುಚ್ಚು ಕುದುರೆಯ ಬೆನ್ನೇರಿ
ಕುಳಿತದ್ದೊಂದೇ ಸಂತೋಷದಲಿ ಸಂಭ್ರಮಿಸಿ
ಎತ್ತ ಕಡೆ ಪಯಣ ಯಾವ ದಿಕ್ಕಿನ ಗುರಿ
ಎಲ್ಲ ಮರೆತುಬಿಟ್ಟಿರುವ ಪರಾಕ್ರಮಿ.

ಕೋಟೆ ಕಟ್ಟಿದವರೆಲ್ಲ ಕಾಣದೂರುಗಳಲ್ಲಿ
ಹಳಹಳಿಸುವರು ಸಂಜೆ ಮೋಡಗಳ ನೋಡಿ
ಸುಲಿಗೆಕೋರರ ದಂಡು ಬೀಡುಬಿಟ್ಟಿದೆ ಇಲ್ಲಿ
ಫಿರಂಗಿ ಬುಲ್ಡೋಜರುಗಳೊಡನೆ ಒಟ್ಟುಗೂಡಿ.

ಅಳುತ್ತಲಿದೆ ನೆಲದೆಲ್ಲ ಚೆಲುವು
ಸುಡುವ ನೇಸರ ಅಣಕಿಸುವ ಚಂದಿರ
ಅಟ್ಟಹಾಸದ ತಾರೆಗಳ ಅಂಬರ.

ಎದೆಗಳಲ್ಲಿ ಭಗ್ಗನೆದ್ದು ಉರಿವ ಉರಿ
ಶಾಂತವಾಗಿಸುವ ಜಲವೂ ಬತ್ತಿದೆ
ಒಳದನಿಯೂ ಬಾಯಾರಿ ಸತ್ತಿದೆ.

ಓಡುತ್ತಲಿದೆ ಕುದುರೆ ಮುಂದೆ ಮುಂದೆ
ಸವಾರನಿಗಿಲ್ಲ ಯಾವುದರ ಚಿಂತೆ.

ಹಾರುವ ಹಕ್ಕಿಗಳ ರೆಕ್ಕೆ ಕತ್ತರಿಸಿ

ಜೋಡಿಸಲಾಗಿದೆ ಪ್ಲಾಸ್ಟಿಕ್ ಪಕ್ಕಿಗೆ
ನರ್ತಿಸುವ ನವಿಲ ಕಾಲುಗಳ ಕತ್ತರಿಸಿ
ಅಳವಡಿಸಲಾಗಿದೆ ಇಲೆಕ್ಟ್ರಾನಿಕ್ ಗೊಂಬೆಗೆ.
ದುಡಿವ ಕೈಗಳಿಗೆ ಅದೃಶ್ಯ ಹೆಡೆಮುರಿ ಕಟ್ಟಿ
ಕಾಂತದ ತಂತು ತಂತಿಗಳಿಗರ್ಪಿಸಿ ನಿಯತಿ
ಮಂತ್ರಫಲಾಪೇಕ್ಷೆಯಲಿ ಕೇಕೆ ಹಾಕುವ ಒಲವು
ಬಲವುಳ್ಳವರದೇ ನಾಡಲ್ಲಿ ಸದಾ ಗೆಲುವು.
ಅಂತರಂಗದ ಲಿಂಗಕ್ಕೆ ಕಣ್ಣು ಮುಚ್ಚಿ
ಸ್ಥಾವರಕ್ಕೆ ನಿತ್ಯ ಪುಷ್ಪ ಪತ್ರಿ
ಎಲ್ಲಿದೆ ಕಲ್ಯಾಣದ ಹಾದಿ
ಕಂಗಾಲಾಗಿ ನಿಂತುಬಿಟ್ಟಿದೆ ಬಿಡದಿ.
ಹಣದ ಹೊಳೆ ಹಳ್ಳ ಕಾಲುವೆಗಳೇ ಸರಿ
ಸದಾ ತುಂಬಿ ತುಂಬಿ ಹರಿಯಿರಿ
ಎಲ್ಲ ಬಂಧಗಳೇ ದೂರ ಸರಿಯಿರಿ
ನೀವೀಗ ಮ್ಯೂಜಿಯಮ್ಮಿನ ಮೂಕ ಗೊಂಬಿ.
ಓಡುತ್ತಲಿದೆ ಕುದುರೆ ಮುಂದೆ ಮುಂದೆ
ಓಡಿದ್ದೇ ದಿಕ್ಕು ಹಾರಿದ್ದೇ ದಾರಿ
ಸುತ್ತಲೂ ಬಾಯ್ತೆರೆದು ನಿಂತ ಕಮರಿ.

■ ಜಗದೀಶ ಮಂಗಳೂರಮಠ : ೧೧೩, ಮಮತಾ, ಮಾನಸಗಿರಿ, ಗೋಕುಲ ರಸ್ತೆ, ಹುಬ್ಬಳ್ಳಿ-೩೦ ■

ನಾಲ್ಕು ಕಿರುಗವಿತೆ — ಬಸವರಾಜ ಪಿ. ಡೋಣೂರ

---

೧. ಕನಸು ನನಸು

ಕನಸಿನಲಿ ಕಂಡು / ನನ್ನ ಸಕ್ಕರೆ ನಿದ್ದೆ / ಕೆಡಿಸಿದಾಕೆ
ನನಸಾಗಿ ಬಂದು / ಸಂಸಾರ ಕೆಡಿಸಬೇಡ.

೨. ಆಗ ಈಗ

ಮಾತಾಡು ಮಾತಾಡು / ಅಂತ ಗಂಟು ಬಿದ್ದರ / ಬರಿ ಹಾಡು ಹಾಡ್ತಿದ್ದಿ ಆಗ!
ಹಾಡು ಹೇಳು ಹಾಡು / ಅಂತ ದುಂಬಾಲು ಬಿದ್ದರ / ಬರಿ ಮಾತಾಡ್ತಿ ಈಗ!

೩. ಅವಳು ಕೇಳಿದ್ದು + ನಾನು ಹೇಳಿದ್ದು

ಕೇಳಿದಳು ಕಣ್ಣು ಮಿಟುಕಿಸುತ್ತ / ನಿಜವೆ, ನಿಮಗೆ ಪ್ರೇಯಸಿಯರುಂಟೆ / ಎಲ್ಲೆಲ್ಲೂ.
ಕತ್ತು ಹೊರಳಿಸಿದೆ / ಪ್ರೀತಿ ನುಡಿದೆ, ಹೌದು ಪ್ರಿಯೆ, / ಎಲ್ಲರಲ್ಲೂ ನೀನೆ
ಕಾಣುವೆ ನಿನ್ನನೇ ಎಲ್ಲರಲ್ಲೂ.

೪. ಹೇಗೆ ಹೇಳಲಿ?

ಹಸಿದ ಹೊಟ್ಟೆಗೆ ಹಿಟ್ಟು ಹಾಕಿದವರ / ಜಾತಿ ಹೇಗೆ ಕೇಳಲಿ?
ಸೋತ ಜೀವಕೆ ಪ್ರೀತಿ ಧಾರೆ ಎರೆದವರ / ಧರ್ಮ ಹೇಗೆ ಕೇಳಲಿ?
ಒಂಟಿ ಜೀವಕೆ ಸ್ನೇಹ ಹಸ್ತ ಚಾಚಿದವರ / ಅಂತಸ್ತು ಹೇಗೆ ಕೇಳಲಿ?

■ ಡಾ. ಬಸವರಾಜ ಪಿ. ಡೋಣೂರ : ಎಫ್೩೦, ಕವಿವಿ ಕ್ವಾರ್ಟರ್ಸ್, ಪಾವಟೆನಗರ, ಧಾರವಾಡ-೩ ■

ಪುಸ್ತಕ ಪರಿಶೀಲನೆ

೧. ಒರೆಗಲ್ಲು : ಡಾ. ಬೆಸಗರಹಳ್ಳಿ ರಾಮಣ್ಣ, ಸಿ.ವಿ.ಜಿ. ಪ್ರಕಾಶನ. ೭೦. ೩ ನೇ ಮೇನ್. ಜಬ್ಬಾರ್ ಬ್ಲಾಕ್, ಬೆಂಗಳೂರು-೩, ಪ್ರಮು. ೨೦೦೫, ಪು. ೨೦೮, ರೂ. ೧೫೦/-

ಮಂಡ್ಯ ಕರ್ನಾಟಕದ ಲೇಖಕ ಡಾ. ಬೆಸಗರಹಳ್ಳಿ ರಾಮಣ್ಣ (೧೯೩೬-೧೯೯೮), ಗ್ರಾಮೀಣ ಜೀವನದ ನಡುವೆ ಬದುಕಿ, ಸಣ್ಣಕತೆಗಳನ್ನು ಬರೆದವರು. ಕತೆಗಾರಿಕೆಯಲ್ಲಿ ಮುನ್ಶಿ ಪ್ರೇಮ್‌ಚಂದರನ್ನು ಸಾಕಷ್ಟು ಹೋಲುವ ರಾಮಣ್ಣ ಬಡ ಹಳ್ಳಿಗರ ಸಂವೇದನೆಯನ್ನು ಯಥಾರ್ಥವಾಗಿ ಪಡಿಮೂಡಿಸಿದ್ದಾರೆ. ಸ್ವಾತಂತ್ರ್ಯದ ಮೌಲ್ಯಕ್ಕೆ ೫೦ ವರ್ಷಗಳಲ್ಲಿ ಉಂಟಾದ ಧಕ್ಕೆಯನ್ನು ವಿವಿಧ ಸಂಗತಿ, ಸನ್ನಿವೇಶಗಳ ಚಿತ್ರಣದಿಂದ ಹೃದಯಸ್ಪರ್ಶಿಯಾಗಿ ಓದುಗರಿಗೆ ತಲುಪಿಸಿದವರು ರಾಮಣ್ಣ. ಸರಕಾರೀ ವೈದ್ಯಕೀಯ ವೃತ್ತಿಯನ್ನವರು ಹಳ್ಳಿಗಳಲ್ಲೇ ನಿರ್ವಹಿಸಿ ಬದುಕು ಬರಹದ ನಡುವಿನ ಪ್ರವೃತ್ತಿಗೆ ಪ್ರಾಮಾಣಿಕತೆ ತಂದವರು. ಜತೆಗೆ, ತನ್ನ ಜಿಲ್ಲೆಯ ಪರಿಸರದಲ್ಲಿ ಸಾಹಿತ್ಯಕ-ಸಾಂಸ್ಕೃತಿಕ ವಾತಾವರಣವನ್ನು ಹರಡಿದವರು. ರಾಮಣ್ಣನವರ ಈ ಪ್ರವೃತ್ತಿಯ ಪರಿಣಾಮ : `ಒರೆಗಲ್ಲು' ಗ್ರಂಥ. ಅವರ ಮರಣೋತ್ತರದಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ಐವತ್ತಾರು ಅಂಕಣ ಬರಹಗಳಿದ್ದು, ಇವೆಲ್ಲ ೧೯೯೫-೯೭ ರ ಅವಧಿಯಲ್ಲಿ ಮಂಡ್ಯದ `ಕನ್ನಂಬಾಡಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದವು.

೪ ಭಾಗಗಳಲ್ಲಿ ಲೇಖನಗಳನ್ನು ಬಿ. ಆರ್. ರವಿಕಾಂತೇಗೌಡ ಮತ್ತು ಎಸ್. ಆರ್. ಶಿವಕುಮಾರ್ ವಿಂಗಡಿಸಿ ಪ್ರಕಟಿಸಿದ್ದು, ಮೊದಲ ಭಾಗ `ಸಾಹಿತ್ಯ ಸನ್ನಿಧಿ'ಯಲ್ಲಿ ರಾಮಣ್ಣನವರ ಸಾಹಿತ್ಯಾಧ್ಯಯನದ ಪ್ರತಿಫಲಿತ ಲೇಖನಗಳಿವೆ. ಕುವೆಂಪು, ಬೇಂದ್ರೆ, ಚದುರಂಗ, ಪ್ರೇಮಚಂದ್, ಕುಮಾರವ್ಯಾಸ, ಧರ್ಮವೀರ ಭಾರತೀ, ಕಟ್ಟೀಮನಿ, ದೇವನೂರು, ಸಂಸ, ನರಸಿಂಹಸ್ವಾಮಿಯವರಂತಹ ಬಹು ತೂಕದ ಕವಿ, ಕತೆಗಾರ, ನಾಟಕಕಾರರ ಒಂದೊಂದು ಕೃತಿಗಳ ಕುರಿತ ಟಿಪ್ಪಣಿಗಳಿವೆ. ಪ್ರತಿಯೊಬ್ಬ ಕರ್ತೃ ಮತ್ತು ಪ್ರತಿಯೊಂದು ಕೃತಿಯ ಓದಿನಿಂದ ತಮಗುಂಟಾದ ಸಾಹಿತ್ಯಕ ಸಂತೃಪ್ತಿಯನ್ನು ರಾಮಣ್ಣ ಪಾರಿಭಾಷಿಕ ಪದಕ್ಕೆ ಹೊರತಾದ, ರಸವಿಮರ್ಶೆಯ ನುಡಿಗಟ್ಟಿನಲ್ಲಿ ವ್ಯಕ್ತಪಡಿಸುತ್ತಾರೆ. ಲೇಖಕರ `ಶಕ್ತಿ'ಯನ್ನು ಗುರುತಿಸುತ್ತಾರೆ. ಬಂಡಾಯ ಸಾಹಿತ್ಯ ಸಮ್ಮೇಳನ (೧೯೯೦) ಚಿತ್ರದುರ್ಗದಲ್ಲಿ ನಡೆದ ಸಂದರ್ಭವನ್ನು ನೋಡಿ ವರದಿ ಮಾಡುತ್ತ ರಾಮಣ್ಣ ಬರೆದ ಟಿಪ್ಪಣಿ, ಅವರ ಬರಹದ ಧೋರಣೆಯ ಪ್ರತಿಪಾದನೆಯಂತಿದೆ.

ಎರಡನೆಯ ಭಾಗ `ನೆಲದೊಡಲು', ಏಳು ಅಂಕಣ ಲೇಖನಗಳ ಭಾಗವಾಗಿದ್ದು, ಕನ್ನಡ ನುಡಿಯ ವಿವೇಚನೆ, ನಾಡಿನ ಕಾಳಜಿ ಪ್ರಕಟಗೊಳಿಸಿದೆ. `ಎದೆಯ ಬೇಗುದಿ'ಯ ೩೧ ಬರಹಗಳು ರಾಮಣ್ಣನವರ ಸಾಮಾಜಿಕ-ಸಾರ್ವಜನಿಕ-ಪರಿಸರಪ್ರಜ್ಞೆಯ ಪ್ರತಿಕ್ರಿಯೆಗಳಾಗಿವೆ. ವೈದ್ಯರಾದ ಈ ಕತೆಗಾರ, ಜನಸಾಮಾನ್ಯರಿಗೆ ಆರೋಗ್ಯದ ಪ್ರಜ್ಞೆ ಏಕಿರಬೇಕೆಂಬ ಬಗ್ಗೆ ವಿವರಿಸುವ ಅಂಶಗಳು ಮನೋಜ್ಞವಾಗಿವೆ.

೪ ನೆಯ ಭಾಗ `ಮರೆಯಲಾರದವರು' ಹತ್ತು ಜನ ವ್ಯಕ್ತಿಗಳ ಚಿತ್ರಣವಾಗಿದೆ. ಕೆ. ವಿ. ಶಂಕರಗೌಡ, ಚಂಪಾ, ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ ಮುಂತಾದ ಲೇಖಕರ ಬಗ್ಗೆ, ಹತ್ತಿರದಿಂದ ಕಂಡು ಮೆಚ್ಚಿದ ಗುಣಗಳ ಉಲ್ಲೇಖವಿದೆ. ರಾಮಣ್ಣನವರ ಗಮನ, ಶ್ರೀಸಾಮಾನ್ಯರಲ್ಲಿಯೂ ಅಪರೂಪ ವ್ಯಕ್ತಿತ್ವಗಳಿರುವುದರ ಕಡೆಗೆ ಹೇಗಿತ್ತೆಂಬುದಕ್ಕೆ `ಜೆ. ಎಲ್. ಜವರೇಗೌಡ : ಓರ್ವ ನಿಷ್ಕಳಂಕ ಅಧಿಕಾರಿಯ ನಿರ್ಗಮನ' ಮತ್ತು `ನಮ್ಮೂರಿನ ಕಿರೀಟ : ಮಂಡ್ಯ ನೆಲದ ಓರ್ವ ಪ್ರಾಮಾಣಿಕ ಮನುಷ್ಯ' ಲೇಖನಗಳು ಓದುವಂತಿವೆ. `ಒರೆಗಲ್ಲು' ಅಂಕಣ ಬರಹಗಳ ಮೂಲಕ, ಬೆಸಗರಹಳ್ಳಿ ರಾಮಣ್ಣನವರು, ಪತ್ರಿಕಾ ಓದುಗರಿಗೆ, ಸಾಹಿತ್ಯ-ಸಂಸ್ಕೃತಿಯ ಆಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ `ಕಥಾ ಸಾಹಿತ್ಯ'ದ ಓದುವಿಕೆ ಎಷ್ಟು ಪರಿಣಾಮಕಾರಿಯೋ ಅಷ್ಟೇ ಆಪ್ಯಾಯಮಾನವಾದ ಅನುಭವ ಈ ಅಂಕಣ ಬರಹದ ಓದಿನಿಂದ ನಮಗಾಗುತ್ತದೆ.

೨. ಧರೆ ಮೇಲೆ ಉರಿಪಾದ : ಕೃಷ್ಣಮೂರ್ತಿ ಬಿಳಿಗೆರೆ (ಗುಬ್ಬಿ)

ನಮ್ಮ ಪ್ರಕಾಶನ, ಬಿಳಿಗೆರೆ, ತಾ. ತಿಪಟೂರು, ಪ್ರಮು. ೨೦೦೫. ಪು. ೧೦೭, ರೂ. ೪೦/-

ನಮ್ಮೆಲ್ಲರ ಓದು-ಬರಹಗಳ ಹಂಗಿಲ್ಲದೆ ಇಂದು ಸಂಭವಿಸುತ್ತಿರುವ ಬದಲಾವಣೆಗಳು ಮನುಷ್ಯನ ಮನಸ್ಸು-ಸಂವೇದನೆಗೂ ಪ್ರಕೃತಿಪ್ರಧಾನವಾದ ಈ ಸುಂದರ ಧರೆಗೂ ಇರುವ ಸಂಬಂಧ-ಅನುಬಂಧಗಳನ್ನು ನಿಷ್ಕರುಣೆಯಿಂದ ಸಡಿಲುಗೊಳಿಸುತ್ತಿವೆ; ಸಂಬಂಧಗಳು ಹಾಳಾಗಿ ಹೋಗುವಷ್ಟು ರಭಸವ ಉರಿಗಾಳಿ ಬೀಸುತ್ತಿದೆ. ಪ್ರಕೃತಿಯ ಶಕ್ತಿಯನ್ನೂ, ಸಂಪನ್ಮೂಲವನ್ನೂ ಆದಷ್ಟು ತೀವ್ರವಾಗಿ ಶೋಧಿಸಿ-ಸೋಸಿ ಹೊರತೆಗೆದು, ಕೃತಕ ತಂತ್ರಜ್ಞಾನದ ಬಲದಿಂದ ಶಕ್ತಿಮೂಲಗಳನ್ನು ಹುಟ್ಟುಹಾಕಿ, ನೆಲ, ಆಕಾಶ, ಪರಿಸರ-ಪರಿಸ್ಥಿತಿಗಳನ್ನು ಅಯೋಮಯಗೊಳಿಸುವ 'ಟೆಕ್ನಾಲಜಿ', 'ಮಾರುಕಟ್ಟೆ', 'ಹಣ' ಪ್ರಧಾನ ರಾಜಕೀಯ ಅಬ್ಬರದಲ್ಲಿ ಜೀವಧ್ವನಿಗೆಲ್ಲಿದೆ ಕಿವಿ, ಕರುಳು? ಕೃಷ್ಣಮೂರ್ತಿ ಬಿಳಿಗೆರೆ ತಮ್ಮ ಈ ನಾಲ್ಕನೆಯ ಕವನ ಸಂಕಲನದ ಐವತ್ತೇಳೂ ಪದ್ಯಗಳಿಗೆ ವಸ್ತು ಮಾಡಿಕೊಂಡಿದ್ದು, ಹತಾಶೆಯ ಈ ಪ್ರಶ್ನೆಯನ್ನೇ. ಆದರೆ ಹತಾಶೆಗೊಳಪಟ್ಟು ಕೃಷ್ಣಮೂರ್ತಿಯ ಚೇತನ ಅಸಹಾಯಕವಾಗಿ ನಿಲ್ಲುವುದಿಲ್ಲ; ಆಂದೋಲನಕ್ಕೆ ಕರೆ ಕೊಡುತ್ತದೆ ಮತ್ತು ಪ್ರಕೃತಿಯನ್ನು ಉಳಿಸಲು ಹೊರಟ ಮಾನವೀಯ ಶಕ್ತಿ, ಯುಕ್ತಿಗಳ ಹೋರಾಟದ ಜತೆ ಕೈಗೂಡಿಸುತ್ತದೆ. 'ಭೂಮಿಯೊಂದು ಮಹಾಬೀಜ'ವೆನ್ನುವ ಕವಿ, ಬಯೋಟೆಕ್ನಾಲಜಿ ಪ್ರೇರಿತ 'ನಿರ್ಬೀಜೀಕರಣ'ದ ವಿರುದ್ಧ ದನಿ ಎತ್ತುತ್ತಾರೆ. ರೈತರನ್ನು ಎಚ್ಚರಗೊಳಿಸುತ್ತಾರೆ. ಈ ದನಿ ಅಬ್ಬರದ್ದಲ್ಲ, ಆವೇಶದ ಹುಚ್ಚು ಹೊಳೆಯೂ ಅಲ್ಲ; ಇದು ನೆಲತಾಯಿಯ ಅಂತಃಕರಣವಾದ ಆಳದಿಂದ ಸ್ಫುರಿಸಿದ್ದು. ಕ್ರಿಯಾಶೀಲ ಚಳವಳಿಯ ಘೋಷಣೆ ಕಾವ್ಯಾತ್ಮಕ ರೂಪ ಪಡೆದದ್ದು 'ಧರೆಯ ಮೇಲೆ ಉರಿಪಾದ'ದ ಯಶಸ್ಸಿನ ನೆಲೆ.

ಮಣ್ಣು, ನೀರು, ಮೋಡ, ಬೀಜ, ಬೇರು ಸಸಿ, ಕಾಂಡ, ಎಲೆ, ಹೂವು ಕಾಯಿ, ಹಣ್ಣು, ಹಕ್ಕಿ– ಜೀವಜಗತ್ತಿನ ಈ ವಸ್ತು ಪ್ರತಿರೂಪಗಳು ಬಿಳಿಗೆರೆಯವರ ಕಾವ್ಯಜಗತ್ತಿನ ಚೇತನಗಳಾಗಿವೆ. ನೆಲ, ಇಲ್ಲಿ ತಾಯಿ, ಮಗಳು ಪಾತ್ರ ಆಡುತ್ತಾಳೆ. ನೆಲದ ಮೇಲೆ ಬಿದ್ದ ಮಳೆ ನೀರನ್ನು ಕೊಯ್ಲು ಮಾಡಿ ಉಳಿಸುವ ಉಪಾಯದ ಬಗ್ಗೆ ಕವಿಗಿರುವ ಕಾಳಜಿ; ಬೀಜಗಳ ಸ್ವಾಭಾವಿಕತೆಯನ್ನು ಕಾಯುವ ಕಾತರ, ಹಲವು ಕವಿತೆಗಳಿಗೆ ಹೊಸ ಜೀವ ಕೊಟ್ಟಿದೆ, ಮಣ್ಣಿನ ಮಕ್ಕಳ ಅಂತರಂಗದ ಹಾಡು-ಪಾಡು 'ಧರೆ ಮೇಲೆ ಉರಿಪಾದ'ವನ್ನು ತಣ್ಣಗೆ ಮೆಟ್ಟಿ ನಿಲ್ಲುವಂತಿದೆ. ದೇಸೀ ಪ್ರಜ್ಞೆ, ದೇಸೀ ಅಭಿವ್ಯಕ್ತಿಯನ್ನು ಸಾಧಿಸಿದ ಬಗೆ ಸಂಕಲನವನ್ನು ನವನವೀನಗೊಳಿಸಿದೆ.

– ಡಾ. ಶ್ಯಾಮಸುಂದರ ಬಿದರಕುಂದಿ, ೧೫೧, ೫ನೇ ಮುಖ್ಯರಸ್ತೆ, ನವನಗರ, ಹುಬ್ಬಳ್ಳಿ-೫೮೦ ೦೨೫

೩. ಒಂಟಿ ಸಲಗ : ಡಾ. ಮ. ಸು. ಕೃಷ್ಣಮೂರ್ತಿ

ಮಂಜುಶ್ರೀ ಪ್ರಕಾಶನ, ೧೭ ನೇ ಮೇನ್, ಕುವೆಂಪು ಹೈಸ್ಕೂಲು ಹಿಂಭಾಗ, ಸರಸ್ವತಿಪುರಂ, ಮೈಸೂರು-೯, ಪ್ರಮು. ೨೦೦೩, ಪು. ೧೧೨, ರೂ. ೪೦/-

ಭರತಖಂಡದ ಅನೇಕ ಸಂತರುಗಳಲ್ಲಿ, ಅಗ್ರಪಂಕ್ತಿಯಲ್ಲಿ ನಿಲ್ಲುವ ಹೆಸರು, ಕಬೀರ. 'ಬದುಕಿನುದ್ದಕ್ಕೂ ಪವಾಡಗಳ ವಿರುದ್ಧ ಹೋರಾಡಿದ ಆತನ ಬದುಕೇ ಒಂದು ಪವಾಡ, ರಸಕವಿತೆ'. ಇಂಥ ಸಂತನ ಬಗ್ಗೆ, ತಮ್ಮದೇ ಆದ ರೀತಿಯಲ್ಲಿ ಅರಿಯುವ ಮತ್ತು ಅಭಿವ್ಯಕ್ತಿಸುವ ಪ್ರಯತ್ನಗಳು, ಕರ್ನಾಟಕದಲ್ಲೂ ಸಾಕಷ್ಟು ಕಾಲ ಹಿಂದಿನಿಂದಲೇ ನಡೆದುಬಂದಿವೆ. '...ಪಂಡಿತ ತಾರಾನಾಥರು ೧೯೨೭ ರಲ್ಲೇ 'ದೀನಬಂಧು ಕಬೀರ' ಎಂಬ ನಾಟಕವನ್ನು ಹಿಂದಿಯಲ್ಲಿ ಬರೆದರು... ಅದಾದ ತರುವಾಯ 'ದೀನಬಂಧು ಕಬೀರ' ಎಂಬ ಪುಸ್ತಕವನ್ನು ಕನ್ನಡದಲ್ಲಿ ಅನಕೃ ಬರೆದರು. ...ಅನಂತರ ಕಬೀರನ ಬಗ್ಗೆ ನಾಟಕ ಬಂತು, ಚಲನಚಿತ್ರ ಬಂತು. ಕಬೀರನನ್ನು ಕುರಿತ ಕಾದಂಬರಿ, ನಾಟಕಗಳ ಕನ್ನಡ ಅನುವಾದಗಳೂ ಬಂದಿವೆ.

ಕಬೀರನ ಬದುಕನ್ನು ಕುರಿತಾದ ಈ ಎಲ್ಲ ಪ್ರಯತ್ನಗಳ ಹಿನ್ನೆಲೆಗಳಲ್ಲಿ ಈಗ ಬಂದಿದೆ, ಕಬೀರನ ಬದುಕನ್ನು ಆಧರಿಸಿದ ಒಂದು ಕಾದಂಬರಿ, ಡಾ. ಮ. ಸು. ಕೃಷ್ಣಮೂರ್ತಿ ಅವರ `ಒಂಟಿ ಸಲಗ`. ಡಾ. ಕೃಷ್ಣಮೂರ್ತಿ ಅವರೇ `ನಿವೇದಿಸಿದ` (ಮೇಲಿನ ಪ್ಯಾರಾದ) ಈ ಹಿಂದಿನ ಅನೇಕರ ಬರಹಗಳ ಹಿನ್ನೆಲೆಯಲ್ಲಿ, ಈ ಕಾದಂಬರಿ, ಹಿಂದಿನ ಎಲ್ಲ ಪ್ರಯತ್ನಗಳಲ್ಲಿನ ದೋಷಾದಿಗಳನ್ನು ನಿವಾರಿಸಿಕೊಂಡ ಮತ್ತು ಇನ್ನಷ್ಟು ಗುಣಗಳನ್ನು ಮೈಗೂಡಿಸಿಕೊಂಡ ಒಂದು ಅತ್ಯುತ್ತಮ ಬರಹವೇ ಆಗಿ ಮೂಡಿ ಬರಬೇಕಾಗಿತ್ತು.

ಹಾಗೆ ನೋಡಿದರೆ: ಕಬೀರನ ಬದುಕನ್ನು ಕುರಿತಾಗಿ ಬಹಳಷ್ಟು ವಿವರ ಇಲ್ಲಿವೆ. ಆತನ ಅನಾಥ ಹುಟ್ಟು-ಬೆಳವಣಿಗೆ, ಆಕಸ್ಮಿಕವಾಗಿ ಆರಂಭಗೊಂಡ ರಾಮಾನಂದರೊಂದಿಗಿನ ಆತನ ಸಾಹಚರ್ಯ, ನಾಥಪಂಥ ಜೋಗಿಗಳೊಡನೆಯ ಆತನ ಪರ್ಯಟನ ಮತ್ತು ಸಂತರದ ಮುಖಾಮುಖಿ, ಬಾದಶಹನೆದುರಿಗಾದ ಬೇಗುದಿ ಬೆಳಕುಗಳು, ತಂದೆ-ತಾಯಿ, ಹೆಂಡತಿ-ಮಕ್ಕಳು, ಅವರೊಂದಿಗಿನ ನಿರ್ವ್ಯಾಜ ಸಂಬಂಧ, ಸಹವರ್ತಿಗಳು, ಸಮಾಲೋಚಕರು, ಸಂತರು, ಶಿಷ್ಯರು, ಶರಣರು, ಹೀಗೇ, ನೂರೆಂಟು ಸಂಬಂಧಗಳು, ನೂರೆಂಟು ಅನುಬಂಧಗಳು.

ಅಷ್ಟೇ ಅಲ್ಲ: ಹೀಗೆ ಆತನ ಭೌತಿಕ ಬದುಕು ಕುರಿತಂತಹ ವಿವರಗಳು ಮಾತ್ರವಲ್ಲದೆ: ಕಬೀರನ ಮಾನವೀಯತೆ, ಗುರುಭಕ್ತಿ, ನಿಷ್ಠೆ ಕುರಿತ ಅವರ ಇತ್ಯಾದಿ ಬಗ್ಗೆ, ಲೇಖಕರು ಸಾಕಷ್ಟು ಅಧ್ಯಯನ ಗೈದಿರಬಹುದಾದ ಸಾಕಷ್ಟು ಸೂಚನೆ ಈ ಕೃತಿಯಲ್ಲಿವೆ.

ಆದರೆ, ಮುಖ್ಯ ಊನವೆಂದರೆ, ಈ ಎಲ್ಲ ಮಾಹಿತಿಗಳ ಸಂಗ್ರಹ ಮತ್ತು ಅಧ್ಯಯನಗಳಲ್ಲಿ ಒಟ್ಟುಗೂಡಿಸಿಕೊಳ್ಳಲಾದ ಸಾಮಗ್ರಿ ಒಂದು ಉತ್ತಮ ಕಾದಂಬರಿಯಾಗಿ ಅರಳದೇ ಹೋಗಿರುವದು; ಇಲ್ಲಿಯ ಎಲ್ಲ ಮಾಹಿತಿಗಳು ಮತ್ತು ವಿವೇಚನೆಗಳು, ಒಂದು ಏಕತ್ರ ಶಿಲ್ಪವಾಗಿ ಕಟ್ಟಿಕೊಳ್ಳದೆ ಬಿಡಿಬಿಡಿಯಾಗಿಯೇ ನಿಂತುಬಿಡುವದು. ಹೀಗಾಗಿ ತಲುಪಬೇಕಾದಷ್ಟು ಮಟ್ಟಿಗೆ ಮತ್ತು ತಲುಪಬೇಕಾದ ರೀತಿಯಲ್ಲಿ, ಕಬೀರ, ಓದುಗನನ್ನು ಮುಟ್ಟುವದಿಲ್ಲ.

ಕೊನೆಯಲ್ಲಿ ಒಂದು ಮಾತು : ಕಾದಂಬರಿಯುದ್ದಕ್ಕೂ, ಕಬೀರನ ಪ್ರಗತಿಪರ ವಿಚಾರಗಳನ್ನು ಕುರಿತು ಅಷ್ಟೆಲ್ಲ ದೀರ್ಘವಾಗಿ (ಮತ್ತು ಪ್ರಶಂಸಾಪೂರ್ವಕವಾಗಿ) ಬರೆದ ಕಾದಂಬರಿಕಾರರು, ಕಥಾನಕದ ಅಂತ್ಯದಲ್ಲಿ ಬರೆಯುತ್ತಾರೆ : ``ಒಳಗೆ ಹೋದಾಗ ಕಂಡದ್ದೇನು?`` ಅವರೆಗೂ, ಒಳಗಡೆ ಹೆಣವಾಗಿ ಮಲಗಿದ್ದ ``ಕಬೀರ ಹೂವಾಗಿದ್ದ. ಇಡೀ ಮನೆ ಅದರ ಪರಿಮಳದಿಂದ ಮಗಮಗಿಸುತ್ತಿತ್ತು'' ಬದುಕಿನುದ್ದಕ್ಕೂ, ಪವಾಡಗಳ ವಿರುದ್ಧ ಪವಾಡ ಕಥಾನಕಗಳ ವಿರುದ್ಧ ಹೋರಾಟಗೈದ ಕಬೀರನ ಕೊನೆಯನ್ನು ಒಂದು ಪವಾಡವಾಗಿಯೇ ಚಿತ್ರಿಸಿದ್ದು, ಕಬೀರನಿಗೊಂದು ಚೋದ್ಯದ ಕಿರೀಟ.

– ದೇಶಪಾಂಡೆ ಸುಬ್ಬರಾಯ, 'ನೆಲೆ', # ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮

೪. *ಗದಗ ತೋಂಟದಾರ್ಯ ಮಠದ ಹಸ್ತಪ್ರತಿ ಸೂಚಿ : ಸಂ. ಪಿ. ಕೆ. ರಾಠೋಡ*

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕರ್ನಾಟಕ ಸರ್ಕಾರ ಬೆಂಗಳೂರು-೧, ಪ್ರಮು. ೨೦೦೪, ಪು.೪೨೨,ರೂ. ೨೦೦/-

ಗದಗಿನ ತೋಂಟದಾರ್ಯ ಮಠಕ್ಕೆ ಜ್ಞಾನಪ್ರಸಾರ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಸುಮಾರು ನಾಲ್ಕುನೂರು ವಿವಿಧ ವಿಷಯದ ಶೀರ್ಷಿಕೆಗಳನ್ನು ಮಠವು ಪ್ರಕಟಿಸಿದೆ. ಗತಕಾಲದ ಹಸ್ತಪ್ರತಿಗಳನ್ನು ಸಂಗ್ರಹಿಸುವಲ್ಲಿ ಸದರಿ ಮಠವು ತೋರಿದ ಆಸಕ್ತಿಯಿಂದಾಗಿ ಐತಿಹಾಸಿಕ ಹಸ್ತಪ್ರತಿ ಹಾಗೂ ಕಾಗದಪತ್ರ ದಾಖಲೆಗಳ ಅಮೂಲ್ಯ ಸಂಗ್ರಹ ಅಲ್ಲಿದೆ. ಕೆಳದಿ ಅರಸರು, ಇತರ ಸಣ್ಣ ಸಂಸ್ಥಾನಗಳಿಗೆ ಸಂಬಂಧಿಸಿದ ಕಾಗದಪತ್ರಗಳು, ಕವಿಕಾವ್ಯ ಹಸ್ತಪ್ರತಿಗಳು, ವಚನ, ರಗಳೆ, ಷಟ್ಪದಿ, ಸ್ವರವಚನಗಳು, ಧಾರ್ಮಿಕ-ಲೌಕಿಕ ಶಾಸ್ತ್ರಕೃತಿಗಳೇ ಮೊದಲಾದವುಗಳನ್ನು ಈ ಸಂಗ್ರಹ ಹೊಂದಿದ್ದು ಆಯಾ ಕಾಲಘಟ್ಟಗಳ ಚರಿತ್ರೆಯ ಸಂದರ್ಭದಲ್ಲಿಟ್ಟು, ಅಧ್ಯಯಿಸುವವರಿಗೆ ನಾಡಿನ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ಇತಿಹಾಸದ ಪುನರ್ರಚನೆಗೆ ಮೂಲ ಸಾಮಗ್ರಿಯಾಗಬಹುದಾದ ಮಹತ್ವ ಅವುಗಳಿಗಿದೆ.

ಮಠದ ಸಂಗ್ರಹದಲ್ಲಿರುವ ತಾಳೆಪ್ರತಿ, ಕಾಗದಪ್ರತಿಗಳ ಯಾದಿರೂಪದ ಸೂಚಿ ಈ ಮೊದಲು ಮಠದಿಂದಲೇ ಪ್ರಕಾಶಿತವಾಗಿದ್ದು ಪ್ರಸ್ತುತ ಕರ್ನಾಟಕ ಸರಕಾರ ಪತ್ರಾಗಾರ ಇಲಾಖೆಯು ಪ್ರಕಟಿಸಿದ ಈ ಕೃತಿಯು ಮಠದ ಸಂಗ್ರಹದಲ್ಲಿರುವ ಕಾಗದ ಪ್ರತಿಗಳ ವಿವರಣಾತ್ಮಕ ಸೂಚಿಯಾಗಿದೆ (descriptive catalogue). ಹಸ್ತಪ್ರತಿಗಳ ಸ್ಥೂಲ ಮಾಹಿತಿ ಒದಗಿಸುವ ಹಸ್ತಪ್ರತಿ ಸೂಚಿಯಲ್ಲಿ ವರ್ಣನಾತ್ಮಕ ಎಂಬುದೊಂದು ಉಪಯುಕ್ತ ವಿಧಾನ. ಇಂಥ ಸೂಚಿಗಳ ಕುರಿತು ಡಾ. ಎಂ. ಎಂ. ಕಲಬುರ್ಗಿಯವರು ಸಿದ್ಧಪಡಿಸಿದ ಮಾದರಿಯೊಂದನ್ನು ಅನುಸರಿಸಿ ಈ ಸೂಚಿಯನ್ನು ಸಂಪಾದಕ ಪಿ. ಕೆ. ರಾಠೋಡರು ಸಿದ್ಧಗೊಳಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ಕೃತಿ ಮತ್ತು ಅದರ ಪ್ರತಿ ಇವೆರಡರ ಸಂಕ್ಷಿಪ್ತ ಪರಿಚಯವೂ ಇದೆ. ಕೃತಿ ಪರಿಚಯದಲ್ಲಿ ಪುಟದ ಮಧ್ಯಭಾಗದಲ್ಲಿ ಕೃತಿಯ ಕ್ರಮಾಂಕ, ಅದರ ಕೆಳಗೆ ಕೃತಿಯ ಹೆಸರು, ಒಂದು ಪಾರ್ಶ್ವದಲ್ಲಿ ಕವಿಯ ಹೆಸರು, (ತಿಳಿದಿದ್ದರೆ) ಕೃತಿಯ ಕಾಲ, ಹಾಗೂ ಇನ್ನೊಂದು ಪಾರ್ಶ್ವದಲ್ಲಿ ಆ ಕೃತಿಯ ಪ್ರಕಾರ (ಗದ್ಯ, ವಚನ, ಷಟ್ಪದಿ, ಇತ್ಯಾದಿ) ಇವುಗಳನ್ನು ನಮೂದಿಸಲಾಗಿದೆ. ಇದರ ಕೆಳಗಿರುವ ಎರಡು ಸಾಲುಗಳು ಪ್ರತಿಯನ್ನು ಪರಿಚಯಿಸುತ್ತವೆ. ಒಂದು ಸಾಲಿನಲ್ಲಿ ನಿಶ್ಚಿತ ಕ್ರಮವೊಂದರಲ್ಲಿ ಹಸ್ತಪ್ರತಿಗಳಿಗೆ ಬಳಸಿರುವ ವಸ್ತು, ಕಟ್ಟಿನ ಕ್ರಮಸಂಖ್ಯೆ, ಹಸ್ತಪ್ರತಿಯ ಆಕಾರ ಮತ್ತು ಗರಿ/ಪುಟಗಳ ಸಂಖ್ಯೆಗಳ ನಮೂದುಗಳಿದ್ದರೆ ಇನ್ನೊಂದು ಸಾಲಿನಲ್ಲಿ ಹಸ್ತಪ್ರತಿಯ ಸ್ವರೂಪ, ಅದರ ಲಿಪಿ ಹಾಗೂ ಭಾಷೆಗಳ ಸ್ವರೂಪದ ಗುಣಮಟ್ಟವನ್ನು (ಉತ್ತಮ, ಮಧ್ಯಮ ಇಲ್ಲವೆ ಸಾಧಾರಣ ಎಂಬುದಾಗಿ) ನಿರ್ದೇಶಿಸಲಾಗಿದೆ.

ಆದಿ ಮತ್ತು ಅಂತ್ಯ ಎಂಬ ಪಾರ್ಶ್ವ ಶೀರ್ಷಿಕೆಗಳ ಮುಂದೆ ಹಸ್ತಪ್ರತಿಯ ಪ್ರಾರಂಭದ ಮತ್ತು ಅಂತ್ಯದ ಪಾಠವನ್ನು ಮೂರು ಅಥವಾ ನಾಲ್ಕು ಸಾಲುಗಳಷ್ಟು ಸಂಕ್ಷಿಪ್ತವಾಗಿ ನೀಡಲಾಗಿದೆ. ಹಾಗೆಯೇ ವಿಷಯ ಎಂಬಲ್ಲಿ ಹಸ್ತಪ್ರತಿ ಯಾವುದರ ಕುರಿತಾಗಿದೆ ಎಂಬುದನ್ನು ಸಂಗ್ರಹವಾಗಿ ಹೇಳಲಾಗಿದೆ. ವಿಶೇಷ ಎಂಬ ಇನ್ನೊಂದು ನಮೂದಿನಲ್ಲಿ ಹಸ್ತಪ್ರತಿ ಸಮಗ್ರವೋ ಅಸಮಗ್ರವೋ ಎಂಬುದನ್ನು ತಿಳಿಸಿ ಅಕ್ಷರಗಳ ಗುಣಸ್ವರೂಪವನ್ನು ಹೇಳಲಾಗಿದೆ. ಕೊನೆಯದಾಗಿ ಅದೇ ಕಟ್ಟಿನಲ್ಲಿರುವ ಇತರ ಕೃತಿಗಳನ್ನು ಅವುಗಳ ಕ್ರಮಸಂಖ್ಯೆಯೊಂದಿಗೆ ಉಲ್ಲೇಖಿಸಿ ಪ್ರಸ್ತುತ ಸೂಚಿಯಲ್ಲಿ ಅವು ಪ್ರತ್ಯೇಕವಾಗಿ ಪ್ರಕಟವಾಗಿರುವ ಕ್ರಮಸಂಖ್ಯೆಯನ್ನು ಸೂಚಿಸಲಾಗಿದೆ.

ಎರಡನೇ ಶತಮಾನದ ಶಂಕರಾಚಾರ್ಯರ ಅನ್ನಪೂರ್ಣಾಷ್ಟಕದಿಂದ ೧೯೦೦ ರ ಮುಳ್ಳೂರ ರಟ್ಟಿ ವಿರಚಿತ ಹೇಮರಡ್ಡಿ ಮಲ್ಲಮ್ಮನ ಚರಿತ್ರೆಯ ವರೆಗೆ ಹಲವಾರು ಕೃತಿಗಳ, ವಿವಿಧ ಕಾಲಘಟ್ಟಗಳಲ್ಲಿ ಬರೆಯಲ್ಪಟ್ಟ ಈ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನು ರಾಠೋಡರು ಶ್ರಮವಹಿಸಿ ಸಿದ್ಧಗೊಳಿಸಿದ್ದಾರೆ.

೫. ಡಾ. ಎಚ್. ಆರ್. ರಘುನಾಥಭಟ್ಟ ಸ್ಮರಣೆ : ಸಂ. ಪ್ರೊ. ಲಕ್ಷ್ಮಣ್ ತೆಲಗಾವಿ

ಚಿತ್ರಕಲ್ಲು ಪ್ರಕಾಶನ, ಚಿತ್ರದುರ್ಗ-೫೭೭ ೫೦೧, ಪ್ರಮು. ೨೦೦೪, ಪು. ೫೬, ರೂ. ೨೦/-

೧೯೪೬ ರಲ್ಲಿ ಶಿವಮೊಗ್ಗದ ಜಿಲ್ಲೆ ಸೊರಬ ತಾಲೂಕಿನ ಹರೀತಿಯಲ್ಲಿ ಜನಿಸಿದ ಡಾ. ಎಚ್. ಆರ್. ರಘುನಾಥ ಭಟ್ಟರು ಕರ್ನಾಟಕ ಇತಿಹಾಸ ಅಧ್ಯಯನ ಕ್ಷೇತ್ರದಲ್ಲಿ ಪರಿಚಿತ ಹೆಸರು. ಮೈಸೂರು ವಿಶ್ವವಿದ್ಯಾ ನಿಲಯದಲ್ಲಿ ಎಂ.ಎ. ಹಾಗೂ ಪಿಹೆಚ್.ಡಿ. ಅಧ್ಯಯನಗೈದು ಮೊದಲು ಅದೇ ವಿಶ್ವವಿದ್ಯಾನಿಲಯದಲ್ಲಿ, ನಂತರ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನಶಾಸ್ತ್ರ ಮತ್ತು ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಭಟ್ಟರು ಪ್ರಾಚೀನ ಕರ್ನಾಟಕದ ಚರಿತ್ರೆ, ಕಲೆ, ಸಂಸ್ಕೃತಿಯ ಅಧ್ಯಯನಕ್ಕೆ ವಿವಿಧ ಸ್ವರೂಪದ ಕೊಡುಗೆಯನ್ನು ನೀಡಿದವರು. ಯಾವುದೋ ಪ್ರಾಚೀನ ನಾಣ್ಯ, ಶಾಸನ, ಶಿಲ್ಪ ಹೊಸದಾಗಿ ಗಮನಕ್ಕೆ ಬಂದರೆ ಅಥವಾ ಹೊಸ ವಿಚಾರವೊಂದು ಹೊಳೆದರೆ

ಅದನ್ನು ಪೂರ್ಣಪ್ರಮಾಣದ ಅಧ್ಯಯನಕ್ಕೆ ಬದಿಗಿರಿಸದೆ ಆ ಕ್ಷಣಕ್ಕೆ ತಮಗೆ ತೋಚಿದ ಅಂಶಗಳನ್ನಷ್ಟೇ ಆಧಾರ ಟಿಪ್ಪಣಿ ಮಾಡಿಕೊಂಡು ಬಂದು ವಿದ್ವತ್‌ಗೋಷ್ಠಿ, ಸಮ್ಮೇಳನಗಳಲ್ಲಿ ಪ್ರಸ್ತುತಪಡಿಸುವ ವಾಡಿಕೆ ಕಾರಣವಾಗಿತ್ತು. ವಿಚಾರಗೋಷ್ಠಿಗಳಲ್ಲಿ ಮಂಡಿಸಲ್ಪಡುತ್ತಿದ್ದ ಪ್ರಬಂಧಗಳ ಮುಖ್ಯ ಅಂಶಗಳನ್ನೆಲ್ಲ ಬರೆದುಕೊಳ್ಳುತ್ತ ಕುಳಿತಿರುತ್ತಿದ್ದರು ಭಟ್ಟರು. ಕೆಲವು ಉತ್ಖನನ ಕ್ಯಾಂಪುಗಳಲ್ಲಿ, ಸರ್ವೇಕ್ಷಣಗಳಲ್ಲಿ ಪಾಲ್ಗೊಂಡ ಅನುಭವವಿದ್ದ ಅವರು ಸಾಂಪ್ರದಾಯಿಕ ಅರ್ಥದಲ್ಲಿ ಪುರಾತತ್ವವಿದರೂ ಆಗಿದ್ದರು. ಸಭೆ ಸಮ್ಮೇಳನಗಳ ಸಂಘಟನೆ, ವೇದಿಕೆಯ ಅಲಂಕಾರದಲ್ಲೂ ಎಲ್ಲಿಲ್ಲದ ಉತ್ಸಾಹದಿಂದ ತೊಡಗಿಕೊಳ್ಳುತ್ತಿದ್ದರು.

ಪಾದರಸದಂತೆ ಸದಾ ಓಡಾಡಿಕೊಂಡಿದ್ದ ಇಂಥ ಭಟ್ಟರು ಅಕಾಲಿಕವೆನ್ನಬಹುದಾದ ವಯಸ್ಸಿನಲ್ಲಿ ೨೦೦೪ರಲ್ಲಿ ಅನಿರೀಕ್ಷಿತವಾಗಿ ನಿಧನರಾದಾಗ ಎಲ್ಲರಿಗೂ ಆಶ್ಚರ್ಯವೂ, ಅವರ ಸ್ನೇಹಿತ, ಸಹೋದ್ಯೋಗಿ, ವಿದ್ಯಾರ್ಥಿ, ಸಂಬಂಧಿಗಳಂಥ ನಿಕಟ ಬಳಗದವರಿಗೆ ಆಘಾತವೂ ಆದದ್ದು ಸಹಜ. ಪ್ರಸ್ತುತ ಕೃತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರೊಂದಿಗಿನ ಸ್ನೇಹ-ಸಂಬಂಧಗಳನ್ನು ನೆನಪಿಸಿಕೊಂಡ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗಗಳ ಕೆಲ ಅಧ್ಯಾಪಕರು ಆ ನೆನಪುಗಳನ್ನು ದಾಖಲಿಸಿದ ಬರಹಗಳ ಸಂಗ್ರಹ. ಭಟ್ಟರ ಜೀವನಪ್ರೀತಿ, ಹಿರಿಯರು ಕಿರಿಯರೆನ್ನದೆ ಎಲ್ಲರೊಡನೆ ಆತ್ಮೀಯವಾಗಿ ವ್ಯವಹರಿಸುತ್ತಿದ್ದ ಸ್ನೇಹಶೀಲ ಸ್ವಭಾವ, ಓರೆಕೋರೆಗಳನ್ನು ಅವಗಣಿಸಿ ಒಳ್ಳೆಯದನ್ನು ಗಮನಿಸಿದೆ ಎಗ್ಗು ಸಿಗ್ಗಿಲ್ಲದೆ ಅವರ ಕುರಿತು ಮೆಚ್ಚುಗೆಯ ನಾಲ್ಕು ಮಾತಾಡುತ್ತಿದ್ದ ಅವರ ವೈಶಾಲ್ಯ ಹೀಗೆ ಭಟ್ಟರನ್ನು ಬಲ್ಲ ನಮಗೆ ಸುಪರಿಚಿತವಾಗಿದ್ದ ಅವರ ಗುಣವಿಶೇಷಗಳು ಈ ಸಂಕಲನದ ಬರಹಗಳಲ್ಲಿವೆ.

ಇದರ ಸಂಪಾದಕರು ಪ್ರೊ. ಲಕ್ಷ್ಮಣ್ ತೆಲಗಾವಿಯವರು ವಿದ್ಯಾರ್ಥಿದೆಸೆಯಿಂದಲೇ ಮಾನಸ ಗಂಗೋತ್ರಿಯಲ್ಲಿ ಸಹವಿದ್ಯಾರ್ಥಿಯಾಗಿ ಭಟ್ಟರನ್ನು ಬಲ್ಲವರು. ತಮ್ಮ ಲೇಖನದಲ್ಲಿ ತೆಲಗಾವಿಯವರು ಭಟ್ಟರೊಂದಿಗಿನ ತಮ್ಮ ವೈಯಕ್ತಿಕ ಸ್ನೇಹ, ಒಡನಾಟಗಳನ್ನು, ಅವರ ಗುಣವಿಶೇಷಗಳನ್ನು ಸ್ಮರಿಸಿದ್ದಾರೆ. ಅವರ ಆಸ್ಥೆ, ಅಭಿರುಚಿ, ಸಾಮರ್ಥ್ಯವನ್ನು ಮೌಲ್ಯೀಕರಿಸಿದ್ದಾರೆ. ಇದೊಂದು ಪುಟ್ಟದಾದ ಆದರೆ ಆತ್ಮೀಯವಾದ ಬರಹ. ಇಂಥದೇ ಇನ್ನೊಂದು ಬರಹ ಡಾ. ಸಿ. ಮಹದೇವ ಅವರದು ತಮ್ಮ ಒಡನಾಟದಲ್ಲಿ ಭಟ್ಟರಲ್ಲಿ ತಾವು ಕಂಡುಕೊಂಡ ಸಹೃದಯ ಪ್ರಾಧ್ಯಾಪಕ-ವಿದ್ವಾಂಸನ ಲಕ್ಷಣಗಳನ್ನು ಮಹದೇವ ಚಿತ್ರಿಸಿದ್ದಾರೆ.

ಇನ್ನುಳಿದಂತೆ ಅವರ ನೇರ ವಿದ್ಯಾರ್ಥಿಗಳಾಗಿದ್ದ ಡಾ. ಬಾಲಸುಬ್ರಹ್ಮಣ್ಯ, ಡಾ. ವಾಸುದೇವ ಬಡಿಗೇರ, ಹಾಗೂ ಅವರ ನೇರ ವಿದ್ಯಾರ್ಥಿಗಳಾಗಿರದಿದ್ದರೂ ಅವರ ಸಂಶೋಧನೆ-ವ್ಯಕ್ತಿತ್ವಗಳಿಂದ ಪ್ರಭಾವಿತರಾದ ಡಾ. ಎಫ್. ಟಿ. ಹಳ್ಳಿಕೇರಿ, ರಮೇಶ ನಾಯಕರ ಬರಹಗಳಿವೆ. ಬೇರೆ ಕಾರ್ಯಕ್ಷೇತ್ರ, ಇಲಾಖೆಗಳಲ್ಲಿದ್ದು ಅಧ್ಯಯನ ಸಂಬಂಧಿ ಸಮಾಗಮಗಳ ಮುಖಾಂತರ ರಘುನಾಥ ಭಟ್ಟರೊಂದಿಗೆ ಆತ್ಮೀಯತೆ-ಸಂಪರ್ಕ ಬೆಳೆಸಿಕೊಂಡ ಡಾ. ಕೆ. ಎಂ. ಸುರೇಶ್, ಡಾ. ಕೆ. ಜಿ. ಭಟ್ ಸೂರಿ, ಡಾ. ಡಿ. ವಿ. ಪರಶಿವಮೂರ್ತಿ, ಡಾ. ಕೆ. ರವೀಂದ್ರನಾಥ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಮತ್ತು ಡಾ. ಸಿ. ಎಸ್. ವಾಸುದೇವನ್ ಅವರ ಬರಹಗಳಲ್ಲಿ ಭಟ್ಟರ ಅಧ್ಯಯನಾಸಕ್ತಿ, ಮಾನವಪ್ರೀತಿ, ಉತ್ಸಾಹ, ಪ್ರೋತ್ಸಾಹಕ ಗುಣಗಳ ಸ್ಮರಣೆ ಇದೆ.

ಮುಖಪುಟದಲ್ಲಿ ರಘುನಾಥ ಭಟ್ಟರ ನಗುಮೊಗದ ಭಾವಚಿತ್ರ ಹೊಂದಿದ ಬರೀ ಐವತ್ತು ಪುಟಗಳಿಗೆ ಮಿತವಾದ ಈ ಚಿಕ್ಕ ಪುಸ್ತಕ ಅವರ ವ್ಯಕ್ತಿತ್ವ-ಸಾಧನೆಗಳ ಪರಿಚಯವನ್ನು ಸಮರ್ಥವಾಗಿಯೇ ಮಾಡಿಕೊಟ್ಟಿದೆ.

– ಪ್ರೊ. ಅಶೋಕ ಶೆಟ್ಟರ್, ಅಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

೬. ಎತ್ತಣಿಂದೆತ್ತ : ಕು. ಗೋ., ಸುಹಾಸ-ಹಾಸ್ಯಪ್ರಿಯರ ಮತ್ತು ಲೇಖಕರ ಸಂಘಟನೆ. ವಾಗ್ದೇವಿ. ಹಯಗ್ರೀವ ನಗರ. ಉಡುಪಿ-೫೭೬ ೨೦೧. ಪ್ರಮು. ೨೦೦೩. ಪು. ೧೯೮. ರೂ. ೭೫/-

`ಎತ್ತಣಿಂದೆತ್ತ' ಸಂಕಲನದ ಹೆಸರೇ ಹೇಳುವಂತೆ ಓದಿಸಿಕೊಂಡು ಎತ್ತಣಿಂದ ಎತ್ತಲೋ ಕರೆದುಕೊಂಡು ಹೋಗುವ ಕಥಾಸಂಕಲನ. ಕೆಲವು ಕಥೆಗಳಿರುತ್ತವೆ, ಚೆನ್ನಾಗಿದ್ದರೂ ಕೂಡಾ ಓದುವುದಕ್ಕೆ ಬೆಟ್ಟ ಹತ್ತುವಷ್ಟು ಪ್ರಯಾಸ. ಇನ್ನು ಕೆಲವು ಕಥಾಶೈಲಿಗಳಿರುತ್ತವೆ, ನಾವು ಪ್ರಯಾಸ ಪಡಬೇಕಾಗೇ ಇಲ್ಲ. ಹರಿಯುವ ನೀರಿನಂತೆ ತಾನಾಗೇ ನಮ್ಮನ್ನು ಸೆಳೆದುಕೊಂಡು ಹೋಗಿ ಆಚೆ ದಡವಲ್ಲಿ ತಂದು ಹಾಕುತ್ತವೆ. `ಎತ್ತಣಿಂದೆತ್ತ' ಕೂಡಾ ಒಂದು ರೀತಿಯ ವಿಶಿಷ್ಟ ಶೈಲಿಯಿಂದಾಗಿ, ನಮ್ಮ ಕಣ್ಣಮುಂದೆ ನಡೆಯುತ್ತಿರುವಂತಹ ಘಟನೆಗಳೋ ಎಂಬಂತೆ ನಮ್ಮನ್ನು ತಲ್ಲೀನರನ್ನಾಗಿಸಿ ತನ್ನಲ್ಲಿ ಸೆಳೆದುಕೊಂಡು ಬಿಡುತ್ತದೆ. ಸಣ್ಣ ಘಟನೆಯೋ, ಕಿರುವಿಷಯವೋ, ಸುಣ್ಣಬಣ್ಣ ಹೊದೆಸಿಕೊಂಡು ಸರಳವಾಗಿ ಕಣ್ಣಿಗೆ, ಮನಸ್ಸಿಗೆ ನಾಟುವಂತೆ ಚಿತ್ರಿತಗೊಳ್ಳುತ್ತವೆ. ಈ ಲೇಖಕರ ಲೇಖನಿಯಲ್ಲಿ.

೨೨ ಕತೆಗಳಿರುವ ಈ ಸಂಕಲನದಲ್ಲಿ ಎಲ್ಲವೂ ಏನೋ ಒಂದು ಜೀವನದ ಅನುಭವವನ್ನು, ಬಹುಶಃ ಸ್ವಾನುಭವವನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಸಂಕಲನದ ಕತೆಗಳಲ್ಲಿ ಲೇಖಕರು ಕೆಲವೊಂದು ಬದುಕಿನ ಸತ್ಯಗಳನ್ನು, ಕೆಲವೊಂದು ಆದರ್ಶಗಳನ್ನು, ಆಸೆಗಳನ್ನು ಹಾಗೆಯೇ ಮನುಷ್ಯ ಸಂಬಂಧಗಳಲ್ಲಿ ಕಣ್ಣಿಗೆ ಕಾಣಿಸದ ಇನ್ನೊಂದು ಮಗ್ಗುಲನ್ನು ತೆರೆದು ತೋರಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಕಲನದ ಕೇಂದ್ರಬಿಂದುವಾದ `ಎತ್ತಣಿಂದೆತ್ತ' ಕತೆಯಲ್ಲಿ ನಡೆದಿರುವ ಘಟನೆ, ಮನುಷ್ಯನ ಮನೋವಿಕಾರದಲ್ಲಿ ನಂಬಲಸಾಧ್ಯವಾದ ಹೊಲಸು ಇದೆ ಎಂಬುದನ್ನು ತೋರಿಸುತ್ತದೆ. ಹೀಗೆಲ್ಲಾದರೂ ನಡೆಯಲಿಕ್ಕೆ ಸಾಧ್ಯವಾ? ಅಪ್ಪ ಅನ್ನಿಸಿಕೊಂಡ ಮನುಷ್ಯ ಮಗಳ ಜೊತೆಗೆ ಇಂತಹ ವ್ಯವಹಾರವಾ ಎಂದೇನಾದರೂ ಯೋಚಿಸಿದರೆ, ಧರ್ಮಬಾಹಿರವಾದ, ಅಮಾನವೀಯವಾದ, ಎಲ್ಲೋ ಅವಿತು ಕುಳಿತಿರಬಹುದಾದ ಅಂತಹ ಸಂಬಂಧ ಹೊಂದಿರುವಂತಹ ಅಪ್ಪನೂ ಇದ್ದಾನಲ್ಲ ಎಂದು ಮೊನಚಾದ ಲೇಖನಿಯಿಂದ ತಿವಿದು ಒಂದು ಕ್ಷಣ ಬೆಚ್ಚಿಬೀಳುವಂತೆ ಮಾಡುವುದರಲ್ಲಿ ಲೇಖಕರು ಸಫಲರಾಗಿದ್ದಾರೆ.

ಇನ್ನೊಂದು ಕತೆ `ಓ ಲಕ್ಷ್ಮಣಾ'. ಸಮಯಕ್ಕೊದಗುವ ಒಬ್ಬ ಅಪರೂಪದ ಆಪದ್ಬಾಂಧವನ ಬಗ್ಗೆ ಹೇಳುತ್ತಾ, ಇಂಥವರ ಸಂತತಿ ಸಾವಿರವಾಗಬಾರದೇ ಎಂದು ಒಂದು ಕ್ಷಣ ಮನಸ್ಸು ಉದಾತ್ತವಾಗಿ ಯೋಚಿಸುವಂತೆ ಮಾಡುತ್ತಾರೆ ಲೇಖಕರು. `ಅನಂತಶಯನ' ಕತೆಯಲ್ಲಿ ಮನುಷ್ಯನ ಯೋಚನೆಗಳು ಹರಿಯುವ ದಿಕ್ಕನ್ನು ತೋರಿಸುತ್ತಾ, ಅವನಲ್ಲಿರುವ ನಿರಾಶೆ, ಕೋಪ, ಸಂಕಟ, ದ್ವಂದ್ವ ಕೊನೆಗೊಂದು ನಿರ್ಲಿಪ್ತತೆಯನ್ನು ಎತ್ತಿ ತೋರಿಸುತ್ತಾ ಯಾವುದೋ ಒಂದು ಕ್ಷಣ ಏನಾದರೂ ಘಟಿಸಬಹುದು ಎಂಬಂತಹ ತಲ್ಲಣ, ಆ ಒಂದು ಕ್ಷಣ ಕಳೆದು ಹೋದರೆ ಮತ್ತೆ ಪುನಃ ಬದುಕಿನತ್ತ ಮುಖ ಮಾಡಿ ನಿಲ್ಲುವ ಪರಿಯನ್ನು, ಒಟ್ಟಾರೆ ಒಂದು ಮಾನಸಿಕ ವಿರುದ್ಧಾರವನ್ನು ಚಿತ್ರಿಸಿದ್ದಾರೆ.

`ಗುಪ್ತಸೇವೆ', 'ನಾಳೆ ಏನೋ', `ಸ್ವರ್ಗ ಸಮಾನಂ', `ಮರ್ಕಟ ಮಹಾಯಜ್ಞ', ಹಾಗೆಯೇ 'ಅಚ್ಯುತಾನಂದ ಗೋವಿಂದ' ಕತೆಗಳು ಅತೀ ಸಾಧಾರಣವಾದ ಕತೆಗಳು. ಕತೆಗಳು ಅನ್ನುವುದಕ್ಕಿಂತ ಇವನ್ನು ಹೊತ್ತು ಕಳೆಯುವುದಕ್ಕೋಸ್ಕರ ಹೇಳಿದ ಹರಟೆ ಅನ್ನಬಹುದೇನೋ. ಇಂತಹ ಒಂದು ಮೌಲಿಕವಾದ ಸಂಕಲನದಲ್ಲಿ ಲೇಖಕರು ಇವನ್ನೇಕೆ ತುಂಬಿದರು ಎಂದು ಆಶ್ಚರ್ಯವಾಗುತ್ತದೆ. ಹಾಗೆಯೇ 'ಜೈ(ಯುವ) ಶಕ್ತಿಮಾನ್' ಹಾಗೂ `ರಥೋತ್ಸವ' ಕತೆಗಳು, ಯುವಶಕ್ತಿಯನ್ನು ಸಮರ್ಥವಾಗಿ ಹೇಗೆ ಬಳಸಿಕೊಳ್ಳಬಹುದು ಎಂದು ಹೇಳಿದರೆ, ಇವನ್ನೊಂದು ಅತೀ ಮಾಮೂಲಿ ಗಂಡ ಹೆಂಡಿರ ದಾಂಪತ್ಯದ ಒಂದು ಕ್ಷಣ - ತುಂಬಾ ಸರಳವಾದ ತುಂಬಾ ಸುಂದರವಾದ ಅದರೂ ಇಷ್ಟೇನಾ! ಅನ್ನಿಸುವಂತಹ ಕತೆಗಳು.

"ಬದುಕನ್ನು ಯಾರು ರೂಪಿಸುತ್ತಾನೆ, ಯಾಕೆ ರೂಪಿಸುತ್ತಾನೆ, ನಮ್ಮ ಹತ್ತಿರ ಏನೇನೆಲ್ಲಾ ಮಾಡಿಸುತ್ತಾನೆ ಅಂತ ಹೇಳುವುದು ಕಷ್ಟ. ಆದರೆ ಕೆಲವರಿಗೆ ಬುದ್ಧಿ ಕಲಿಸಲು, ಬೇರೆ ಕೆಲವರು ಶಿಕ್ಷೆ ಅನುಭವಿಸಬೇಕೆಂತ ಇದೆಯೋ ಏನೋ" – ಹೀಗೆಂದು 'ಒಂದು ಸಾವಿನ ಬಳಿಕ' ಕತೆಯಲ್ಲಿ ನಮ್ಮ ಮುಂದೆ ಬದುಕಿನ ಯಾವುದೋ ಒಂದು ಪರಮಾರ್ಥವನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತಾ, ಅರೆಕ್ಷಣ ಓದುಗರಗಳ ಸಮಯದ ಯೋಚನೆಯಲ್ಲಿ ಮನಸ್ಸು ಭ್ರಾಂತಿಗೊಳಗಾಗುವಂತೆ ಮಾಡುತ್ತದೆ. ಹಾಗೆಯೇ ಒಳ್ಳೆಯದು ಕೆಟ್ಟದ್ದು ಎಲ್ಲವೂ ನಮ್ಮ ಮನಸ್ಸಿನಲ್ಲಿ ಹೇಗಿದೆಯೋ ಹಾಗೆ. ಮನಸ್ಸೇ ಎಲ್ಲದಕ್ಕೂ ಮೂಲ ಕಾರಣ. ಭಯ. ನೆಮ್ಮದಿ. ಎಲ್ಲವನ್ನೂ ನಮ್ಮಲ್ಲಿ ಕಂಡುಕೊಳ್ಳುವವರು ನಾವೇ ಎಂಬ ಚಿರಂತನ ಸತ್ಯವನ್ನು 'ಭಯಕೃದ್' ಕತೆ ಅನಾವರಣಗೊಳಿಸುತ್ತದೆ.

ಸುಖವಾಗಿರುವಾಗ ಬಂಧುಬಾಂಧವರು, ನೆಂಟರು, ಮಕ್ಕಳು. ಕಷ್ಟ ಕಾಲದಲ್ಲಿ ಯಾರಿಗೆ ಯಾರೋ ಎಂಬ ಧ್ವನಿ 'ಮುದುಕಿ ಮತ್ತು' ಕತೆಯಲ್ಲಿ ಕಾಣಬರುತ್ತದೆ. ಕರುಳು ಚುರ್ರೆನ್ನುವಂಥಾ ಸ್ಥಿತಿಯಲ್ಲಿ ತಾಯಿ ಇದ್ದರೂ ಕೂಡಾ ಮಗಳು ತನ್ನಲ್ಲಿಗೆ ಕರೆತರಲು ಗಂಡನ ಭಯ: ಆದರೂ ಪ್ರಪಂಚದಲ್ಲಿ ಮಾನವೀಯತೆ ಅನ್ನುವುದು ಅಲ್ಲೊಬ್ಬ ಇಲ್ಲೊಬ್ಬರಲ್ಲಿ ಇದೆ ಎನ್ನುವ ಕಾರಣದಿಂದಾಗಿ ಮುದುಕಿ ಮಗಳ ಮನೆ ಸೇರಿಕೊಂಡರೂ ಹಣಕ್ಕಾಗಿ ಬದುಕಿರುವವರನ್ನು ನಾಯಿಸುವಂತಹ ಪ್ರವೃತ್ತಿಯ ಅಧಮತನವನ್ನು ಅಳಿಯ ಕರಿಯನ ಮೂಲಕ ತೋರಿಸಿಕೊಟ್ಟಿದ್ದಾಳೆ.

ಇನ್ನು 'ಸಾಕುಮಗಳು' ಒಂದು ಸುಂದರವಾದ, ಸವಿರಾದ, ಸರಳವಾದ ನಿರೂಪಣೆ. ಓದಿದ ನಂತರ ಅನಿಸುವುದು ಪ್ರೀತಿಗೇಕೆ ಜಾತಿ? ಒಂದರೆಕ್ಷಣ ಓದುಗರ ಎದೆ ಹೆಮ್ಮೆಯಿಂದ ಭಾರವಾದರೆ ಆಶ್ಚರ್ಯವಲ್ಲ. ಮನಸ್ಸು ಪ್ರೀತಿಯ ಅರಮನೆಯಾದರೆ ಸಾಕು. ಒಂದು ಮನೋಜ್ಞವಾದ ಮನಮುಟ್ಟುವಂತಹ ಕತೆ 'ಅಕ್ಕನ ಮದುವೆ'. ಈ ಕತೆಯ ನಿರೂಪಣೆಯೇ ಚೆನ್ನ. ಮುಗ್ಧ ಹುಡುಗನ ಆಸೆ, ಆಕಾಂಕ್ಷೆಗಳು, ಅದರಲ್ಲೂ ಹೊಟ್ಟೆ ತುಂಬಾ ಊಟ ಮಾಡಬೇಕು ಎಂಬಂತಹ ಸಣ್ಣ ಆಸೆ ಕೂಡಾ ಅಪ್ಪನ ಭಯದ ನೆರಳಿನಲ್ಲಿ ಕರಗಿ ಹೋಗುವಂತಹ ಸನ್ನಿವೇಶ ಕಲ್ಲೆದೆಯನ್ನೂ ಕರಗಿಸಬಹುದೇನೋ? ತಿನ್ನುವ ಒಂದೊಂದು ತುತ್ತನ್ನೂ ಲೆಕ್ಕಾಚಾರವಾಗಿಯೇ ತಿಂದು, ಬಂದಿಷ್ಟು ಬೇಕೆನಿಸಿದರೂ ಕೂಡಾ ಅಪ್ಪನ ಭಯದಿಂದ ಕೇಳಲು ಹಿಂಜರಿದು ಅಪ್ಪರಲ್ಲೇ ಪಡುವ, ಪುಟ್ಟ ಹೃದಯದ ಭಯ, ನೋವು, ಆಸೆ, ಹಸಿವು, ನಿರಾಶೆ, ಕುತೂಹಲ ಇವೆಲ್ಲಕ್ಕೂ ಅಕ್ಕನ ಮದುವೆಯಲ್ಲಿ ಅಪ್ಪ ಹೇಳುವ ಮಾತು ಉತ್ತರವಾಗುತ್ತದೆ. 'ಊಟ ಮಾಡು ಮಗೂ, ಹೊಟ್ಟೆ ತುಂಬಾ ಊಟ ಮಾಡು. ಈ ಊಟಕ್ಕಾಗಿಯೇ ಇಷ್ಟು ದಿನ ಕಷ್ಟಪಟ್ಟಿದ್ದು'– ಎಂದಾಗ ಒಬ್ಬ ಜವಾಬ್ದಾರಿಯುತ ತಂದೆ ತನ್ನ ಮಗಳಿಗೆ ಒಂದು ಒಳ್ಳೆಯ ನೆಲೆ ಹುಡುಕಿ ಮದುವೆ ಮಾಡಲು, ಮನಸ್ಸು ಮಮ್ಮಲ ಮರುಗುತ್ತಿದ್ದರೂ ಕೂಡಾ ಹೊಟ್ಟೆಬಟ್ಟೆ ಕಟ್ಟಿ ಮಕ್ಕಳನ್ನು ಸಾಕಿದ ಪರಿಗೆ ಓದುಗರ ಕಣ್ಣು, ಮನಸ್ಸು, ಹೃದಯ ಒದ್ದೆಯಾಗದೆ ಇರಲು ಸಾಧ್ಯವಾ?

'ಗತಿ' ಕತೆಯಲ್ಲಿ ಕೂಡಾ ಏನೇನೋ ಅಂದುಕೊಳ್ಳುವುದು, ಅದು ಇನ್ನೇನೋ ಆಗಿಬಿಡುವುದು. ಜೀವನದ ಗತಿ ಅದೆಲ್ಲಿಂದ ಎಲ್ಲಿಗೆ ಮುಟ್ಟಿಸುತ್ತದೋ! ಆಟ ಮುಗಿವತನಕವೂ ಆಡಿಸುವಾತನ ಇಚ್ಛೆ ಆಡುತ್ತಾ ಆಡುತ್ತಾ ಅನುಭವಿಸುವುದೊಂದೇ ಅವನ ಅಣತಿ ಎಂಬ ಕಹಿಸತ್ಯವನ್ನು ತೋರುವ ಕತೆ ಇದು. 'ರಂಗೀಲಾ' ಕತೆಯಲ್ಲಿ ರಂಗಿಯ ಬೇಸರದ ಬಾಳಿನಲ್ಲೂ ಎಲ್ಲೋ ಒಟ್ಟು ಮೂಡಿದ ರಂಗನ್ನು ತೋರಿಸುತ್ತಾ ರಂಗಿ ಮುದುಕಿ ಆಗುವ ವರೆಗಾದರೂ ಬದುಕಿರಬೇಕಿತ್ತು ಎಂದು ಹಂಬಲಿಸುತ್ತಾರೆ.

'ಶನಿ ಹಿಡಿದವ' ಒಂದು ಹೃದಯವಿದ್ರಾವಕವಾದ ಕತೆ. ಈ ಕತೆಯಲ್ಲಿ ತನ್ನದ್ದೇ ಆದ ತನಗೆ ಅನುಭವಿಸಲು ಸಿಗುವುದಿಲ್ಲ ಎಂಬ ಚಿಂತನೆಯ ಒರೆಗಲ್ಲಿಗೆ ಹಚ್ಚುತ್ತಾ ಈ ಲೋಕದ ವ್ಯಾಪಾರದ ಬಗ್ಗೆ ಹಸಿಗಣ್ಣಾಗುವಂತೆ ಮಾಡಿದ್ದಾರೆ ಲೇಖಕರು. 'ನಂಬಿ ಕೆಟ್ಟವರಿಲ್ಲವೇ' ಮತ್ತು 'ವಸೂಲಿ' ಕತೆಗಳು ಹಾಸ್ಯಲೇಖಕರ ಲೇಖನಿಯಿಂದ ಕರುಣಾಜನಕವಾದ ಸನ್ನಿವೇಶಗಳೂ ಕೂಡಾ ಹೇಗೆ ಮೂಡಿಬರುತ್ತವೆ

ಎಂಬುವದಕ್ಕೆ ಸಾಕ್ಷಿ. 'ಒಪ್ಪಿಗೆಯಾಯ್ತೆ?' ಅತೀ ಸಾಧಾರಣವಾದ ಕತೆ ಅನ್ನಿಸುವಂತಹ ಘಟನೆ. 'ಶಂಕರನ ಹೋಟೇಲು' ಬದುಕಿನ ಗತಿ-ಇತಿ-ಪರಿಮಿತಿಗಳನ್ನು ತೋರುವ ಒಂದು ಉತ್ತಮ ಕತೆ.

ಒಟ್ಟಿನಲ್ಲಿ 'ಎತ್ತಣಿಂದೆತ್ತ' ಸಂಕಲನದ ಕತೆಗಳಲ್ಲಿ ಅಡಗಿರುವ ಜೀವನಾನುಭವ ಮಾತ್ರ ಅನನ್ಯ.

– ಅರುಣಾ ಹೆಬ್ರಿ, ಸಿಂಡಿಕೇಟ್ ಬ್ಯಾಂಕ್ ಎದುರು, ಮುಖ್ಯರಸ್ತೆ, ಹೆಬ್ರಿ ಗ್ರಾಮ ಅಂಚೆ : ಹೆಬ್ರಿ-೫೭೬ ೧೧೨ (ತಾ. ಕಾರ್ಕಳ, ಜಿ. ಉಡುಪಿ)

೭. ಗಾಂಧೀಜಿ ಎಂದೆಂದಿಗೂ ಪ್ರಸ್ತುತ : ಕೃಷ್ಣ ಶ್ರೀಪಾದ ದೇಶಪಾಂಡೆ

ರಾಘವೇ ಸಾಂಸ್ಕೃತಿಕ ಕೇಂದ್ರ, ಮಾಳಮಡ್ಡಿ, ಧಾರವಾಡ-೫೮೦ ೦೦೭ ೪೦೧೧. ಪ್ರಮು. ೨೦೦೪, ಪೃ. ೧೦೦, ರೂ. ೬೦/-

ನಮ್ಮ ದೇಶದ ಸ್ವತಂತ್ರ ಭಾರತವೆನಿಸುವ ಪೂರ್ವದಲ್ಲಿ ನಮ್ಮ-ನಿಮ್ಮ ಹಾಗೆ ಎಲ್ಲರ ಮಧ್ಯ ಓಡಾಡಿಕೊಂಡಿದ್ದಂಥ ಸಾಧಾರಣ ಮನುಜ ತನ್ನ ಅಸಾಧಾರಣ ಸಾತ್ವಿಕ ಸಾಹಸಮಯ ಜೀವನಕ್ರಮ, ಸಾಧನೆ-ಚಿಂತನೆಗಳ ಮೂಲಕ ಜೀವನ ಶಾಶ್ವತ ಮೌಲ್ಯಗಳನ್ನು ಇಡೀ ಮಾನವ ಜನಾಂಗಕ್ಕೆ ನೀಡಿ ತನ್ನ ಅಮೂಲ್ಯ ಗುಣ ಹಾಗೂ ಕಠಿಣ ತಪೋಮಯ ಜೀವನ ನಡೆಸಿ ಬರಿ ಮಹಾನ್ ಸಂತನೆನಿಸಿಕೊಂಡದ್ದಷ್ಟೆ ಅಲ್ಲದೆ ಮಹಾತ್ಮನಾಗಿ ದೇವರಂತೆ ಎಲ್ಲರಿಂದಲೂ ಪೂಜಿಸಲ್ಪಡುವಂತಾದುದು ಪ್ರತ್ಯಕ್ಷ ನಿದರ್ಶನ. ಇದಕ್ಕೆ ಕಾರಣ ಅವರ ಶಾಶ್ವತ ಜೀವನ ಮೌಲ್ಯಗಳು ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಇಂದಿನ ಸ್ವತಂತ್ರ ಭಾರತದಲ್ಲಿ ಪ್ರಜೆಗಳು ಅನುಭವಿಸುತ್ತಿರುವ ಕೋಮುಗಲಭೆ, ಸಾವಿರ ಸಾವಿರ ಹೋಳಾಗಿರುವ 'ವಸುಧೈವ ಕುಟುಂಬಕಂ'ದ ದುರಂತ ಪಾಡು, ಜನನ ನಿಯಂತ್ರಣ, ಬಿಳಿಕಾಲರಿನ ಉದ್ಯೋಗ ದೊರಕಿಸುವ ಸಾಧನವನ್ನಾಗಿಸಿಕೊಂಡ ಪಾಶ್ಚಾತ್ಯ ಪ್ರಭಾವಕ್ಕೊಳಗಾದ ಕೃತ್ರಿಮ ಶಿಕ್ಷಣ ಪದ್ಧತಿ, ಜಾಗತೀಕರಣ, ಮೀಸಲಾತಿ ಇತ್ಯಾದಿಯಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಹಾಗೂ ಗಾಂಧೀಜಿ ಅವರ ಸಾಧನೆ-ಚಿಂತನೆಗಳ ಕುರಿತು ಎಳ್ಳಷ್ಟೂ ತಿಳಿದುಕೊಳ್ಳುವ ಗೋಜಿಗೆ ಹೋಗದೆ ಅವರನ್ನು ಕುರಿತು ಅಜ್ಞಾನದ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುತ್ತಿರುವ ಹಾಗೂ ಬರಹಗಳಲ್ಲಿಯೂ ಅಭಿವ್ಯಕ್ತಿಸಿ ಯುವಜನಾಂಗದ ದಿಕ್ಕು ತಪ್ಪಿಸುತ್ತಿರುವವರಿಗೂ, ಅಂತಹವರ ಮಾತೇ ವೇದವಾಕ್ಯವೆಂದು ನಂಬಿ ನಮ್ಮ ಹಿರಿಯರನ್ನು ಅವಜ್ಞೆಗೊಳಿಸುತ್ತಿರುವವರಿಗೂ ಕಣ್ಣು ತೆರೆಸಿ ಸತ್ಯದರ್ಶನ ಮಾಡಿಕೊಡುವ ಪ್ರಸ್ತುತ ಕೃತಿ ಅಪರೂಪವೆಂದೇ ಹೇಳಬೇಕಾಗುತ್ತದೆ– ಮಾತ್ರವಲ್ಲ– ಇಂದಿಗಷ್ಟೇ ಸೀಮಿತವಾಗದೆ ಎಂದೆಂದಿಗೂ ಪ್ರಸ್ತುತವಾದದ್ದು.

– ಮೋತಿಲಾಲ ಹಲವಾಯಿ, 'ವಿಶಾಲ', ೭ನೇ ಮುಖ್ಯರಸ್ತೆ, ಶಕ್ತಿನಗರ, ಧಾರವಾಡ-೫೮೦ ೦೦೪

೮. ಎಲೆಯ ಮರೆಯಲ್ಲಿ : ಎಸ್ಕೆ ಕೊನೆಸಾಗರ

ಸಂಗಮ ಪ್ರಕಾಶನ, 'ಸಾದನ', ನವನಗರ, ಹುನಗುಂದ-೫೮೭ ೧೧೮, ಪ್ರಮು. ೨೦೦೪, ಪೃ. ೧೩೬, ರೂ. ೪೫/-

ಎರಡು ಭಾಗದಲ್ಲಿ ೪೫ ಲೇಖನಗಳು ಹರಡಿಕೊಂಡಿವೆ. ಭಾಗ ಒಂದರಲ್ಲಿ ೩೦ ಲೇಖನಗಳು ವೃತ್ತಿರಂಗಭೂಮಿಯ ನಟ-ನಟಿಯರು ಮತ್ತು ರಂಗಭೂಮಿಗೆ ಮೀಸಲಾಗಿವೆ. ಭಾಗ ಎರಡರಲ್ಲಿ ವಿಭಿನ್ನ ಕಾಯಕದ ೧೯ ಜನ ಮತ್ತು ಮೂರು ಪುಸ್ತಕ ಪರಿಚಯಗಳು, ಮೂರು ಇತರ ಲೇಖನಗಳು ಸೇರಿವೆ.

ಮುನ್ನುಡಿಯಲ್ಲಿ ಬಾಳಾಸಾಹೇಬ ಲೋಕಾಪುರ ಅವರು ಹೇಳುವಂತೆ 'ಮೇಲುನೋಟಕ್ಕೆ ವ್ಯಕ್ತಿಗಳ ಪರಿಚಯದಂತೆ ಕಂಡರೂ ಹುನಗುಂದ ಭಾಗದ ೫೦ ವರ್ಷಗಳ ಸಾಂಸ್ಕೃತಿಕ ಇತಿಹಾಸವನ್ನು ಲೇಖನಗಳು ಸಾಂದರ್ಭಿಕವಾಗಿ ಬರೆದವುಗಳಾದ್ದರೂ, ಉಪಯುಕ್ತ ಮಾಹಿತಿ ನೀಡುತ್ತವೆ. ಹಾಗೇ ಸ್ವಲ್ಪ ವಿಸ್ತರಿಸಿದ್ದರೆ ರಂಗ ಲೋಕದ 'ರಂಗ ದೀಪಗಳು' ಎನ್ನುವ ಮಹತ್ವದ ಪುಸ್ತಕವೇ ತಯಾರಾಗಿಬಿಡುತ್ತಿತ್ತು. ಅವಿಭಜಿತ ಬಿಜಾಪುರ ಜಿಲ್ಲೆಯ ಹುನಗುಂದ ತನ್ನ ಒಡಲಿನಲ್ಲಿ ಅನೇಕ ರಂಗಚೇತನಗಳಿಗೆ ಜನ್ಮ ನೀಡಿದೆ. ಅವರಲ್ಲಿ ಪಿಟೀಲ ಚಂದಪ್ಪ ಮಾಸ್ತರ, ಪಿ. ಬಿ. ಧುತ್ತರಗಿ, ಬಿ. ಆರ್. ಅರಿಷಿಣಗೋಡಿ, ಟಿ. ಕೆ. ಮಹಮ್ಮದಲಿ,

ಉಸ್ತಾದ್ ಅಲಿ. ಆರ್. ಆರ್. ಮೊಳೆಹಾಳ ಮುಂತಾದವರು ಮತ್ತು ನಟಿಯರಾದ ಸರೋಜಮ್ಮ ಧುತ್ತರಗಿ, ಶಾಂತಮ್ಮ ಪತ್ತಾರ, ಪ್ರಮೀಳಾ ಬಾಯಿ ಗುತ್ತೂರ, ರಂಗಮ್ಮ ಗುರ್ಲ ಕುರಿತು ಅಭಿನಂದನೆ, ಪ್ರಶಂಸೆ, ಮತ್ತು ಮನಮುಟ್ಟುವ ಸ್ಮರಣೆಗಳ ಚಿತ್ರಣಗಳಿವೆ.

ಎರಡನೆಯ ಭಾಗದಲ್ಲಿರುವ ಅನೇಕ ಶೀರ್ಷಿಕೆಗಳು ಚೌಡಕಿಯ ಮುದುಕಪ್ಪ, ಕ್ಲಾರಿಯೊನೆಟ್ ಖ್ಯಾತಿಯ ಬಸವರಾಜ, ಕಾಯಕದ ಶಿವನಾಗಪ್ಪ, ದಾವನಕ್ಕೆ ಬಾಳಿದ ಹನುಮಂತಪ್ಪ, ಕುಶಲ ನೇಕಾರ, ಚಿತ್ರಕಲಾ ಸಾಧಕ ಗವಿಮಠ, ಹೀಗೆ ಇನ್ನೂ ಅನೇಕ ಸಾಧಕರ ವ್ಯಕ್ತಿಚಿತ್ರಗಳಿವೆ. ಹಾಗೆ, ಕೂಡಲಸಂಗಮ ಸ್ಥಳ ಪರಿಚಯ ಮತ್ತು ಹುನಗುಂದ ತಾಲೂಕಿನಿಂದ ಸ್ವಾತಂತ್ರ್ಯ ಚಳುವಳಿಗೆ ದೊರೆತ ಕೊಡುಗೆ ಮುಂತಾದ ವಿಷಯಗಳ ಕುರಿತು ಮಾಹಿತಿಯೂ ಇಲ್ಲಿನ ಲೇಖನಗಳಲ್ಲಿ ದೊರೆಯುತ್ತದೆ.

– ಶಶಿಧರ ತೋಡಕರ, ಪ್ರಾಚಾರ್ಯರು, ಪಾ. ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜು, ೮ನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೭

೯. ಕುಣಿಸಲು ನೀನು : ಸುಮಿತ್ರಾ ಹಲವಾಯಿ

ಮಹಿಳಾ ಸಾಹಿತ್ಯಿಕ, ನವನಗರ, ಹುಬ್ಬಳ್ಳಿ-೫೮೦ ೦೨೫, ಪ್ರಮು. ೨೦೦೭, ಪು. ೧೧೬, ರೂ. ೫೦/-

ಸುಮಿತ್ರಾ ಹಲವಾಯಿ ಇವರ `ಕುಣಿಸಲು ನೀನು' ಕಥಾಸಂಕಲನದಲ್ಲಿ ಎರಡು ಅಪರೂಪದ ಕತೆಗಳಿವೆ– `ಅಜ್ಜ ಹಾಗೂ ಸುಕ್ರಿ'. ಅಜ್ಜ ತೀರಿಕೊಂಡ ಟೆಲಿಗ್ರಾಂ ಬಂದೊಡನೆ, ಕುಗ್ರಾಮ ಸಿದ್ದಾಪುರದಿಂದ ಶಿವಮೊಗ್ಗೆಗೆ ಹೋಗುವ ಶಾಸ್ತ್ರಿಗಳ ಕುಟುಂಬದ ಆ ಅಜ್ಜನ ಮೊಮ್ಮಕ್ಕಳ ಬಿಟ್ಟೂ ನೆನಪುಗಳು– ಆ ಅಜ್ಜನನ್ನು, ಆ ಕಾಲವನ್ನು ಅನನ್ಯವಾಗಿ ಕಟ್ಟುವಲ್ಲಿ ಕತೆಗಾರ್ತಿ ಹೊರಗಿನವಳಾಗಿ ನಿಂತು ಪರಿಣಾಮಕಾರಿಯಾಗಿ ನಿರೂಪಣೆಗೈದಿದ್ದಾರೆ. `ಸುಕ್ರಿ' ಇದಕ್ಕಿಂತ ಹೆಚ್ಚು ಓದುಗನನ್ನು ಸೆಳೆದುಕೊಳ್ಳುವದು ಅದು ಕೊಡುವ `a slice of life'ನಿಂದ. ಒಂದು ವಿಶಿಷ್ಟ ಮನೆತನದ ಪರಿಸರಕ್ಕೆ ಹೊರಗಿನವರಾಗಿ ಬಂದು ಸೇರಿಕೊಂಡ ದೇವಿ-ಸುಬ್ಬು; ಸುಬ್ಬನ ಬೈಗಳದ ಸಹಜ ಸ್ಫೋಟದಿಂದ ಹಾಗೂ ಅವನ ಸಾವಿನ ನಂತರ ದೇವಿ ನಡೆಸುವ ಅತ್ಯಂತ ಸಂಯಮದ ದಿಗಿಲು ಹುಟ್ಟಿಸುವ ಜೀವನದಿಂದ ಹಾಗೂ ಅಚ್ಯುತರಾಯನ ಗಟ್ಟಿ ನಡತೆಯಿಂದ ನಿರ್ಮಾಣವಾಗುವ ಬಿಟ್ಟು ವಾತಾವರಣ ambience- ಪರಿಣಾಮ ಬೀರುವದಿಲ್ಲ.

ಉಳಿದಂತೆ ಸರಳ ಸಹಜ ಭಾಷೆಯಲ್ಲಿ ತನ್ನ ಅನುಭವದಲ್ಲಿ ಕಂಡ ಕೆಲವು ವ್ಯಕ್ತಿಗಳ, ಸಂದರ್ಭಗಳ ಚಿತ್ರಣ ಬಹಳ ಕಡಿಮೆ ಕತೆಯೆನಿಸಿಕೊಳ್ಳುವಂತಹವು. ಕೆಲವೊಂದು ಕತೆಗಳಲ್ಲಿಯ ದಟ್ಟ ವಿವರಗಳು, ಜವಾಬ್ದಾರಿಯುತ ನೈತಿಕ ನಿಲುವು ಗಮನ ಸೆಳೆಯುತ್ತವೆ. ಇವು ಓದುಗನಲ್ಲಿ ಹೆಚ್ಚಿನ ಅಪೇಕ್ಷೆ ಮೂಡಿಸುವಂತೆ ಮಾಡಿದ್ದಲ್ಲಿ, ಈ ಕತೆಗಳಿಗೆ ಹೆಚ್ಚಿನ ಸಾಹಿತ್ಯಿಕ ಬೆಲೆ ದಕ್ಕುತ್ತಿತ್ತು.

– ದುಷ್ಯಂತ ನಾದಗೌಡ, ವೆಂಕಟಾದ್ರಿ, ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೫೮೦ ೦೦೪

೧೦. ಜನ್ಮ ಸಾರ್ಥಕ : ಬಿ. ಸುಬ್ರಾಯ ಶಾಸ್ತ್ರೀ

ಪುಸ್ತಕ ನಿಧಿ, ಅಂಚೆ : ಹಣ್ಣಾಡಿ-ಹರ್ಕಾಡಿ, ಕುಂದಾಪುರ ಜಿ. ಉಡುಪಿ. ಪ್ರಮು. ೨೦೦೭, ಪು. ೧೨೦, ರೂ. ೪೫/-

ಇದು ಕಲಾವಿದ ಚಿಂತಕ ಬಿ. ಸುಬ್ರಾಯ ಶಾಸ್ತ್ರೀ ಅವರು `ಚಿತ್ರಪ್ರಿಯ' ಎಂಬ ಕಾವ್ಯನಾಮದಿಂದ ಕನ್ನಡದಲ್ಲಿ ಪ್ರಕಟಿಸುತ್ತಿರುವ ಚೊಚ್ಚಲ ಕೃತಿ. ತಮಿಳುನಾಡಿನ ತಿರುಮಂಗಲಂನಲ್ಲಿ ಬಹಳ ಕಾಲ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅವರು ತಮಿಳಿನಲ್ಲಿ ಇಂಥ ಕೃತಿಗಳನ್ನು ಪ್ರಕಟಿಸಿದ್ದಿದೆ. `ತೋಚಿದ್ದನ್ನು ಗೀಚುವ' ಪ್ರವೃತ್ತಿಯನ್ನು ರೂಢಿಸಿಕೊಂಡಿರುವ ಅವರ ಅನೇಕ ಬರಹಗಳು ಪತ್ರಿಕೆಗಳಲ್ಲೂ ಪ್ರಕಟಗೊಂಡಿವೆ. ಅಂಥವನ್ನು ಸಂಗ್ರಹಿಸಿ ಈ ಪುಸ್ತಿಕೆಯನ್ನು ಹೊರತಂದಿದ್ದಾರೆ. ಈ ಕೃತಿಯಲ್ಲಿ ನಮ್ಮನ್ನು ಚಿಂತನೆಗೊಡ್ಡುವ ೧೪ ಲೇಖನಗಳಿವೆ. ಅಲ್ಲದೆ `ದಾರಿದೀಪ', `ಹಿತೋಪದೇಶ' ಎಂಬ ಸಂಗ್ರಹ ಬರಹಗಳೂ ಇವೆ.

'ನಾವು ವಾಸ ಮಾಡುವ ಭೂಮಿ'ಯ ರಚನೆಯ ಕುರಿತು ವಿವರಿಸುವ ಲೇಖಕರು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅನಂತರದ ಆರೇಳು ಲೇಖನಗಳು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಮೂಡಿಬಂದಿವೆ. 'ಮಾನವನ ತಿಳಿವಳಿಕೆ', 'ಸಾಮಾಜಿಕ ಜೀವನ ಕ್ರಮ', 'ಮತಧರ್ಮಗಳು ಮಾನವನ ಮೇಲೆ ಬೀರಿದ ಪ್ರಭಾವ', 'ಜಗತ್ತು ಕಲುಷಿತಗೊಂಡ ಬಗೆ', 'ವ್ಯಕ್ತಿ ತನ್ನನ್ನು ತಾನೇ ತಿಳಿದುಕೊಳ್ಳಬೇಕಾದ ರೀತಿ'- ಇಂಥ ಗಂಭೀರ ವಿಚಾರಗಳ ವಿಶದ ವಿವರಣೆ ಇಲ್ಲಿವೆ.

'ಮಾನವ ಜನ್ಮ ದೊಡ್ಡದು' ಎಂದು ದಾಸರ ಹೇಳಿಕೆಯನ್ನು ಪುನಃ ಘೋಷಿಸುವ ಲೇಖಕರು ಮನೋನಿಗ್ರಹದಿಂದ ಕಲಾತ್ಮಕ ಬದುಕು ಸಾಧ್ಯ ಎನ್ನುತ್ತಾರೆ. ಹೀಗೆ ಕಲಾತ್ಮಕ ಮನಸ್ಸುಳ್ಳವರು ಯಾರಿಗೂ ಗುಲಾಮರಾಗಿರದೆ ಸ್ವತಂತ್ರವಾಗಿ ಬದುಕಬಹುದು ಎನ್ನುತ್ತಾರೆ.

ತಾವು ಓದಿದ, ಅಲ್ಲಲ್ಲಿ ಕೇಳಿದ ಹಾಗೂ ವಿವಿಧ ಶಿಬಿರ-ಸತ್ಸಂಗಗಳಲ್ಲಿ ಅನುಭವಿಸಿದ ಅನುಭವಗಳಿಗೆ ತಮ್ಮದೇ ಆದ ವಿಚಾರಧಾರೆಯೊಂದಿಗೆ ವಿವರಣೆ ನೀಡುವ ಸುಬ್ರಾಯ ಶಾಸ್ತ್ರೀ ಅವರ ಈ ಕೃತಿ ಓದುಗರಲ್ಲಿ ಕುತೂಹಲ ಮೂಡಿಸಿ ಮನಸ್ಸನ್ನು ಚಿಂತನೆಗೆ ಒಡ್ಡುತ್ತದೆ.

ಯುವ ಪೀಳಿಗೆಯನ್ನುದ್ದೇಶಿಸಿ ಈ ಬರಹಗಳನ್ನು ಬರೆದುದಾಗಿ ಶಾಸ್ತ್ರೀಗಳು ಒಂದೆಡೆ ಹೇಳಿದ್ದಾರೆ. ಆದರೂ ಹಿರಿಯರಿಗೂ ಇದು ಕೈದೀವಿಗೆಯಾಗುವ ಯೋಗ್ಯತೆ ಹೊಂದಿದೆ. ಹೆಸರಾಂತ ಕಲಾವಿದರೂ ಆಗಿರುವ ಅವರು ರಚಿಸಿದ ಅನೇಕ ಕಲಾಕೃತಿಗಳ ಪಡಿಯಚ್ಚುಗಳು ರಕ್ಷಾಪುಟಗಳಲ್ಲಿ ಮೂಡಿದ್ದರಿಂದ ಪುಸ್ತಕದ ಶೋಭೆ ಹೆಚ್ಚಿದೆ.

– ನೆಂಪು ನರಸಿಂಹ ಭಟ್ಟ, 'ಸಂಹಿತಾ', # ೩-೨೮, ಅಚ್ಯುತನಗರ, ೨ ನೇ ಹಂತ, ಪರ್ಕಳ-೫೭೬ ೧೦೭, ಜಿ. ಉಡುಪಿ

೧೧. ಒಂದು ಬೊಗಸೆ ಧ್ಯಾನ : ಸಂಕುಲಜೀವ

ಆತ್ಮದೀಪ, ಧಾರವಾಡ-೫೮೦ ೦೦೭, ಪ್ರಮು. ೨೦೦೩, ಪು. ೧೫೮, ರೂ. ೫೦/-

ಸಂಕುಲಜೀವ ಅವರ 'ಒಂದು ಬೊಗಸೆ ಧ್ಯಾನ' ನೋಡುತ್ತಿದ್ದಂತೆಯೇ ಎತ್ತಿಕೊಳ್ಳಬೇಕೆನಿಸುವ ಪುಸ್ತಕ. ಹೆಸರು, ಆಕೃತಿ ಎರಡೂ ಆಕರ್ಷಕ. ಲೇಖಕರು ಪಡೆದ ಝೆನ್‌ನ ಅರಿವು ಮತ್ತು ಧ್ಯಾನದ ಅನುಭವಗಳ ಎರಕದಿಂದ ಈ ಪುಸ್ತಕ ತನ್ನ ಸತ್ವವನ್ನು ಪಡೆದಿದೆ. ಎರಡು ಭಾಗಗಳಿರುವ ಪುಸ್ತಕದಲ್ಲಿ 'ಹನಿ ಹನಿ ಜೇನು' ಹನಿಗವನಗಳ ಭಾಗ, 'ಒಂದು ಪತ್ರ ಗೆಳೆಯನಿಗೆ' ಧ್ಯಾನದ ಬಗೆಗಿನ ನೀಳ ಪ್ರಬಂಧ.

'...ಮೊದಲ ಭಾಗದ ಹನಿಗವನಗಳು ಸುಮಾರು ಮೂರು ವರ್ಷದ ಅವಧಿಯಲ್ಲಿ ನನ್ನ ಬದುಕಿನ ಹುಲ್ಲುಗಾವಲಿನಲ್ಲಿ ತಾವೇ ತಾವಾಗಿ ಸಾಕಾರಗೊಂಡ ಇಬ್ಬನಿಯ ಹನಿಗಳು' ಎಂದು ಲೇಖಕರು ತಮ್ಮ 'ಬಿನ್ನಹ'ದಲ್ಲಿ ಹೇಳುತ್ತಾರೆ. ಅನುಭಾವವನ್ನು ಕಟ್ಟಿಕೊಡುವಲ್ಲಿ ಪ್ರಬಂಧಕ್ಕಿಂತಲೂ ಕವನ ಹೆಚ್ಚು ಶಕ್ತ ಎನ್ನುವುದು ಪುಸ್ತಕ ಓದಿದಾಗ ಮನವರಿಕೆಯಾಗುತ್ತದೆ. ಮುನ್ನುಡಿ ಬರೆದ ಎ. ಎಸ್. ನಾಗರಾಜ್ ಇದೇ ಅರ್ಥದ ಮಾತನ್ನು ಹೇಳುತ್ತಾರೆ. 'ನಮ್ಮ ಧ್ಯಾನದ ಅನುಭವಗಳನ್ನೂ ಅನುಭಾವಗಳನ್ನೂ ವಿವರಿಸಿ ಹೇಳುವುದು ಸಂಜೀವ ಕುಲಕರ್ಣಿಯವರಂತಹ ಕವಿಗಳಿಗೆ ಮಾತ್ರ ಭಾಗಶಃ ಸಾಧ್ಯ.' ಧ್ಯಾನದ ಮೇಲೆ ಬೇರೆ ಬೇರೆ ಮಗ್ಗಲುಗಳು ಬೇರೆ ಬೇರೆ ಸಮಯಗಳಲ್ಲಿ ಕವಿಗೆ ಕಂಡಿದ್ದಕ್ಕೆ ಹನಿಗವನಗಳಲ್ಲಿ ದಾಖಲೆಯಿದೆ. ಒಮ್ಮೆ ಧ್ಯಾನವೆಂಬುದು 'ಅಂತರಂಗದ ನಿತ್ಯಸ್ನಾನ'ವಾಗಿ ಕಂಡರೆ ಇನ್ನೊಮ್ಮೆ 'ಅಂತರಂಗದ ನಿತ್ಯ ವ್ಯಾಯಾಮ'ವಾಗಿ ಕಾಣುತ್ತದೆ.

'ಒಬ್ಬ ಚಂದ್ರನಲ್ಲಿ / ಅದೆಷ್ಟು ಬೆಳದಿಂಗಳು ತುಂಬಿದೆ! / ಒಂದು ಉಸಿರಿನಲ್ಲಿ /ಅದೆಷ್ಟು ಧ್ಯಾನ!!' ಇಂತಹ ಧ್ವನಿಪೂರ್ಣ ಹನಿಗವನಗಳು ಪುಸ್ತಕದಲ್ಲಿ ಸಾಕಷ್ಟಿವೆ. ಅವುಗಳ ನಡುವೆ ಅಲ್ಲಲ್ಲಿ ಸುಮ್ಮನೆ ಹೇಳಿಕೆಗಳಾಗಿಯಷ್ಟೇ ನಿಲ್ಲುವ ಹನಿಗವನಗಳೂ ಇವೆ. ಇವನ್ನು ಬಿಟ್ಟಿದ್ದರೇ ಒಳ್ಳೆಯದಿತ್ತೇನೋ.

ಇಷ್ಟಾಗಿಯೂ ಧ್ಯಾನದ ಅರ್ಥ ಹಾಗೂ ಸೌಂದರ್ಯದ ಕಲ್ಪನೆ ಮಾಡಿಕೊಡುವಲ್ಲಿ `ಹನಿ ಹನಿ ಜೇನು` ಭಾಗ ಸಫಲವಾಗಿದೆ.

ಪ್ರಬಂಧ ಭಾಗದಲ್ಲಿ ಮುಖ್ಯವಾಗಿ ಕಾಣುವುದು ಲೇಖಕರ ಉತ್ಸಾಹ. ಇದು ಲೇಖಕರ ಅರಿವಿನ ಭಾಗ. ಇಲ್ಲಿ ಅನುಭಾವದ ಸೆಳೆಯಿಲ್ಲ. ಎಲ್ಲವನ್ನೂ ಬಿಡಿಸಿ ಹೇಳುವ ತವಕ. ಧ್ಯಾನ ಎಂದರೇನೆಂದು ತಿಳಿಯದ ಗೆಳೆಯನಿಗೆ ಬರೆದ ಪತ್ರದ ರೂಪದಲ್ಲಿ ಪ್ರಬಂಧ ಇರುವುದರಿಂದ ಉದ್ದೇಶ ಸ್ಪಷ್ಟ. ಧ್ಯಾನದ ಸರಳ ಪರಿಚಯವೇ ಈ ಭಾಗದ ಗುರಿ. ಒಮ್ಮೊಮ್ಮೆ `ತೀರ ಸರಳವಾಯ್ತಲ್ಲ` ಅನಿಸಿದರೂ ಬಗೆಬಗೆಯ ದೃಷ್ಟಾಂತಗಳಿಂದ, ಶಾಸ್ತ್ರದ ಶೈಲಿಯನ್ನು ಬಿಟ್ಟು ಉತ್ಸಾಹದಿಂದ. ಧ್ಯಾನದ ಸಾಧನೆ, ಉಪಯೋಗ, ವೈವಿಧ್ಯ ಎಲ್ಲ ಚರ್ಚಿತವಾಗಿವೆ. ಧ್ಯಾನದ ಕುರಿತು ಸಾಮಾನ್ಯರಿಗಿರಬಹುದಾದ ಅನುಮಾನಗಳಿಗೂ ಉತ್ತರಗಳಿವೆ. ಲೇಖಕರೇ ಬರೆದ ರೇಖಾಚಿತ್ರಗಳು ಪುಸ್ತಕಕ್ಕೆ ಕಳೆ ತಂದಿವೆ. ಎಲ್ಲಕ್ಕಿಂತ ಮಿಗಿಲಾಗಿ ಧ್ಯಾನದಿಂದ ಸಾಧಿತವಾಗುವ ಆನಂದ. ಮುಟ್ಟಿ ಅನುಭವಿಸುವಷ್ಟಿದೆ, ಈ ಪುಸ್ತಕದಲ್ಲಿ.

– ಡಾ. ಪ್ರಕಾಶ ಭಟ್, ೧೯, ಬಯಲು, ಹೊಯ್ಸಳನಗರ, ಧಾರವಾಡ-೫೮೦ ೦೦೩

೧೨. ಇರುಳು ಕಾಣಿಸಿದ ಆಕಾಶ : ಟಿ. ಆರ್. ರಾಧಾಕೃಷ್ಣ

ಪ್ರಕಾಶನ : ಸಿ. ವಿ. ಜಿ. ಪಬ್ಲಿಕೇಶನ್ಸ್, ಬೆಂಗಳೂರು, ಪು. ೯೭, ರೂ. ೮೦/-

ಟಿ. ಆರ್. ರಾಧಾಕೃಷ್ಣ ಅವರ ಇತ್ತೀಚಿನ ಕಥಾಸಂಕಲನ `ಇರುಳು ಕಾಣಿಸಿದ ಆಕಾಶ`. ಇಲ್ಲಿರುವ ಒಂಭತ್ತು ಕಥೆಗಳಲ್ಲಿ ೭ ಕಥೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೆ ೨ ಕಥೆಗಳು ಚಿತ್ರದುರ್ಗದ ಆಕಾಶವಾಣಿಯಿಂದ ಬಿತ್ತರಗೊಂಡಿವೆ.

`ಇರುಳು ಕಾಣಿಸಿದ ಆಕಾಶ` ಸಂಕಲನದ ಕಥೆಗಳಲ್ಲಿ ಎದ್ದು ಕಾಣುವ ಸಾಮಾನ್ಯ ಅಂಶ: ಮಧ್ಯಮ ವರ್ಗದ ಬದುಕಿನ ಚಿತ್ರಣ ಹಾಗೂ ಒಳಿತಿನಲ್ಲಿ ನಂಬಿಕೆ.

`ಮೃತ್ಯೋರ್ಮಾ ಅಮೃತಂಗಮಯ` ಕಥೆಯಲ್ಲಿ ಗಂಧದ್ ಮಾಸ್ತರ್, `ಮೃಗಗಳಿಗಂಜಿ ದೊಡೆಂತಯ್ಯಾ`ದ ಪ್ರಾಚಾರ್ಯ ವೀರಣ್ಣ, `ಮುದ್ರಿಸದ ಧ್ವನಿಯ` ಅಂಜಲಿ ಮೇಡಂ, `ಭಸ್ಮ`ದ ಗೌರಮ್ಮ ಈ ಎಲ್ಲ ಪಾತ್ರಗಳು ನಮ್ಮ ಸುತ್ತಮುತ್ತಲೆ ನಮ್ಮ ಕೈಯಳತೆಯಲ್ಲೇ ಇರುವಂಥವು. ಕಥೆಗಾರರ ಮಾನವೀಯ ಅನುಕಂಪ ಕಾರಣವಾಗಿ ಈ ಪಾತ್ರಗಳೂ ಒಳ್ಳೆಯತನದ ಎರಕದಲ್ಲಿ ಅಚ್ಚು ಹೊಯ್ಯುವಂಥವುಗಳು. ಇಲ್ಲಿ ಕಾಣುವುದು ಕಥೆಗಾರನ ಒಳ್ಳೆಯತನವನ್ನು ಗುರುತಿಸುವ ಗುಣವೋ ಅಥವಾ ನಿಜಕ್ಕೂ ಪಾತ್ರಗಳೇ ಒಳ್ಳೆಯವೋ ಎಂಬ ಸಂದಿಗ್ಧಕ್ಕೆ ನಮ್ಮನ್ನು ನೂಕುವಂಥ ಪಾತ್ರಗಳು. ಹೀಗಾಗಿ ಇಂಥ ಕಥೆಗಳನ್ನೋದಿದಾಗ ಓದಿದ ಸಂತೃಪ್ತಿ ಇರುತ್ತದೆಯೇ ವಿನಃ ಪಾತ್ರಗಳ ತಳಮಳ, ಆತಂಕ, ತಲ್ಲಣಗಳು ತಟ್ಟಬೇಕಾದ ಪ್ರಮಾಣದಲ್ಲಿ ತಟ್ಟುವುದಿಲ್ಲ.

ಬದುಕಿನ ನೋವನ್ನು ಅತ್ಯಂತ ಸಹಜವೆಂಬಂತೆ ಸ್ವೀಕರಿಸುವ ಗಂಧದ್ ಮಾಸ್ತರ, ಬದುಕಿನ ಪ್ರೀತಿ ಜೊಂದಿಗೇ ಬಂದಾಯದ ಅರ್ಭಟವನ್ನೂ ಮೈಗೂಡಿಸಿಕೊಂಡ ಗೌರಮ್ಮ, ಬಂಡುದನ್ನು ಎದುರಿಸಲಾರದ ಜಗದೀಶ. ಆತನಲ್ಲಿ ಆತ್ಮವಿಶ್ವಾಸ ತುಂಬುವ ಅಂಬುಜಕ್ಕ, ಅವಮಾನ ದುಃಖ ಮರೆಯಲು ಸಮಾಜ ಸೇವೆಗೆ ತೊಡಗುವ, ವಿಶಿಷ್ಟ ಸಂದರ್ಭವೊಂದರಲ್ಲಿ ಚಿನ್ನಮ್ಮನಲ್ಲಿ ಅನುರಕ್ತನಾಗಿ ಆಕೆಯ ಸಂಬಂಧ ಬೆಳೆಸಿ ಕೊನೆಗೆ ಆಕೆಯ ಕೋರಿಕೆಯಂತೆಯೆ ಆಕೆಯ ಸ್ವಂತ ಮಗಳನ್ನೇ ಮದುವೆಯಾಗುವ ರಾಜಪ್ಪ; ವಿದ್ಯಾರ್ಥಿಗಳ, ಸಹೋದ್ಯೋಗಿಗಳ ದೌರ್ಜನ್ಯಕ್ಕೆ ಒಳಗಾಗಿ ಪ್ರಾಣ ನೀಗುವ ವೀರಣ್ಣ, ಮಾರಣಾಂತಿಕ ರೋಗಕ್ಕೆ ತುತ್ತಾದಾಗಲೂ ಪ್ರೀತಿಯ ಬಗ್ಗೆ ಬದುಕಿನ ರೀತಿಯ ಬಗ್ಗೆ ಒಂದು ನಿಷ್ಠೆ ಇಟ್ಟುಕೊಂಡ ಸೋಮು, ತನ್ನದಲ್ಲದ ತಪ್ಪಿಗೆ ಬದುಕು ಬಲಿಗೊಟ್ಟೂ, ಆ ವೇದನೆಯಲ್ಲೆ ಕೊರಗದೆ ಜೀವನ ಪ್ರೀತಿ ಉಳಿಸಿಕೊಂಡ ಅಂಜಲಿ ಮೇಡಂ, ಖಳನಾಯಕನಂತಿದ್ದ ಚೆಟ್ಟಿಪ್ಪನ ಕಥೆ ಕೇಳಿಯೂ ಅದೇ ನೆಪವಾಗಿ

ಆತ್ಮವಿಮರ್ಶೆಗೆ ತೊಡಗಿ ಬೆಟ್ಟಪ್ಪನಿಗೆ ನೆರವಾಗುವ ವೆಂಕಟೇಶ, ನಿಗೂಢವಾಗಿಯೆ ಉಳಿವ ಶಿವಸ್ವಾಮಿ ದಂಪತಿಗಳು ಇವು ಟಿ. ಆರ್. ರಾಧಾಕೃಷ್ಣರ ಒಂಬತ್ತು ಕಥೆಗಳಲ್ಲಿ ವಿವಿಧ ನೆಲೆಗಳಲ್ಲಿ ಕಂಡುಬರುವ ಪಾತ್ರಗಳು. ಕಥೆಗಳು ಘಟನಾಪ್ರಧಾನವಾದುದರಿಂದ ಪಾತ್ರಗಳ ಆಟದ ಅರಾಜಕತೆ, ಖಿನ್ನತೆಗಳ ಚಿತ್ರಣ ಪರಿಣಾಮಕಾರಿಯಾಗಿಲ್ಲ: ಇದಕ್ಕೆ ಕಾರಣ ಕಥೆಗಾರರ ಬಹಿರ್ಮುಖತೆ.

ಇಲ್ಲಿರುವ ಎಲ್ಲ ಕಥೆಗಳಲ್ಲಿ ತುಂಬಿ ತುಳುಕುತ್ತಿರುವುದು ಮಾನವೀಯ ಅನುಕಂಪ. ಈ ಕಾರಣಕ್ಕಾಗಿಯೇ ಕಥೆಗಳು ಓದಿಸಿಕೊಂಡು ಹೋಗುತ್ತವೆ. ರಾಧಾಕೃಷ್ಣ ಅವರು ಬಯಸಿದರೆ ಭಿನ್ನವಾಗಿ ಬರೆಯಬಲ್ಲರು ಎಂಬುದಕ್ಕೆ 'ಸ್ಥಲ' ಕಥೆ ಮಾತ್ರ ಸೂಚನೆ ನೀಡುತ್ತದೆ.

೧೩. ದಾರಿ ಯಾವುದಯ್ಯಾ : ಬಂದಗದ್ದೆ ರಾಧಾಕೃಷ್ಣ

ಪ್ರಕಾಶನ : ಪುಸ್ತಕ ಹೊಂಬಾಳೆ, ಕೆಳದಿ, ಸಾಗರ-೫೭೭ ೪೦೧, ಪು. ೩೧, ರೂ. ೨೦/-

ರಂಗಭೂಮಿ, ಚಿತ್ರಕಲೆಯಂತೆಯೆ ಸಾಹಿತ್ಯಕ್ಷೇತ್ರದಲ್ಲೂ ತಮ್ಮ ಆಸಕ್ತಿಯನ್ನು ಉಳಿಸಿ-ಬೆಳೆಸಿ ಕೊಂಡವರು ಬಂದಗದ್ದೆ ರಾಧಾಕೃಷ್ಣ. ಅವರ 'ದಾರಿ ಯಾವುದಯ್ಯಾ' ನೀಳ್ಗತೆ ಮಲೆನಾಡಿನ ಕಾಡಿನ ಹಾಗೆ ದಟ್ಟ, ನಿಗೂಢ. ಒಂದೊಂದು ದಿಕ್ಕಿನಲ್ಲಿ ಒಂದೊಂದು ಪರಿ.

ಮಲೆನಾಡಿನ ಕಾಡು ಮಲೆನಾಡಿನ ಬದುಕು ಹಾಗೂ ತತ್ತ್ವಮೀಮಾಂಸೆ ಈ ಮೂರು ಎಳೆಗಳಿಂದ ಹುರಿಗೊಂಡ ಕಥೆ 'ದಾರಿ ಯಾವುದಯ್ಯಾ'. ಒಂದೆಡೆ ದಟ್ಟವಾದ ಕಾಡು ಇನ್ನೊಂದೆಡೆ ದಟ್ಟವಾದ ಬದುಕು. ಕಾಡಿನಲ್ಲಿ ಕತ್ತಲೆ, ಬೆಳದಿಂಗಳು, ಮೋಡ, ಮಳೆ, ಹಾವು, ಭಯ. ಆ ಕಾಡನ್ನು ಹೊದ್ದುಕೊಂಡು ಮಲಗಿರುವ ಜನರ ಬದುಕಿನಲ್ಲಿ ಛಲ, ಜೀವನಶ್ರದ್ಧೆ, ವಂಚನೆ, ಮೋಸ, ಕಾಮ, ಉಲ್ಲಾಸ. ಈ ಎರಡರ ಹಿನ್ನೆಲೆಯಾಗಿ ಶಂಕರರ ಭಜಗೋವಿಂದ ಸಾಲುಗಳು: 'ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ...' –ಬಿಡುಗಡೆಯ ದಾರಿ ಹುಡುಕುವ ತವಕ.

ಕಥಾನಾಯಕ ವಿನಾಯಕ ಎಲ್ಲೋ ನಮ್ಮೊಳಗೆ ಮೊಳೆತು ಚಿಗಿವ ಜೀವ. ಜೀವನದ ಬಗ್ಗೆ ಒಂದು ಶ್ರದ್ಧೆ ಇಟ್ಟುಕೊಂಡು ಜಾಣ್ಮೆಯಿಂದ ಬದುಕು ಸಾಗಿಸುವ ಶೇಷಮ್ಮ, ಲಾಲಸೆಯ ವ್ಯಕ್ತಿ ವೆಂಕಪ್ಪ, ರಸಿಕ ಸುರೇಶ, ಪತಿಯೆಡೆಗಿನ ಗುಪ್ತ ಪ್ರತಿಭಟನೆಯೇನೊ ಎಂಬಂತೆ ತನ್ನಲ್ಲಿ ಕಾಮವನ್ನು ಹೆಡೆಯೆತ್ತಗೊಡುವ ಮತ್ತೆ ವಿವೇಕದ ಮಾತಿಗೆ ಓಗೊಡುವ ಭಾರತಿ –ಕಾಡಿನಲ್ಲಿ ಸರಿದು ಹೋದ ಕಪ್ಪು ನಾಗರದ ನೆನಪು– ಈ ಎಲ್ಲ ಬದುಕಿನಲ್ಲಿ ನಾವು-ನೀವು ಅಲ್ಲಿ-ಇಲ್ಲಿ ಕಂಡಂಥ ಪಾತ್ರಗಳೆ. ಚಿತ್ರಕಲಾವಿದ ಎಲ್ಲಿ ದಟ್ಟ ಬಣ್ಣ ಬಳಸಬೇಕು ಎಲ್ಲಿ ತೆಳುವಾಗಿಸಬೇಕು ಎಂಬುದನ್ನು ಅರಿತಿರುತ್ತಾನಲ್ಲವೆ, ಆ ಮಾಧ್ಯಮವನ್ನೂ ಬಲ್ಲ ಕಥೆಗಾರ ಬಂದಗದ್ದೆ ಬರಹದಲ್ಲೂ ಅದೇ ತಂತ್ರ ಬಳಸಿದ್ದಾರೆ. ನೀಳ್ಗತೆ ಒಂದು ದಟ್ಟ ಅನುಭವವಾಗಿ ನಮ್ಮ ಮನಸ್ಸಿನಲ್ಲಿ ಉಳಿಯುತ್ತದೆ: ಜತೆಗೆ ಲೌಕಿಕ ಪ್ರಶ್ನೆಯೂ ಒಂದು ಉಳಿಯುತ್ತದೆ. ೩೦ ಪುಟಗಳ ಪುಸ್ತಕಕ್ಕೆ ೨೦ ರೂಪಾಯಿ ಬೆಲೆ ಉಚಿತವೆ?!

– ಪ್ರೊ. ಚಂದ್ರಶೇಖರ ವಸ್ತ್ರದ, 'ಬೆಳಗು', ಆನಂದಾಶ್ರಮ ರಸ್ತೆ, ಮಸಾರಿ, ಗದಗ-೫೮೨ ೧೦೧

೧೪. ಪುಟ್ಟ ಪಾದದ ಗುರುತು : ಸುನಂದಾ ಪ್ರಕಾಶ ಕಡಮೆ

ಪ್ರಕಾಶನ : ಮಂತ್ರಿ ಪ್ಯಾರಾಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-೭೯, ಪ್ರಮು. ೨೦೦೫, ಪು. ೯೧, ರೂ.೪೦/-

ಛಂದ ಪುಸ್ತಕ. ಮಂತ್ರಿ ಪ್ಯಾರಾಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-೭೯, ಪ್ರಮು. ೨೦೦೫, ಪು. ೯೧, ರೂ.೪೦/-

ಇದು ಹನ್ನೊಂದು ಕಥೆಗಳ ಸಂಗ್ರಹ. ಈ ಕೃತಿಗೆ ಛಂದ ಪುಸ್ತಕ ಬಹುಮಾನ ದೊರಕಿದೆ. ಇಲ್ಲಿನ ಅನೇಕ ಕಥೆಗಳು ಬೇರೆ ಬೇರೆ ಪತ್ರಿಕೆಗಳ ಕಥಾಸ್ಪರ್ಧೆಯ ಬಹುಮಾನ ಪಡೆದಿವೆ. ಬಹುಮಾನಗಳು ಕೃತಿಯ ಗುಣಾತ್ಮಕತೆಯನ್ನು ಹೆಚ್ಚಿಸುವುದಿಲ್ಲವಾದರೂ ಒಂದು ಬಗೆಯ ವಿಮರ್ಶೆಗಳಂತೂ ಹೌದು. ಬಹುಮಾನದ ಪೂರ್ವಗ್ರಹಿಕೆ ಮರೆಸುವ ಗುಣವಿರುವ ಕಥೆಗಳು ಮಾತ್ರ ಓದಿನ ಸಾರ್ಥಕತೆಯನ್ನು

ಹೆಚ್ಚಿಸುತ್ತವೆ ಎಂದುಕೊಂಡಿರುವವ ನಾನು. ಇಲ್ಲಿನ ಕಥೆಗಳನ್ನು ನಾನು ಅವು ನನ್ನೊಳಗೆ ಉಳಿಸಿದ 'ಪುಟ್ಟ ಪಾದದ ಗುರುತಿಗಾಗಿ' ಮೆಚ್ಚುವೆ.

ಸುನಂದಾ ಕಡಮೆಯವರು ತಮ್ಮ ಕಥಾ ಹೆಣಿಗೆಯಲ್ಲಿ ಸಹಜ ಚೆಲುವನ್ನು ಸಾಧಿಸಿದ್ದಾರೆ. ಇಲ್ಲಿನ ಕಥೆಗಳನ್ನು ಓದಿ ಮುಗಿಸಿದಾಗ ಇವು ಹೆಣ್ಣು ಮಗಳೊಬ್ಬಳು ಬರೆದ ಕಥೆಗಳೆಂಬುದೂ ಗೌಣವಾಗಿ ಬಿಡುತ್ತವೆ. ಯಾವುದೆ ಬ್ರ್ಯಾಂಡಿಗೆ ಒಳಪಡದೆ ಬರೆದ ಕಥೆಗಳ ಹೆಚ್ಚುಗಾರಿಕೆ ಇದು. ಅಂದಮಾತ್ರಕ್ಕೆ ಇಲ್ಲಿನ ಕಥೆಗಳೆಲ್ಲ ಅನನ್ಯ, ಪರಿಪೂರ್ಣ ಎಂದೆಲ್ಲ ಹೇಳಿಬಿಡುವ ಅವಸರ ನನಗಿಲ್ಲ. ಈ ಕಥೆಗಳಲ್ಲಿ ನನಗೆ ಮೆಚ್ಚುಗೆಯಾದವುಗಳು ಯಾವವು? ಹಾಗೆ ಮೆಚ್ಚಲು ಕಾರಣವೇನು? ಹಿಡಿಸಲಿಲ್ಲವಾದರೆ ಯಾಕೆ? ಎಂಬ ಸಂಗತಿಗಳನ್ನು ಬಿಡಿಸಿಡಲು ನಾನು ನಿರಂಕುಶಮತಿ. ಜತೆಗೆ ವಿಮರ್ಶೆಯು ಅಂಕುಶವಾಗಬಾರದೆಂಬ ಎಚ್ಚರವೂ ನನಗಿದೆ ಎಂದುಕೊಂಡಿರುವೆ.

ಎಲ್ಲ ಕಥೆಗಳನ್ನು ಒಂದೇ ಸಲ ಓದಿ ಒಟ್ಟಂದದ ಪರಿಣಾಮದ ಕಾವು ಆರುವ ಮೊದಲು ಅವುಗಳ ಕುರಿತು ಬರೆಯುವದು ಸೂಕ್ತವೆಂದುಕೊಂಡು ಇಡಿಯಾಗಿ ಓದುವ ಕಾಲಾವಕಾಶಕ್ಕಾಗಿ ಸುಮಾರು ಒಂದು ವರ್ಷದಿಂದ ಈ ಸಂಕಲನವನ್ನು ಟೇಬಲ್ ಮೇಲೆ ಕಾಯಿಸಿದ್ದೇನೆ. ನನ್ನ ಕುತೂಹಲಕ್ಕಾಗಿ ಮೊದಲು 'ಪುಟ್ಟ ಪಾದದ ಗುರುತು' ಕಥೆಯನ್ನೇ ಓದಿದೆ. ಅಂಚಕ್ಕನ ಪಾತ್ರ ಹಂಸದಂತೆ ತೇಲಿ ಸದಾ ನನ್ನೊಳಗೆ ನೆನಪಾಗಿ ಉಳಿವ ಬಿಳಿ ರೆಕ್ಕೆಯಾಯಿತು. ಆ ಕಥೆಯ ಎಲ್ಲ ವಿವರಗಳು ಮುಖ್ಯ ಅನುಭವವೊಂದಕ್ಕೆ ಪೂರಕವಾಗುತ್ತ ಮಾತುಗಳ ಹಿಂದಿನ ಮನಸ್ಸುಗಳನ್ನು, ಮನಸ್ಸುಗಳ ಹಿಂದಿನ ಮೌನವನ್ನು ಜೀವಂತ ಸನ್ನಿವೇಶಗಳ ಆವರಣದಲ್ಲಿ ಪಾರದರ್ಶಕವಾಗಿ ಅಡಗಿಸಿವೆ. ಮಗ, ಸೊಸೆ, ಮೊಮ್ಮಗಳೊಂದಿಗೆ ಕೂಡ ಅಸಮಾಧಾನಗೊಂಡ ಅಂಚಕ್ಕನ ಮನಸ್ಥಿತಿ, ದೇಹಸ್ಥಿತಿಗಳ ತಳಮಳಗಳನ್ನು ಅಳಿಸಿಬಿಡುವ ಬಾಲ್ಯದೊಂದಿಗಿನ ಸೇತುವೆ ಇಂದಿನ ಬಹಳಷ್ಟು ಬದುಕುಗಳ ದುರವಸ್ಥೆ ಹಾಗೂ ಅವುಗಳ ಆಂತರಿಕ ಶಮನಕ್ಕೆ ಅಗತ್ಯವಿರುವ ಸರಳ ಸಂಗತಿಗಳಿಗೆ ರೂಪಕಾತ್ಮಕ ಪ್ರತಿಫಲನ ಈ ಕಥೆಯಲ್ಲಿದೆ. ಈ ಯಶಸ್ಸು ಬೇರೆ ಕಥೆಗಳಲ್ಲಿ ಭಿನ್ನ ಪ್ರಮಾಣದಲ್ಲಿ ಸಾಧಿಸಿದೆ.

ಟ್ರಂಕಿನಲ್ಲಿ ಮಗು ಸಿಕ್ಕಿಕೊಳ್ಳುವುದು 'ಮಗು ಚಿತ್ರ ಬರೆಯಿತು' ಕಥೆಯ ಜೀವಾಳ. ಮುಗ್ಧತೆ, ಸರಳತನಗಳು ಇಂದಿನ ನಾಗರಿಕ ಪರಿಸರದಲ್ಲಿ ಉಸಿರುಗಟ್ಟುವ ಸ್ಥಿತಿ ತಲುಪಿರುವುದನ್ನು ಅತ್ಯಂತ ಸಹಜವಾಗಿ ಇದು ಧ್ವನಿಸುತ್ತದೆ. ಟ್ರಂಕಿನ ಬದಲಾಗಿ ಕಪಾಟು ಬರುವುದು ಕೃತಕವೆನಿಸಿ ಟ್ರಂಕಿನೊಳಗೆ ಸಿಕ್ಕಿಹಾಕಿಕೊಂಡ ಮಗುವಿನ ರೂಪಕ ಬೆಳೆಯದೆ ಕಥೆಯ ಸಾಧ್ಯತೆ ಮುರುಟಿ ಹೋದಂತಿದೆ. ಎಲ್ಲವೂ ಸುಖಾಂತ್ಯಗೊಂಡಾಗ ಅಲ್ಲಿ ಅಳು ಅಪ್ರಸ್ತುತ. ಮಗುವಿನ ತೀರ್ಥಪ್ರೋಕ್ಷಣೆ ಕಪಾಟೇ ನಿಂತು ಕಣ್ಣೀರಿಡುತ್ತಿದ್ದಂತೆ ಎಂದು ಹೇಳುವಲ್ಲಿ, ಕಪಾಟಿಗೆ ಜೀವ ತುಂಬುವ ಅವಸರದಲ್ಲಿ ಕಥಾ ಸನ್ನಿವೇಶದ ಜೀವವನ್ನೆ ಕಳೆದಂತಿದೆ. ಆದ್ದರಿಂದ ಸೂಕ್ಷ್ಮ ಸಂಗತಿಗಳನ್ನು ಗಮನಿಸುವ ಹರಿತ ದೃಷ್ಟಿಯ ಜತೆಗೆ ಸಣ್ಣ ಸಂಗತಿಯನ್ನೂ ಔಚಿತ್ಯಪೂರ್ಣವಾಗಿ ಬಳಸುವ ಒಳ ಎಚ್ಚರದ ಅಗತ್ಯವೂ ಅಷ್ಟೇ ಮಹತ್ವದ್ದಲ್ಲವೇ? ಇದೇ ರೀತಿ ಸಶಕ್ತ ಕಥಾ ಬೀಜವನ್ನೊಳಗೊಂಡೂ ಫಲವತ್ತಾದ ಪರಿಕರಗಳನ್ನೊಳಗೊಂಡೂ ನಿರೀಕ್ಷಿತ ಯಶಸ್ಸು ಪಡೆಯದ ಇನ್ನೊಂದು ಕಥೆ 'ಕಿಚನ್ ಪ್ಯಾರಾಡೈಸ್'. ಇಲ್ಲಿನ ವಿವರಗಳು ಇವರ ಇತರ ಕಥೆಗಳಲ್ಲಿಯಂತೆಯೇ ತಮ್ಮಷ್ಟಕ್ಕೇ ಸುಂದರವೆನಿಸಿದರೂ ಅವು ಅಗತ್ಯಕ್ಕಿಂತ ಹೆಚ್ಚಾದಂತೆನಿಸಿ ಕಥೆಯ ಒಟ್ಟೂ ಆಶಯವನ್ನು ತೆಳುವಾಗಿಸುತ್ತವೆ. ಒಮ್ಮೊಮ್ಮೆ ಬಾಲಿಶವೆನಿಸುವಷ್ಟು ವಿವರಗಳು ಇಡಿಕಿರಿದು ಬಿಡುತ್ತವೆ. ಹೀಗಾಗಿ ಖಾಲಿತನ, ವಿಷಾದಗಳ ತೀವ್ರತೆಯನ್ನು ಅನುಭೂತಗೊಳಿಸಬೇಕಾದ ಕಥೆ ಮಕ್ಕಳಾಟದಲ್ಲಿ ಮುಳುಗಿಸಿಬಿಡುವ ಸರಳೀಕರಣವಾಗಿಬಿಡುತ್ತದೆ. ನಿರ್ವಾತಕ್ಕಿಂತ ವಾತ ಬೆಳೆಯುತ್ತದೆ.

'ನಕ್ಷತ್ರದ ಬೆಳಕ ಹಿಡಿದು...' ನಾನು ಮೆಚ್ಚಿಕೊಂಡ ಇನ್ನೊಂದು ಕಥೆ. ಅಪಘಾತಕ್ಕೆ ಸಿಕ್ಕಿಕೊಳ್ಳುವ ನಾಯಿಮರಿಯ ಸುತ್ತ ತನ್ನ ಪದರುಗಳನ್ನು ಬಿಡಿಸಿಡುವ ಈ ಕಥೆ ಎಲ್ಲೂ ಸರಳ ತೀರ್ಮಾನಗಳ ವಾಚ್ಯತೆಗೆ

ಇಳಿಯದೆ ತನ್ನ ಅನುಕ್ತ ನೆಲೆಗಳಲ್ಲಿ ಹಿಡಿದು ನಿಲ್ಲಿಸುತ್ತದೆ. 'ಪ್ರಕೃತಿ ಧಾವಂತ'ದಲ್ಲಿ ಧಾವಂತವಿಲ್ಲದ ಸಂಯಮದ ನಿರೂಪಣೆಯಿದೆ. ಆದರೆ ಕಥಾ ಕೌತುಕದ ಯಾವ ಸನ್ನಿವೇಶಗಳೇ ಇರದ ಕೇವಲ ಹದಿವಯಕ್ಕೆ ಹಾಲಿಡುತ್ತಿರುವ ಹೆಣ್ಣುಮಗಳೊಬ್ಬಳ 'ಋತು' ಕುರಿತಾಗ ಬೆರಗಿನಲ್ಲಿ ಕಥೆ ಮುಗಿದುಬಿಟ್ಟಿದೆ. 'ವಶ' ಕೂಡ ಇಂಥದೆ ಒಂದು ಸಾಮಾನ್ಯ ರಚನೆ. ಇಲ್ಲೆಲ್ಲ ಸಾಮಾನ್ಯ ಸಂಗತಿಗಳನ್ನೂ ಆಪ್ತಗೊಳಿಸುವ ಕಥನ ಕೌಶಲ ಬೆರಗುಗೊಳಿಸುವಷ್ಟಿದೆ ಎಂಬುದನ್ನೂ ಮರೆಯಲಾಗದು. ಒಂದು ಜೀವಂತ ಪರಿಸರವನ್ನವರು ಅತ್ಯಂತ ಸಹಜವಾಗಿ ನಿರ್ಮಿಸಬಲ್ಲರು. ಆ ಪರಿಸರದ ಭಾಗವಾಗಿ ಪಾತ್ರಗಳಿಗೆ ಜೀವ ತುಂಬುವಲ್ಲಿ, ಸಂಘರ್ಷದ ವಿಭಿನ್ನ ಮಗ್ಗುಲಗಳನ್ನು ಪಾತ್ರಗಳ ಮೂಲಕವೆ ದೀಪ್ತಗೊಳಿಸುವಲ್ಲಿ ಯಶಸ್ಸು ಕೆಲವು ಕಥೆಗಳಿಗೇ ಸೀಮಿತ.

'ಬಣ್ಣದ ಕೌದಿ', 'ನೋ ಎಂಟ್ರಿ'ಯಂಥ ಕಥೆಗಳಲ್ಲಿ ಪಾತ್ರಗಳು ಶಕ್ತಿಯುತವಾಗಿ (ವೇದಾ, ಗಿರಿ) ವಸ್ತು ಏಕಮುಖವಾಗಿಬಿಡುತ್ತದೆ. ಗ್ಲಾಸ್ ಹೌಸ್, ಕಂದಿಲು ಕಥೆಗಳಲ್ಲಿ ಇದನ್ನು ಮೀರುವ ಯತ್ನ ಇದೆಯಾದರೂ ಅವರ ಪೂರ್ಣಪ್ರಮಾಣದ ಯಶಸ್ವಿ ಕಥೆಯಾಗಿ 'ಪುಟ್ಟ ಪಾದದ ಗುರುತು' ಕಥೆಯನ್ನೂ ಮೀರಿ ನನಗೆ ತೋರಿದ್ದು 'ಗುಬ್ಬಿ ಗೂಡು'. ಅದಕ್ಕಿರುವ ಇಂದಿನ ಜ್ವಲಂತ ಪ್ರಸ್ತುತತೆ ಹಾಗೂ ಮಾನವೀಯ ನೆಲೆಗಳ ಶೋಧ ಕಥೆಗಾರ್ತಿಯ ಬಗೆಗೆ ಹೆಚ್ಚಿನ ನಿರೀಕ್ಷೆ ಹುಟ್ಟಿಸುತ್ತವೆ. ಹಿಂದೂ-ಮುಸ್ಲಿಮ್ ಸಂಬಂಧಗಳ ಕುರಿತ ವಸ್ತು ಚರ್ವಿತ ಚರ್ವಣ ಎನಿಸುವಷ್ಟು ಹಾಳತವಾಗಿದ್ದರೂ ಅದನ್ನು ಅಕೃತ್ರಿಮವಾಗಿ ನಿರ್ವಹಿಸುವ ರೀತಿ ಹಾಗೂ ಕಥೆಯಲ್ಲಿ ಉಂಟುಮಾಡಿರುವ ನಿರಂತರ ಸಂಚಲನ ಕಥೆಗಾರ್ತಿಯ ಜೀವಶಕ್ತಿ.

ಮೊದಲ ಓದಿನ ಆ ಕ್ಷಣಕ್ಕೆ ದಕ್ಕಿದ್ದನ್ನು ಇಲ್ಲಿ ದಾಖಲಿಸಿರುವೆ. ಇದಕ್ಕಿಂತ ಭಿನ್ನ ಓದು, ಗ್ರಹಿಕೆಗಳು ಇರಬಹುದು ಎಂಬ ಅನುಮಾನವೂ ನನಗಿದೆ. ಸುನಂದಾ ಅವರು ನಮ್ಮ ಮಹತ್ವದ ಲೇಖಕಿಯಾಗಿ ರೂಪುಗೊಳ್ಳಲಿ ಎಂಬ ಹಾರೈಕೆಯಿಂದ ಅವರ ಶಕ್ತಿ-ಮಿತಿಗಳೆರಡನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

– ಬಸವರಾಜ ವಕ್ಕುಂದ, ಮಾಲತೇಶ ಬಿಲ್ಡಿಂಗ್, # ೩೨, ೧ನೇ ಕ್ರಾಸ್, ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೮

೧೫. ಕಪ್ಪು ಕಾಗೆಯ ಹಾಡು : ಪ್ರಮು. ೨೦೦೦, ಪು. ೫೬, ರೂ. ೨೫/- ಮತ್ತು

೧೬. ಗುಡುಗುಡು ಮುಮ್ಮಟ ದೇವರು : ಮೂರ್ತಿ ದೇರಾಜೆ

ಸಮನ್ವಯ ಪ್ರಕಾಶನ, ಆರಾಧನಾ, ವಿಟ್ಲ(ದ.ಕ.)-೫೭೪ ೨೪೩, ಪ್ರಮು. ೨೦೦೪, ಪು. ೬೪, ರೂ. ೫೦/-

ವಿಶ್ವವಿಖ್ಯಾತ ಚಿತ್ರಕಾರ ಪಾಬ್ಲೊ ಪಿಕಾಸೊ ತಾನು ನಲವತ್ತು ವರ್ಷಗಳಿಂದ ಮಕ್ಕಳಂತೆ ಚಿತ್ರಿಸಲು ಪ್ರಯತ್ನಿಸುತ್ತಿದ್ದೇನೆ ಎಂದೊಮ್ಮೆ ಹೇಳಿಕೊಂಡಿದ್ದಾನೆ. ನಾವೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ಮಕ್ಕಳಂತಿರಲು ಬಯಸಿದವರೋ ಹಂಬಲಿಸಿದವರೋ ಆಗಿಯೇ ಇದ್ದೇವೆ. ನಮ್ಮ ನಡುವಿನ ರಂಗನಿರ್ದೇಶಕ ಮೂರ್ತಿ ದೇರಾಜೆ ಕಳೆದ ನಲವತ್ತಕ್ಕಿಂತ ಹೆಚ್ಚು ವರ್ಷಗಳಿಂದ (ಅವರಿಗೀಗ ೫೦+) ಮಕ್ಕಳೊಂದಿಗೆ ಮಗುವಾಗಿಯೇ ಇದ್ದಾರೆ. ಮಕ್ಕಳೊಂದಿಗೆ ನಿರಂತರ ರಂಗದಲ್ಲಿ ಆಟವಾಡುತ್ತ ಬಂದಿರುವ ಮೂರ್ತಿ ದೇರಾಜೆಯವರ ನಾಟಕಗಳು ಹಲವು, ಆದರೆ ಈಗ ಪ್ರಕಟಗೊಂಡ ನಾಟಕ ಎರಡು– 'ಕಪ್ಪು ಕಾಗೆಯ ಹಾಡು' ಮತ್ತು 'ಗುಡುಗುಡು ಗುಮ್ಮಟ ದೇವರು'. ಇವೆರಡೂ ರಂಗಾಯಣದ ಚಿಣ್ಣರ ಮೇಳಗಳಲ್ಲಿ ಚಿಣ್ಣರಿಂದ ರೂಪ ಪಡೆದು ಲಿಖಿತಗೊಂಡಂಥವು. ಮೂರ್ತಿಯವರ ವಿಧಾನವೇ ಹಾಗೆ– ಅವರು ನಾಟಕ ರಚನೆ ಮಾಡಿ ಮಕ್ಕಳಿಂದ ಆಡಿಸುವುದಿಲ್ಲ, ತಾನು ಹಿಂದೆ ನಿಂತು ಮಕ್ಕಳಿಂದ ಅವರದ್ದೇ ಆದ ನಾಟಕ ಮಾಡಿಸಿಬಿಡುತ್ತಾರೆ.

ಕಪ್ಪು ಕಾಗೆಯ ಹಾಡು ಉತ್ತರ ಭಾರತದ ಜಾನಪದ ಕತೆಯೊಂದರ ಎಳೆಯನ್ನು ಹಿಡಿದು ಮೂಡಿಬಂದಿದೆ. ಇದು ಹಲವು ಪ್ರಯೋಗಗಳನ್ನು ಕಂಡಿದೆ. ಹೆಸರೇ ಹೇಳುವಂತೆ ಇದು ಕಾಗೆಯ ಕತೆ.

ಬರೀ ಕಾಗೆಯ ಕತೆಯಲ್ಲ, ಕಪ್ಪು ಕಾಗೆಯ ಕತೆ. ಶಕ್ತಿಯ, ಫಲವತ್ತತೆಯ ಸಂಕೇತವೂ ಆಗಿರುವ ಕಪ್ಪು ಬಣ್ಣ ಮನುಷ್ಯರಲ್ಲಿ ತಿರಸ್ಕಾರಕ್ಕೆ, ಕೀಳರಿಗೆ ಮತ್ತು ತಾರತಮ್ಯಕ್ಕೆ ಸಂಕೇತವಾಗಿಬಿಟ್ಟಿರುವುದು ಇತಿಹಾಸ. ತನ್ನ ಕಪ್ಪು ಬಣ್ಣವೇ ಮುಖ್ಯ ಕಾರಣವಾಗಿ ತಿರಸ್ಕಾರಕ್ಕೊಳಗಾಗಿರುವ ಕಾಗೆ ತನ್ನೆಲ್ಲ ಶ್ರಮ ಪ್ರಯತ್ನಗಳ ನಂತರವೂ ಇತರ ಹಕ್ಕಿಗಳಿಂದ ತಿರಸ್ಕಾರಕ್ಕೊಳಗಾಗಿ ಸೋತು ಬಸವಳಿದು ಬಿದ್ದು, ಕೊನೆಗೆ ಪುಟ್ಟ ಹಕ್ಕಿಗಳ ಕರುಣೆಯಿಂದ ಆಹಾರ ಪಡೆಯುವುದು. ನಂತರ ಉಳಿದ ಹಕ್ಕಿಗಳಿಗೂ ಮನಃ ಪರಿವರ್ತನೆಯಾಗಿ ಕಾಗೆಯನ್ನು ತಮ್ಮೊಂದಿಗೆ ಸ್ವೀಕರಿಸುವ ಸೂಚನೆಯೊಂದಿಗೆ ನಾಟಕ ಮುಗಿಯುತ್ತದೆ.

ನಾಟಕ ಕೊನೆಗೊಳ್ಳುವ ರೀತಿಯ ಬಗೆಗಿನ ತಾತ್ವಿಕ ನಿಲುವುಗಳನ್ನು ಈಗಾಗಲೇ ಕೆಲವರು ಪ್ರಶ್ನಿಸಿದ್ದಾರೆ. ಕಾಗೆ ಇತರರ ಕರುಣೆಯನ್ನೇ ಅವಲಂಬಿಸಬೇಕೇ? ಎಂಬ ಪ್ರಶ್ನೆಗೆ ನಾಟಕದಲ್ಲಿ ಉತ್ತರವಿಲ್ಲ. ಬಹುಶಃ ಅದು ನಾಟಕಕಾರರ ಉದ್ದೇಶವೂ ಅಲ್ಲ. ಪುಸ್ತಕದ ಮುನ್ನುಡಿಯಲ್ಲಿ ಸಿ. ಬಸವಲಿಂಗಯ್ಯನವರು ಹೇಳಿದಂತೆ ಭೇದ ಭಾವಗಳು ‘ಎಳೆಯ ಮನಸ್ಸಿಗೆ ಬೇರು ಬಿಡದಂತೆ ಆರಂಭದಲ್ಲೇ ತಿಳಿಹೇಳುವ’ ಅಗತ್ಯ ಮೂರ್ತಿಯವರಿಗೆ ಮುಖ್ಯವಾಗಿ ಕಂಡಿರಬಹುದು. ಕೃತಿಯಲ್ಲಿ ತಾತ್ವಿಕತೆ-ತಾರ್ಕಿಕತೆಗಳ ಕೊರತೆ ಕಂಡರೂ ರಂಗದಲ್ಲಿ ನಿರ್ದೇಶಕ ಮೂರ್ತಿ ದೇರಾಜೆ ಈ ಕೊರತೆಗಳನ್ನು ಮೀರಿ ನಾಟಕವನ್ನು ಕಟ್ಟಿಕೊಡುತ್ತಾರೆ. ಇದು ಅವರ ಶಕ್ತಿ ಕೂಡಾ, ಈ ಕಾರಣಕ್ಕಾಗಿಯೇ ಕಪ್ಪು ಕಾಗೆಯ ಹಾಡು ಅತಿ ಹೆಚ್ಚು ಕಡೆಗಳಲ್ಲಿ ಪ್ರಯೋಗವಾಗುತ್ತಿರುವ ಕೃತಿ.

‘ಗುಡುಗುಡು ಗುಮ್ಮಟ ದೇವರು’. ಪಂಜೆ ಮಂಗೇಶರಾಯರ ಅದೇ ಹೆಸರಿನ ಕತೆಯಿಂದ ಆಧಾರಿತವಾಗಿದೆ. ‘ಮಿಕ್ಕಿ’ ಕುರಿಮರಿ ಕಾಡಿನ ಅಜ್ಜಿ ಮನೆಗೆ ಹೊರಡುವುದು. ದಾರಿಯಲ್ಲಿ ಕಾಡಿನ ಪ್ರಾಣಿಗಳೆಲ್ಲ ಒಂದೊಂದಾಗಿ ಮಿಕ್ಕಿಯನ್ನು ಅಡ್ಡಗಟ್ಟಿ, ತಿನ್ನಲು ಬರುವುದು. ಮಿಕ್ಕಿ ಅವುಗಳನ್ನು ಮಾತಿನಿಂದ ಮರುಳು ಮಾಡಿ ತಿಂಡಿ ಕೊಟ್ಟು, ತಪ್ಪಿಸಿಕೊಂಡು ಅಜ್ಜಿ ಮನೆ ತಲುಪುವುದು. ಹಿಂದಿರುಗಿ ಹೊರಟಾಗ ಮಿಕ್ಕಿಯನ್ನು ಅಜ್ಜಿ ಒಂದು ಡೋಲಿನೊಳಗೆ ಕೂರಿಸಿ ಗಾಳಿ ರಾಯರ ಸಹಾಯದಿಂದ ಕಳುಹಿಸಿಕೊಡುವುದು. ಹೀಗೇ ಡೋಲಿನೊಳಗೆ ಕುಳಿತು ಮಿಕ್ಕಿ ‘ಗುಡುಗುಡು ಗುಮ್ಮಟ ದೇವರಾಗಿ’ ಪ್ರಾಣಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ಊರಿಗೆ ಮರಳುವುದು ನಾಟಕದ ಕತೆ.

ಮಕ್ಕಳಿಗೆ ಇಷ್ಟವಾಗುವ ಕಾಡು, ಪ್ರಾಣಿಗಳು, ಚಿಟ್ಟೆಗಳು, ಅಜ್ಜಿ ಇತ್ಯಾದಿ ಪಾತ್ರಗಳ ಜೊತೆಯಲ್ಲಿ ರಂಗುರಂಗಿನ ಫ್ಯಾಂಟಸಿ ಲೋಕದಲ್ಲಿ ನಡೆಯುವ ನಾಟಕವಿದು. ಮೂರ್ತಿಯವರ ನಾಟಕ ಕೃತಿ– ಉದ್ದಕ್ಕೂ ಗೇಯತೆಯಿಂದ ಕೂಡಿದ್ದು, ಮಾತುಗಳಿಗೆ ಒಂದು ರೀತಿಯ ಲಯ ಮತ್ತು ಚಲನೆ ತನ್ನಿಂತಾನೇ ಲಭ್ಯವಾಗಿದೆ. ಈ ದೃಷ್ಟಿಯಿಂದ ‘ಕಪ್ಪು ಕಾಗೆಯ ಹಾಡಿ’ಗಿಂತ ‘ಗುಡುಗುಡು ಗುಮ್ಮಟ ದೇವರು’ ರಂಗದ ಮೇಲೆ ಹೆಚ್ಚು ಪರಿಣಾಮಕಾರಿಯಾಗಬಲ್ಲದು.

ಮಕ್ಕಳಿಗೆ ಇಷ್ಟವಾಗುವ ಅಜ್ಜಿ ಕತೆಯೊಂದನ್ನು ಹೇಳುತ್ತಲೇ, ಮಕ್ಕಳ ಸಹಜ ಮನೋವಿಕಾಸಕ್ಕೆ ಯಾವುದೇ ಸೂತ್ರದ ಕಟ್ಟುಪಾಡು ಇರಬಾರದೆಂಬ, ಸರಳ, ಆದರೆ ನಾವೆಲ್ಲ ಅನೇಕ ವೇಳೆ ಮರೆತುಬಿಡುವ ಸತ್ಯವನ್ನು ಮೂರ್ತಿ, ತಮ್ಮ ನಾಟಕ-ರಂಗಕೃತಿ ಮೂಲಕವೇ ನಮ್ಮ ಮುಂದಿಟ್ಟುಬಿಡುತ್ತಾರೆ. ಸೂತ್ರ ಹರಿದು ಸ್ವತಂತ್ರರಾಗುವ ಮಕ್ಕಳು ತಾವೇ ಒಳ್ಳೆಯ ರಂಗಕೃತಿಯನ್ನು ಕಟ್ಟುತ್ತಾ ಹೋಗುವುದು. ಆ ಮೂಲಕವೇ ಮಕ್ಕಳಿಗೆ ಸೂತ್ರದ ಅಗತ್ಯವಿಲ್ಲವೆಂದು ಸೂತ್ರಧಾರನಿಗೆ ಅರಿವಾಗುವುದು. ಇದು ನಾಟಕ ಕೃತಿಯಲ್ಲಿ ಮಾತ್ರವಲ್ಲ ರಂಗಾಯಣದಲ್ಲಿ ಪ್ರಸ್ತುತಪಡಿಸಿದ ರಂಗಕೃತಿಯಲ್ಲೂ ಸಮರ್ಥವಾಗಿ ಬಿಂಬಿತವಾಯಿತು.

ಮೊದಲನೆಯ ನಾಟಕ ‘ಕಪ್ಪು ಕಾಗೆಯ ಹಾಡು’ ಎಲ್ಲೋ ಒಂದು ಕಡೆ ಸಂದೇಶವೊಂದನ್ನು ನೀಡುವ ಉದ್ದೇಶವನ್ನು ತೋರುತ್ತಾ ಬೆಳೆದು, ಆ ಸಂದೇಶ ಸ್ಪಷ್ಟತೆಯನ್ನು ಪಡೆದುಕೊಳ್ಳದೆ ಮಕ್ಕಳಲ್ಲಿ ಭೇದಭಾವ ತೋರಬಾರದೆಂಬ ಭಾವನೆಯನ್ನು ಮೂಡಿಸುವ ಪ್ರಯತ್ನವಾಗಿ ಮಾರ್ಪಟ್ಟರೆ, ‘ಗುಡುಗುಡು ಗುಮ್ಮಟ

ದೇವರು' ಮಕ್ಕಳನ್ನು - ದೊಡ್ಡವರು ತಮ್ಮ ನಿಲುವು, ಧೋರಣೆ, ಅಭಿಪ್ರಾಯಗಳ ಸೂತ್ರದಲ್ಲಿ ಬಂಧಿಸದೆ ಇದ್ದರೆ, ಮಕ್ಕಳಿಗೆ ಯಾವ ಸಂದೇಶದ ಅಗತ್ಯವೂ ಇಲ್ಲದೆ ನಾವು ಅವರಿಗೆ 'ತಿಳಿಹೇಳಬೇಕೆಂದಿರುವ' ಸಮಾನತೆ, ಸಹಬಾಳ್ವೆಯ ಗುಣಗಳನ್ನು ಅವರು ಸಹಜವಾಗಿಯೇ ಹೊಂದಿರುತ್ತಾರೆಂಬುದನ್ನು ನಿರೂಪಿಸುತ್ತದೆ.

ರಂಗಾಸಕ್ತರು ಮೂರ್ತಿಯವರ ಈ ಎರಡೂ ನಾಟಕಗಳನ್ನು ಒಟ್ಟಿಗೆ ಸರಣಿಯಲ್ಲಿ ಮೂಡಿಸುವುದು ಹೆಚ್ಚು ಸೂಕ್ತ. ಮೂರ್ತಿ ಮಕ್ಕಳಿಂದ ಮಾಡಿಸಿದ ಎಲ್ಲಾ ನಾಟಕಗಳು ಪುಸ್ತಕಕ್ಕಿಳಿದಾಗ ಮಕ್ಕಳ ರಂಗಭೂಮಿಗೆ ಅವರ ಕೊಡುಗೆಯ ಸಮಗ್ರ ಪರಿಚಯ ಮತ್ತು ಮಕ್ಕಳ ರಂಗಭೂಮಿಯ ಹೊಸ ಸಾಧ್ಯತೆಗಳ ಅನಾವರಣ ಎರಡೂ ಸಾಧ್ಯ.

– ಪ್ರಸಾದ್ ರಕ್ಷಿದಿ, ಅಂಚೆ : ಕ್ಯಾಮನಹಳ್ಳಿ, ಸಕಲೇಶಪುರ- ೫೭೩ ೧೩೪ (ಹಾಸನ)

ಸಂಕಲನ : ಅನಿಸಿಕೆ

೧. ಈವತ್ತು (೨೨.೧೧.೦೬) ಹೊಸ ಸಂಕಲನ ಸಿಕ್ಕಿತು. ಮೊದಲು 'ಕಡೇಪುಟ' ಓದಿದೆ. ಅದರ ಆಪ್ತ ಗದ್ಯವು ನನ್ನನ್ನು ಸೆಳೆಯಿತು. ಹಾಗೆಯೇ ಪುಟ ತಿರುಗಿಸುತ್ತ ಇಡೀ ಸಂಚಿಕೆಯನ್ನೇ ಒಂದು ಪಟ್ಟಿಗೆ ಓದಿ ಮುಗಿಸಿದೆ. ಈ ಸಂಚಿಕೆಯ ಹದ ಬಹಳ ಚೆನ್ನಾಗಿದೆ. ನಾನೂ ಒಬ್ಬ ಸಂಪಾದಕನಾಗಿರುವುದರಿಂದ ಇದನ್ನು ಸಾಧಿಸುವ ಕಷ್ಟ ಗೊತ್ತಿದೆ. ಕೇವಲ ಅದೃಷ್ಟದಿಂದ ಇದು ಸಾಧ್ಯವಾಗುವ ಮಾತಲ್ಲ. ಬಹಳಷ್ಟು ಪ್ರಯತ್ನ (ಮತ್ತು ಒಂದಿಷ್ಟು ಅದೃಷ್ಟವೂ) ಬೇಕಾಗುತ್ತದೆ. ಇದು ನಿಮಗೆ ಒದಗಿ ಬಂದಿರುವುದು ಇಲ್ಲಿ ಕಾಣುತ್ತದೆ.

ಒಮ್ಮೆ ಕಣ್ಣು ಹಾಯಿಸಿದರೆ ಓದಬೇಕು ಅನಿಸುವಂಥ ಲೇಖನಗಳು ಈ ಸಂಚಿಕೆಯಲ್ಲಿ ಇವೆ. ಪ್ರತಿ ಲೇಖನವೂ (ಉಷಾ ರೈ, ತಾರಿಣಿ, ವಸಂತ ಕವಲಿ, ಭರಣ್ಯ, ಹುದೆಂಗಜೆ) ಮನಸ್ಸಿನ ವಿಭಿನ್ನ ಸ್ತರಗಳನ್ನು ತಾಕುತ್ತವೆ. ಹಾಗಾಗಿ ಇಡೀ ಸಂಚಿಕೆಯನ್ನು ಒಟ್ಟಿಗೇ ಓದಿದರೂ ಹೊರೆಯೆನಿಸುವುದಿಲ್ಲ. ಪುಸ್ತಕ ಪರಿಶೀಲನೆ ಮತ್ತು ವಿಮರ್ಶೆಯನ್ನು ನೀವು ಸತತವಾಗಿ ಮಾಡುತ್ತಿದ್ದೀರಿ. ಇದು ಮಹತ್ವದ ಕೆಲಸ. ಇಂಥ ಒಳ್ಳೆಯ ಸಂಚಿಕೆಗಾಗಿ ನಿಮಗೆ ಕೃತಜ್ಞತೆಗಳು ಮತ್ತು ಅಭಿನಂದನೆಗಳು.

– ವಿವೇಕ ಶಾನಭಾಗ, ಬೆಂಗಳೂರು

೨. **ಸಂಕಲನದಲ್ಲಿ** ಪ್ರಕಟವಾಗುತ್ತಿರುವ 'ನನ್ನ ಅವ್ವ ನನ್ನ ಅಪ್ಪ' ಹಾಗೂ 'ನನ್ನ ಶಾಲಾ ಗುರುಗಳು' ಮಾಲಿಕೆಯ ಒಂದೊಂದು ಲೇಖನವೂ ನಮ್ಮ ಬದುಕಿಗೆ ಮತ್ತು ಸಂಸ್ಕೃತಿಗೆ ಸಲ್ಲುತ್ತಿರುವ ಹೊಸ ಕೊಡುಗೆಗಳು. ಈಚೆಗೆ ಒಂದು ದೂರದರ್ಶನದವರೂ ಸಹ ಇದನ್ನು ಅನುಕರಿಸಿ, ಅನುಸರಿಸಿ ಇಂಥ ಕಾರ್ಯಕ್ರಮ ಆರಂಭಿಸುತ್ತಿರುವುದೂ ಸಂಕಲನಕ್ಕೇ ಸಲ್ಲುವ ಹೆಗ್ಗಳಿಕೆ. ನಮ್ಮ ಮಾನವೀಯ ಮೌಲ್ಯಗಳನ್ನು ನಿರಂತರ ನೆನಪಿಸುವ ಈ ಲೇಖನಗಳು ಅಮೂಲ್ಯವಾಗಿವೆ. ಇತ್ತೀಚಿನ ದಿನಗಳಲ್ಲಿ ಇಂಥ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ, ಅದರಿಂದಾಗಿ ಕ್ಷೀಣಿಸುತ್ತಿರುವ ನಮ್ಮ ಸಮಾಜವನ್ನು ಮತ್ತೆ ಕಟ್ಟುವ ಪ್ರೇರಣೆ ಮತ್ತು ಪ್ರೋತ್ಸಾಹವನ್ನು ಇಂಥ ಲೇಖನಗಳು ನೀಡುತ್ತವೆ. ಇದಕ್ಕಾಗಿ **ಸಂಕಲನಕ್ಕೆ** ಅಭಿನಂದನೆಗಳು.

ಡಾ. ಷ. ಶೆಟ್ಟರ್ ಅವರ 'ಕವಿರಾಜಮಾರ್ಗ' ಲೇಖನಗಳಂತೂ ಕನ್ನಡ ಸಾಹಿತ್ಯ, ವಿಮರ್ಶೆ, ಇತಿಹಾಸ ಮತ್ತು ಸಂಶೋಧನ ಕ್ಷೇತ್ರಕ್ಕೆ ಸಂಕಲನ ನೀಡಿದ ಅದ್ಭುತ ಕೊಡುಗೆ. ಈ ಲೇಖನಗಳೆಲ್ಲ ಪುಸ್ತಕರೂಪದಲ್ಲಿ ಬಂದಾಗ ಖಂಡಿತವಾಗಿಯೂ ಅದಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿಯ ಪುರಸ್ಕಾರ ಸಲ್ಲಲೇಬೇಕು, ಸಲ್ಲುತ್ತದೆ ಎಂದು ಈಗಲೇ ಖಂಡಿತವಾಗಿ ಹೇಳಬಹುದೆನಿಸುತ್ತದೆ.

– ಶಿವಶಂಕರ ಹಿರೇಮಠ, ಧಾರವಾಡ

೩. ಸಂಕ್ರಮಣದ ಸಾಹಸದ ನಂತರ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಅಷ್ಟೇ ಮಹತ್ವದ ಸಂಕಲನವನ್ನು ನಿಯಮಿತವಾಗಿ ಪ್ರಕಟಿಸುತ್ತಿರುವುದು ನನಗೆ ಸಂತೋಷ ಕೊಟ್ಟಿದೆ. ಈಗ ಅವರ ಜೊತೆಗೆ ಕವಿ ಎಂದು ಒಳ್ಳೆಯ ಹೆಸರು ಮಾಡಿದ ಹೇಮಾ ಇದ್ದಾರೆ. ಪತ್ರಿಕೆಯ ಹುಟ್ಟಿನಿಂದಲೂ ನಾನು ಅದನ್ನು ಗಮನಿಸುತ್ತ ಬಂದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಇಂಥ ಪತ್ರಿಕೆಗಳ ಮುಖ್ಯ ಉದ್ದೇಶ ಹೊಸ ಲೇಖಿಕ-ಲೇಖಿಕಿಯರನ್ನು ಬೆಳಕಿಗೆ ತರುವುದು. ಈ ಕಾರ್ಯವನ್ನು ಗೆಳೆಯ ಲಂಕೇಶ್ ತುಂಬ ಆಸಕ್ತಿಯಿಂದ, ಯಶಸ್ವಿಯಾಗಿ ನೆರವೇರಿಸಿದರು. ಪಟ್ಟಣಶೆಟ್ಟಿ ದಂಪತಿಗಳೂ ಈ ದಿಕ್ಕಿನಲ್ಲಿ ಶ್ರದ್ಧೆಯಿಂದ ದುಡಿಯುತ್ತಿದ್ದಾರೆ. ಇದರ ಅರ್ಥ ಪ್ರಸಿದ್ಧ ಲೇಖಕರಿಗೆ ಇಲ್ಲಿ ಸ್ಥಾನವಿರಬಾರದು ಎಂದೇನೂ ಅಲ್ಲ. ಷ. ಶೆಟ್ಟರ್ ಅವರು 'ಕವಿರಾಜಮಾರ್ಗ'ವನ್ನು ಕುರಿತು ಬರೆಯುತ್ತಿರುವ ಲೇಖನಮಾಲೆ ಸಂಕಲನವನ್ನು ಎಷ್ಟು ಶ್ರೀಮಂತಗೊಳಿಸಿದೆ ಎನ್ನುವುದನ್ನು ಪತ್ರಿಕೆಯ ಓದುಗರಿಗೆ ತಿಳಿಸಿ ಹೇಳಬೇಕಾಗಿಲ್ಲ. ನಮ್ಮ ಎಲ್ಲ ಸಾಂಸ್ಕೃತಿಕ ಆಸ್ಥೆಗಳನ್ನು ಒಳಗೊಳ್ಳುವಷ್ಟು ಶಕ್ತಿಯುತವಾಗಿ ಪತ್ರಿಕೆ ಬೆಳೆಯಲಿ. **– ಡಾ. ಜಿ. ಎಸ್. ಆಮೂರ, ಧಾರವಾಡ**

೪. ಸಂಕಲನ ಯಥಾಪ್ರಕಾರ ಅಚ್ಚುಕಟ್ಟಾಗಿ ಸಂಪನ್ನೀತವಾಗಿ ಬರುತ್ತಿದೆ. ಶ್ರೇಷ್ಠತೆಯ ಮಾನದಂಡವನ್ನು ಎಷ್ಟು ನಿಷ್ಠುರವಾಗಿ ಕಾಯ್ದುಕೊಂಡಿದ್ದೀರಿ ಎಂದರೆ ನನಗಂತೂ ಅದಕ್ಕೆ ಲೇಖನ ಬರೆಯಲೂ ಭಯವಾಗುತ್ತಿದೆ. ಬರೆಯದೆ ಇರುವುದು ಕೂಡಾ ಒಂದು ರೀತಿಯ ಸಾಹಿತ್ಯಸೇವೆ ಎಂದು ನಂಬಿಕೊಂಡವನು ನಾನಾದುದರಿಂದ ಸಂಕಲನಕ್ಕೆ ಲಾಭವೇ ಆಗಿದೆ ಅಂದುಕೊಳ್ಳುತ್ತೇನೆ.

– ಶ್ರೀನಿವಾಸ ಕಾರ್ಕಳ, ಮಂಗಳೂರು

೫. ಸಂಕಲನ ಪತ್ರಿಕೆ ಅತ್ಯಂತ ವೈಶಿಷ್ಟ್ಯ ಹಾಗೂ ವೈವಿಧ್ಯಪೂರ್ಣವಾಗಿ ಬರುತ್ತಿದೆ. ಅದರಲ್ಲಿ ನಿಮ್ಮ ವ್ಯಕ್ತಿತ್ವವನ್ನು ಹಾಗೂ ಅದರ ಹಿರಿಮೆಯನ್ನು 'ಕಡೀಪುಟ' ಪರಿಚಯಿಸುತ್ತದೆ. ಪತ್ರಿಕೆ ನಮ್ಮದಾಗುತ್ತದೆ, ನಿಮ್ಮದಲ್ಲ! **– ಡಾ. ಜಿ. ಡಿ. ಜೋಶಿ, ಮುಂಬಯಿ**

೬. ಎಲ್ಲ ದೃಷ್ಟಿಯಿಂದಲೂ ಉತ್ತಮವೆನಿಸುತ್ತ, ಶಿಶಿರದ ಬಿಸಿರಿನಿಂದ ಬಂದ ಐದು ವಸಂತಗಳನ್ನು ಕಂಡ ನಮ್ಮ ಸಂಕಲನದ ಬಗ್ಗೆ ನಮಗ ಭಾಳ ಹೆಮ್ಮೆ ಅದ. ಕಾಫೀ ಸೀಮಿ ಚಿಕ್ಕಮಗಳೂರಿನ್ಯಾಗ ಕೂತ ನಮಗ 'ಒನ್ನೇಪುಟ', 'ಕಡೀಪುಟ' ಅನ್ನೋ ಬಿಳೀ ಜ್ವಾಳದ ಬಿಸಿ ಭಕ್ರಿ ಸುಳ್ಯಾಗ ಏನೇನರ ರುಚಿರುಚಿ ಮಜಾಗಟಾ ಇಟ್ಟು ಕಳಿಸ್ತೀರಿ. ಜಗದು ಜಗದು ತಿನ್ನಬೇಕಂತ ಅನಸ್ತದ. ಜಗದಷ್ಟೂ ರುಚಿ ಹತ್ತದ. ತಿಂದಷ್ಟೂ ಕಸು ಬರ್‍ತದ. ಸಂಕಲನ-೩೦ ರಲ್ಲಿ ಪ್ರಕಟವಾದ ಸಿ. ಸೋಮಶೇಖರಯ್ಯನವರ 'ಗೀತೆಯಲ್ಲಿ ಪುನರ್ಜನ್ಮ : ಒಂದು ತಾತ್ವಿಕ ಜಿಜ್ಞಾಸೆ' ಮತ್ತೆಮತ್ತೆ ಓದಿಸಿಕೊಳ್ಳುತ್ತಿದೆ.

– ವಾಸಂತಿ ಪ್ರಭಾಕರ ನಾಯಕ, ಚಿಕ್ಕಮಗಳೂರು

೭. ಸಂಕಲನ ಚೆನ್ನಾಗಿ ಬರುತ್ತಿದೆ. ಕನ್ನಡ ಸಾಹಿತ್ಯದ ಹಲವಾರು ಮಜಲುಗಳನ್ನು ದೂರದಲ್ಲಿರುವ ನನ್ನಂಥವರಿಗೆ ತಂದು ಕೊಡುತ್ತಿದೆ. ಪತ್ರಿಕೆ ವೈವಿಧ್ಯಪೂರ್ಣವಾಗಿ ಮೂಡಿಬರುತ್ತಿದೆ. ಸಂಶೋಧನೆ, ವಿಮರ್ಶೆ ವಿಚಾರದಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ನೀವು ತೋರುತ್ತಿರುವ ಕಳಕಳಿ, ಪ್ರೀತಿಗಳು ಸ್ಪಷ್ಟ. ಗೆಟಪ್ ಇನ್ನಷ್ಟು ಸುಧಾರಿಸಲು ಸಾಧ್ಯವೆ? **– ಡಾ. ಹರಿಕೃಷ್ಣ ಭರಣ್ಯ, ಮದುರೈ**

೮. ಸಂಕಲನ-೩೦ ಸಾಹಿತ್ಯಾಸಕ್ತರಿಗೆ ರಸದೂಟವಾಗಿದೆ. ಬಾಲ್ಯದಲ್ಲಿ ಕಬ್ಬನ್ನು ಸಿಗಿದು ತಿನ್ನುವಾಗ, ರಸವು ಬಾಯಿಂದ ಇಳಿದು ಕೈಯಿಂದ ಒರೆಸಿ, ಉಟ್ಟುಕೊಂಡ ಅಂಗಿಯ ಚುಂಗಿಗೆ ತಿಕ್ಕುತ್ತಿದ್ದ ಅನುಭವ ಪುನಃ ಮನಸ್ಸಿನಲ್ಲಿ ಸುಳಿಯಿತು. 'ಒನ್ನೇಪುಟ' ಹಾಗೂ 'ಕಡೀಪುಟ'ಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಹತ್ತಿಯ ತೊಳೆಯಿಂದ ಒಂದೊಂದೆ ತಂತುವನ್ನು ಬಿಡಿಸಿ ತೆಗೆದಂತಹ ಶೈಲಿ. ಅಲ್ಲದೇ ಹೀಗೂ ಅನಿಸಿತು– ಮಳೆಯ ಮುತ್ತು ಅಂದು/ತನುವ ತೋಯಿಸಿದಂದು/ಮರುಳಾಯ್ತು ಮನವು ಮುಳುಗಿತ್ತು/ಹೊರಳಿದ್ದ ದಾರೀಲಿ/ಹೊಳೆ ಅಡ್ಡ ಬಂದರೂ/ತಿಳಿಯದೇ ದಾರಿ ತುಳಿದಿದ್ದೆ/ಹುಡುಕಲು ನನ್ನೊಳಗೆ ಇಳಿದಿದ್ದೆ. **– ದಾಕ್ಷಾಯಣಿ ಯಡಹಳ್ಳಿ, ಡೊಂಬಿವಲಿ**

೯. ಸಂಕಲನ-೩೦ ಚೇತೋಹಾರಿಯಾಗಿದೆ. 'ಮಹಾನಾಟಕ ರಂಗಸಂಗೀತ', 'ಗೀತೆಯಲ್ಲಿ ಪುನರ್ಜನ್ಮ' ವಿಶೇಷ ಮೆಚ್ಚಿಕೆಯಾದವು. ಇನ್ನು, ಹಿಂದಿನ ಸಂಚಿಕೆಯ, 'ಸಂಗವ್ವಕ್ಕನ ಸುದ್ದಿ' ಮದ್ಲ ಮದ್ಲ ಮಜಾ ಅನಿಸಿದ್ರೂ ಚಿಂತನೆಗೆ ಹಚ್ಚಿತ್ತು. ಈ ಸಲ ಆ 'ಸುದ್ದಿ'ಗೆ ಬಂದ 'ಗುದ್ದು'ಗಳು ಭಿನ್ನ ಅರಿವು ಮೂಡಿಸುವಲ್ಲಿ ಯಶಸ್ವಿ ಆದವು. ನಾನೂ ಸಹಿತ ಸಾದಾ ಹರಟೆ ಇರಲಿ, ಹಾಡು ಕೇಳ್ತಿರಲಿ, ನಾಟಕ ನೋಡ್ತಿರಲಿ ಸದಾ 'ಪ್ರಾಣ', ವ್ಯಾಕರಣದೋಷ ಗಮನಿಸಿಕೋತ ಒಂಥರಾ nit picker ಆಗಿಬಿಟ್ಟಿದ್ದೆ. ಸರ್ವಜಿತರ ಯಶೋ'ಧಮ್ಮ', ಶರಣಗೌಡರ ಜಾದೂ ಅರಳಿ ಬಗ್ಗೆ ಗೊತ್ತಾಗಿ ಸ್ವಲ್ಪ ನಿರಾಳ ಆದೆ. ಆದ್ರ ವಸಂತ ಕವಲಿಯವರ 'ಮಹಾನಾಟಕ'ದೊಳಗ ಬಂದ 'ರಾಗಧಾರೀ' ಶಬ್ದ ಓದಿದ ಕೂಡಲೇ ನಾ ಇಷ್ಟ ದಿನ 'ರಾಗದಾರೀ' ಅಂತ ತಪ್ಪ ಹೇಳತಿದ್ದೆನಲ್ಲಾ ಅಂತ ಪಶ್ಚಾತ್ತಾಪ ಪಡ್ಲಿಕ್ಕೆ ಹತ್ತೇನಿ. ಅಂತೂ ಜ್ಞಾನದ ಬುತ್ತೀ ಸಂತೀ ಭಾಷಾ ಶುದ್ದಿ ಉಪ್ಪಿನಕಾಯಿನೂ ಬಡಸ್ಲಿಕ್ಕೆ ಹತ್ತೀರಿ. ಅಭಿನಂದನೆಗಳು. – ವಸುಂಧರಾ ದೇಸಾಯಿ, ಶಿವಮೊಗ್ಗ

೧೦. ಸಂಕಲನ-೩೦ ರಲ್ಲಿ ಬಂದ ಸಿ. ಸೋಮಶೇಖರಯ್ಯ ಅವರ 'ಗೀತೆಯಲ್ಲಿ ಪುನರ್ಜನ್ಮ', ತಾರಿಣಿ ಅವರ 'ಶಾಲಾ ಗುರುಗಳು' ಮತ್ತು ಉಷಾ ಪಿ. ರೈ ಅವರ 'ಅವ್ವ ಅಪ್ಪ' ಲೇಖನಗಳು ಬಹಳ ಇಷ್ಟವಾದವು. ಸಂಕಲನ ಸಂಚಿಕೆಯಿಂದ ಸಂಚಿಕೆಗೆ ಸಮೃದ್ಧಗೊಳ್ಳುತ್ತ ಪ್ರಕಟವಾಗುತ್ತಿದೆ.

– ಪ್ರೊ. ನ. ವಜ್ರಕುಮಾರ, ಧಾರವಾಡ

೧೧. ಸಂಕಲನವನ್ನು ಕಳೆದ ಎರಡು ವರ್ಷಗಳಿಂದ ನಿಯಮಿತವಾಗಿ ಓದುತ್ತಿದ್ದೇನೆ. ಎಷ್ಟೊಂದು ಮೌಲಿಕ ಲೇಖನಗಳನ್ನು ಕೊಡುತ್ತಿದ್ದೀರಿ... – ಖಾಜಾವಲಿ ಈಚನಾಳ, ಈಚನಾಳ

೧೨. ಸಂಕಲನದ ಸಂಚಿಕೆಗಳನ್ನು ಓದುತ್ತಿದ್ದಂತೆ ಅವುಗಳ ಮಹತ್ವ ತಾನಾಗಿ ಹೊಳೆಯುತ್ತದೆ. ಪತ್ರಿಕೆ ಸಂಪನ್ನ ಕನ್ನಡಿಗರ, ಸಹೃದಯಿಗಳ ಕಣ್ಮಣಿಯಾಗಿ ಬರುತ್ತಿದೆ. – ಎಂ. ಎನ್. ಕುಲಕರ್ಣಿ, ಧಾರವಾಡ

೧೩. ಪ್ರತಿ ಸಲದಂತೆ ಸಂಕಲನ-೩೦ ರ 'ಒನ್ನೇಪುಟ', 'ಕಡೀಪುಟ' ಮತ್ತು 'ಅವ್ವ ಅಪ್ಪ', 'ಗುರುಗಳ' ಲೇಖನಗಳು ತುಂಬ ಹೊಸತನದಿಂದ ಕೂಡಿವೆ. – ಶಂಕರಗೌಡ ಸಾತ್ಮಾರ, ಮುಂಡಗೋಡ

೧೪. ಸಂಕಲನ-೩೦ ತುಂಬ ಮೌಲಿಕವಾಗಿ ಬಂದಿದೆ. ಮೊದಲಿಗೆ 'ಕಡೀಪುಟ' ನೋಡಿದೆ. ಕನಿಷ್ಠ ಎರಡು ಪುಟವಾದರೂ ಇರಲಿ. 'ಉಪದೇಶ ಅನ್ನೂದು ಅವರವರ ಅನುಭವದ ಒಟ್ಟು ಮೊತ್ತ' ಎಂಬ ಮಾತು ಮತ್ತೆಮತ್ತೆ ಓದಾಕ ಹಚ್ಚತೈತಿ. ಸತ್ಯವನ್ನು ಎಷ್ಟು ನಿರಾಳವಾಗಿ, ನಿರಾಯಾಸವಾಗಿ ಹೇಳಿದ್ದೀರಿ. ವಿಭಾಳ ಕವಿತೆಗಳು ಮತ್ತು 'ಅವ್ವ ಅಪ್ಪ' ಹಾಗೂ 'ಶಾಲಾ ಗುರುಗಳು' ಲೇಖನಗಳು ಎಂದಿನಂತೆ ತುಂಬಾ ಲವಲವಿಕೆಯಿಂದ ಬಂದಿವೆ. ಎರಡು ವರ್ಷಗಳ ಎಲ್ಲ ಲೇಖನಗಳ ಸಮಗ್ರ ಸಾಮಗ್ರಿ ದರ್ಶನ ಕೊಟ್ಟಿದ್ದಂತೂ ಸ್ತುತ್ಯಾರ್ಹ. – ಡಾ. ಅಶೋಕ ನರೋಡೆ, ಮಹಾಲಿಂಗಪುರ

೧೫. ಸಂಕಲನ-೩೦ ರಲ್ಲಿ ಡಾ. ವಸಂತ ಕವಲಿಯವರ 'ಮಹಾನಾಟಕ ರಂಗಸಂಗೀತ' ಲೇಖನವನ್ನು ಪುನರ್ದಾಖಲಿಸುವ ಮೂಲಕ ಓದುಗರನ್ನು ಉಪಕರಿಸಿದ್ದೀರಿ. ಈ ಮಾದರಿಯ ಬರಹಗಳನ್ನು ಮತ್ತೆ ಮತ್ತೆ ಪ್ರಕಟಿಸುವುದರ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಮೆಲುಕು ಹಾಕುವಲ್ಲಿನ ತಮ್ಮ ಪ್ರಯತ್ನ ಅಭಿನಂದನೀಯ. – ಎ. ಡಿ. ನಂಜುಂಡಸ್ವಾಮಿ, ಮೈಸೂರು

೧೬. ಸಂಕಲನ ನಿರೀಕ್ಷೆಗೂ ಮೀರಿ ಚೆನ್ನಾಗಿ ಬರ್‍ತಿದೆ. – ಕುಂ. ವೀರಭದ್ರಪ್ಪ, ಕೊಟ್ಟೂರು

೧೭. ಸಂಕಲನ-೩೦ ರಲ್ಲಿ ಆರ್. ತಾರಿಣಿ ಶುಭದಾಯಿನಿಯವರು ಬರೆದ 'ನನ್ನ ಶಾಲಾ ಗುರುಗಳು' ಬಹಳ ಸುಂದರವಾಗಿದೆ. – ಸದಾನಂದ ಹೆಗಡೆ, ಧಾರವಾಡ

೧೮. ಸಂಕಲನ ನಿಜಕ್ಕೂ ಚೆನ್ನಾಗಿ ಬರುತ್ತಿದೆ. ಲೇಖನಗಳಲ್ಲಿ ವೈವಿಧ್ಯತೆ ಮತ್ತು ಶ್ರೇಷ್ಠತೆಗೆ ತುಂಬ ಗಮನ ಕೊಡುತ್ತಿದ್ದೀರಿ. ಇಂಥದೊಂದು ಪತ್ರಿಕೆ ಈ ಸಮಕಾಲೀನ ಸಂದರ್ಭದಲ್ಲಿ ಬರುತ್ತಿರುವುದು ಸಂತೋಷದ, ಅಭಿಮಾನದ ವಿಷಯ. – ಬಿ. ಎಸ್. ನಾಗರತ್ನಕುಮಾರಿ, ಮೈಸೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಕಟಗೋಬೇಕು, ಕಟಗೊಂಡ ಮ್ಯಾಲ ಇಟಗೋಬೇಕು, ಇಟಗೊಂಡ ಮ್ಯಾಲ ಅಟಗೋಬೇಕು ಅಂತ ನಮ್ಮವ್ವ ಆಗಾಗ ಯಾರಿಗೆರ ಉಪದೇಶ ಹೇಳವರ್ಧಂಗ ತನಗ ತಾನ್‌ಅ ಹೇಳಿಕೋತಿದ್ಲು. ನನಗ ಎಷ್ಟೋ ವರ್ಷ ಈ ಶಬ್ದ, ಅವುಗಳ ಹಿಂದಿನ ಅರಿವಿನ ಅರ್ಥ ತಿಳಿದಿರಲೇ ಇಲ್ಲ. ಈಗಾದರೂ ತಿಳದಾವಂತ ಏನಲ್ಲ. ಆದರೂ ಆಗಾಗ ಅವ್ವ ಧಿಗ್ ಅಂತ ತನ್ನ ಕುಣ್ಯಾಗಿಂದ ಹೊರಗ ಬಂದಬಿಡತಾಳ– ಕನಸಾಗಿ, ನೆನಪಾಗಿ, ಆತಂಕ ಆಗಿ, ಆಧಾರ ಆಗಿ ಶಬ್ದಗಳನ್ನ ಮಿಡೀತಾಳ, ಅರ್ಥಗಳನ್ನ ನುಡೀತಾಳ.

ಒಮ್ಮೆ ನಾನೂ ಕೇಳೇ ಬಿಟ್ಟೆ– ಅವ್ವಾ, ಕಟಗೋ, ಇಟಗೋ, ಅಟಗೋ ಅಂತ ಮತ್ತ ಮತ್ತ ತಟವಟಸತಿದ್ದೆಲ್ಲ, ಏನ ಹಂಗಂದ್ರ– ಅಂತ. ಇಷ್ಟ ಸಾಲೀ ಕಲತೀ, ಬರದ ಬರದ ಹಾಳೀ ಹಾಳ ಮಾಡತೀ, ನಿನಗ ತಿಳದಿಲ್ಲಂದರ ಹೆಂಗೋ ಮಗನ, ಅಂದಾಕಿನ ನನ್ನ ಮಾರೀ ನೋಡಿ ನಕ್ಕಳು. ಮಾಯವಾಗಿ ಹೋದಳು.

ಬೆಳಕಿನ ಸುಳಿ ಬಿಚ್ಚಿತು. ಅರ್ಥದ ಹೊಳಿ ಹರೀತು.

ಕಟ್ಟಿಕೊಂಡ ಮನಿ, ಇಟ್ಟುಕೊಂಡ ಸಂಬಂಧ, ಅಟ್ಟುಕೊಂಡ ಕನಸು ಇವು ನಮ್ಮನ್ನ ಒಂದ ನಿಟ್ಟಿನ್ಯಾಗ, ಒಂದು ಕಡೆಗೆ, ಒಂದು ರೀತೀಲೆ ಊರಿಬಿಡತಾವು. ಬೇರು ಬಿಡೂಹಂಗ ಮಾಡತಾವು. ಹಂಗ ನೆಲದಾಗ ಹೊಕ್ಕ ಮ್ಯಾಲ ನಿಲ್ಲೂದು, ನೆಲೆಸೂದು, ನೆನೆಯೂದು; ಅಲ್ಲಿಂದನ್‌ಅ ಮತ್ತ ಪುಟಿಯೂದು, ಚಿಮ್ಮೂದು, ಚಿಗಿಯೂದು ಅನಿವಾರ್ಯ ಆಕ್ಕತಿ. ಈ ಅನಿವಾರ್ಯತೆ ಅನ್ನೂದು ನಮ್ಮ ಸೃಜನಶೀಲತೆಯನ್ನ ಒಂದು ನಿಶ್ಚಲ ಸರೋವರದಂಥ ವಿಶಾಲ ಕುಂಡದೊಳಗ ಸೀಮಿತಗೊಳಿಸಿ ಬಿಡತಯ್ತಿ. ಅಥವಾ ಅಲೆಮಾರಿಯಾಗಿ ಅಲೆ ಅಲೆಯೊಳಗ ಅಳೆದು ಸುರಿದು ಹಾಳಾಗಿ ಬಿಡಬಹುದಾಗಿದ್ದ ದುಃಸ್ಥಿತಿಗೆ ಒಂದು ರೀತಿಯ ಸಂಸ್ಕಾರ ನೀಡತಯ್ತಿ. ಹೌದು ಅಲ್ಲ ಸರಿ ತಪ್ಪು ಮೇಲು ಕೀಳು ಹಳೆ ಹೊಸ ನಾನು ನೀನುಗಳ ನಡಕಿನ ಅಂತರ ನಮ್ಮ ಅರಿವಿಗೆ ಬರದಂಥ ರೀತಿಯೊಳಗ ಸಂಕೀರ್ಣ ಆಗಿರೂದರಿಂದ ಇಂಥ ಮನಃಸ್ಥಿತಿಯನ್ನ ಕಲಾವಂತ ಹೃದಯಗಳು ಒಪ್ಪಿಕೋಬೇಕಾಕ್ಕತಿ.

ಕಟ್ಟಿಗೊಂಡ ಮನೆಯೊಳಗ ಸೇರಿಕೊಂಡ ಮ್ಯಾಲ ನಿಡುಗಡೆ, ಸ್ಥಗಿತತೆ ಅನ್ನೂದು ನಿಧಾನವಾಗಿ ಸುರು ಆಗಿಬಿಡತಯ್ತಿ. ನೀವು ಒಪ್ಪರಿ ಬಿಡರಿ, ಮುಂದಕ ಹರಿದಾಡೂದು ನಿಂತು ಹೊಕ್ಕತಿ ಅಥವಾ ಕಡಿಮಿ ಆಕ್ಕತಿ. ಮನಿ ಕಟ್ಟಿ ಮುಗಸೂದರಾಗ ಮನಶ್ಯಾ ಎಲ್ಲಾ ರೀತೀಲೆ ಹೈರಾಣ ಆಗಿಬಿಡತಾನ, ಇನ್ನಮ್ಯಾಗ ಸಾಕಪಾ, ಈ ಹ್ಯಾರೆ ಎಂದೂ ಮಾಡಬಾರದು ಅನ್ನಾಕ ಸುರು ಮಾಡತಾನ. ವಸ್ತು, ಸ್ಥಳ, ಪ್ರಾಣಿ, ಮನಶಾರು, ಭಾವಗಳ ಜೊತೆಗೆ ನಮ್ಮನ್ನ ಬೆಳೆಸುವ ಪ್ರೀತಿ, ಉಳಿಸುವ ಸ್ನೇಹ ಮಮಕಾರಕ್ಕ ಕಾರಣ ಆಗತಾವು. ಆಗ ಅವುಗಳ ಜೊತೆಗೆ ಅಂಥಾ ಸಂಬಂಧವನ್ನ ನಾವೇ ಇಟಗೊಂಡರೂ ಬರಬರ್ತ ಆ ಸಂಬಂಧಗಳು ತಾವಾಗಿ ನಮ್ಮನ್ನ

ಇಟಗೊಂಡುಬಿಡತಾವು. ನಾವೂ ಆ ಹಂತಕ್ಕ ತಲುಪಿಬಿಡತೇವಿ. ಇದು ಬರೇ ಅವ್ವ ಅಪ್ಪ ಹೇಣ್ತಿ ಮಕ್ಕಳು ಅರಿವಿ ಅಂಚಡಿ ಇನ್ನೊಂದು ಮುನ್ನೊಂದು ಅಂತ ಸಾಗಿಯೇ ಇರತಯ್ತಿ, ಮುಗಿಯೂದೇ ಇಲ್ಲ. ಅವೆಲ್ಲ ನಮ್ಮೂವ್‌ಅ ಆಗಿ, ಅವುನ್ನ ಹಳೇವಾದರೂ, ಹರಿದು ಹೋದರೂ, ಕೆಟ್ಟರೂ, ಬ್ಯಾಡಾದರೂ ಒಗ್ಯಾಕ ಮನಸ ಆಗೂದುಲ್ಲ. ಕಟಿಗೊಂಡ ಮನಿತುಂಬ ಇಟಗೊಂಡ ಸಂಬಂಧದ ವಾಸ್ತವಗಳು ಬರೇ ವಸ್ತುವಾಗಿ, ಹಳೇವಾಗಿ, ಮುರುಕಲಾಗಿ, ಮೋಡಕಾ ಆಗಿ, ಭೂತ ಆಗಿ ಜಾಗಾ ತುಂಬಾಕ ಸುರು ಮಾಡತಾವು. ಕಡೀಕ ಮೂಲೀ ಹಿಡೀತಾವು.

ಹಿಂಗೆಲ್ಲ ಯಾಕ ಅಕ್ಕತಿ ಅಂದರ, ಅವುಕ್ಕ ಮೂಲ ನಾವು ಬಯಸಿದ, ಬೇಡಿದ, ಅಟ್ಟುಕೊಂಡ ಕನಸುಗಳು ಕಾರಣ ಅನ್ನೂದು ನಮಗ ಹೊಳಿದಿರೂದುಲ್ಲ. ಅದು ಹೊಳಿಯೂದರಾಗ ಎಲ್ಲಾ ಮುಗದು ಹೋಗಿರತಯ್ತಿ. ಮನೀನೂ ನಾವೇ ಅಟ್ಟುಕೊಂಡ ಕನಸು, ಅಡುಗೆ ಮಾಡಿಕೊಂಡ ಅನ್ನದ ಊಟ. ಎಲ್ಲಾದರ ಸಂಬಂಧಗಳೂ ನಾವೇ ಅಟ್ಟುಕೊಂಡ ಕನಸಿನ ತಿನಿಸುಗಳು. ಮತ್ತ ಇಂಥಾ ಕನಸು ಕಾಣಲಿಲ್ಲಾ ಅಂದರ ಎಲ್ಲಿಯೂ ನೆಲಿ ನಿಲ್ಲದ ಕಡೀಕ ಅಂತರ್ ಪಿಶಾಚಿ ಹಂಗ, ದೆವ್ವಗಾಳಿಗೆ ಸಿಕ್ಕ ರವದಿ ಹಂಗ ಚಿಪ್ಪಾಡಿ ಆಗಿ ಹೋಗತೇವು. ಅದಕ್ಕಂತನ್‌ಅ ಎಷ್ಟು ಲಗೂ ಸಾಧ್ಯನೋ ಅಷ್ಟ ಲಗೂ ಕನಸಿನ ಹಗ್ಗಾ ಕಟಗೊಳ್ಳೂದು ವಾಜಮಿ ಕೆಲಸ.

ಖರೆ ಅಂದರ ಹಿಂಗ ಮೊದಲು ಮೊದಲು ಅಟ್ಟುಕೊಂಡು, ಅಡಗೀ ಮಾಡಿಕೊಂಡು ರುಚಿ ನೋಡಿದ ಕನಸು; ಕಟಗೊಂಡ ಮನಿ, ಇಟಗೊಂಡ ಸಂಬಂಧಗಳ ಕೂಡ ಸಮಾಧಿ ಆಗಿಬಿಡಬೇಕಿತ್ತು. ಆದರ ಹಂಗ ಆಗೂದುಲ್ಲ. ಕನಸಿಗೆ ಮತ್ತ ಮತ್ತ ಚಿಗಿಯುವ ಶಕ್ತಿ ಅಯ್ತಿ, ಜಿಗಿಯುವ ಯುಕ್ತಿ ಅಯ್ತಿ. ಮನಿ ಆಗಲಿ ಸಂಬಂಧ ಆಗಲಿ, ಅವುನ್ನ ತಡ್ಯಾಕ ಆಗೂದುಲ್ಲ. ತಡ್ಯಾಕ ಹ್ವಾದರ ಮನಿ ಒಡೀತಾವು, ಸೀಳತಾವು, ಬಿರಕಬಿಡತಾವು, ಕುಸೀತಾವು; ಸಂಬಂಧ ಸಿಡಕತಾವು, ಸೆಟಗೋತಾವು, ಹುಸಿಯಾಗಿ ಹರಿದುಹೋಗತಾವು. ಹಿಂಗಾಗಿ ಮತ್ತ ಹೊಸಾ ಕನಸು ಕಾಣೂದು ಅನಿವಾರ್ಯ ಆಕ್ಕತಿ. ಹೊಸಾ ಆಶೆ ಇಟಗೊಳ್ಳೂದು, ಹೊಸಾ ಮನಸು ಕಟ್ಟೂದು ಈ ರೀತಿ ನಿರಂತರ ನಡೀತಿರತಯ್ತಿ. ಪ್ರತಿಯೊಬ್ಬ ಜೀವನರತನಿಗೆ ಇದ್‌ಅ ಜೀವನರಥ. ಇದರೊಳಗ ಇಲ್ಲಿ ಕನಸು ದೇವರು. ಮನಿ ತೇರು. ಸಂಬಂಧ ಹಗ್ಗ. ಎಳ್ಯಾವರು ಯಾರು? ಪ್ರತಿಯೊಬ್ಬರ ಭವಿಷ್ಯ ಕೈ ಮಾಡಿ ಕರೀತಯ್ತಿ, ಹೋಗದಿದ್ದರೂ ಎಳೀತಯ್ತಿ...

ತಡಿ ತಡೀ ಅಂದ್ಲು ಅವ್ವ. ಯಾಕವಾ ಅಂದೆ. ನಾ ಏನ ಹೇಳಿದೆ, ನೀ ಏನ ಅಂದ್ಕೊಳ್ಳಾಕ ಹತ್ತೀದಿ... ಏನಾಗೇತಿ ನಿನಗ? ಅಂದ್ಲು.

ಅವ್ವಾ, ನೀ ನನ್ನ ದೇವರು, ನೀ ನನ್ನ ತೇರು, ನೀ ನನ್ನ ಹಗ್ಗ ಅಂದೆ.

•

ಅಪ್ಪಾ, ಬೆಳಕಾಗೇತಿ ಏಳು, ಏನೋ ಬಡಬಡಸಾಕ ಹತ್ತೀಯಲ್ಲ ಅಂದ್ಲು ಮಗಳು. ಎದ್ದೆ. ಹಾರಗುದುರಿ ಆಗಿ ಹಾರಿ ಹೋತು ನಿದ್ದೆ. ಅವ್ವಾ, ನೀ ಎಲ್ಲಿದ್ದೆ...

ಜೀವನದ ರಥವನ್ನ ಮತ್ತ ಯಾರೋ ಎಳ್ಯಾಕ ಹತ್ತಿದರು...

SANKALANA: RNI No. KARKAN 14160/10/1/2002-TC

ಸಂಕಲನ : ಜನವರಿ + ಫೆಬ್ರವರಿ ೨೦೦೭

ಸಂಪುಟ ೭, ಸಂಚಿಕೆ ೧

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

●

ವೆಂಕಟೇಶ ಕುಲಕರಣಿ — ಶಂಕರ ತಲ್ಲೂರ

ಭಾರತಿ — ಪಿ.ಪಿ.ಕೆ.

ಎಲ್. ವಿ. ಶಾಂತಕುಮಾರಿ — ವಿದ್ಯಾಧರ ಮುತಾಲಿಕ ದೇಸಾಯಿ

ಪ್ರಸನ್ನ — ಪರಮೇಶ್ವರ ಹೆಗಡೆ

ಜೋಗಿಂದರ್ ಪಾಲ್ — ಅಬ್ದುಲ್ ಮಜೀದ್ ಖಾನ್

ಜಂಬಣ್ಣ ಅಮರಚಿಂತ — ಷ. ಶೆಟ್ಟರ್

ಬಿ. ಎ. ಸನದಿ — ಜಗದೀಶ ಮಂಗಳೂರಮಠ

ಬಸವರಾಜ ಪಿ. ಡೋಣೂರ

●

ಶ್ಯಾಮಸುಂದರ ಬಿದರಕುಂದಿ / ದೇಶಪಾಂಡೆ ಸುಬ್ಬರಾಯ / ಅಶೋಕ ಶೆಟ್ಟರ್ /
ಅರುಣಾ ಹೆಬ್ರಿ / ಮೋತಿಲಾಲ ಹಲವಾಯಿ / ಶಶಿಧರ ತೋಡಕರ /
ದುಷ್ಯಂತ ನಾಡಗೌಡ / ನೆಂಪು ನರಸಿಂಹ ಭಟ್ಟ / ಪ್ರಕಾಶ ಭಟ್ /
ಚಂದ್ರಶೇಖರ ವಸ್ತ್ರದ / ಬಸವರಾಜ ವಕ್ಕುಂದ / ಪ್ರಸಾದ್ ರಕ್ಷಿದಿ

●

ವಿವೇಕ ಶಾನಭಾಗ \ ಶಿವಶಂಕರ ಹಿರೇಮಠ \ ಜಿ. ಎಸ್. ಆಮೂರ \
ಶ್ರೀನಿವಾಸ ಕಾರ್ಕಳ \ ಜಿ. ಡಿ. ಜೋಶಿ \ ವಾಸಂತಿ ಪ್ರಭಾಕರ ನಾಯಕ \
ಹರಿಕೃಷ್ಣ ಭರಣ್ಯ \ ದಾಕ್ಷಾಯಣಿ ಯಡಹಳ್ಳಿ \ ವಸುಂಧರಾ ದೇಸಾಯಿ \
ನ. ವಜ್ರಕುಮಾರ \ ಖಾಜಾವಲಿ ಈಚನಾಳ \ ಎಂ. ಎನ್. ಕುಲಕರ್ಣಿ \
ಶಂಕರಗೌಡ ಸಾತ್ಮಾರ \ ಅಶೋಕ ನರೋಡೆ \ ಎ. ಡಿ. ನಂಜುಂಡಸ್ವಾಮಿ \
ಕುಂ. ವೀರಭದ್ರಪ್ಪ \ ಸದಾನಂದ ಹೆಗಡೆ \ ಬಿ. ಎಸ್. ನಾಗರತ್ನಕುಮಾರಿ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪